

GOVERNMENT OF TAMIL NADU

ಆರನೆಯ ತರಗತಿ

STANDARD SIX

ಕನ್ನಡ ಸಿರಿ

KANNADA READER

Department of School Education

Untouchability is Inhuman and a Crime

Government of Tamil Nadu

First Edition - 2018

Revised Edition - 2019, 2020

Reprint - 2021, 2022, 2023
2024

(Published under New Syllabus)

Content Creation

State Council of Educational Research and Training

© SCERT 2018

Printing & Publishing

Tamil NaduTextbook and Educational Services Corporation

www.textbooksonline.tn.nic.in



ಮುನ್ನುಡಿ

ಮಕ್ಕಳ ಜಗತ್ತು ವರ್ಣಮಯವಾದುದು. ಮಾಯಾಲೋಕವೆಂದರೂ ತಪ್ಪೆನಿಸದು. ಅವರ ಕಲ್ಪನಾ ಸಾಮರ್ಥ್ಯವೋ ನೋಡುಗರನ್ನು ಬೆರಗುಗೊಳಿಸಿ ಆತ್ಮೀಯತೆಯೊಂದಿಗೆ ಬೆಸೆಯುವಂತದ್ದು. ಹೊಸದನ್ನು ಬಯಸುವ ಅವರ ಉತ್ಸಾಹದ ಒಳಮನಸ್ಸು ನಿರ್ಜೀವ ವಸ್ತುಗಳನ್ನು ಕನ್ನಡ ಕಲಿಯುವಂತೆ ಮಾಡಬಲ್ಲ ಮಾಂತ್ರಿಕ ಶಕ್ತಿಯಾಗಿದೆ.

ಆ ಹೊಸ ಜಗತ್ತಿನಲ್ಲಿ ಮಕ್ಕಳೊಂದಿಗೆ ಪಯಣಿಸುವುದು ಒಂದು ರೋಮಾಂಚನ ಅನುಭವವೇ ಸರಿ.

ಕನ್ನಡ ಪುಟಾಣಿಗಳ ಕೈಗಳಲ್ಲಿ ಈ ಹೊಸ ಪಠ್ಯ ಪುಸ್ತಕದೊಂದಿಗೆ ಕೆಳಕಂಡ ಉದ್ದೇಶ ಈಡೇರಿಕೆಗೆ ನಾವು ಕೈಗೊಂಡಿರುವ ಪ್ರಯತ್ನವು ಮಹತ್ವವಾದದ್ದು.

- ಕಲಿಕೆಯನ್ನು ಕಂಠಪಾಠ ವಿಧಾನದಿಂದ ಮುಕ್ತಗೊಳಿಸಿ ಚಟುವಟಿಕೆಯ ಹಾದಿಯಲ್ಲಿ ನಡೆಸುವುದು.
- ಕನ್ನಡಿಗರು ತಮ್ಮ ಸಾಂಸ್ಕೃತಿಕ, ಸಾಹಿತ್ಯ ಹಿರಿಮೆ ಗರಿಮೆಯೊಂದಿಗೆ ಇತಿಹಾಸ, ಕಲೆ ಹಾಗೂ ಸಂಪ್ರದಾಯ, ಆಚಾರ ವಿಚಾರಗಳ ಮಹತ್ವವನ್ನು ಅರಿಯುವಂತೆ ಮಾಡುವುದು.
- ಆತ್ಮವಿಶ್ವಾಸದೊಂದಿಗೆ ವಿಜ್ಞಾನ, ತಂತ್ರಜ್ಞಾನ ಕ್ಷೇತ್ರದಲ್ಲಿ ವಿದ್ಯಾರ್ಥಿಗಳು ಹೊಸ ಜಗತ್ತಿನಲ್ಲಿ ಧೈರ್ಯದಿಂದ ಮುನ್ನಡೆಯುವುದನ್ನು ದೃಢಪಡಿಸುವುದು.
- ಜ್ಞಾನಾರ್ಜನೆಯು ಕೇವಲ ಪುಸ್ತಕಕ್ಕೆ ಸೀಮಿತವಾಗಿರದೆ ವಿಸ್ತಾರ ಮತ್ತು ಆಳವಾದ ಕಲಿಕೆಗೆ ಪುಸ್ತಕಗಳು ನೆರವಾಗುವಂತೆ ಮಾರ್ಗದರ್ಶನ ನೀಡುವುದು.
- ಪಠ್ಯಪುಸ್ತಕದ ಹೊಸ ವಿನ್ಯಾಸವು ಆಳವಾದ ವಿಷಯ ಹಾಗೂ ಮಕ್ಕಳ ಮನಶಾಸ್ತ್ರೀಯ ರೀತಿಯ ಹಲವು ಹೊಸ ಅಂಶಗಳನ್ನು ಒಳಗೊಂಡಿದ್ದು ನಿಮ್ಮ ಕೈಗಳಲ್ಲಿ ಈ ಪಠ್ಯ ಪುಸ್ತಕ ಸೇರಿದಾಗ ನೀವೊಂದು ಹೊಸ ಜಗತ್ತಿಗೆ ಪಯಣಿಸುತ್ತೀರಿ ಎಂಬ ಮಹತ್ವಾಕಾಂಕ್ಷೆ ನಮಗಿದೆ.



ರಾಷ್ಟ್ರಗೀತೆ

ಜನ ಗಣ ಮನ ಅಧಿನಾಯಕ ಜಯಹೇ
ಭಾರತ ಭಾಗ್ಯವಿಧಾತ
ಪಂಜಾಬ ಸಿಂಧು ಗುಜರಾತ ಮರಾಠಾ
ದ್ರಾವಿಡ ಉತ್ಕಲ ವಂಗ
ವಿಂಧ್ಯ ಹಿಮಾಚಲ ಯಮುನಾ ಗಂಗಾ
ಉಚ್ಚಲ ಜಲಧಿ ತರಂಗಾ
ತವ ಶುಭ ನಾಮೆ ಜಾಗೇ
ತವ ಶುಭ ಆಶಿಷಮಾಗೆ
ಗಾಹೇ ತವ ಜಯ ಗಾಥಾ
ಜನ ಗಣ ಮಂಗಲ ದಾಯಕ ಜಯಹೇ
ಭಾರತ ಭಾಗ್ಯ ವಿಧಾತಾ
ಜಯ ಹೇ ಜಯ ಹೇ ಜಯ ಹೇ
ಜಯ ಜಯ ಜಯ ಜಯ ಹೇ!

–ಮಹಾಕವಿ ರವೀಂದ್ರನಾಥ್ ಠಾಗೂರ್.

ರಾಷ್ಟ್ರಗೀತೆಯ ಸಾರ

ಭಾರತ ಮಾತೆಯೇ! ಪ್ರಜೆಗಳ ಸುಖ ದುಃಖಗಳನ್ನು ನಿರ್ಣಯಿಸುವ ನೀನೇ ಎಲ್ಲರ ಮನದಲ್ಲೂ ನೆಲೆಸಿದ್ದೀಯೇ. ನಿನ್ನ ಶ್ರೀನಾಮವು ಪಂಜಾಬ್, ಸಿಂಧು, ಗುಜರಾತ್, ಮಹಾರಾಷ್ಟ್ರ, ದ್ರಾವಿಡ, ಉತ್ಕಲ (ಒರಿಸ್ಸಾ) ಬಂಗಾಳ ಪ್ರಾಂತ್ಯಗಳನ್ನು ಮನೋದ್ದೀಪನಗೊಳಿಸುತ್ತದೆ.

ಮತ್ತೆ ನಿನ್ನ ಶ್ರೀನಾಮ, ವಿಂಧ್ಯ ಹಿಮಾಚಲ ಪರ್ವತ ಶ್ರೇಣಿಗಳಲ್ಲಿ ಪ್ರತಿಧ್ವನಿಸುತ್ತದೆ; ಯಮುನಾ ಗಂಗಾ ನದಿಗಳ ಮಧುರ ನಾದದಲ್ಲಿ ಲೀನವಾಗುತ್ತದೆ; ಹಿಂದೂ ಮಹಾಸಾಗರದ ಅಲೆಗಳಲ್ಲಿ ನಮನಗೊಳ್ಳುತ್ತದೆ.

ಅವು ನಿನ್ನ ಕೃಪೆಯನ್ನು ಬೇಡುತ್ತದೆ; ನಿನ್ನ ಕೀರ್ತಿಯನ್ನು ಹರಡುತ್ತವೆ. ಭಾರತದ ಸುಖ ದುಃಖಗಳನ್ನು ನಿರ್ಣಯಿಸುವ ತಾಯೇ!

ನಿನಗೆ ಜಯವಾಗಲಿ! ಜಯವಾಗಲಿ! ಜಯವಾಗಲಿ!



ತಮಿಳ್ ತಾಯ್ ವಾಳ್ತು

ನೀರಾರುಂ ಕಡಲುಡುತ್ತ ನಿಲಮಡಂದೈಕ್ಕೆಳಿಲೊಳುಗುಂ
ಸೀರಾರುಂ ವದನಮೆನತ್ತಿಗಳ್ ಭರತ ಖಂಡಮಿದಿಲ್
ತೆಕ್ಕಣಮುಂ ಅದಿಲ್ ಸಿರಂದ ದ್ರಾವಿಡನಲ್ ತಿರುನಾಡುಂ
ತಕ್ಕಸಿರು ಪಿರೈನುದಲುಂ ತರಿತ್ತನರುಂ ತಿಲಕಮುಮೇ
ಅತ್ತಿಲಕ ವಾಸನೈಪೋಲ್ ಅನೈತ್ತುಲಗುಂ ಇನ್ಬಮುರ
ಎತ್ತಿಸೈಯುಂ ಪುಗಳ್ ಮಣಕ್ಕ ಇರುಂದು ಪೆರುಂ ತಮಿಳಣಂಗೇ!
ತಮಿಳಣಂಗೇ!
ಉನ್ ಸೀರಿಳಮೈತ್ತಿರಂವಿಯಂದು ಸೆಯಲ್ ಮರಂದು ವಾಳ್ತುದುಮೇ!
ವಾಳ್ತುದುಮೇ!
ವಾಳ್ತುದುಮೇ!

– ಮನೋನ್ಮಣೀಯಂ ಪಿ. ಸುಂದರಂ ಪಿಳ್ಳೈ



ತಮಿಳು ತಾಯಿಯ ಪ್ರಾರ್ಥನೆ

ಕಡಲುಡುಗೆಯಾದ ಭೂಮಾತೆಯ ಸುಂದರ ವದನದಂತಿರುವ ಭಾರತದ ತೆರೆ ನೊಸಲಿನಂತಿರುವ ದಕ್ಷಿಣದಲ್ಲಿ, ಶ್ರೀಗಂಧದ ತಿಲಕವಿಟ್ಟಂತಿರುವ ನಲ್ನಾಡು ದ್ರಾವಿಡ, ಆ ತಿಲಕದ ಸುಗಂಧದಂತೆ ಸರ್ವ ಲೋಕಕ್ಕೆ ಸಂತೋಷ ವರ್ಧಿಸುತ್ತಿರುವಂತೆ ಎಲ್ಲಾ ದಿಕ್ಕುಗಳಲ್ಲೂ ಕೀರ್ತಿ ಘಮ ಘಮಿಸುತ್ತಿರುವ ತಮಿಳುತಾಯೇ, ನಿನ್ನ ಗಂಭೀರವಾದ ಚಿರಯೌವ್ವನವನ್ನು ನೆನೆದು ಅಚ್ಚರಿಯಿಂದ ಮೈಮರೆತು ಹಾಡಿ ಹೊಗಳುತ್ತೇನೆ.



ರಾಷ್ಟ್ರೀಯ ಸಮಗ್ರತೆಯ ಪ್ರತಿಜ್ಞೆ

ರಾಷ್ಟ್ರದ ಸ್ವಾತಂತ್ರ್ಯ ಮತ್ತು ಒಗ್ಗಟ್ಟನ್ನು ಕಾಪಾಡುವ ಹಾಗೂ ಬಲಪಡಿಸುವ ಕಾರ್ಯದಲ್ಲಿ ನಾನು ನನ್ನನ್ನು ಅರ್ಪಿಸಿಕೊಳ್ಳುತ್ತೇನೆ ಎಂದು ಹೃತ್ಪೂರ್ವಕವಾಗಿ ಪ್ರತಿಜ್ಞೆ ಮಾಡುತ್ತೇನೆ. ಅಲ್ಲದೇ ಎಂದೂ ನಾನು ಹಿಂಸೆಗೆ ಆಸ್ಪದ ಕೊಡುವುದಿಲ್ಲವೆಂದೂ ಮತೀಯ, ಭಾಷಿಕ, ಪ್ರಾದೇಶಿಕ ಮತ್ತು ರಾಜಕೀಯ ಹಾಗೂ ಆರ್ಥಿಕ ಸಂಕಷ್ಟಗಳ ಸಂದರ್ಭಗಳಲ್ಲಿ ಬರುವ ಎಲ್ಲಾ ರೀತಿಯ ಭಿನ್ನಾಭಿಪ್ರಾಯಗಳು, ವಿವಾದಗಳನ್ನು ಶಾಂತಿಯುತವಾಗಿಯೂ ಸಂವಿಧಾನಕ್ಕೆ ಅನುಸಾರವಾಗಿಯೂ ಪರಿಹರಿಸಲ್ಪಡಬೇಕೆಂದೂ ದೃಢಪಡಿಸುತ್ತೇನೆ.

ಪ್ರತಿಜ್ಞೆ

ಭಾರತ ನನ್ನ ದೇಶ. ಭಾರತೀಯರೆಲ್ಲರೂ ನನ್ನ ಒಡಹುಟ್ಟಿದವರು. ನನ್ನ ದೇಶವನ್ನು ನಾನು ಬಹಳ ಪ್ರೀತಿಸುತ್ತೇನೆ. ಈ ನಾಡಿನ ಭವ್ಯ ಪರಂಪರೆಯನ್ನೂ ವೈಶಿಷ್ಟ್ಯವನ್ನೂ ಕಂಡು ಹೆಮ್ಮೆ ಪಡುತ್ತೇನೆ. ಈ ನಾಡಿನ ಹಿರಿಮೆಯನ್ನು ಹೆಚ್ಚಿಸಲು ಅನವರತ ದುಡಿಯುತ್ತೇನೆ.

ನನ್ನ ತಂದೆ ತಾಯಿಯರು, ಶಿಕ್ಷಕರು ಮತ್ತು ಹಿರಿಯರನ್ನು ನಾನು ಗೌರವಿಸುತ್ತೇನೆ. ಎಲ್ಲರೊಡನೆಯೂ ಪ್ರೀತಿ ಹಾಗೂ ಗೌರವದಿಂದ ನಡೆದುಕೊಳ್ಳುತ್ತೇನೆ. ನನ್ನ ನಾಡಿಗೂ ನನ್ನ ನಾಡಿನ ಪ್ರಜೆಗಳಿಗೂ ಸೇವೆ ಮಾಡಲು ಮುಂದೆ ನಿಲ್ಲುತ್ತೇನೆ. ಅವರು ಏಳಿಗೆಯನ್ನೂ, ಸಮೃದ್ಧಿಯನ್ನೂ ಕಂಡು ನಾನು ಅತ್ಯಾನಂದ ಪಡುತ್ತೇನೆ.



ನಾಡ ಗೀತೆ

ಜಯ ಹೇ ಕರ್ನಾಟಕ ಮಾತೆ !
ಜಯ್ ಭಾರತ ಜನನಿಯ ತನುಜಾತೆ
ಜಯ ಹೇ ಕರ್ನಾಟಕ ಮಾತೆ !
ಜಯ್ ಸುಂದರ ನದಿ ವನಗಳ ನಾಡೆ,
ಜಯ ಹೇ ರಸಋಷಿಗಳ ಬೀಡೆ !

ಭೂದೇವಿಯ ಮುಕುಟದ ನವಮಣಿಯೆ,
ಗಂಧದ ಚಂದದ ಹೊನ್ನಿನ ಗಣಿಯೆ,
ರಾಘವ ಮಧುಸೂದನರವತರಿಸಿದ
ಭಾರತ ಜನನಿಯ ತನುಜಾತೆ,
ಜಯ ಹೇ ಕರ್ನಾಟಕ ಮಾತೆ !

ಜನನಿಯ ಜೋಗುಳ ವೇದದ ಘೋಷ,
ಜನನಿಗೆ ಜೀವವು ನಿನ್ನಾವೇಶ,
ಹಸುರಿನ ಗಿರಿಗಳ ಸಾಲೆ,
ನಿನ್ನಯ ಕೊರಳಿನ ಮಾಲೆ.
ಕಪಿಲ ಪತಂಜಲ ಗೌತಮ ಜಿನನುತ
ಭಾರತ ಜನನಿಯ ತನುಜಾತೆ,
ಜಯ ಹೇ ಕರ್ನಾಟಕ ಮಾತೆ !

ಶಂಕರ ರಾಮಾನುಜ ವಿದ್ಯಾರಣ್ಯ
ಬಸವೇಶ್ವರ ಮಧ್ವರ ದಿವ್ಯಾರಣ್ಯ
ರನ್ನ ಷಡಕ್ಷರಿ ಪೊನ್ನ
ಪಂಪ ಲಕುಮಿಪತಿ ಜನ್ನ
ಕುಮಾರವ್ಯಾಸರ ಮಂಗಳ ಧಾಮ !
ಕವಿಕೋಗಿಲೆಗಳ ಪುಣ್ಯಾರಾಮ !
ನಾನಕ ರಮಾನಂದ ಕಬೀರರ
ಭಾರತ ಜನನಿಯ ತನುಜಾತೆ,
ಜಯ ಹೇ ಕರ್ನಾಟಕ ಮಾತೆ !

ತೈಲಪ ಹೊಯ್ಸಳರಾಳಿದ ನಾಡೆ,
ಡಂಕಣ ಜಕಣರ ನೆಚ್ಚಿನ ಬೀಡೆ;
ಕೃಷ್ಣಶರಾವತಿ ತುಂಗಾ
ಕಾವೇರಿಯ ವರ ರಂಗ.
ಚೈತನ್ಯ ಪರಮಹಂಸ ವಿವೇಕರ
ಭಾರತ ಜನನಿಯ ತನುಜಾತೆ,
ಜಯ ಹೇ ಕರ್ನಾಟಕ ಮಾತೆ !

ಸರ್ವ ಜನಾಂಗದ ಶಾಂತಿಯ ತೋಟ,
ರಸಿಕರ ಕಂಗಳ ಸೆಳೆಯುವ ನೋಟ.
ಹಿಂದೂ ಕ್ರೈಸ್ತ ಮುಸಲ್ಮಾನ
ಪಾರಸಿಕ ಜೈನರುದ್ಯಾನ.
ಜನಕನ ಹೋಲುವ ದೊರೆಗಳ ಧಾಮ,
ಗಾಯಕ ವೈಣಿಕರಾರಾಮ !

ಕನ್ನಡನುಡಿ ಕುಣಿದಾಡುವ ಗೇಹ !
ಕನ್ನಡ ತಾಯಿಯ ಮಕ್ಕಳ ದೇಹ !
ಜಯ್ ಭಾರತ ಜನನಿಯ ತನುಜಾತೆ,
ಜಯ ಹೇ ಕರ್ನಾಟಕ ಮಾತೆ !
ಜಯ್ ಸುಂದರ ನದಿ ವನಗಳ ನಾಡೆ,
ಜಯ ಹೇ ರಸಋಷಿಗಳ ಬೀಡೆ !

– ರಾಷ್ಟ್ರಕವಿ ಕುವೆಂಪು



ಕಾಲದ ವೇಗಕ್ಕೆ
ಹೊಂದಾಣಿಕೆಯಾಗುವಂತೆ
ಅಂತರ್ಜಾಲದ ಮೂಲಕ



ಪ್ರತಿಯೊಂದು ಘಟಕವನ್ನು ಆಸಕ್ತಿಯಿಂದ
ಆಲಿಸಲು ಗದ್ಯಲೋಕ, ಕಾವ್ಯ ಕಣಜ
ಮುಂತಾದ ಉಪ ಪಠ್ಯ ಶೀರ್ಷಿಕೆ.



ಪಠ್ಯ ವಿಷಯದ ಅರ್ಥವನ್ನು
ವಿವರಿಸುವ ಅಮೂಲ್ಯವಾದ
ಹೊಸ ಸಂಗತಿಗಳನ್ನು
ತಿಳಿದುಕೊಳ್ಳಲು ಜ್ಞಾನ
ಸಂಪಾದನೆ



ವಿಷಯಕ್ಕೆ ಪೂರಕವಾದ ಘಟಕದ
ಪ್ರಾರಂಭದಲ್ಲಿ ಕಲಿಕಾ ಉದ್ದೇಶಗಳು

**ಸೃಜನಶೀಲ
ಅಧ್ಯಾಪಕರಿಗೂ,
ಕ್ರಿಯಾ ಶೀಲ ಮನಸ್ಸಿನ
ವಿದ್ಯಾರ್ಥಿಗಳಿಗೂ...**



ಕಲಿತ ವಿಷಯಗಳ ಕುರಿತಾದ
ಚಿಂತನೆಗಳನ್ನು ಕಲಿಕಾ ಚಟುವಟಿಕೆಗಳ
ಮೂಲಕ



ಘಟಕದ ಕೊನೆಯಲ್ಲಿ ಇನ್ನೂ
ಹೆಚ್ಚು ಕಲಿಯಬೇಕೆಂಬ
ಉತ್ಸಾಹದೊಂದಿಗೆ

ವಿದ್ಯಾರ್ಥಿಗಳು ಸ್ವಯಂ
ಮೌಲ್ಯಮಾಪನಕ್ಕೆ
ಪೂರಕವಾಗುವಂತೆ
ಮೌಲ್ಯೀಕರಿಸುವುದು.



ಚಿಂತನಾ ಸಾಮರ್ಥ್ಯಗಳಿಸಲು,
ಚಟುವಟಿಕೆಯ ಮಾರ್ಗದಲ್ಲಿ ಜೀವನದಲ್ಲಿ
ಎದುರಾಗುವ ಸಮಸ್ಯೆಗಳನ್ನು ನಿಭಾಯಿಸಲು,
ಓದಿ ಆನಂದಿಸಲು, ಭಾಷಾ ಕ್ರೀಡೆಯಲ್ಲಿ
ತೊಡಗಲು



ಸಾಹಿತ್ಯದ ಮೂಲಕ ಭಾಷಾ ಕಲಿಕೆ,
ತಾಂತ್ರಿಕವಾಗಿ ಮನನ ಮಾಡಲು ಭಾಷಾ
ಪ್ರೌಢಿಮೆಯನ್ನು ಗಳಿಸುವುದು



ಮಾತೃ ಭಾಷೆಯೊಂದಿಗೆ ಇತರ ವಿಷಯಗಳನ್ನು, ಹೊಸ ಅರ್ಥಗಳನ್ನು ಗ್ರಹಿಸಲು, ತರ್ಕದಲ್ಲಿ ತೊಡಗಲು...
ಈ ಪಠ್ಯ ಪುಸ್ತಕವು ಹೊಸ ವಿನ್ಯಾಸ ಹಾಗೂ ವರ್ಣರಂಜಿತವಾಗಿದ್ದು ಪರಿವಿಡಿಯೊಂದಿಗೆ
ಈ ಪಠ್ಯಪುಸ್ತಕವು ನಿಮ್ಮ ಕೈಗಳಲ್ಲಿ....

ಕನ್ನಡ

ಆರನೆಯ ತರಗತಿ

ಪರಿವಿಡಿ

ಘಟಕ	ಶೀರ್ಷಿಕೆ I Term	ಪುಟ ಸಂಖ್ಯೆ	ತಿಂಗಳು
1.	ಸವಿಗನ್ನಡ		
	ಕಾವ್ಯ ಕಣಜ : ಚೆಲುವ ಕನ್ನಡ ನುಡಿ *	03	ಜೂನ್
	ಪೂರಕ ಪದ್ಯ : ಕೋಲಾಟ	06	
	ಗದ್ಯವಿಹಾರ : ನಲ್ನುಡಿ ಕನ್ನಡ	09	
	ಉಪಪಠ್ಯ : ಕನಸು ನನಸಾಯಿತು	13	
	ವ್ಯಾಕರಣ : ಕನ್ನಡ ವರ್ಣಮಾಲೆ	16	
2.	ಪ್ರಕೃತಿ		
	ಕಾವ್ಯ ಕಣಜ : ನೀ ಬರುವ ದಾರಿಯಲಿ *	23	ಜುಲೈ
	ಪೂರಕ ಪದ್ಯ : ಬೆಳಗು – ಜಾವ	25	
	ಗದ್ಯವಿಹಾರ : ರೆಕ್ಕೆಯ ಧ್ವನಿ	27	
	ಉಪಪಠ್ಯ : ವೃದ್ಧನೂ ಕಡಲೂ	32	
	ವ್ಯಾಕರಣ : ವರ್ಗೀಯ ವ್ಯಂಜನಗಳು	38	
	ಧರ್ಮಚಿಂತನೆ : ತಿರುಕ್ಕುರಳ್ – ವಚನಗಳು	42	
3.	ವಿಜ್ಞಾನ–ತಂತ್ರಜ್ಞಾನ		
	ಕಾವ್ಯ ಕಣಜ : ವಿಜ್ಞಾನದ ಅಕ್ಷರ ಮಾಲೆ	47	ಆಗಸ್ಟ್
	ಪೂರಕ ಪದ್ಯ : ವೈಜ್ಞಾನಿಕ ಆಳ್ವಿಕೆ	49	
	ಗದ್ಯವಿಹಾರ : ನರೇಂದ್ರನ ಗೆಳೆಯ	51	
	ಉಪಪಠ್ಯ : ಬೆಳಕು ಹರಿಯಿತು	56	
	ವ್ಯಾಕರಣ : ಅಕ್ಷರಗಳ ಉತ್ಪತ್ತಿ ಸ್ಥಾನಗಳು	61	

ಪರಿವಿಡಿ

ಘಟಕ	ಶೀರ್ಷಿಕೆ II Term	ಪುಟ ಸಂಖ್ಯೆ	ತಿಂಗಳು
4.	ಶಿಕ್ಷಣ		
	ಕಾವ್ಯ ಕಣಜ : ಜ್ಞಾನದ ಹಿರಿಮೆ *	65	ಅಕ್ಟೋಬರ್
	ಪೂರಕ ಪದ್ಯ : ಗ್ನಾನದ್ ದೀಪ *	67	
	ಗದ್ಯ ವಿಹಾರ : ಶಿಕ್ಷಣದ ಕಣ್ಣು ತೆರೆಸಿದ ಧೀಮಂತ	70	
	ಉಪಪಠ್ಯ : ಪುಸ್ತಕಗಳು	74	
	ವ್ಯಾಕರಣ : ನಾಮಪದ	77	
5.	ಕಲೆ–ಸೌಂದರ್ಯಮೀಮಾಂಸೆ–ಆಧುನಿಕತೆ		
	ಕಾವ್ಯ ಕಣಜ : ತೂಗಿರೆ ರಂಗನ *	80	ನವೆಂಬರ್
	ಪೂರಕ ಪದ್ಯ : ಸರ್ವಜ್ಞನ ತ್ರಿಪದಿಗಳು	83	
	ಗದ್ಯ ವಿಹಾರ : ಸುಗ್ಗಿಯ ಹಬ್ಬ : ಸಂಕ್ರಾಂತಿ	85	
	ಉಪಪಠ್ಯ : ಬೇಲೂರು – ಹಳೇಬೀಡು	89	
	ವ್ಯಾಕರಣ : ನಾಮಪದ	92	
6.	ನಾಗರಿಕತೆ–ವೃತ್ತಿ–ವಾಣಿಜ್ಯ		
	ಕಾವ್ಯ ಕಣಜ : ಹಡಗದ ಚಂದ	96	ಡಿಸೆಂಬರ್
	ಪೂರಕ ಪದ್ಯ : ವಿದುರ ನೀತಿ	99	
	ಗದ್ಯ ವಿಹಾರ : ವಾಣಿಜ್ಯ – ವ್ಯವಹಾರ	101	
	ಉಪಪಠ್ಯ : ಬಂಡವಾಳ	105	
	ವ್ಯಾಕರಣ : ಕ್ರಿಯಾಪದ	107	

ಪರಿವಿಡಿ

ಘಟಕ	ಶೀರ್ಷಿಕೆ III Term	ಪುಟ ಸಂಖ್ಯೆ	ತಿಂಗಳು
7.	ನವಚೈತನ್ಯ ತುಂಬುವ ದೇಶವಿದು		
	ಕಾವ್ಯ ಕಣಜ : ಸ್ವಾತಂತ್ರ್ಯದ ಹಣತೆ *	110	ಜನವರಿ
	ಗದ್ಯ ವಿಹಾರ : ಹಿಂದೂಸ್ತಾನಕ್ಕೆ ಹಿಂದಿರುಗಿದುದು	112	
	ಉಪಪಠ್ಯ : ವೀರರಾಣಿ ಕೆಳದಿ ಚೆನ್ನಮ್ಮ	118	
	ವ್ಯಾಕರಣ : ಲೇಖನ ಚಿಹ್ನೆಗಳು	120	
8.	ಸಹಬಾಳ್ವೆಯಿಂದ ಸ್ವರ್ಗಸುಖ		
	ಕಾವ್ಯ ಕಣಜ : ಸರ್ವಜ್ಞನ ವಚನಗಳು *	124	ಫೆಬ್ರವರಿ
	ಪೂರಕ ಪದ್ಯ : ಮೊದಲು ಮಾನವನಾಗು	127	
	ಗದ್ಯವಿಹಾರ : ಹಸಿವೆಂಬ ರೋಗವನ್ನು ನಿವಾರಿಸಿದ ಹೆಣ್ಣು	129	
	ಉಪಪಠ್ಯ : ಗಿಳಿರಾಮ	134	
	ಬಾಳ ಬೆಳಕು : ವಚನಗಳು	136	
	ವ್ಯಾಕರಣ : ವಿಭಕ್ತಿ ಪ್ರತ್ಯಯಗಳು, ತತ್ಸಮ–ತದ್ಭವಗಳು	139	
9.	ಜೀವ ಕಾರುಣ್ಯ		
	ಕಾವ್ಯ ಕಣಜ : ಬುದ್ಧ	142	ಮಾರ್ಚ್
	ಗದ್ಯವಿಹಾರ : ಮಾನವೀಯತೆ	146	
	ಉಪಪಠ್ಯ : ಅಂಗದಾನದ ಮಹತ್ವ	150	
	ವ್ಯಾಕರಣ : ಕಾಲಗಳು, ಕಾಲ ಸೂಚಕ ಪ್ರತ್ಯಯಗಳು	153	

* ಈ ಚಿಹ್ನೆಯು ಕಂಠಪಾಠ ಮಾಡಬೇಕಾದ ಪದ್ಯಗಳನ್ನು ಸೂಚಿಸುತ್ತದೆ.

ಘಟಕ ಒಂದು

ಸವಿಗನ್ನಡ



ಕಲಿಕಾ ಉದ್ದೇಶಗಳು

- ಪದ್ಯದ ಮುಖ್ಯಾಂಶವನ್ನು ಗ್ರಹಿಸಿ ಸ್ವತಂತ್ರವಾಗಿ ಹೇಳುವುದು/ ಬರೆಯುವುದು.
- ಕನ್ನಡ ಭಾಷೆಯ ಮಾಧುರ್ಯವನ್ನು ಆಸ್ವಾದಿಸಿ ಪ್ರಶಂಸಿಸುವುದು.
- ಕನ್ನಡ ಭಾಷೆಯ ಮಹತ್ವವನ್ನು ಪಟ್ಟಿ ಮಾಡುವುದು.
- ಆತ್ಮ ವಿಶ್ವಾಸದಿಂದ ತಮ್ಮ ಗುರಿಗಳನ್ನು ಸೃಷ್ಟಿಸುವುದು.
- ಅಕ್ಷರಗಳ ಉಗಮ, ವಿಧಾನಗಳನ್ನು ತಿಳಿದುಕೊಳ್ಳುವುದು.

ಘಟಕ
ಒಂದು

ಸವಿಗನ್ನಡ

ಕಾವ್ಯ ಕಣಜ	:	ಚೆಲುವ ಕನ್ನಡ ನುಡಿ
ಪೂರಕ ಪದ್ಯ	:	ಕೋಲಾಟ
ಗದ್ಯ ವಿಹಾರ	:	ನಲ್ನುಡಿ ಕನ್ನಡ
ಉಪಪಠ್ಯ	:	ಕನಸು ನನಸಾಯಿತು
ವ್ಯಾಕರಣ	:	ವರ್ಗೀಯ ವ್ಯಂಜನಗಳು



ಘಟಕ ಒಂದು

ಚೆಲುವ ಕನ್ನಡ ನುಡಿ *

– ಬೆಟಗೇರಿ ಕೃಷ್ಣಶರ್ಮರು



ತಾಯ್ನುಡಿಯಾದ ಕನ್ನಡವನ್ನು ಕವಿಗಳು, ಸಾಹಿತಿಗಳು ಹಲವು ರೀತಿಯಲ್ಲಿ ಹೊಗಳಿ ಹಾರೈಸಿ ಹಾಡಿದ್ದಾರೆ. ನಾಡು ನುಡಿಯನ್ನು ಹಿಂದಿನ ಕವಿಗಳು ತಮ್ಮ ಕಾವ್ಯದಲ್ಲಿ ಸ್ತುತಿಸುವುದನ್ನು ಸಂಪ್ರದಾಯವಾಗಿಸಿಕೊಂಡಿದ್ದರು. ಕವಿಗಳಿಗೆ ಕನ್ನಡವೆಂದರೆ ಅದು ಅಮೃತದಂತೆ ಮಧುರವಾದುದು, ಹಕ್ಕಿಗಳ ಇಂಚರದಂತೆ ಸುಮಧುರವಾದುದು. ಕನ್ನಡ ಭಾಷೆಯ ಸೊಬಗನ್ನು ಕವಿಗಳು ನಾನಾ ರೀತಿಯಲ್ಲಿ ವರ್ಣಿಸಿದ್ದಾರೆ. ಬೆಟಗೇರಿ ಕೃಷ್ಣಶರ್ಮರು ಕನ್ನಡದ ಕಟ್ಟಾಳು. ಇವರ ಕನ್ನಡ ಪ್ರೇಮ ಉಜ್ವಲವಾದುದು. ಮಕ್ಕಳನ್ನು ಮುದ್ದಿಸುವಂತೆ ಕವಿ ಈ ಕವನದಲ್ಲಿ ಕನ್ನಡ ನುಡಿಯ ಸೊಬಗನ್ನು ಹಲವು ಬಗೆಯಲ್ಲಿ ಬಣ್ಣಿಸಿದ್ದಾರೆ.

ಎನಿತು ಇನಿದು ಈ ಕನ್ನಡ ನುಡಿಯು !
ಮನವನು ತಣಿಸುವ ಮೋಹನ ಸುಧೆಯು ! ॥ ಪಲ್ಲವಿ ॥

ಗಾನವ ಬೆರೆಯಿಸಿ... ವೀಣೆಯ ದನಿಯೊಳು
ವಾಣಿಯ ನೇವುರ... ನುಡಿಸುತೆ ಕುಣಿಯಲು
ಮಾಣದೆ ಮೆರೆಯುವ ಮಂಜುಳ ರವವೋ?
ಎನಿತು ಇನಿದು ಈ ಕನ್ನಡ ನುಡಿಯು ! ॥ ೧ ॥

ರಂಗನ ಮುರಲಿಯ... ಹಿಂಗದ ಸರದಲಿ
ಹೆಂಗಳೆಯರು ಬೆಳದಿಂಗಳಿರುಳಲಿ
ಸಂಗೀತವ ನೊರೆದಂಗವಿದೇನೋ?
ಎನಿತು ಇನಿದು ಈ ಕನ್ನಡ ನುಡಿಯು ! ॥ ೨ ॥

ಗಿಳಿಗಳು ಉಲಿಯುವ ಮೆಲು ಮಾತುಗಳೋ
ಕಳಕಂಠಗಳಾ ಚೆಲುವಿನ ಕುಕಿಲೋ ?
ಅಳಿಗಳ ಬಳಗದ ಬೆಳಗಿನ ಉಲಿಯೋ?
ಎನಿತು ಇನಿದು ಈ ಕನ್ನಡ ನುಡಿಯು ! ॥ ೩ ॥

ಕವಿ–ಕಾವ್ಯ ಪರಿಚಯ

ಆನಂದ ಕಂದ ಎಂಬ ಕಾವ್ಯನಾಮದಿಂದ ಪ್ರಸಿದ್ಧರಾದವರು ಬೆಟಗೇರಿ ಕೃಷ್ಣಶರ್ಮರು. ಇವರು 1900ರಲ್ಲಿ ಬೆಟಗೇರಿಯಲ್ಲಿ ಜನಿಸಿದರು. ಆಧುನಿಕ ಕನ್ನಡ ಸಾಹಿತ್ಯದ ಪ್ರಸಿದ್ಧ ಕವಿ ಹಾಗೂ ಲೇಖಕರಾದ ಇವರ ಕನ್ನಡ ಪ್ರೇಮ ಉಜ್ವಲವಾದುದು. ಕನ್ನಡ ಸಾಹಿತ್ಯ ನವೋದಯದ ಅಗ್ರಮಾನ್ಯ ಕವಿಗಳಲ್ಲಿ ಇವರೂ ಒಬ್ಬರು.



ಬೆಟಗೇರಿ ಕೃಷ್ಣಶರ್ಮ

ಪದಗಳ ಅರ್ಥ

ಇನಿದು – ಇಂಪಾದುದು; ಮಾಣದೆ – ಬಿಡದೆ, ನಿರಂತರವಾಗಿ; ಮಂಜುಳ ರವ – ಇಂಪಾದ ಧ್ವನಿ, ಮಧುರವಾದ ಧ್ವನಿ; ಮೋಹನ – ಆಕರ್ಷಕವಾದ; ಸುಧೆ – ಅಮೃತ; ಮುರಲಿ – ಕೊಳಲು; ಗಾನ – ಸಂಗೀತ, ಹಾಡು; ವಾಣಿ – ಸರಸ್ವತಿ, ರಂಗ – ಶ್ರೀಕೃಷ್ಣ, ಚೆಲುವು – ಸೌಂದರ್ಯ, ಕುಕಿಲು – ಧ್ವನಿ; ಉಲಿ – ಧ್ವನಿ; ಕಳಕಂಠ – ಕೋಗಿಲೆ; ಅಳಿ – ದುಂಬಿ

ಕವನದ ಭಾವಾರ್ಥ

ಕನ್ನಡ ನುಡಿಯು ಮಧುರವಾದುದು. ಕವಿಗೆ ಕನ್ನಡ ನುಡಿಯನ್ನು ಕಂಡರೆ ಅತುಲ ಪ್ರೇಮ. ಶ್ರೀಕೃಷ್ಣನ ಕೊಳಲಿನ ನಾದದಂತೆ ಕನ್ನಡ ನುಡಿ ಇದೆ ಎಂಬುದು ಕವಿಯ ಭಾವನೆ. ವಿದ್ಯಾಧಿದೇವತೆಯಾದ ಸರಸ್ವತಿ ನುಡಿಸುವ ವೀಣೆಯ ನಾದದಂತೆ ಕನ್ನಡ ನುಡಿ ನಮ್ಮ ಮೈಮನಗಳನ್ನು ತಣಿಸುತ್ತದೆ. ಬೆಳದಿಂಗಳ ರಾತ್ರಿಯಲ್ಲಿ ಚಂದ್ರನ ಪ್ರಶಾಂತ ಬೆಳಕಿನಲ್ಲಿ ಸಂಗೀತ ಕಛೇರಿ ನಡೆಸಿದಂತೆ ಭಾಸವಾಗುತ್ತದೆ.ಈ ಕನ್ನಡ ನುಡಿಯ ಸವಿಯನ್ನು ಅರಿತು ಗಿಳಿ, ಅಳಿಲು, ಕೋಗಿಲೆಗಳು ಪರಮಾನಂದದಿಂದ ನಲಿಯುತ್ತಿವೆ ಎಂದು ಕವಿ ಕನ್ನಡ ನುಡಿಯ ಸೊಬಗನ್ನು ಬಣ್ಣಿಸಿದ್ದಾರೆ.

ಪ್ರಶ್ನೋತ್ತರಗಳು

I. ಸಂಕ್ಷಿಪ್ತವಾಗಿ ಉತ್ತರಿಸಿ.

1. ಕವಿ ಕನ್ನಡ ನುಡಿ ಹೇಗಿದೆ ಎಂದು ತಿಳಿಸಿದ್ದಾರೆ?
2. ಕನ್ನಡವನ್ನು ಯಾವುದಕ್ಕೆ ಹೋಲಿಸಿದ್ದಾರೆ?

ಭಾಷಾಭ್ಯಾಸ

II. ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ.

1. ವಾಣಿ ಎಂದರೆ _____
   ಅ) ಲಕ್ಷ್ಮಿ ಆ) ಸರಸ್ವತಿ
   ಇ) ಪಾರ್ವತಿ ಈ) ದುರ್ಗೆ
2. ಹಗಲೆಲ್ಲಾ ದುಡಿದು ದಣಿದು ಬಂದವನಿಗೆ _____ ಬೇಕಾಗಿರುವುದು.
   ಅ) ಸಂತೋಷ ಆ) ಕೋಪ
   ಇ) ಬೇಸರ ಈ) ದಣಿವು
3. 'ಮನವನ್ನು' ಈ ಪದವನ್ನು ಬಿಡಿಸಿ ಬರೆದಾಗ _____
   ಅ) ಮನ + ಅನ್ನು ಆ) ಮನವ + ನ್ನು
   ಇ) ಮನಸ್ಸು + ಅನ್ನು ಈ) ಮನ + ವನ್ನು
4. ಬೆಳದಿಂಗಳು + ಇರುಳಲ್ಲಿ – ಈ ಪದವನ್ನು ಸೇರಿಸಿದರೆ _____
   ಅ) ಬೆಳದಿಂಗಳಿನಇರುಳಿನಲ್ಲಿ
   ಆ) ಬೆಳದಿಂಗಳಲ್ಲಿ
   ಇ) ಬೆಳದಿಂಗಳಿರುಳಲ್ಲಿ
   ಈ) ಬೆಳದಿಂಗಳಿನಲ್ಲಿ

III. ಹೊಂದಿಸಿ ಬರೆಯಿರಿ.

1. ರಂಗ	–	ಅ) ಸರಸ್ವತಿ
2. ಗಾನ	–	ಆ) ಶ್ರೀಕೃಷ್ಣ
3. ವಾಣಿ	–	ಇ) ಧ್ವನಿ
4. ಕುಕಿಲು	–	ಈ) ಸಂಗೀತ

IV. ಪ್ರಾಸ ಪದಗಳನ್ನು ಗುರುತಿಸಿ.

ಉದಾಹರಣೆಗೆ :

ನುಡಿಯು–ಸುಧೆಯು

ಚಟುವಟಿಕೆ

ಅಮೃತ ಎಂಬುದು ಒಂದು ಮಧುರ ಪದಾರ್ಥ. ಇದನ್ನು ಕನ್ನಡ ನುಡಿಗೆ ಹೇಗೆ ಹೋಲಿಸಲಾಗಿದೆ. ನಿಮ್ಮ ಅಭಿಪ್ರಾಯ ತಿಳಿಸಿ.

ಕಲಿತದ್ದು – ಕಲಿಕೆಯ ಫಲ

1. ಚೆಲುವ ಕನ್ನಡ ನುಡಿ – ಕವನವನ್ನು ಭಾವಪೂರ್ಣವಾಗಿ ಹಾಡಿರಿ.
2. ಇನಿದು, ಸುಧೆ, ವೀಣೆಯ ಧ್ವನಿ, ಮಂಜುಳ ರವ – ಈ ಶಬ್ದಗಳನ್ನು ಕುರಿತು ತರಗತಿಯಲ್ಲಿ ಚರ್ಚಿಸಿ.
3. ಕನ್ನಡಕ್ಕೆ ನೀವು ತೊಡಿಸುವ ಹೆಸರುಗಳನ್ನು ಪಟ್ಟಿ ಮಾಡಿ.
4. ಕನ್ನಡ ಕವನಗಳು, ಹಾಡುಗಳನ್ನು ಹಾಡಿ ಆನಂದಿಸಿ.

ಉದಾಹರಣೆಗೆ:



ಬಾರಿಸು ಕನ್ನಡ ಡಿಂಡಿಮವ
ಓ ಕರ್ನಾಟಕ ಹೃದಯ ಶಿವ
ಸತ್ತಂತಿಹರನು ಬಡಿದೆಚ್ಚರಿಸು
ಕಚ್ಚಾಡುವರನು ಕೂಡಿಸಿ ಒಲಿಸು
ಹೊಟ್ಟೆಯ ಕಿಚ್ಚಿಗೆ ಕಣ್ಣೀರ್ ಸುರಿಸು
ಒಟ್ಟಿಗೆ ಬಾಳುವ ತೆರದಲಿ ಹರಸು

– ರಾಷ್ಟ್ರಕವಿ ಕುವೆಂಪು



ಪೂರಕ ಪದ್ಯ

ಘಟಕ ಒಂದು

ಕೋಲಾಟ

_ ಜನಪದ ಗೀತೆ



ಗುಂಪುಗುಂಪಾಗಿ ಒಂದುಗೂಡಿ ಆಡಿ ಹಾಡುವುದು, ಕುಣಿಯುವುದು ಮನಸ್ಸಿಗೆ ಉಲ್ಲಾಸ ಹಾಗೂ ತೃಪ್ತಿಯನ್ನು ನೀಡುತ್ತದೆ. ಕೋಲಾಟದಲ್ಲಿ ಕನ್ನಡ ಪದಗಳನ್ನು ಆಕರ್ಷಕವಾಗಿ ಹೊಂದಿಸಲಾಗಿರುತ್ತದೆ. ನಮ್ಮ ಪ್ರಾಚೀನರು ತಮ್ಮ ಬಿಡುವಿನ ಸಮಯದಲ್ಲಿ ಮನರಂಜನೆಗಾಗಿ ಕೋಲಾಟವಾಡುತ್ತಿದ್ದರು. ಕೋಲುಗಳನ್ನು ಹಿಡಿದುಕೊಂಡು ಪರಸ್ಪರ ಅವುಗಳಿಗೆ ಹೊಡೆಯುತ್ತಾ, ಲಯಬದ್ಧವಾಗಿ ತಾಳಕ್ಕೆ ತಕ್ಕಂತೆ ಕುಣಿಯುವುದು, ಭಾವಪೂರ್ಣವಾಗಿ ಹಾಡುವುದು, ಕೋಲಾಟದ ವೈಶಿಷ್ಟ್ಯವಾಗಿದೆ. ಇದು ನಮ್ಮ ಪ್ರಾಚೀನ ಜಾನಪದ ಸಂಸ್ಕೃತಿಯನ್ನು ಬಿಂಬಿಸುತ್ತದೆ. ದಾಸರ ಕೀರ್ತನೆಗಳನ್ನು ಕೂಡ ಕೋಲಾಟವಾಡುತ್ತಾ ಹಾಡುವುದುಂಟು. ಕೋಲಾಟವಾಡಲು ಕನಿಷ್ಠ ನಾಲ್ಕು ಜನರಾದರೂ ಇರಬೇಕು. ಅದಕ್ಕೆ ಮೇಲೆ ಸಮಸಂಖ್ಯೆಯಲ್ಲಿ ಎಷ್ಟು ಜನರಾದರೂ ಒಂದುಗೂಡಿ ಕೋಲಿಗೆ ಕೋಲು ತಾಕಿಸುತ್ತಾ, ಕಾಲುಗಳನ್ನು ಬದಲಿಸುತ್ತಾ ಕುಣಿಯಬಹುದು. ಬನ್ನಿ, ನಾವೂ ಒಂದು ಹಾಡು ಹೇಳುತ್ತಾ ಕೋಲಾಟ ಆಡೋಣ...!

ಘಲ್ಲು ಘಲ್ಲೆನುತಾ ಗೆಜ್ಜೆ ಘಲ್ಲು ತಾಜಿನುತಾ
ಬಲ್ಲಿದ ರಂಗನ್ ವಲ್ಲಿಯ ಮ್ಯಾಲೆ ಚೆಲ್ಲಿದರೋಕುಳಿಯೋ

ಅರೆದರು ಅರಿಷಿಣವಾ ಅದಕೆ ಬೆರೆದರು ಸುಣ್ಣಾವಾ
ಅಂದವುಳ್ಳ ರಂಗನ್ ಮ್ಯಾಲೆ ಚೆಲ್ಲಿದರೋಕುಳಿಯೋ

ಹಾಲಿನೋಕುಳಿಯೋ ಒಳ್ಳೇ ಲೀಲದೋಕುಳಿಯೋ
ಲೋಲನಾದ ರಂಗನ್ ಮ್ಯಾಲೆ ಹಾಲಿನೋಕುಳಿಯೋ

ತುಪ್ಪದೋಕುಳಿಯೋ ಒಳ್ಳೆ ಒಪ್ಪದೋಕುಳಿಯೋ
ಒಪ್ಪವುಳ್ಳ ರಂಗನ್ ಮ್ಯಾಲೆ ಹಾಲಿನೋಕುಳಿಯೋ

ಗಂಧದೋಕುಳಿಯೊ ಒಳ್ಳೇ ಚಂದದೋಕುಳಿಯೋ
ಅಂದವುಳ್ಳ ರಂಗನ್ ಮ್ಯಾಲೆ ಗಂಧದೋಕುಳಿಯೋ



ಕವಿ–ಕಾವ್ಯ ಪರಿಚಯ

ಈ ಹಾಡು ಒಂದು ಜನಪದ ಗೀತೆ. ಹಳ್ಳಿಯ ಜನರು ಹಬ್ಬ ಹರಿದಿನಗಳಲ್ಲಿ ಮದುವೆ ಸಮಾರಂಭಗಳಲ್ಲಿ ತಮ್ಮ ಶ್ರೀಮಂತ ಕಲಾವೈಭವವನ್ನು ಸಮೃದ್ಧ ನುಡಿಯಾದ ಕನ್ನಡದಲ್ಲಿ ಹಾಡಿ, ಆನಂದವನ್ನು ಅನುಭವಿಸಿ ಅದರ ಸವಿಯನ್ನು ಇತರರಿಗೂ ಉಣಬಡಿಸಿದ್ದಾರೆ. ಇಂತಹ ಶ್ರೇಷ್ಣ ಪದ್ಯಗಳ ರಚನಕಾರ ಒಬ್ಬ ಅಜ್ಞಾತ ಕವಿ. ಈ ಹಾಡನ್ನು ಕನ್ನಡದ ಪ್ರಸಿದ್ಧ ಜಾನಪದ ಕೃತಿಯೊಂದರಿಂದ ಆಯ್ದುಕೊಳ್ಳಲಾಗಿದೆ

ಪದಗಳ ಅರ್ಥ

ಓಕುಳಿ – ಬಣ್ಣಬಣ್ಣದ ನೀರು, ಗಂಧ – ಚಂದನ; ಹಾಲು – ಕ್ಷೀರ;ರಂಗ – ಹರಿ, ಕೃಷ್ಣ; ಬೆರೆದರು – ಬೆರೆಸಿದರು

ಪದ್ಯದ ಭಾವಾರ್ಥ

ಪುಟಾಣಿಗಳೇ! ಕನ್ನಡದ ಸೌರಭವನ್ನು ಹಿರಿಮೆ–ಗರಿಮೆಯನ್ನು ಎತ್ತಿ ಸಾರುವಂತಹ ಕೋಲಾಟವಾಡೋಣ ಬನ್ನಿ. ಶ್ರೀಹರಿಯನ್ನು ನೆನೆದು ಬಣ್ಣದ ಓಕುಳಿಯನ್ನು ಹಾಕಿ ಆನಂದ ಸಾಗರದಲ್ಲಿ ಮುಳುಗೋಣ. ತಾಳ ಅದಕ್ಕೆ ತಕ್ಕ ಲಯ, ಗೇಯಗಳೊಂದಿಗೆ ಪುಟಾಣಿಗಳೆಲ್ಲ ಸೇರಿ, ಕೋಲಾಟವಾಡಿ ನಲಿಯೋಣ!

ಪ್ರಶ್ನೋತ್ತರಗಳು

I. ಸಂಕ್ಷಿಪ್ತವಾಗಿ ಉತ್ತರಿಸಿ.

1. ಕೋಲಾಟವನ್ನು ಯಾವಾಗ ಆಡುವರು ?
2. ಕೋಲಾಟದಿಂದ ನಮ್ಮಲ್ಲಿ ಯಾವ ಭಾವನೆ ಬೆಳೆಯುತ್ತದೆ.

II. ನಾಲ್ಕು ಅಥವಾ ಐದು ಸಾಲುಗಳಲ್ಲಿ ಉತ್ತರಿಸಿ.

1. ಈ ಕೋಲಾಟದ ಹಾಡಿನ ರೀತಿಯಲ್ಲಿರುವ ಬೇರೆ ಕೆಲವು ಹಾಡುಗಳನ್ನು ಸಂಗ್ರಹಿಸಿ.
2. ಈ ಕವನದ ಆಶಯವೇನು ?

ಭಾಷಾಭ್ಯಾಸ

III. ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ.

1. ತಾಯ್ನುಡಿಯಲ್ಲಿ ಕಲಿತರೆ _____ ಪಡೆಯಬಹುದು.
   ಅ) ಬಾಂಧವ್ಯ ಆ) ಶ್ರೇಷ್ಠತೆ
   ಇ) ತಾಳ್ಮೆ ಈ) ಸಂತೃಪ್ತಿ.
2. ಮಾಹಿತಿ ತಂತ್ರಜ್ಞಾನ ಬೆಳವಣಿಗೆಯಿಂದ _____ ಸಣ್ಣದಾಗುತ್ತಿದೆ.
   ಅ) ಪ್ರಪಂಚ ಆ) ಚಂದ್ರ
   ಇ) ಗಗನ ಈ) ಗಾಳಿ
3. 'ಹಾಲಿನೋಕುಳಿ' – ಈ ಪದವನ್ನು ಬಿಡಿಸಿ ಬರೆದಾಗ _____
   ಅ) ಹಾಲಿನ+ಓಕುಳಿ
   ಆ) ಹಾಲಿನೋ+ಕುಳಿ
   ಇ) ಹಾಲು+ನೋಕುಳಿ
   ಈ) ಹಾಲಿನಲ್ಲಿ+ಕುಳಿ
4. 'ರಂಗ' – ಈ ಹೆಸರು ಯಾರಿಗಿದೆ ?
   ಅ) ಶಿವ ಆ) ಹರಿ
   ಇ) ಇಂದ್ರ ಈ) ಗಣೇಶ
5. 'ಚಂದ' – ಈ ಪದದ ಅರ್ಥ
   ಅ) ಸುಂದರ ಆ) ಮಂದಿರ
   ಇ) ಕಂದರ ಈ) ಬಂಧುರ
6. 'ಅಮೃತ' – ಈ ಪದದ ವಿರುದ್ಧ ಪದ
   ಅ) ವಿಷ ಆ) ರಸ
   ಇ) ಯಶ ಈ) ಸಿಹಿ

IV. 1. ಈ ಪದ್ಯದದಲ್ಲಿನ ಪ್ರಾಸ ಪದಗಳನ್ನು ಪಟ್ಟಿ ಮಾಡಿ.

2. ಈ ಪದ್ಯದಲ್ಲಿನ ಆದಿ ಮತ್ತು ಅಂತ್ಯ ಪ್ರಾಸಗಳನ್ನು ಬರೆಯಿರಿ.

ಚಟುವಟಿಕೆ

V. ಶ್ರೀಕೃಷ್ಣನನ್ನು ಕುರಿತು ದಾಸರು ರಚಿಸಿರುವ ಕೀರ್ತನೆಗಳನ್ನು ಸಂಗ್ರಹಿಸಿ ಓದಿರಿ.

ಕಲಿತದ್ದು – ಕಲಿಕೆಯ ಫಲ

1. **ಈ ಕೋಲಾಟವನ್ನು ಭಾವಪೂರ್ಣವಾಗಿ ಅಭಿನಯಿಸಿ ಆನಂದಿಸಿ.**

2. **ಈ ಹಾಡನ್ನು ಹಾಡಿ ಆನಂದಿಸಿ :**

ಆಗಸದಲ್ಲಿ ಹಾರುವುದೆಂದರೆ
ಪುಟಾಣಿ ಪುಟ್ಟಿಗೆ ಬಲು ಇಷ್ಟ
ರೆಕ್ಕೆಗಳಿಲ್ಲದೆ ಹಾರಲು ಹೋದರೆ
ಆಗದೆ ತೊಂದರೆ? ಇದು ಕಷ್ಟ.
ಒಂದು ದಿನ ಇದ್ದಕಿದ್ದಂತೆ
ಪುಟ್ಟಿಗೆ ರೆಕ್ಕೆಯು ಬಂದಿತ್ತು
ಹಕ್ಕಿಯ ಹಾಗೆ ಹಾರುವ ಮನಕೆ
ಹೆಚ್ಚಿನ ಹರುಷವ ತಂದಿತ್ತು.











ಘಟಕ ಒಂದು

ನಲ್ನುಡಿ ಕನ್ನಡ



ಮಾತು ಮಾನವನ ಮನಸ್ಸನ್ನು ಪ್ರತಿಬಿಂಬಿಸುತ್ತದೆ. ಮಾತಿನ ಮೂಲ ಭಾಷೆ. ಭಾಷೆ ಭಾವನೆಯ ಪ್ರತಿಬಿಂಬ. ಮಾನವನ ಸಾಧನೆಗಳಲ್ಲಿ ಭಾಷೆಯನ್ನು ಕಂಡು ಹಿಡಿದಿರುವುದೇ ಎಲ್ಲಕ್ಕಿಂತ ದೊಡ್ಡ ಸಾಧನೆ. ಮಾನವನ ಅನ್ವೇಷಣೆಗಳಲ್ಲಿ ಭಾಷೆಯೇ ಅವನನ್ನು ಹೆಚ್ಚು ಆವರಿಸಿಕೊಂಡಿರುವುದು. ಇದು ಮಾನವನ ವಿಚಾರ ವಿನಿಮಯದ ಶ್ರೇಷ್ಠ ಸಾಧನವಾಗಿದೆ. ಹಾಗೆಯೇ ಒಂದು ಭಾಷೆಯ ಸಾಹಿತ್ಯ ಮತ್ತು ಸಂಸ್ಕೃತಿಗಳ ಒಲವಿನ ಬಂಧನವಿಲ್ಲದೆ ಸಮಾಜದಲ್ಲಿ ಸುಖ ಸಂತೋಷ ಮತ್ತು ಸಾಮರಸ್ಯವಿರಲಾರದು. ಸಮಾಜದಲ್ಲಿ ಜನಜೀವನವನ್ನು ಪ್ರತಿಬಿಂಬಿಸುವ ರಸಗನ್ನಡಿಯೇ ಸಾಹಿತ್ಯ. ನಾವು ಅಂದದ, ಚಂದದ, ಗಂಧದ, ಕಸ್ತೂರಿ ಕನ್ನಡದ ಸಂಪನ್ನತೆಯ ಬಗೆಗೆ ತಿಳಿದುಕೊಳ್ಳೋಣ.

ಮಾನವ ಸಂತತಿ ಅನ್ವೇಷಿಸಿದ ಮಹತ್ವದ ಸಾಧನ ಭಾಷೆ. ಪ್ರಾಣಿ ಜಗತ್ತಿನಿಂದ ಮಾನವ ಕುಲವನ್ನು ಬೇರ್ಪಡಿಸಿ ತನ್ನಿಂದ ರೂಪುಗೊಂಡ ಸಮಾಜದಲ್ಲಿ ಸ್ನೇಹಪೂರ್ಣ ನಾಗರಿಕ ಪ್ರಜ್ಞಾವಂತನಾಗಿ ಬದುಕನ್ನು ಕಟ್ಟಿಕೊಳ್ಳಲು ಭಾಷೆ ಪ್ರಮುಖ ಸಾಧನವಾಗಿದೆ. ವಿಶ್ವದಲ್ಲಿ ಇಂದು ಸಾವಿರಾರು ಭಾಷೆಗಳಿದ್ದು ಅವುಗಳಲ್ಲಿ ಕೆಲವು ಗ್ರಾಂಥಿಕ ಭಾಷೆಗಳಾದರೆ ಮತ್ತೆ ಕೆಲವು ಆಡು ಭಾಷೆಗಳಾಗಿಯೇ ಉಳಿದಿವೆ.

ದ್ರಾವಿಡ ಭಾಷೆಗಳಲ್ಲಿ ಅತ್ಯಂತ ಹೆಚ್ಚು ಪ್ರಾಮುಖ್ಯತೆ ಕನ್ನಡಕ್ಕಿದೆ. ಭಾರತದ ಪ್ರಾಚೀನ ಭಾಷೆಗಳಲ್ಲಿ ಕನ್ನಡ ಭಾಷೆಯೂ ಒಂದಾಗಿದೆ. ಜಗತ್ತಿನಲ್ಲಿ ಮಾತನಾಡುವ ಭಾಷೆಗಳಲ್ಲಿ 29ನೆಯ ಸ್ಥಾನವನ್ನು ಪಡೆದಿದೆ ನಮ್ಮ ಕನ್ನಡ ಭಾಷೆ. ಕನ್ನಡ ಭಾಷೆಯ ಲಿಪಿಯು ಬ್ರಾಹ್ಮೀ ಲಿಪಿಯಿಂದ ರೂಪುಗೊಂಡಿದೆ ಎಂದು ತಿಳಿದು ಬಂದಿದೆ. ಸರಿಸುಮಾರು 1500 ವರ್ಷಗಳ ಇತಿಹಾಸವಿರುವ ಕನ್ನಡ ಭಾಷೆ ತನ್ನದೇ ಆದ ಶ್ರೇಷ್ಠ ಸಾಂಸ್ಕೃತಿಕ ಹಾಗೂ ಸಾಹಿತ್ಯ ಪರಂಪರೆಯನ್ನು ಹೊಂದಿದೆ. ಆಚಾರ್ಯ ವಿನೋಬಾ ಭಾವೆಯವರು ಕನ್ನಡ ಲಿಪಿಯನ್ನು 'ಲಿಪಿಗಳರಾಣಿ' ಎಂದು ಪ್ರಶಂಸಿರುವುದು ಗಮನಾರ್ಹವಾಗಿದೆ.



ಹಲ್ಮಿಡಿ ಶಾಸನ ಕನ್ನಡದ ಪ್ರಾಚೀನ ಶಾಸನವಾಗಿದ್ದು, ಇದರ ಕಾಲ ಕ್ರಿ.ಶ. 450 ಎಂದು ವಿದ್ವಾಂಸರು ಖಚಿತವಾಗಿ ಗುರುತಿಸಿದ್ದಾರೆ.

ಸಾಹಿತ್ಯ ದೃಷ್ಟಿಯಿಂದ ಕನ್ನಡವನ್ನು ಪೂರ್ವದ ಹಳಗನ್ನಡ, ಹಳಗನ್ನಡ, ನಡುಗನ್ನಡ ಮತ್ತು ಹೊಸಗನ್ನಡ ಕಾಲವೆಂದು ವಿಂಗಡಿಸಲಾಗಿದೆ. ಆರಂಭ ಕಾಲಘಟ್ಟದಿಂದ ಒಂಬತ್ತನೇ ಶತಮಾನದವರೆಗಿನ ಕಾಲವನ್ನು ಪೂರ್ವದ ಹಳಗನ್ನಡ ಎಂದು ಕರೆಯುವರು. ಒಂಬತ್ತನೇ ಶತಮಾನದಿಂದ ಹನ್ನೆರಡನೇ ಶತಮಾನದವರೆಗಿನ ಕಾಲವನ್ನು ಹಳಗನ್ನಡ ಕಾಲವೆಂದೂ, ಹನ್ನೆರಡರಿಂದ ಹದಿನೆಂಟನೇ ಶತಮಾನದವರೆಗಿನ ಕಾಲವನ್ನು ನಡುಗನ್ನಡ ಕಾಲವೆಂದೂ, ಹದಿನೆಂಟನೇ ಶತಮಾನದಿಂದ ಇಂದಿನವರೆಗಿನ ಕಾಲಘಟ್ಟವನ್ನು ಹೊಸಗನ್ನಡ ಕಾಲವೆಂದು ಗುರುತಿಸಲಾಗಿದೆ. ಕವಿರಾಜಮಾರ್ಗ ಎಂಬುದು ಕನ್ನಡದ ಪ್ರಾಚೀನ ಲಕ್ಷಣ ಗ್ರಂಥವಾಗಿದೆ. ಈ ಮಹಾಕೃತಿಯನ್ನು ಶ್ರೀವಿಜಯನೆಂಬ ಕವಿ ರಚಿಸಿದ್ದಾನೆ. ಈ ಕೃತಿಯಲ್ಲಿ ಕನ್ನಡ ನಾಡು, ನುಡಿ, ಕನ್ನಡಿಗರ ತ್ಯಾಗ, ಹಿರಿಮೆ– ಗರಿಮೆಗಳು, ಸ್ನೇಹ ಸೌಹಾರ್ದಗಳು ಹಾಗೂ ಧರ್ಮ ಸಹಿಷ್ಣುತೆಗಳನ್ನು ಕುರಿತು ಗುಣಗಾನ ಮಾಡಲಾಗಿದೆ. ಒಂದು ಪದ್ಯವು ಕನ್ನಡಿಗರನ್ನು ಕುರಿತು ಈ ರೀತಿ ಹೇಳಿದೆ.

ಪದನರಿದು ನುಡಿಯಲುಂ ನುಡಿದುದ
ನರಿಯಲುಮಾರ್ಪರಾ ನಾಡವರ್ಗಳ್
ಚದುರರ್ ನಿಜದಿಂ ಕುರಿತೋದದೆಯುಂ
ಕಾವ್ಯ ಪ್ರಯೋಗ ಪರಿಣತ ಮತಿಗಳ್

ಪಂಪ, ಪೊನ್ನ, ರನ್ನ, ಜನ್ನ, ನಾಗವರ್ಮ ಮುಂತಾದವರು ಹಳಗನ್ನಡದ ಪ್ರಸಿದ್ಧ ಕವಿಗಳು. ಪಂಪನನ್ನು ಆದಿಕವಿ ಎಂದು ಹೇಳಲಾಗುತ್ತದೆ. ಇವರೆಲ್ಲರೂ ಚಂಪೂ ಶೈಲಿಯಲ್ಲಿ ಕಾವ್ಯಗಳನ್ನು ಬರೆದಿದ್ದಾರೆ. ಪಂಪನ ಆದಿಪುರಾಣವನ್ನು ಕನ್ನಡದ ಮೊದಲ ಕಾವ್ಯವೆಂದು ಹೇಳಲಾಗುತ್ತದೆ. ಕುಮಾರವ್ಯಾಸ, ಹರಿಹರ, ರಾಘವಾಂಕ, ಲಕ್ಷ್ಮೀಶ ಮುಂತಾದವರು ನಡುಗನ್ನಡದ ಪ್ರಸಿದ್ಧ ಕವಿಗಳು. ಕುಮಾರವ್ಯಾಸನು ರಚಿಸಿರುವ 'ಗದುಗಿನ ಭಾರತ'ವು ಜನಪ್ರಿಯ ಕಾವ್ಯವಾಗಿದೆ.

ಹನ್ನೆರಡನೇ ಶತಮಾನದ ವಚನ ಸಾಹಿತ್ಯ ಮತ್ತು ಹದಿನಾರನೇ ಶತಮಾನದ ದಾಸ ಸಾಹಿತ್ಯದ ಪ್ರಕಾರಗಳು ವಿಶ್ವ ಸಾಹಿತ್ಯಕ್ಕೆ ಕನ್ನಡ ಕೊಟ್ಟ ಮಹತ್ವದ ಕಾಣಿಕೆಯೆಂದೇ ಹೇಳಬೇಕು. ಲೋಕಾನುಭವಿಯಾದ ಸರ್ವಜ್ಞ ಜನಪ್ರಿಯ ಕವಿಯೆಂದೇ ಹೆಸರು ಗಳಿಸಿದ್ದಾನೆ.



ಹೊಸಗನ್ನಡ ಕಾಲದ ಪ್ರಸಿದ್ಧ ಕವಿಗಳಾದ ಕುವೆಂಪು, ಬೇಂದ್ರೆ, ಮಾಸ್ತಿ, ಶಿವರಾಮ ಕಾರಂತ, ಗೋಕಾಕ, ಡಿ.ವಿ.ಜಿ., ಮುಂತಾದವರ ಕನ್ನಡದ ಸೇವೆ ಅವಿಸ್ಮರಣೀಯವಾದುದು. ಗೋವಿಂದಪೈ ಕನ್ನಡದ ಮೊದಲ ರಾಷ್ಟ್ರಕವಿ. ಕುವೆಂಪು ಹಾಗೂ ಜಿ.ಎಸ್.ಶಿವರುದ್ರಪ್ಪ ಅವರಿಗೂ ರಾಷ್ಟ್ರಕವಿಗಳೆಂಬ ಪ್ರಶಸ್ತಿ ಲಭಿಸಿದೆ.

ಕೇಂದ್ರ ಸರ್ಕಾರದಿಂದ ಅಭಿಜಾತ ಭಾಷೆಯೆಂಬ ಹೆಗ್ಗಳಿಕೆಯನ್ನು ಪಡೆದಿರುವ ಸಂಪನ್ನ ಭಾಷೆ ಕನ್ನಡ. ಅಭಿಜಾತ ಭಾಷೆಯನ್ನು ಶಾಸ್ತ್ರೀಯ ಭಾಷೆಯೆಂದೂ ಹೇಳುವರು. 3 ಸರಸ್ವತಿ ಸಮ್ಮಾನ್ ಪ್ರಶಸ್ತಿ, 8 ಜ್ಞಾನ ಪೀಠ ಪ್ರಶಸ್ತಿ, ಹಲವಾರು ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿಗಳು, ಕರ್ನಾಟಕ ರತ್ನ, ಪಂಪ ಪ್ರಶಸ್ತಿ ಇಂತಹ ಇನ್ನೂ ಹಲವಾರು ಉತ್ಕೃಷ್ಟ ಗೌರವಗಳನ್ನು ಕನ್ನಡಾಂಬೆಯ ಮುಡಿಗೇರಿಸಿದ್ದಾರೆ ನಮ್ಮ ಕನ್ನಡ ಕವಿ ದಿಗ್ಗಜರು.

ಹೊಸ ಶಬ್ದಗಳು : ಇಂದಿನ ವೈಜ್ಞಾನಿಕ, ತಾಂತ್ರಿಕ ಬೆಳವಣಿಗೆಗೆ ಅಗತ್ಯವಾಗಿ ಕನ್ನಡದಲ್ಲಿ ನವೀನ ಶಬ್ದಗಳನ್ನು ಕಂಡು ಹಿಡಿಯಲಾಗುತ್ತಿದೆ.

ಅಂತರ್ಜಾಲ, ಗಣಕ ಯಂತ್ರ, ಮಿಂಚಂಚೆ – ಹೀಗೆ ಹಲವಾರು ಹೊಸ ಶಬ್ದಗಳು ಕನ್ನಡ ಭಾಷೆಯೊಳಗೆ ಸೇರ್ಪಡೆಯಾಗುತ್ತಿವೆ. ವಾರ್ತಾಪತ್ರಿಕೆ, ದೂರದರ್ಶನ, ಬಾನುಲಿಗಳಲ್ಲೂ ಹೊಸ ಕನ್ನಡ ಶಬ್ದಗಳು ಬಳಕೆಯಾಗುತ್ತಿದೆ.

ಕನ್ನಡ ಸಂಖ್ಯೆಗಳನ್ನು ತಿಳಿದುಕೊಳ್ಳೋಣ

1	2	3	4	5	6	7	8	9	10
೧	೨	೩	೪	೫	೬	೭	೮	೯	೧೦

ಜ್ಞಾನಪೀಠ ಪ್ರಶಸ್ತಿ ಪಡೆದ ಕನ್ನಡ ಸಾಹಿತಿಗಳು

ಸಾಹಿತಿಗಳು	ಕೃತಿಗಳು	ವರ್ಷ
1. ಕುವೆಂಪು	ಶ್ರೀರಾಮಾಯಣ ದರ್ಶನಂ	1968 
2. ದ.ರಾ.ಬೇಂದ್ರೆ	ನಾಕುತಂತಿ	1974 
3. ಶಿವರಾಮ ಕಾರಂತ	ಮೂಕಜ್ಜಿಯ ಕನಸುಗಳು	1977 
4. ಮಾಸ್ತಿ ವೆಂಕಟೇಶ ಅಯ್ಯಂಗಾರ್	ಚಿಕ್ಕವೀರರಾಜೇಂದ್ರ	1983 
5. ವಿನಾಯಕ ಕೃಷ್ಣ ಗೋಕಾಕ್	ಭಾರತ ಸಿಂಧು ರಶ್ಮಿ	1990 
6. ಯು.ಆರ್.ಅನಂತಮೂರ್ತಿ	ಸಮಗ್ರ ಸಾಹಿತ್ಯ	1994 
7. ಗಿರೀಶ್ ಕಾರ್ನಾಡ್	ಸಮಗ್ರ ಸಾಹಿತ್ಯ	1997 
8. ಚಂದ್ರಶೇಖರ ಕಂಬಾರ	ಸಮಗ್ರ ಸಾಹಿತ್ಯ	2012 

ಪ್ರಶ್ನೋತ್ತರಗಳು

I. ಸಂಕ್ಷಿಪ್ತವಾಗಿ ಉತ್ತರಿಸಿ.

1. ಕನ್ನಡ ಭಾಷೆ ಯಾವ ಭಾಷಾ ಕುಟುಂಬಕ್ಕೆ ಸೇರಿದೆ ?
2. ಕವಿರಾಜ ಮಾರ್ಗ ಕೃತಿಯನ್ನು ರಚಿಸಿರುವ ಕವಿ ಯಾರು?
3. ಕನ್ನಡದ ಮೊದಲ ಕಾವ್ಯ ಯಾವುದು?
4. ಕುಮಾರವ್ಯಾಸನು ರಚಿಸಿರುವ ಕೃತಿ ಯಾವುದು?

II. ಎರಡು ಅಥವಾ ಮೂರು ವಾಕ್ಯಗಳಲ್ಲಿ ಉತ್ತರಿಸಿ.

1. ಕನ್ನಡ ಭಾಷೆಯ ಲಿಪಿಯು ಯಾವ ಲಿಪಿಯಿಂದ ರೂಪುಗೊಂಡಿದೆ?
2. ಕನ್ನಡವು ವಿಶ್ವ ಸಾಹಿತ್ಯಕ್ಕೆ ಕೊಟ್ಟ ಕಾಣಿಕೆ ಯಾವುದು?

ಭಾಷಾಭ್ಯಾಸ

III. ಬಿಟ್ಟ ಸ್ಥಳವನ್ನು ಸರಿಯಾದ ಪದಗಳಿಂದ ತುಂಬಿರಿ.

1. ಹಲ್ಮಿಡಿ ಶಾಸನದ ಕಾಲ _____
2. ಕನ್ನಡದ ಆದಿ ಕವಿ _____
3. ಕನ್ನಡದ ಮೊದಲ ಲಕ್ಷಣ ಗ್ರಂಥ _____
4. ಕನ್ನಡದಲ್ಲಿ ಜ್ಞಾನಪೀಠ ಪ್ರಶಸ್ತಿ ಪಡೆದ ಕವಿಗಳ ಸಂಖ್ಯೆ _____
5. ಕನ್ನಡದ ಮೊದಲ ರಾಷ್ಟ್ರಕವಿ _____

IV. ವಾಕ್ಯ ರಚಿಸಿರಿ.

1. ಪ್ರಾಚೀನತೆ 2. ಪ್ರಖ್ಯಾತ

ಚಟುವಟಿಕೆ

V. 1. ಕನ್ನಡ ಸಾಹಿತ್ಯದ ಪ್ರಮುಖ ನಾಲ್ಕು ಘಟ್ಟಗಳನ್ನು ಕುರಿತು ಚರ್ಚಿಸಿರಿ.

2. 'ಕನ್ನಡ ಭಾಷೆ ಓದಲು – ಬರೆಯಲು ಸುಲಭವಾಗಿದೆ' – ಈ ಹೇಳಿಕೆಯನ್ನು ಸಮರ್ಥಿಸಿ.

ಕಲಿತದ್ದು – ಕಲಿಕೆಯ ಫಲ

1. ಬದಲಾವಣೆಗಳಿಗೆ ಪೂರಕವಾಗಿ ಕನ್ನಡ ನುಡಿ ಹೇಗೆ ಬೆಳೆಯುತ್ತಿದೆ ಎಂಬುದನ್ನು ಕುರಿತು ಸಂಭಾಷಿಸಿರಿ.
2. ಕನ್ನಡ ಮಾತನಾಡಲು ಬಾರದ ನಿಮ್ಮ ನೆರೆಹೊರೆಯವರಿಗೆ ಕನ್ನಡವನ್ನು ಹೇಗೆ ಕಲಿಸುತ್ತೀರಿ ತಿಳಿಸಿ.
3. ಹುಟ್ಟುಹಬ್ಬದ ಶುಭಾಶಯವನ್ನು ಕನ್ನಡದಲ್ಲಿ ಬರೆಯಿರಿ.

ಉದಾಹರಣೆಗೆ, ಮಗುವೇ!

ಬಾಳಬೇಕು ನೀನು ದೀರ್ಘ ಕಾಲ!
ತುಂಬು ಬಾಳ್ವೆ ನಡೆಸಲು!
ಬಾನಗಲಕ್ಕೆ ನಿನ್ನ ಕೀರ್ತಿ ಹರಡಬೇಕು!
ಪ್ರೀತಿ ಇರಲಿ! ನೀತಿ ಇರಲಿ! ಸುಖವು ಶಾಂತಿ ಕೂಡಿ ಬರಲಿ!
ಎಂಟು ದಿಕ್ಕೂ ನಿನ್ನ ಕೀರ್ತಿ ಹರಡುವಂತೆ ನಿನ್ನ ಬದುಕು ಇರಲಿ!
ವಿಶ್ವಕೆಲ್ಲ ನಿನ್ನ ಹೆಸರು ಕಾಣುವಂತೆ ಚಂದ್ರನಲ್ಲಿ ಬರೆವೆನು !
ಕಸ್ತೂರಿ ಕನ್ನಡದಿ, ಕಂಪುಳ್ಳ ಕನ್ನಡದಿ ಶುಭಾಶಯವು ನಿನಗೆ!
ಹುಟ್ಟುಹಬ್ಬದ ಹಾರ್ದಿಕ ಶುಭಾಶಯಗಳು!



ಉಪಪಠ್ಯ

ಘಟಕ ಒಂದು

ಕನಸು ನನಸಾಯಿತು
(ಪತ್ರ)



ಕನ್ನಡದಲ್ಲಿ ಸಾಹಿತ್ಯವಿದೆ, ಸಂಗೀತವಿದೆ, ನಾಟಕವಿದೆ. ಇದರೊಂದಿಗೆ ವಿಜ್ಞಾನವೂ ಉಂಟು. ಕನ್ನಡಕ್ಕೆ ವಿಜ್ಞಾನ ಹೊಸದಲ್ಲ. ಹಿಂದಿನಿಂದ ಇಂದಿನವರೆಗೂ ವೈಜ್ಞಾನಿಕ ಮಾಹಿತಿಗಳನ್ನು ಸಾಹಿತ್ಯದ ಮೂಲಕ ನಮ್ಮ ಹಿರಿಯರು ಪ್ರಚುರ ಪಡಿಸುತ್ತಿದ್ದಾರೆ. ಸಾಹಿತ್ಯ ತಿಳಿಸುವ ವೈಜ್ಞಾನಿಕ .ಮಾಹಿತಿಗಳನ್ನು ತಿಳಿದುಕೊಳ್ಳೋಣ



ಸ್ಥಳ : ಮೈಸೂರು,
ದಿನಾಂಕ : 12.05.2020.

ಪ್ರೀತಿಯ ಮಾವನಿಗೆ,

ವಂದನೆಗಳು. ನಾನು ಇಲ್ಲಿ ಕ್ಷೇಮ. ನೀವು ಕ್ಷೇಮವೇ? ನನ್ನ ಶಾಲಾ ಜೀವನದ ಕನಸು ನನಸಾಯಿತು. ಹೌದು ಮಾವ, ನಾನು ಕಿರಿಯ ವೈಜ್ಞಾನಿಕ ಸಂಶೋಧಕ ಹುದ್ದೆಗೆ ಆಯ್ಕೆಯಾಗಿದ್ದೇನೆ. ನಾಳೆ ಮುಂಜಾನೆ ಸತೀಶ್ ಧವನ್ ಬಾಹ್ಯಾಕಾಶ ಸಂಶೋಧನಾ ಕೇಂದ್ರದಲ್ಲಿ ಕೆಲಸಕ್ಕೆ ಸೇರಲಿದ್ದೇನೆ. ಇಂತಹ ಸಂತೋಷದ ಸಮಯದಲ್ಲಿ ನಿಮ್ಮನ್ನು ನೆನಪಿಸಿಕೊಳ್ಳುತ್ತಿದ್ದೇನೆ. ನಾನು ಆರನೇ ತರಗತಿಯಲ್ಲಿ ಓದುತ್ತಿದ್ದಾಗ ನಿಮಗೊಂದು ಕಾಗದ ಬರೆದಿದ್ದೆ ! ನೆನಪಿದೆಯೇ.....

ಪ್ರೀತಿಯ ಮಾವ,



ನಾನು ಕ್ಷೇಮ. ನೀವು ಕ್ಷೇಮವಾಗಿದ್ದೀರಾ? ಭವಿಷ್ಯದಲ್ಲಿ ನಾನೂ ನಿಮ್ಮಂತೆ ವೈಜ್ಞಾನಿಕ ಇಲಾಖೆಯಲ್ಲಿ ಕೆಲಸ ಮಾಡಬೇಕೆಂಬುದೇ ನನ್ನ ಬಯಕೆಯಾಗಿದೆ. ನಾನು ಸರ್ಕಾರಿ ಶಾಲೆಯಲ್ಲಿ ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡುತ್ತಿದ್ದೇನೆ. ಇದು ನಿಮಗೂ ತಿಳಿದಿದೆ. **ಕನ್ನಡ ಮಾಧ್ಯಮದಲ್ಲಿ ಓದಿದವರು ವೈಜ್ಞಾನಿಕ ಮೇಧಾವಿಗಳಾಗುವುದಿಲ್ಲ ಎಂಬುದು ಹಲವರ ಅಭಿಪ್ರಾಯವಾಗಿದೆ. ನನ್ನಿಂದ ಸಾಧಿಸಲು ಆಗದೇ? ಕನ್ನಡ ಮಾಧ್ಯಮದಲ್ಲಿ ಓದಿದರೆ ನನ್ನ ಕನಸು ನನಸಾಗುತ್ತದೆಯೇ? ನನಗೆ ಮಾರ್ಗದರ್ಶನ ನೀಡಿರಿ.**

ನಿಮ್ಮ ಪ್ರೀತಿಗೆ ಪಾತ್ರನಾದ,
ಮಧುಸೂದನ.

ತದ ನಂತರ ನೀವು ನನಗೆ ಕ್ರಮವಾಗಿ ಹಲವು ಪತ್ರಗಳನ್ನು ಬರೆಯುತ್ತಿದ್ದಿರಿ. ಸುದ್ದಿ ಸಮಾಚಾರಗಳನ್ನು ತಿಳಿಸಿ ನನ್ನನ್ನು ಹುರಿದುಂಬಿಸಿರುವಿರಿ. ನನ್ನ ಸಂದೇಹಗಳನ್ನು ನಿವಾರಿಸಿರುತ್ತೀರಿ. ನನ್ನ ಕನಸುಗಳಿಗೆ ಗೊಬ್ಬರ ಹಾಕಿ ಸಮೃದ್ಧಿಯಾಗಿ ಅದನ್ನು ಬೆಳೆಸಿದುದು ನಿಮ್ಮ ಪತ್ರಗಳೇ. ಆ ಪತ್ರಗಳನ್ನೆಲ್ಲ ಜ್ಞಾನದ ಭಂಡಾರವಾಗಿ ನಾನು ಇಂದಿನವರೆಗೂ ಕಾಪಾಡಿಕೊಂಡು ಬಂದಿರುತ್ತೇನೆ. ನನ್ನ ಬೆಳವಣಿಗೆಗೆ ಕಾರಣವಾದ ಆ ಪತ್ರಗಳನ್ನು ಪುನಃ ಪುನಃ ಓದಿ ನೋಡುವುದು ನನಗೆ ಅಭ್ಯಾಸವಾಗಿದೆ.

ನೀವು ಹೇಳಿದಂತೆ ಹಲವಾರು ಕೃತಿಗಳನ್ನು ಓದುತಿದ್ದೇನೆ. ನಿಮ್ಮ ಪ್ರೀತಿ, ನನ್ನ ಆಸೆ ನೆರವೇರಲು ಇದು ಸಹಾಯಕವಾಗಿದೆ. ಹಲವು ಸಾಹಿತ್ಯ ಕೃತಿಗಳು ನನಗೆ ಆತ್ಮಸ್ಥೈರ್ಯವನ್ನು ನೀಡಿವೆ. ಇವನ್ನು ನಾನು ಎಂದೆಂದಿಗೂ ಮರೆಯಲಾರೆನು. ಸಮಾಜಕ್ಕೆ ನನ್ನಿಂದಾಗುವ ಒಳಿತನ್ನು ಮಾಡುವೆ. ಅದಕ್ಕೆ ಅನುಗುಣವಾಗಿ ನಾನು ಕೆಲಸ ಮಾಡುತ್ತೇನೆ.

ಪ್ರೀತಿಯ ಮಾವನಿಗೆ ವಂದನೆಗಳು,
ಮಧುಸೂದನ.



ಸ್ಥಳ : ಮಂಗಳೂರು,

ದಿನಾಂಕ : 04.06.2020.

ಪ್ರೀತಿಯ ಮಧುಸೂದನನಿಗೆ,

ನಾನು ಇಲ್ಲಿ ಕ್ಷೇಮವಾಗಿದ್ದೇನೆ. ನಿನ್ನ ಪತ್ರ ತಲುಪಿತು. ಆರನೇ ತರಗತಿಯಲ್ಲಿ ಓದುವಾಗಲೇ ನಿನ್ನ ಭವಿಷ್ಯವನ್ನು ನೀನೇ ನಿರ್ಧರಿಸಿಕೊಂಡುಬಿಟ್ಟಿದ್ದೀಯಾ. ಸಂತೋಷ! **ಕನ್ನಡದಲ್ಲಿ ವ್ಯಾಸಂಗ ಮಾಡಿದರೆ ಸಾಧಿಸಲಾಗದು ಎಂಬುದು ತಪ್ಪು ಗ್ರಹಿಕೆ. ಸಾಧಕರಲ್ಲಿ ಹಲವರು ತಮ್ಮ ತಾಯ್ನುಡಿಯಲ್ಲಿ ವ್ಯಾಸಂಗ ಮಾಡಿದವರೇ ಆಗಿದ್ದಾರೆ. ಸಾಧನೆಗೆ ಭಾಷೆ ಎಂದಿಗೂ ತಡೆಯಾಗುವುದಿಲ್ಲ.**

ಅನಾದಿ ಕಾಲದಿಂದಲೂ ಕನ್ನಡಿಗರು ವೈಜ್ಞಾನಿಕ ಚಿಂತನೆಯುಳ್ಳವರೇ ಆಗಿದ್ದಾರೆ. ಕನ್ನಡ ಸಾಹಿತ್ಯದಲ್ಲಿ ವೈಜ್ಞಾನಿಕ ಚಿಂತನೆಗಳು ಹೇರಳವಾಗಿ ಕಾಣ ಸಿಗುತ್ತವೆ. ಅವುಗಳಲ್ಲಿ ಕೆಲವನ್ನು ನಿನ್ನೊಂದಿಗೆ ಹಂಚಿಕೊಳ್ಳಬಯಸುತ್ತೇನೆ.

ಪಂಚಭೂತಗಳಾದ ಭೂಮಿ, ನೀರು, ಬೆಂಕಿ, ಗಾಳಿ, ಆಕಾಶ ಎಂಬ ಐದೂ ಸೇರಿ ಈ ಪ್ರಪಂಚ ಸೃಷ್ಟಿಯಾಗಿದೆ ಎಂಬುದು ವೈಜ್ಞಾನಿಕ ಸತ್ಯಾಂಶವಾಗಿದೆ. ತಮಿಳಿನ ವ್ಯಾಕರಣ ಗ್ರಂಥವಾದ **'ತೊಲ್‌ಕಾಪ್ಪಿಯಂ'** ಎನ್ನುವ ಗ್ರಂಥದಲ್ಲಿ **ತೊಲ್‌ಕಾಪ್ಪಿಯರ್** ಎನ್ನುವವರು ಈ ಸಂಗತಿಯನ್ನು ಸೂಚಿಸಿರುತ್ತಾರೆ. ಸಮುದ್ರದ ನೀರು ಆವಿಯಾಗಿ ಮೋಡವಾಗುತ್ತದೆ. ಮೋಡಗಳು ಘನೀಭವಿಸಿ ಮಳೆಯಾಗಿ ಸುರಿಯುತ್ತದೆ. ಈ ಕ್ರಿಯೆಯನ್ನು ಕುರಿತು ಹಲವಾರು ಭಾಷೆಗಳ ಪುರಾತನ ಸಾಹಿತ್ಯಗಳಲ್ಲಿ ವಿವರಿಸಲಾಗಿದೆ.

ದ್ರವ ಪದಾರ್ಥಗಳಿಗೆ ಎಷ್ಟೇ ಒತ್ತಡ ಕೊಟ್ಟರೂ ಅವುಗಳ ಅಳತೆಗಳನ್ನು ಕಡಿಮೆಗೊಳಿಸಲಾಗದು ಎಂಬುದು ವೈಜ್ಞಾನಿಕ ಸಿದ್ಧಾಂತ.

ಪುರಾತನ ಸಾಹಿತ್ಯಗಳಲ್ಲಿ ಮೂಳೆ ಮುರಿತಕ್ಕೆ ಸಂಬಂಧಿಸಿದ ಚಿಕಿತ್ಸಾ ವಿಧಾನಗಳಿವೆ.

ದೂರದಲ್ಲಿರುವ ವಸ್ತುವಿನ ಬಿಂಬವನ್ನು ಸಮೀಪದಲ್ಲಿಯೇ ನೋಡಬಹುದು ಎಂಬ ಸತ್ಯಾಂಶವನ್ನು ತೋರಿಸಿ ಕೊಟ್ಟ ವಿಜ್ಞಾನಿ ಗೆಲಿಲಿಯೋ. ಈ ಸಂಗತಿಯನ್ನು ತಮಿಳಿನ ಪ್ರಾಚೀನ ಕವಿಯಾದ **ಕಪಿಲರು** ತಮ್ಮ **'ತಿರುಕ್ಕುರಳ್ ಮಾಲೈ'**ನಲ್ಲಿ ತಿಳಿಸಿದ್ದಾರೆ.

ಪ್ರಸ್ತುತ ವೈಜ್ಞಾನಿಕ ಇಲಾಖೆಯನ್ನೂ ಒಳಗೊಂಡಂತೆ ಎಲ್ಲ ಕ್ಷೇತ್ರಗಳಲ್ಲಿಯೂ ತಮ್ಮ ತಮ್ಮ ಮಾತೃಭಾಷೆಯಲ್ಲಿಯೇ ಸಾಧನೆ ಮಾಡಿರುವ ಸಾಧಕರ ಜೀವನ ವಿವರಗಳನ್ನು ನಿಮ್ಮ ಗ್ರಂಥಾಲಯದಲ್ಲಿರುವ ಗ್ರಂಥಗಳಲ್ಲಿ ಓದಿ ತಿಳಿದುಕೋ.

ನಮ್ಮ ಊರಿನ ಗ್ರಂಥಾಲಯವು ನಿನಗೆ ತುಂಬಾ ಅನುಕೂಲವಾಗಿದೆ. ಪುಸ್ತಕ ಓದುವ ಹವ್ಯಾಸ ನಿನ್ನ ಚಿಂತನಶೀಲ ಪ್ರವೃತ್ತಿಯನ್ನೂ, ವೈಜ್ಞಾನಿಕ ಮನೋಭಾವವನ್ನೂ ಬೆಳೆಸುತ್ತದೆ. ಮಾತೃಭಾಷೆಯಲ್ಲಿ ಓದಿದವರು ಏನನ್ನಾದರೂ ಸಾಧಿಸಬಹುದು. ನಿರಂತರ ಅಭ್ಯಾಸ ಮಾಡು. ನೀನು ಜಯಶಾಲಿಯಾಗುವೆ. **ನಿನ್ನ ಕನಸು ನನಸಾಗಲಿ** ಎಂದು ಹಾರೈಸುತ್ತೇನೆ.

ನಿನ್ನ ಪ್ರೀತಿಯ ಮಾವ,

ಮುಕುಂದ.

ತಿಳಿದುಕೊಳ್ಳೋಣ: ತಮ್ಮ ಮಾತೃಭಾಷೆಯಲ್ಲಿ ವ್ಯಾಸಂಗ ಮಾಡಿದ ವಿಜ್ಞಾನಿಗಳು

* ಡಾ. ಸಿ.ಎನ್.ಆರ್. ರಾವ್
* ಡಾ. ಯು.ಆರ್. ರಾವ್
* ಡಾ. ಎ.ಪಿ.ಜೆ. ಅಬ್ದುಲ್ ಕಲಾಂ
* ಇಸ್ರೋದ ವಿಜ್ಞಾನಿ ಅಣ್ಣಾದೊರೈ.
* ಇಸ್ರೋದ ಈಗಿನ ಅಧ್ಯಕ್ಷರಾದ ಡಾ.ಶಿವನ್

ಪ್ರಶ್ನೋತ್ತರಗಳು

I. ಸಂಕ್ಷಿಪ್ತವಾಗಿ ಉತ್ತರಿಸಿ.

1. ಮಧುಸೂದನನ ಬಯಕೆ ಈಡೇರಲು ಕಾರಣವಾದ ಸಂಗತಿಯನ್ನು ನೀವು ಯಾವುದೆಂದು ತೀರ್ಮಾನಿಸುವಿರಿ.
2. ಮಾವನ ಪತ್ರದ ಸಾರಾಂಶವನ್ನು ಬರೆಯಿರಿ.
3. ಕನಸು ನನಸಾಯಿತು ಎಂಬ ಶೀರ್ಷಿಕೆಯು ಈ ಕಥೆಗೆ ಯಾವ ರೀತಿಯ ಹೊಂದಾಣಿಕೆಯಾಗುತ್ತದೆ ಎಂಬುದನ್ನು ವಿವರಿಸಿ.

ಕಲಿತದ್ದು – ಕಲಿಕೆಯ ಫಲ

1. ಕಥೆಗೆ ನಿಮಗನ್ನಿಸಿದಂತೆ ಬೇರೆ ಬೇರೆ ಬಗೆಯ ಶೀರ್ಷಿಕೆಗಳನ್ನು ನೀಡಿರಿ.
2. ಮಾವನ ಪತ್ರದ ಸಾರಾಂಶವನ್ನು ಸರಳಗೊಳಿಸಿ ಬರೆಯಿರಿ.

ಘಟಕ ಒಂದು

ಕನ್ನಡ ವರ್ಣಮಾಲೆ

ವರ್ಣ ವಿಂಗಡಣೆ

ಸ್ವರಗಳು	13
ಹ್ರಸ್ವಸ್ವರಗಳು	6 (ಅ ಇ ಉ ಋ ಎ ಒ)
ದೀರ್ಘಸ್ವರಗಳು	7 (ಆ ಈ ಊ ಏ ಐ ಓ ಔ)
ಯೋಗವಾಹಗಳು	2 (ಅನುಸ್ವಾರ – 1 ; ವಿಸರ್ಗ – 1)

ವ್ಯಂಜನಗಳು – 34

ವರ್ಗೀಯ ವ್ಯಂಜನಗಳು	25 (ಕವರ್ಗ, ಚವರ್ಗ, ಟವರ್ಗ, ತವರ್ಗ, ಪವರ್ಗ)
ಅವರ್ಗೀಯ ವ್ಯಂಜನಗಳು	9 (ಯ್ ರ್ ಲ್ ವ್ ಶ್ ಷ್ ಸ್ ಹ್ ಳ್)

ಸ್ವರಗಳು

ಸ್ವತಂತ್ರವಾಗಿ ಉಚ್ಚರಿಸಲು ಸಾಧ್ಯವಿರುವ ಅಕ್ಷರಗಳಿಗೆ ಸ್ವರ ಎನ್ನುವರು. ಸ್ವರಗಳು 13.



ಸ್ವರಗಳ ವಿಧಗಳು



(ಇವು ಹ್ರಸ್ವ ಸ್ವರಗಳು – 6)



(ಇವು ದೀರ್ಘ ಸ್ವರಗಳು 7)

ಐ ಮತ್ತು ಔ ಗಳು ದೀರ್ಘ ಸ್ವರಗಳಾದರೂ ಅವುಗಳನ್ನು ಸಂಧ್ಯಕ್ಷರಗಳೆಂದು ಕರೆಯಲಾಗುವುದು.



ಮಾತ್ರೆ : ಒಂದೊಂದು ಅಕ್ಷರಗಳನ್ನು ಉಚ್ಚರಿಸಲೂ ಒಂದೊಂದು ಕಾಲ ಮಿತಿ ಇದೆ. ಈ ಕಾಲವನ್ನು ದೃಷ್ಟಿಯಲ್ಲಿಟ್ಟುಕೊಂಡು ಹ್ರಸ್ವ, ದೀರ್ಘ ಹಾಗೂ ಪ್ಲುತ ಸ್ವರಗಳೆಂದು ಅವುಗಳನ್ನು ವರ್ಗೀಕರಿಸಲಾಗಿದೆ.

ಅಕ್ಷರಗಳನ್ನು ಉಚ್ಚರಿಸಲು ತೆಗೆದುಕೊಳ್ಳುವ ಕಾಲವನ್ನು ಮಾತ್ರೆ ಎನ್ನುವರು. ವರ್ಣೋಚ್ಚಾರಣೆಯಲ್ಲಿ ಬೇಕಾಗುವ ನಿಗಧಿತ ಕಾಲಕ್ಕೆ ಮಾತ್ರೆ ಎನ್ನಬಹುದು.

ಹ್ರಸ್ವ ಸ್ವರಗಳನ್ನು ಉಚ್ಚರಿಸುವ ಕಾಲ: ಒಂದು ಮಾತ್ರೆ

ದೀರ್ಘ ಸ್ವರಗಳನ್ನು ಉಚ್ಚರಿಸುವ ಕಾಲ: ಎರಡು ಮಾತ್ರೆ

ಯೋಗವಾಹಗಳು: 'ಯೋಗ' ಎಂದರೆ ಜೊತೆ, ಸಂಬಂಧ ಎಂದರ್ಥ. 'ವಾಹ' ಎಂದರೆ ಬರುವುದು, ಎಂದರ್ಥ. ಎಂದರೆ ಇವು ಸ್ವರ ಅಥವಾ ವ್ಯಂಜನದ ಸಂಬಂಧವನ್ನು ಜೊತೆಯಲ್ಲಿ ಹೊಂದಿದರೆ ಮಾತ್ರ ಇವುಗಳನ್ನು ಉಚ್ಚರಿಸಲು ಸಾಧ್ಯ.

ಯೋಗವಾಹಗಳಲ್ಲಿ ಎರಡು ವಿಧಗಳಿವೆ. ಅವು,

1. ಅನುಸ್ವಾರ – ಂ  **2. ವಿಸರ್ಗ** – ಃ 

ಅನುಸ್ವಾರವನ್ನು 'ಂ' ಎಂಬ ಚಿಹ್ನೆಯಿಂದಲೂ, ವಿಸರ್ಗವನ್ನು 'ಃ' ಎನ್ನುವ ಚಿಹ್ನೆಯಿಂದಲೂ ಸೂಚಿಸಲಾಗುವುದು. ಇವುಗಳು ಚಿಹ್ನೆಗಳಾದುದರಿಂದ ಇವುಗಳಿಗೆ ಸ್ವತಂತ್ರವಾದ ಉಚ್ಚಾರವಿಲ್ಲ. ಇವು ಸ್ವರಗಳೂ ಅಲ್ಲ, ವ್ಯಂಜನಗಳೂ ಅಲ್ಲ. ಸ್ವರಗಳೊಂದಿಗಾಗಲೀ, ವ್ಯಂಜನಗಳೊಂದಿಗಾಗಲೀ ಸೇರಿಸಿದಾಗ ಮಾತ್ರ ಸಂಬಂಧವನ್ನು ಹೊಂದಿ ಉಚ್ಚಾರ ಮಾಡಲು ಸಾಧ್ಯವಾಗುತ್ತದೆ. ಉದಾಹರಣೆಗೆ:

ಅನುಸ್ವಾರ : ಕಂ, ಪಂ, ಮಂ; ಕಂದ

ವ್ಯಂಜನಗಳು ೩೪

ವ್ಯಂಜನಗಳಲ್ಲಿ ಎರಡು ವಿಧ.	1. ವರ್ಗೀಯ ವ್ಯಂಜನ 2. ಅವರ್ಗೀಯ ವ್ಯಂಜನ

ಸ್ವರದ ಸಹಾಯದಿಂದ ಮಾತ್ರ ಉಚ್ಚರಿಸಲಾಗುವ ಅಕ್ಷರಗಳಿಗೆ ವ್ಯಂಜನಗಳು ಎನ್ನಲಾಗುವುದು

ವ್ಯಂಜನಗಳಲ್ಲಿ ವರ್ಗಗಳಾಗಿ ಅಥವಾ ಗುಂಪುಗಳಾಗಿ ವಿಂಗಡಿಸಲು ಸಾಧ್ಯವಿರುವ ವ್ಯಂಜನಗಳಿಗೆ ವರ್ಗೀಯ ವ್ಯಂಜನ ಎನ್ನಲಾಗುವುದು.

ವರ್ಗೀಯ ವ್ಯಂಜನಗಳು ೨೫.

ಕ್	ಖ್	ಗ್	ಘ್	ಙ್	(ಕ ವರ್ಗ)
ಚ್	ಛ್	ಜ್	ಝ್	ಞ್	(ಚ ವರ್ಗ)

ಟ್	ಠ್	ಡ್	ಢ್	ಣ್	(ಟ ವರ್ಗ)
ತ್	ಥ್	ದ್	ಧ್	ನ್	(ತ ವರ್ಗ)
ಪ್	ಫ್	ಬ್	ಭ್	ಮ್	(ಪ ವರ್ಗ)

ಅವರ್ಗೀಯ ವ್ಯಂಜನಗಳು ೯

ವರ್ಗದ ವ್ಯವಸ್ಥೆ ಇಲ್ಲದ ವ್ಯಂಜನಗಳಿಗೆ ಅವರ್ಗೀಯ ವ್ಯಂಜನಗಳು ಎನ್ನುವರು.

ಯ್ ಕಾರದಿಂದ ಳ್ ಕಾರದವರೆಗಿರುವ ವ್ಯಂಜನಗಳನ್ನು ಅವರ್ಗೀಯ ವ್ಯಂಜನಗಳು ಎನ್ನಲಾಗುವುದು. ಅವು,

ಯ್	ರ್	ಲ್	ವ್	ಶ್	ಷ್	ಸ್	ಹ್	ಳ್



ಕಲಿತದ್ದು – ಕಲಿಕೆಯ ಫಲ

1. ನಳಿನ: ಈ ಹೆಸರಿನಲ್ಲಿರುವ ಮಾತ್ರೆಗಳು 3. – 1 + 1 + 1 = 3
2. ನಾರದಮುನಿ: ಈ ಹೆಸರಿನಲ್ಲಿರುವ ಮಾತ್ರೆಗಳು 6. – 2 + 1 + 1 + 1 + 1 = 6

ಭಾಷಾಭ್ಯಾಸ

I. ಬಿಟ್ಟ ಸ್ಥಳವನ್ನು ಸರಿಯಾದ ಶಬ್ದಗಳಿಂದ ತುಂಬಿರಿ.

1. ಕನ್ನಡ ವರ್ಣಮಾಲೆಯಲ್ಲಿ _____ ಅಕ್ಷರಗಳಿವೆ
2. _____ ಮತ್ತು _____ ಇವು ಯೋಗವಾಹಗಳು
3. _____ಕ್ಕೆ ಸ್ವತಃ ಉಚ್ಚಾರಣೆ ಮಾಡುವ ಶಕ್ತಿಯಿದೆ.
4. ತವರ್ಗಕ್ಕೆ ಸೇರಿದ ಅಕ್ಷರಗಳು _____

II. ಇವುಗಳ ಭೇದ ತಿಳಿಸಿ.

1. ಸ್ವರ – ವ್ಯಂಜನ
2. ವರ್ಗೀಯ ವ್ಯಂಜನ – ಅವರ್ಗೀಯ ವ್ಯಂಜನ
3. ದೀರ್ಘ ಸ್ವರ – ಹ್ರಸ್ವ ಸ್ವರ

1	ಹ್ರಸ್ವ ಸ್ವರಗಳು	ಲಘು
2	ದೀರ್ಘ ಸ್ವರಗಳು	ಗುರು
3	ಅನುಸ್ವಾರಗಳಿಂದ ಕೂಡಿದ ಅಕ್ಷರಗಳು	ಗುರು
4	ಒತ್ತಕ್ಷರದ ಹಿಂದಿನ ಅಕ್ಷರ	ಗುರು

ಭಾಷಾ ಕ್ರೀಡೆಗಳು

I. **ಹ್ರಸ್ವ ಸ್ವರದಿಂದ ಆರಂಭವಾಗುವ ಕೆಲವು ಪ್ರಾಣಿ – ಪಕ್ಷಿಗಳ ಹೆಸರುಗಳನ್ನು ಬರೆಯಿರಿ.** ಉದಾಹರಣೆಗೆ: ಗಿಡುಗ, ಹುಲಿ.

II. **ದೀರ್ಘ ಸ್ವರ ಬಳಸಿ ಕೆಲವು ಪ್ರಾಣಿ–ಪಕ್ಷಿಗಳ ಹೆಸರುಗಳನ್ನು ಬರೆಯಿರಿ.** ಉದಾಹರಣೆಗೆ: ಪಾರಿವಾಳ, ಆನೆ.

III. **ಹ್ರಸ್ವ ಮತ್ತು ದೀರ್ಘ ಸ್ವರಗಳನ್ನು ಬಳಸಿ ಕೆಲವು ನಗರಗಳ ಹೆಸರುಗಳನ್ನು ಬರೆಯಿರಿ.** ಉದಾಹರಣೆಗೆ: ಹಾವೇರಿ, ಹೊಸೂರು.

IV. **ಪದ ಸಂಪತ್ತನ್ನು ಗಳಿಸೋಣ.**

1. ಕೊಟ್ಟಿರುವ ಪದಗಳನ್ನು ಅನುಸರಿಸಿ ಹೊಸ ಶಬ್ದಗಳನ್ನು ಬರೆಯಿರಿ. ಉದಾಹರಣೆಗೆ: ಕಂಬಳ–ಕಂಪನ
   ರಾಜೇಶ – ರಾಮರಾಜ
2. ಎರಡು ಶಬ್ದಗಳನ್ನು ಬಳಸಿ ಹೊಸಪದಗಳನ್ನು ಸೃಷ್ಟಿಸಿ. ಉದಾಹರಣೆಗೆ:
   ಗಿರಿ, ಧರ > ಗಿರಿಧರ
   ಚಕ್ರ, ಪಾಣಿ > ಚಕ್ರಪಾಣಿ

V. **ಪದಬಂಧ**

ಗಿ	ಅ	ಪ	ಂ	ಪ	ಇ
ದ	ಬೆಂ	ರಾ	ಪು	ದ	ರಾ
ಪಾ	ಕು	ವೆ	ಂ	ಪು	ದ್ರೆ
ತ	ದು	ಕೃ	ಮಾ	ಸ್ತಿ	ನ್ನ
ಅ	ನಾ	ಮು	ದ್ದ	ಣ	ರ

1. _____
2. _____
3. _____
4. _____
5. _____

VI.**ನಿರ್ಧರಿಸಿ.**

* **ಕನ್ನಡವನ್ನೇ ಕಲಿಯುತ್ತೇನೆ. ಕನ್ನಡವನ್ನೇ ಕಲಿಸುತ್ತೇನೆ.**

* **ಕನ್ನಡ ಕಸ್ತೂರಿ ಎಂಬುದನ್ನು ಎಲ್ಲೆಡೆಯೂ ಪಸರಿಸುತ್ತೇನೆ.**

ಕನ್ನಡದ ರಾಷ್ಟ್ರಕವಿಗಳು



ಎಂ. ಗೋವಿಂದ ಪೈ



ಕುವೆಂಪು



ಜಿ.ಎಸ್.ಶಿವರುದ್ರಪ್ಪ

ಋತುಗಳು

ವಸಂತ ವರ್ಷ ಹೇಮಂತ

ಗ್ರೀಷ್ಮ ಶರದ್ ಶಿಶಿರ

ಅಂತರ್ಜಾಲದ ಮೂಲಕ ನೋಡಿರಿ

1. ಕನ್ನಡದ ಕವಿಗಳ ಮಾಹಿತಿಗಳನ್ನು ಸಂಗ್ರಹಿಸಿ.

ತಿಳಿದುಕೊಳ್ಳಿ.

ಆರೋಹಣ – Ascending

ಅವರೋಹಣ – Desending

ಅಂತರ್ಜಾಲ – Internet

ಗಣಕ ಯಂತ್ರ – Computer



ತಿಳಿದುಕೊಳ್ಳೋಣ

ಆಲ, ಅರಳಿ, ಮಾವು, ಹಲಸು, ಬಾಳೆ	ಎಲೆ
ಅತ್ತಿ, ದಂಟು, ಮೆಂತ್ಯ	ಸೊಪ್ಪು
ಗರಿಕೆ	ಹುಲ್ಲು
ಭತ್ತ, ರಾಗಿ	ತೆನೆ
ಕಬ್ಬು	ಸೋಗೆ
ತೆಂಗು	ಗರಿ
ಜೋಳ	ಜುಂಜು

2. **ಅಕ್ಷರಗಳನ್ನು ಬಳಸಿಕೊಂಡು ವಾಕ್ಯ ರಚಿಸಿ.**
ಉದಾಹರಣೆಗೆ:

ಅ – ಅಮ್ಮ ಕೊಡುವಳು ತುತ್ತನ್ನು.

ಆ – ಆನಂದದಿಂದ ಸ್ವೀಕರಿಸು.

ಇ – ಇರುಳನ್ನು ಕಳೆವುದು ಹಣತೆಯು.

ಈ – ಈಶನ ಸೇವೆಯು ತರುವುದು ಧನ್ಯತೆಯ.

ಉ – ಉಪಕಾರ ಮಾಡುವುದ ನೀ ಮರೆಯದಿರು.

ಊ – ಊರಿನವರೊಡನೆ ಸ್ನೇಹವನು ಬೆಸೆಯುತಿರು.

ಋ – ಋಷಿಗಳ ಮಹಿಮೆಯ ಮರೆಯದಿರು.

ಎ – ಎಲ್ಲರಲ್ಲೂ ದೇವರನ್ನು ಕಾಣುತಿರು.

ಏ – ಏಕತೆಯಲ್ಲಿ ನಂಬಿಕೆಯಿಟ್ಟು ದುಡಿಯುತಿರು.

ಐ – ಐದು ಬೆರಳದು ಸೇರಿದರೆ ಮುಷ್ಟಿಯದು.

ಒ – 'ಒಗ್ಗಟ್ಟಿನಲ್ಲಿ ಬಲವಿದೆ' – ತತ್ವವ ಮರೆಯದಿರು.

ಓ – ಓದುವ ಆಸೆಯನೆಂದೂ ತೊರೆಯದಿರು.

ಔ – ಔದಾರ್ಯವನು ನಿಜಕ್ಕೂ ಮರೆಯಬಾರದು.

ಅಂ – ಅಂಬಿಕೆಯನು ನೆನೆಯಲು ದೊರೆವುದು ಆನಂದ.

ಅಃ – ಅಃ ಏನಾನಂದ, ಪರಮಾನಂದ.



ಘಟಕ ಎರಡು

ಪ್ರಕೃತಿ



ಕಲಿಕಾ ಉದ್ದೇಶಗಳು

- ಪ್ರಕೃತಿಯ ಮಹತ್ವವನ್ನು ತಿಳಿಯುವುದು.
- ಪ್ರಕೃತಿಯನ್ನು ಸಂರಕ್ಷಿಸುವ ವಿಧಾನಗಳನ್ನು ಕುರಿತು ಚರ್ಚಿಸುವುದು.
- ಕೃಷಿ ಆಧಾರಿತ ಕಸುಬಿಗೆ ಮಳೆ ಬಹಳ ಅವಶ್ಯಕ ಎನ್ನುವುದನ್ನು ಅರ್ಥೈಸುವುದು.
- ಮಳೆ ಸುರಿಯದಿದ್ದರೆ ಉಂಟಾಗುವ ಭೀಕರ ಪರಿಣಾಮಗಳನ್ನು ತರಗತಿಯ ಕೊಠಡಿಯಲ್ಲಿ ಚರ್ಚಿಸುವುದು.
- ಪಕ್ಷಿ ಸಂಕುಲ ಹಾಗೂ ಪರಿಸರದ ನಡುವಿನ ಸಂಬಂಧವನ್ನು ತಿಳಿಯುವುದು.

ಘಟಕ
ಎರಡು

ಪ್ರಕೃತಿ

ಕಾವ್ಯ ಕಣಜ	:	ನೀ ಬರುವ ದಾರಿಯಲಿ
ಪೂರಕ ಪದ್ಯ	:	ಬೆಳಗು – ಜಾವ
ಗದ್ಯ ವಿಹಾರ	:	ರೆಕ್ಕೆಯ ಧ್ವನಿ
ಉಪಪಠ್ಯ	:	ವೃದ್ಧನೂ ಕಡಲೂ
ವ್ಯಾಕರಣ	:	ಕನ್ನಡ ವರ್ಣಮಾಲೆ
ಧರ್ಮಚಿಂತನೆ	:	ತಿರುಕ್ಕುರಳ್ – ವಚನಗಳು



ಘಟಕ ಎರಡು

ನೀ ಬರುವ ದಾರಿಯಲಿ *

– ಡಾ. ಕೆ.ಎಸ್. ನರಸಿಂಹ ಸ್ವಾಮಿ



ಪ್ರಕೃತಿ ಮಾನವಕೋಟಿಗೆ ನೀಡಿರುವ ಕಾಣಿಕೆ ಅಪಾರ. ಪ್ರಕೃತಿಯೊಳಗೆ ನಾನಾ ಬಗೆಯ ಜೀವರಾಶಿಗಳೂ, ಸಂಪತ್ತೂ ಹೇರಳವಾಗಿವೆ.ಹಗಲಿರುಳು, ಋತುಮಾನಗಳು, ನದಿ, ಕೆರೆ, ಜಲಪಾತಗಳು ಇವುಗಳ ಸೊಬಗು ವರ್ಣನಾತೀತ. ಪ್ರಕೃತಿ ಸೌಂದರ್ಯ ಕಣ್ಣಿಗೂ ಮನಸ್ಸಿಗೂ ಹಿತವನ್ನು ನೀಡುತ್ತದೆ. ಗಿಡಮರಗಳ ಸೌಂದರ್ಯ ಮನಸ್ಸಿಗೆ ಮುದವನ್ನುಂಟು ಮಾಡುತ್ತದೆ. ಈ ಕವನದಲ್ಲಿ ಕವಿ ಪ್ರಕೃತಿಯ ಸೊಬಗನ್ನು ಬಣ್ಣಿಸಿರುವ ಪರಿಯನ್ನು ಆಸ್ವಾದಿಸೋಣ.

ನೀ ಬರುವ ದಾರಿಯಲ್ಲಿ ಹಗಲು ತಂಪಾಗಿ
ಬೇಲಿಗಳ ಸಾಲಿನಲಿ ಹಸುರು ಕೆಂಪಾಗಿ
ಪಯಣ ಮುಗಿಯುವ ತನಕ ಎಳೆ ಬಿಸಿಲ ಮಣಿಕನಕ
ಸಾಲು ಮರಗಳ ಮೇಲೆ ಸೊಬಗ ಸುರಿದಿರಲಿ ॥೧॥

ನೀ ಬರುವ ದಾರಿಯಲಿ ಹಕ್ಕಿಗಳು ಹಾಡಿ
ಬೆಳ್ದಿಂಗಳಿಂಪಿನಲಿ ತಾರೆಗಳು ಮೂಡಿ
ಕನಸು ಹಬ್ಬಲಿ ನಿನ್ನ ಕಣ್ಣ ಬಳಿ ಚಿನ್ನ
ಹತ್ತಾರು ಗಳಿಗೆಯಲಿ ಹಾದಿ ಹಾರಿರಲಿ ॥೨॥

ನೀ ಬರುವ ದಾರಿಯಲಿ ಬನದೆಲರು ಸುರಿದು
ಸಂತಸದ ಇರುಳಿನಲ್ಲಿ ಆದುದನು ನುಡಿದು
ಮುಂದೆ ಕಾದಿಹ ನೂರುಹರುಷಗಳು ಕಣ್ದೆರೆದು
ಪಯಣವೋ ನಿಲುಗಡೆಯೋ ನೀನರಿಯದಂತಿರಲಿ ॥೩॥



ಡಾ. ಕೆ.ಎಸ್. ನರಸಿಂಹ ಸ್ವಾಮಿ

ಕವಿ–ಕಾವ್ಯ ಪರಿಚಯ

ಈ ಶತಮಾನದ ಶ್ರೇಷ್ಠ ಕವಿಯಾದ ಕೆ.ಎಸ್.ನ.ರವರು ಬಹುಮುಖ ಪ್ರತಿಭೆಯ ಪ್ರಸಿದ್ಧ ಕವಿ. ಹಲವಾರು ಕವನ ಸಂಕಲನಗಳು, ನಿಸರ್ಗ ಗೀತೆಗಳು, ಪ್ರೇಮಕವನಗಳನ್ನು ರಚಿಸಿರುವ ಇವರು ಪ್ರೇಮಕವಿ ಎಂದೇ ಪ್ರಸಿದ್ಧರು. ಇವರ ಕನ್ನಡ ಪ್ರೇಮ ಅದ್ವಿತೀಯವಾದುದು. ಇವರು ರಾಜ್ಯ ಹಾಗೂ ಕೇಂದ್ರ ಸರ್ಕಾರಗಳ ಹಲವಾರು ಗೌರವ ಪುರಸ್ಕಾರಗಳಿಗೆ ಭಾಜನರಾಗಿದ್ದಾರೆ.

ಪದಗಳ ಅರ್ಥ

ಸೊಬಗು–ಸೌಂದರ್ಯ; ತಾರೆ–ನಕ್ಷತ್ರ; ಗಳಿಗೆ–ಕ್ಷಣ; ಸಂತಸ–ಸಂತೋಷ; ಇರುಳು–ರಾತ್ರಿ, ಬನ–ಹೂದೋಟ, ಕಾಡು, ವನ; ಎಲರು–ಹೂವು; ಹರುಷ–ಸಂತೋಷ; ಪಯಣ–ಪ್ರಯಾಣ.

ಪದ್ಯದ ಭಾವಾರ್ಥ

ಹಚ್ಚ ಹಸುರಿನ ತಂಪಾದ ಬೇಲಿಗಳಿಂದ ಕೂಡಿದ ದಾರಿಯಲ್ಲಿ ಸಾಲು ಮರಗಳ ನೆರಳು ಬೀಳುತ್ತಿರುವಾಗ ನೀನು ಬಾ! ಹಕ್ಕಿಗಳ ಮಧುರ ಗಾನ ಕೇಳುತ್ತಿರಲಿ. ಚಂದ್ರನಂತಹ ಪ್ರಶಾಂತ ಬೆಳಗು ಮೂಡಲಿ. ನಮ್ಮ ಜೀವನವೆಂಬ ಪಯಣ ಸಂತಸದಿಂದ ಸಾಗಲಿ ಎಂದು ಕವಿ ಬಯಸಿದ್ದಾರೆ.

ಪ್ರಶ್ನೋತ್ತರಗಳು

I. ಸಂಕ್ಷಿಪ್ತವಾಗಿ ಉತ್ತರಿಸಿ.

1. ಪದ್ಯದ ಆಶಯವನ್ನು ನಿಮ್ಮ ಮಾತಿನಲ್ಲಿ ಬರೆಯಿರಿ.

ಕಲಿತದ್ದು – ಕಲಿಕೆಯ ಫಲ

1. ಈ ಹಾಡನ್ನು ಭಾವಪೂರ್ಣವಾಗಿ ಹಾಡಿರಿ.
2. ಕವಿ ದಾರಿಯು ಯಾವ ರೀತಿ ಇರಬೇಕೆಂದು ಬಯಸುತ್ತಾರೆ ?
3. ಬೆಳದಿಂಗಳ ಇರುಳಿನಲ್ಲಿ ಯಾವುದು ಮೂಡುತ್ತದೆ ?

ಭಾಷಾಭ್ಯಾಸ

II. ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ.

1. ದಾರಿ – ಈ ಪದದ ಅರ್ಥ
   ಅ) ಸುತ್ತ ಆ) ಪಥ
   ಇ) ಮತ ಈ) ಹಿತ
2. ಪಯಣ ಎಂದರೆ _____
   ಅ) ಪ್ರಣಾಮ ಆ) ಪ್ರಧಾನ
   ಇ) ಪ್ರಮಾಣ ಈ) ಪ್ರಯಾಣ
3. ದಾರಿಯಲ್ಲಿ – ಈ ಪದವನ್ನು ಬಿಡಿಸಿ ಬರೆದಾಗ
   ಅ) ದಾರಿ + ಯಲ್ಲಿ ಆ) ದಾರಿಯ + ಲ್ಲಿ
   ಇ) ದಾರಿ + ಅಲ್ಲಿ ಈ) ದಾರಿ + ನಲ್ಲಿ
4. ಸಂತಸ – ಈ ಪದದ ವಿರುದ್ಧ ಪದ
   ಅ) ದುಃಖ ಆ) ಸುಖ
   ಇ) ಮೊಗ ಈ) ಹಗೆ
5. ಸುರಿದು+ಇರಲಿ – ಇದನ್ನು ಸೇರಿಸಿ ಬರೆದಾಗ _____
   ಅ) ಸುರಿದುರಲಿ ಆ) ಸುರಿದಿರಲಿ
   ಇ) ಸುರದಿರಲಿ ಈ) ಸರಿದಿರಲಿ

III. ಹೊಂದಿಸಿ ಬರೆಯಿರಿ.

1. ಬಿಸಿಲು – ಪಕ್ಷಿ
2. ಕನಕ – ದಾರಿ
3. ಹಕ್ಕಿ – ಸೂರ್ಯ
4. ಹಾದಿ – ಚಿನ್ನ

IV. ಈ ಪದ್ಯದಲ್ಲಿರುವ ಪ್ರಾಸ ಪದಗಳನ್ನು ಪಟ್ಟಿ ಮಾಡಿ.

ಚಟುವಟಿಕೆ

ನೀವು ಎಂತಹ ದಾರಿಯಲ್ಲಿ ಸಾಗಬೇಕೆಂಬುದನ್ನು ಚಿಂತಿಸಿ ಬರೆಯಿರಿ.

ಪೂರಕ ಪದ್ಯ

ಘಟಕ ಎರಡು

ಬೆಳಗು – ಜಾವ

– ದ.ರಾ.ಬೇಂದ್ರೆ



ಬದುಕಿಗೆ ಅದಮ್ಯ ಚೈತನ್ಯವನ್ನು ನೀಡುವ ವಿಶಿಷ್ಟ ಕಾಲ ಬೆಳಗು–ಜಾವ. ಇದು ಪ್ರಕೃತಿ ನಮಗೆ ನೀಡಿದ ವರ. ಈ ಭಾವಕ್ಷಣಗಳ ಜೊತೆಗಿನ ಅನುಬಂಧದಲ್ಲೇ ವ್ಯಕ್ತಿಯ ಜಗತ್ತಿನ ವಿಕಾಸವೂ ಇದೆ. ಪ್ರಕೃತಿಯ ಜೊತೆಗಿನ ನಿರಂತರ ಅನುಸಂಧಾನದ ಮೂಲಕ ಬದುಕಿನ ಬೆಳಗು ಜಾವವಾಗಿರುವ ಯೌವನವನ್ನು ಸಾರ್ಥಕಪಡಿಸಿಕೊಳ್ಳಬೇಕು ಎನ್ನುವ ಸಂದೇಶವನ್ನು ಇಲ್ಲಿ ಕವಿ ನಿರೂಪಿಸಿರುವ ರೀತಿ ವಿಶಿಷ್ಟವಾದುದು.

ಏಳು ಚಿನ್ನ, ಬೆಳಗಾಯ್ತು ಅಣ್ಣ, ಮೂಡಲವು ತೆರೆಯೆ ಕಣ್ಣ
ನಕ್ಷತ್ರ ಜಾರಿ, ತಮವೆಲ್ಲ ಸೋರಿ, ಮಿಗಿಲಹುದು ಬಾನ ಬಣ್ಣ

ಜೇನ್ನೊಣದ ಹೆದೆಗೆ ಹೂ ಬಾಣ ಹೂಡಿ ಝುಂ ಎಂದು ಬಿಟ್ಟ ಮಾರ
ಗುಡಿ ಗೋಪುರಕ್ಕು, ಬಲೆ ಬೀಸಿ ಬಂದ, ಅಗೋ ಬೆಳಕು ಬೇಟೆಗಾರ!

ನಿಶೆಯಿಂದ ಉಷೆಯ, ಎಳನಗೆಯ ಬಗೆಗೆ ಸೋತಿರಲು ಜಗವು ಸವಿಗೆ
ಕಣ್ಣೆದಿರು ಒಂದು, ಕಟ್ಟಿತ್ತು ಕನಸು; ಕೂಗೊಂದು ಬಂತು ಕಿವಿಗೆ

ಮಕ್ಕಳಿರಾ ಕೇಳಿ, ರಸ ಕುಡಿಯಲೇಳಿ, ಹುಸಿನಿದ್ದೆಗಿದ್ದೆ ಸಾಕು
ಈ ತುಂಬಿ ಬಾಳು, ತುಂಬಿರುವ ತನಕ, ತುಂತುಂಬಿ ಕುಡಿಯಬೇಕು.

ಯಾವಾಗೊ ಕೋಳಿ ಕೂಗಿಹುದು ಏಳಿ, ತಡವೇಕೆ ಪಾನಕೇಳಿ
ಮೊದಲಾಗಲೀಗ, ಅಂಗಡಿಯ ಕದವ ಈ ಕ್ಷಣಕೆ ತೆರೆಯ ಹೇಳಿ

ಜೀವನದ ನದಿಗೆ ಸೆಳವಿಹುದು, ಮರಣ ಬಂದೀತು ಕ್ಷಣವು ಉರುಳಿ
ಹೋದವರು ತಿರುಗಿ ಬಂದಾರೆ, ಅವರು ಬರಲಿಕ್ಕು ಇಲ್ಲ ಮರಳಿ

ಬಾನ್ ಹೊಗರಲುಂಟು, ಮರ ಚಿಗುರಲುಂಟು, ಬರಲುಂಟೆ ಸುಗ್ಗಿ ಮತ್ತೆ?
ಮುಳುಗಿರಲಿ ಮುಪ್ಪು ಚಿಂತನದಿ, ತಾನು ಹರೆಯಕ್ಕೆ ಬೇರೆ ಹೊತ್ತೆ?



ದ.ರಾ.ಬೇಂದ್ರೆ

ಕವಿ–ಕಾವ್ಯ ಪರಿಚಯ

ದ.ರಾ.ಬೇಂದ್ರೆ (1896–1981) ಎಂಬ ಹೆಸರಿನ ಮೂಲಕ ಪ್ರಸಿದ್ಧರಾದ ದತ್ತಾತ್ರೇಯ ರಾಮಚಂದ್ರ ಬೇಂದ್ರೆ ಕನ್ನಡ ನಾಡು ಕಂಡ ಶ್ರೇಷ್ಠ ಕವಿಗಳಲ್ಲಿ ಒಬ್ಬರು. **ಅಂಬಿಕಾತನಯದತ್ತ** ಇವರ ಕಾವ್ಯನಾಮ. ಇವರಿಗೆ ರಾಜ್ಯ ಹಾಗೂ ಕೇಂದ್ರ ಸರ್ಕಾರದ ಹಲವು ಪ್ರಶಸ್ತಿಗಳು ಸಂದಿವೆ. ಇವರ **ನಾಕುತಂತಿ** ಎನ್ನುವ ಕವನ ಸಂಕಲನಕ್ಕೆ **ಭಾರತೀಯ ಜ್ಞಾನಪೀಠ ಪ್ರಶಸ್ತಿ** ದೊರೆತಿದೆ.

ಪದಗಳ ಅರ್ಥ

ಮೂಡಲ–ಪೂರ್ವ; ತಮ–ಕತ್ತಲು; ಮಿಗಿಲು–ಅಧಿಕ; ಹೆದೆ–ಬಿಲ್ಲಿನ ಹಗ್ಗ; ಮಾರ–ಮನ್ಮಥ, ಕಾಮ; ನಿಶೆ–ಕತ್ತಲು; ಉಷೆ–ಮುಂಜಾವು; ಬಗೆ–ರೀತಿ; ತುಂಬಿ–ದುಂಬಿ, ಪೂರ್ತಿ, ಪೂರ್ಣವಾದ; ಸೆಳವು–ರಭಸ; ಹೊಗರು–ಪ್ರಕಾಶ, ಕಾಂತಿ.

ಪದ್ಯದ ಭಾವಾರ್ಥ

ನಿಸರ್ಗದ ಸೊಬಗಿನಲ್ಲಿ ಆನಂದವನ್ನು ಪಡೆಯುತ್ತಲೇ ಅದರ ಭವ್ಯತೆ, ದಿವ್ಯತೆಗಳ ಅರಿವನ್ನು ತಂದು ಕೊಡುವುದು ಬೇಂದ್ರೆಯವರ ನಿಸರ್ಗ ಗೀತೆಗಳ ಮುಖ್ಯಗುಣ.

ಈ ಕವಿತೆಯಲ್ಲಿ ಬೆಳಗಿನ ಸೌಂದರ್ಯವನ್ನು ವರ್ಣಿಸುತ್ತಲೇ ಯೌವನವು ಮಾನವ ಜೀವನದ ಬೆಳಗು–ಜಾವ ಎಂಬುದನ್ನು ಸೂಚಿಸುತ್ತಾರೆ. ನಿರಂತರವಾದ ಕೆಲಸದ ಮೂಲಕ ಯೌವನವನ್ನು ದುಡಿಸಿ, ದಣಿಸಿ ಸಫಲತೆಯನ್ನು ಪಡೆಯಬೇಕು ಎಂದು ಇಲ್ಲಿ ಬೇಂದ್ರೆ ಕರೆ ಕೊಟ್ಟಿದ್ದಾರೆ.

ಈ ಮಾದರಿಯ ಸುನೀತಗಳಲ್ಲಿ ಹನ್ನೆರಡು ಚರಣಗಳಿದ್ದು, ಅವು ಮೂರು ಚೌಪದಿಗಳಿಂದ ಕೂಡಿದ್ದು, ಕೊನೆಯ ಎರಡು ಚರಣಗಳು ದ್ವಿಪದಿಯ ರೂಪದಲ್ಲಿದ್ದು ವಸ್ತುವಿನ ಒಟ್ಟು ತಿರುಳನ್ನು ಕಟ್ಟಿಕೊಡುತ್ತವೆ.

ಪ್ರಶ್ನೋತ್ತರಗಳು

I. ಸಂಕ್ಷಿಪ್ತವಾಗಿ ಉತ್ತರಿಸಿ.

1. ಬೇಟೆಗಾರ ಯಾರು ?
2. ಕವಿಯ ಪ್ರಕಾರ ಯಾವುದು ಮತ್ತೆ ಚಿಗುರುತ್ತದೆ ?

II. ಎರಡು ಮೂರು ವಾಕ್ಯಗಳಲ್ಲಿ ಉತ್ತರಿಸಿ.

1. ಕವಿ ಬೇಂದ್ರೆ ಮಕ್ಕಳಿಗೆ ಬಾಳಿನ ಬಗ್ಗೆ ಕೊಡುವ ಸಂದೇಶವೇನು ?
2. ಬೆಳಕು – ಬೇಟೆಗಾರ ಹೇಗೆ ಬರುತ್ತಾನೆ ?

ಭಾಷಾಭ್ಯಾಸ

III. ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ.

1. ಮೂಡಲ ಈ ಪದದ ಅರ್ಥ

   ಅ) ಉತ್ತರ ಆ) ದಕ್ಷಿಣ

   ಇ) ಪೂರ್ವ ಈ) ಪಶ್ಚಿಮ

2. ಸೂರ್ಯನಿಗಿರುವ ಮತ್ತೊಂದು ಹೆಸರು

   ಅ) ನೇಸರ ಆ) ಗಿರಿ

   ಇ) ಶಶಿ ಈ) ಚಂದ್ರ

3. ಹೂಬಾಣವನ್ನು ಬಿಡಿಸಿ ಬರೆದಾಗ

   ಅ) ಹೂವಿನ+ಬಾಣ ಆ) ಹೂವಿ+ಬಾಣ

   ಇ) ಹೂವು+ಬಾಣ ಈ) ಹೂ+ವಿನಬಾಣ

4. ತಮ+ಎಲ್ಲ – ಈ ಪದವನ್ನು ಸೇರಿಸಿ ಬರೆದಾಗ

   ಅ) ತಮಎಲ್ಲ ಆ) ತಮವೆಲ್ಲ

   ಇ) ತಮವಲ್ಲ ಈ) ತಮಕ್ಕೆಲ್ಲ

5. ಕತ್ತಲು – ಈ ಪದದ ವಿರುದ್ಧ ಪದ

   ಅ) ಕೊಳಕು ಆ) ತಳಕು

   ಇ) ಬೆಳಕು ಈ) ನೆಲಕು

IV. ಈ ಪದ್ಯದಲ್ಲಿನ ಪ್ರಾಸ ಪದಗಳನ್ನು ಪಟ್ಟಿ ಮಾಡಿ.

ಚಟುವಟಿಕೆ

1. ಪ್ರಸಿದ್ಧ ಪ್ರಕೃತಿ ತಾಣಗಳಿಗೆ ಭೇಟಿ ಕೊಟ್ಟು ಅಲ್ಲಿನ ಸೂರ್ಯೋದಯದ ಅನುಭವದ ಬಗ್ಗೆ ಬರೆಯಿರಿ.

ಕಲಿತದ್ದು – ಕಲಿಕೆಯ ಫಲ

1. ನೀವು ಇಚ್ಛಿಸುವ ಪ್ರಕೃತಿಯಲ್ಲಿನ ವಸ್ತುಗಳನ್ನು ಹೆಸರಿಸಿ.
2. ಸೂರ್ಯನನ್ನು ಕುರಿತು ಕವನ ಬರೆಯಿರಿ.

ಘಟಕ ಎರಡು

ರೆಕ್ಕೆಯ ಧ್ವನಿ



ಮಾನವನು ತನ್ನ ಜೀವನೋಪಾಯಕ್ಕೆ ಇತರ ಸ್ಥಳಗಳಿಗೆ ಹೋಗುತ್ತಾನೆ. ಕೆಲವರು ಹಿಂದಿರುಗುತ್ತಾರೆ. ಕೆಲವರು ಅಲ್ಲೇ ಸ್ಥಿರವಾಗಿ ನೆಲೆಸುತ್ತಾರೆ. ಮಾನವರಂತೆ ಹಕ್ಕಿಗಳೂ ಬೇರೆ ಸ್ಥಳಗಳಿಗೆ, ದೇಶಗಳಿಗೆ ಹೋಗಿ ಬರುವುದುಂಟು. ಹಕ್ಕಿಗಳು ಪಯಣಿಸದ ಸ್ಥಳಗಳಿಲ್ಲ. ನೀರಿನ ಮೂಲಗಳಿಲ್ಲ. ಹಕ್ಕಿಗಳೊಂದಿಗೆ ಸ್ವಲ್ಪ ನಾವೂ ಹಾರೋಣವೇ!

ಮಾನವರು ಪರಸ್ಥಳಗಳಿಗೆ ಹೋಗಿ ಪುನಃ ತಮ್ಮ ಸ್ವಂತ ಊರುಗಳಿಗೆ ಹಿಂದಿರುಗುವುದನ್ನು ಕೇಳಿದ್ದೇವೆ. ಅದೇ ರೀತಿ ಹಕ್ಕಿಗಳೂ ಬೇರೆ ದೇಶಗಳಿಗೆ ಹೋಗಿ ಪುನಃ ತಮ್ಮ ಸ್ಥಳಗಳಿಗೆ ಮರಳಿ ಬರುವುದನ್ನು ಅರಿತಿರುವಿರಾ ?'



ಹಕ್ಕಿಗಳು ಒಂದು ಖಂಡದಿಂದ ಮತ್ತೊಂದು ಖಂಡಕ್ಕೆ ಹಾರುತ್ತವೆ. ಅವು ಬೃಹತ್ ಸಾಗರಗಳನ್ನೂ, ಬೆಟ್ಟಗಳನ್ನೂ ದಾಟಿ ಪಯಣಿಸುತ್ತವೆ. ಒಂದು ನಿರ್ದಿಷ್ಟ ಕಾಲಮಿತಿಯೊಳಗೆ ಅವು ತಮ್ಮ ಸ್ವಂತ ಸ್ಥಳಗಳಿಗೆ ಹಿಂದಿರುಗುತ್ತವೆ. ಹೀಗೆ ಹಕ್ಕಿಗಳು ಸ್ಥಳದಿಂದ ಸ್ಥಳಕ್ಕೆ ಪ್ರಯಾಣ ಬೆಳೆಸುವುದನ್ನು 'ವಲಸೆ ಹೋಗುವಿಕೆ' ಎಂದು ಕರೆಯಲಾಗುವುದು. ಜಲಪಕ್ಷಿಗಳೇ ಹೆಚ್ಚಾಗಿ ವಲಸೆ ಹೋಗುವುದು.

ಆಹಾರ, ವಸತಿ, ಹವಾಮಾನದಲ್ಲಿನ ಏರುಪೇರು, ಸಂತಾನೋತ್ಪತ್ತಿ ಮುಂತಾದ ಕಾರಣಗಳಿಂದಾಗಿ ಹಕ್ಕಿಗಳು ವಲಸೆ ಹೋಗುತ್ತವೆ. ಚಂದಿರ, ನಕ್ಷತ್ರ, ಗುರುತ್ವಾಕರ್ಷಣೆಯ ಪ್ರದೇಶ ಮುಂತಾದವುಗಳನ್ನು ಆಧಾರವಾಗಿಟ್ಟುಕೊಂಡೇ ಹಕ್ಕಿಗಳು ವಲಸೆ ಹೋಗುತ್ತವೆ. ಸಹಜವಾಗಿ ಉತ್ತರದಿಂದ ದಕ್ಷಿಣಕ್ಕೂ, ಪೂರ್ವದಿಂದ ಪಶ್ಚಿಮಕ್ಕೂ ಹಕ್ಕಿಗಳು ವಲಸೆ ಹೋಗುತ್ತವೆ.



ಹಕ್ಕಿಗಳು ತಮಗಾಗಿಯೇ ಒಂದು ಮಾರ್ಗಸೂಚಿಯನ್ನು ಕಂಡು ಹಿಡಿದು ಆ ಮಾರ್ಗದಲ್ಲಿಯೇ ಹಾರಾಡುತ್ತವೆ. ಕೆಲವು ಪಕ್ಷಿಪ್ರಭೇದಗಳು ಅದೇ ಮಾರ್ಗದಲ್ಲಿಯೇ ತಮ್ಮ ಸ್ವಂತ ಸ್ಥಳಗಳಿಗೆ ಹಿಂದಿರುಗುತ್ತವೆ. ಕೆಲವು ಪಕ್ಷಿ ಪ್ರಭೇದಗಳು ಹೋಗಿ ಬರುವುದಕ್ಕೆ ಪ್ರತ್ಯೇಕ ಮಾರ್ಗವನ್ನು ಬಳಸಿಕೊಳ್ಳುತ್ತವೆ.

ಪಯಣ ಕಾಲದಲ್ಲಿ ಕೆಲವು ಬಗೆಯ ಹಕ್ಕಿಗಳು ಆಹಾರ, ವಿಶ್ರಾಂತಿ ಮುಂತಾದ ಅಗತ್ಯಗಳಿಗೆ ನೆಲಕ್ಕಿಳಿಯುತ್ತವೆ. ಎಲ್ಲಿಯೂ ಇಳಿಯದೆ ನಿರಂತರವಾಗಿ ಹಾರಾಡಿ ನಿರ್ದಿಷ್ಟ ಸ್ಥಳವನ್ನು ಸೇರುವ ಪಕ್ಷಿಗಳೂ ಉಂಟು.

ವಲಸೆಯ ಅವಧಿಯಲ್ಲಿ ಹಕ್ಕಿಗಳ ದೇಹದಲ್ಲಿ ಉಂಟಾಗುವ ಬದಲಾವಣೆಗಳು:

* ತಲೆಯಲ್ಲಿ ಪುಕ್ಕ ಬೆಳೆಯುವುದು
* ಪುಕ್ಕಗಳ ಬಣ್ಣದಲ್ಲಿ ಬದಲಾವಣೆ
* ದೇಹದಲ್ಲಿ ಗೊಂಚಲು ಗೊಂಚಲಾಗಿ ಕೂದಲು ಬೆಳೆಯುವುದು
* ಕೆಲವೊಮ್ಮೆ ಒಂದು ಬಗೆಯ ಹಕ್ಕಿಯು ಬೇರೆ ಪ್ರಭೇದದ ಹಕ್ಕಿಯಾಗಿ ಮಾರ್ಪಡುವ ಹಂತಕ್ಕೆ ತಲುಪುವುದೂ ಉಂಟು.

ಫ್ರೈಗೇಟ್ ಎಂಬ ಹಕ್ಕಿಯು ಗರಿಗೆದರದೆ ನೆಲಕ್ಕಿಳಿಯದೆ, ಸಮುದ್ರವನ್ನೂ ದಾಟಿ, ಸುಮಾರು ನಾಲ್ಕುನೂರು ಕಿಲೋಮೀಟರ್‌ವರೆಗೂ ಒಂದೇ ಸಮನೆ ಹಾರುತ್ತದೆ. ಈ ಹಕ್ಕಿಯನ್ನು ಕಡಲಕೊಳ್ಳೆ ಹಕ್ಕಿ ಎಂದು ಕರೆಯಲಾಗುತ್ತದೆ.



ತಮಿಳುನಾಡಿಗೆ ವಿದೇಶಗಳಿಂದ ಹಕ್ಕಿಗಳು ವಲಸೆ ಬರುವುದನ್ನು ಕುರಿತು ಸಾಹಿತ್ಯ ಕೃತಿಗಳಲ್ಲಿ ಮಾಹಿತಿಗಳು ದೊರೆಯುತ್ತವೆ. ಸರಿಸುಮಾರು 1500 ವರ್ಷಗಳಿಗಿಂತಲೂ ಮೊದಲು ಜೀವಿಸುತ್ತಿದ್ದ ಸತ್ತಿಮುತ್ತ(ಶಕ್ತಿಮುಕ್ತ) ಎನ್ನುವ ಪಂಡಿತರು 'ನಾರಾಯ್ ನಾರಾಯ್ ಚೆಂಗಲ್ ನಾರಾಯ್' (ನಾರೆಯೇ ನಾರೆಯೇ ಕೆಂಬಣ್ಣದ ನಾರೆಯೇ' – ಇದು ಒಂದು ಬಗೆಯ ಕೊಕ್ಕರೆಯ ಜಾತಿಗೆ ಸೇರಿದ ಹಕ್ಕಿ) ಎಂಬ ಹಾಡನ್ನು ರಚಿಸಿದ್ದಾರೆ. ಆ ಹಾಡಿನಲ್ಲಿ ಬಂದಿರುವ 'ದಕ್ಷಿಣದ ಕನ್ಯಾಕುಮಾರಿಯನ್ನು ಹಾಡಿ ಆನಂದದಿಂದ ಉತ್ತರ ದಿಕ್ಕಿಗೆ ಪಯಣಿಸುವಂತೆ' ಎಂಬ ಸಾಲುಗಳು ಹಕ್ಕಿಗಳು ವಲಸೆ ಬರುವ ಸಂಗತಿಯನ್ನು ತಿಳಿಸುತ್ತವೆ.

ಯೂರೋಪಿನಿಂದ ತಮಿಳುನಾಡಿಗೆ ಕೆಂಪು ಕಾಲಿನ ಕೊಕ್ಕರೆಗಳು ಬರುವ ಸಂಗತಿಯನ್ನು ಇತ್ತೀಚಿನ ಸಂಶೋಧನೆಗಳು ದೃಢಪಡಿಸಿವೆ. ತಮಿಳುನಾಡು ಹಾಗೂ ಕರ್ನಾಟಕ ರಾಜ್ಯಗಳು ವಿದೇಶದ ಹಕ್ಕಿಗಳಿಗೂ ನೆಲೆಯಾಗಿದೆ.

ಪ್ರಸ್ತುತ ಶೀಘ್ರವಾಗಿ ಅಳಿವನ್ನು ಕಾಣುತ್ತಿರುವ ಪಕ್ಷಿ ಪ್ರಭೇದ ಯಾವುದು ? ನಿಮಗೆ ಗೊತ್ತೇ? ಅದು ಪುಟಾಣಿ ಗುಬ್ಬಚ್ಚಿ !

ಆಕಾಶದಲ್ಲಿ ಪುಟ್ಟದಾದ ಕಂದು ಬಣ್ಣದ ಈ ಹಕ್ಕಿಯನ್ನು ಕಂಡೊಡನೆ ಗಂಡು ಅಥವಾ ಹೆಣ್ಣು ಎಂಬುದನ್ನು ಸುಲಭವಾಗಿ ಗುರುತಿಸಬಹುದು. ಗಂಡು ಗುಬ್ಬಚ್ಚಿಯ ಗಂಟಲ ಬಾಗವು ಕಪ್ಪು ಬಣ್ಣದಿಂದ ಕೂಡಿರುತ್ತದೆ. ದೇಹ ಭಾಗವು ಗಾಢವಾದ ಕಂದು ಬಣ್ಣದಿಂದ ಕೂಡಿರುತ್ತದೆ. ಹೆಣ್ಣುಗುಬ್ಬಿಯ ದೇಹ ಪೂರ್ತಿ ತಿಳಿ ಕಂದು ಬಣ್ಣದಿಂದ ಕೂಡಿರುತ್ತದೆ.

ಗುಬ್ಬಚ್ಚಿಯು ಗೂಡು ಕಟ್ಟಿ ಜೀವಿಸುವ ಪಕ್ಷಿ ಪ್ರಭೇದಕ್ಕೆ ಸೇರಿದೆ. ಇವು ಗೂಡು ಕಟ್ಟುವ ಸಮಯದಲ್ಲಿ ಶಬ್ದ ಮಾಡುತ್ತಲೇ ಇರುತ್ತವೆ. ಗೂಡು ಕಟ್ಟಿದ ನಂತರ ಮೂರರಿಂದ ಆರು ಮೊಟ್ಟೆಗಳನ್ನು ಇಡುತ್ತವೆ. ಹದಿನಾಲ್ಕು ದಿನಗಳು ಕಾವು ಕೊಟ್ಟು, ಹದಿನೈದನೆಯ ದಿನ ಮರಿ ಮೊಟ್ಟೆಯಿಂದ ಹೊರ ಬರುತ್ತದೆ.

ಧೃವ ಪ್ರದೇಶಗಳನ್ನು ಹೊರತು ಪಡಿಸಿ ಮಾನವನು ಜೀವಿಸುವ ಎಲ್ಲಾ ಸ್ಥಳಗಳಲ್ಲಿಯೂ ಗುಬ್ಬಚ್ಚಿಗಳು ವಾಸಿಸುತ್ತವೆ. ಭಾರತದಾದ್ಯಂತ ಗುಬ್ಬಚ್ಚಿಗಳನ್ನು ಕಾಣಬಹುದಾಗಿದೆ. ಹಿಮಾಲಯದ ಪರ್ವತ ಪಂಕ್ತಿಗಳಲ್ಲಿ 4000 ಮೀಟರ್ ಎತ್ತರದವರೆಗೂ ಇವು ಜೀವಿಸಬಲ್ಲವು.

ಧಾನ್ಯಗಳು, ಹುಳು ಹುಪ್ಪಟೆಗಳು, ಕೀಟಗಳು, ಹೂವಿನ ಮೊಗ್ಗುಗಳು, ಚಿಗುರೆಲೆಗಳು, ಜೇನು ಮೊದಲಾದವು ಗುಬ್ಬಚ್ಚಿಗಳ ಆಹಾರವಾಗಿದೆ. ಗುಬ್ಬಿ ಮರಿಗಳು ಹೆಚ್ಚಾಗಿ ಆಹಾರವಾಗಿ ಹುಳು, ಕೀಟಗಳನ್ನೇ ತಿನ್ನುತ್ತವೆ. ಅದರಿಂದ ತಾಯಿ ಗುಬ್ಬಿಯು ಹುಳು ಕೀಟಗಳನ್ನು ಹಿಡಿದು ತಮ್ಮ ಮರಿಗಳಿಗೆ ಗುಟುಕು ನೀಡುತ್ತವೆ. ಗುಬ್ಬಚ್ಚಿಗಳ ಜೀವಾವಧಿ ಹತ್ತರಿಂದ ಹದಿಮೂರು ವರ್ಷಗಳೆಂದು ತಿಳಿದು ಬಂದಿದೆ. ಗುಬ್ಬಚ್ಚಿಗಳು

ಆಕೃತಿಯಲ್ಲಿ ಚಿಕ್ಕದು. ಆದರೂ ಇವು ವೇಗವಾಗಿ ಹಾರಬಲ್ಲವು. ಆದ್ದರಿಂದಲೇ ಶೀಘ್ರವಾಗಿ ನಡೆಯುವವನನ್ನು 'ಗುಬ್ಬಚ್ಚಿಯಂತೆ ಪುರ್ ಎಂದು ಹಾರಿ ಹೋದ' ಎಂದು ಹೋಲಿಸಿ ಹೇಳುವುದುಂಟು.



* ಮಾನವನು ಬೇಸಾಯಕ್ಕೆ ಕ್ರಿಮಿನಾಶಕಗಳನ್ನು ಬಳಸುವುದರಿಂದ ಗುಬ್ಬಚ್ಚಿಗಳಿಗೆ ಅವಶ್ಯಕವಾದ ಕೀಟ, ಹುಳುಗಳು, ದೊರೆಯುತ್ತಿಲ್ಲ.
* ನವೀನ ಕಟ್ಟಡಗಳಲ್ಲಿ ಗೂಡ ಕಟ್ಟಲು ಗುಬ್ಬಚ್ಚಿಗೆ ತಕ್ಕ ಸೌಲಭ್ಯಗಳಿರುವುದಿಲ್ಲ.
* ಪ್ರಸ್ತುತ ಹೂದೋಟಗಳಿಗೆ ಬೇಲಿ ಹಾಕಲು ನೈಸರ್ಗಿಕ ವಸ್ತುಗಳನ್ನು ಬಳಸುವ ಬದಲಾಗಿ ಕೃತಕ ವಸ್ತುಗಳನ್ನೇ ಬಳಸಲಾಗುತ್ತಿದೆ. ಆದ್ದರಿಂದ ಗುಬ್ಬಚ್ಚಿಗಳು ಬದುಕಲು ಪೂರಕವಾದ ನೈಸರ್ಗಿಕ ಬೇಲಿ ಇತ್ಯಾದಿಗಳೂ ಕಡಿಮೆಯಾಗುತ್ತಿವೆ.
* ಗುಬ್ಬಚ್ಚಿಗಳು ವಿಶ್ರಾಂತಿ ಪಡೆಯಲು ಪೂರಕವಾದ ಪೊದೆಗಳೂ ಈಗ ಕಾಣಿಸುತ್ತಿಲ್ಲ.
* ಆಹಾರ ಮತ್ತು ವಸತಿಗಾಗಿ ಇತರ ಹಕ್ಕಿಗಳು ಗುಬ್ಬಚ್ಚಿಗಳೊಂದಿಗೆ ಸ್ಪರ್ಧೆ ನಡೆಸುತ್ತವೆ.

ಪಕ್ಷಿ ಸಂತತಿಗಳ ಉಳಿವಿಗೆ ನಾವು ಮಾಡಬೇಕಾದುದು.....

* ಆಲ ಅರಳಿ ಮುಂತಾದ ಮರಗಳನ್ನೂ, ಅವರೆ, ಪಡುವಲ ಮುಂತಾದ ಗಿಡಗಳ ಚಪ್ಪರಗಳನ್ನೂ ಬೆಳೆಸಬಹುದು.

* ನಮ್ಮ ನೆಲದ ಗುಣಕ್ಕೆ ಹೊಂದುವಂತಹ ಹಾಗೂ ನಮ್ಮಲ್ಲಿ ದೊರೆಯುವಂತಹ ಸಸ್ಯಗಳನ್ನು ಬೆಳೆಸಬೇಕು.

* ತೋಟಗಳಲ್ಲಿ, ಬಯಲುಗಳಲ್ಲಿ ರಾಸಾಯನಿಕ ಗೊಬ್ಬರ, ಕ್ರಿಮಿನಾಶಕಗಳನ್ನು ಸಿಂಪಡಿಸುವುದನ್ನು ತಡೆಯಬೇಕು.

ಕಾಗೆ, ಗುಬ್ಬಚ್ಚಿಗಳು ನಮ್ಮ ಜಾತಿ ಎಂದು ತಮಿಳಿನ ಪ್ರಸಿದ್ಧ ಕವಿ **ಸುಬ್ರಹ್ಮಣ್ಯಭಾರತಿ** ಹಾಡಿದ್ದಾರೆ. ತಮ್ಮ ಮನೆಯಲ್ಲಿ ಅನ್ನ ಮಾಡುವುದಕ್ಕಾಗಿ ಇಟ್ಟಿದ್ದ ಸ್ವಲ್ಪ ಅಕ್ಕಿಯನ್ನೂ ಕೂಡ ಅಂಗಳದಲ್ಲಿ ಹಾರಾಡುತ್ತಿದ್ದ ಗುಬ್ಬಚ್ಚಿಗಳಿಗೆ ಸಂತೋಷದಿಂದ ಹಾಕಿ ತೃಪ್ತಿ ಪಟ್ಟುಕೊಂಡವರು ಅವರು.

'ಮಾನವರಿಲ್ಲದ ಜಗತ್ತಿನಲ್ಲಿ ಹಕ್ಕಿಗಳು ಜೀವಿಸಬಹುದು ! ಆದರೆ ಹಕ್ಕಿಗಳಿಲ್ಲದ ಜಗತ್ತಿನಲ್ಲಿ ಮನುಷ್ಯನು ಜೀವಿಸಲಾರ !' ಎನ್ನುತ್ತಾರೆ ಹಕ್ಕಿ ಶಾಸ್ತ್ರ ಸಂಶೋಧಕರಾದ ಸಲೀಂ ಆಲಿ ಅವರು. ಈ ಸತ್ಯವನ್ನು ಅರಿತು ನಾವು ಪ್ರಕೃತಿ ಮಾತೆಗೆ ವಂದಿಸಿ ಹಕ್ಕಿಗಳನ್ನು ರಕ್ಷಿಸೋಣ.



ಭಾರತದ ಹಕ್ಕಿ ಮನುಷ್ಯ



ಇಂದಿನ ಪಕ್ಷಿಶಾಸ್ತ್ರ ಸಂಶೋಧಕರಿಗೆ ಡಾ. ಸಲೀಂ ಆಲಿಯವರು ಮಾದರಿಯಾಗಿದ್ದಾರೆ. ಶ್ರೀಯುತರು ತಮ್ಮ ಜೀವಮಾನವನ್ನು ಪಕ್ಷಿಗಳ ವೀಕ್ಷಣೆ ಮತ್ತು ಸಂಶೋಧನೆಗಾಗಿಯೂ, ಅವುಗಳ ಭಾವಚಿತ್ರ ತೆಗೆಯುವುದಕ್ಕಾಗಿಯೇ ಮುಡುಪಾಗಿಟ್ಟರು. ಆದ್ದರಿಂದ ಅವರನ್ನು ಭಾರತದ ಹಕ್ಕಿಮನುಷ್ಯ ಎಂದು ಕರೆಯಲಾಗುವುದು. ಹಕ್ಕಿಗಳನ್ನು ಕುರಿತ ಹಲವು

ಗ್ರಂಥಗಳನ್ನು ಅವರು ರಚಿಸಿದ್ದಾರೆ. ತಮ್ಮ ಆತ್ಮ ಚರಿತ್ರೆಗೆ, 'ಗುಬ್ಬಚ್ಚಿಗಳ ಅಳಿವು' (The fall of Sparrows) ಎಂದು ಅವರು ಹೆಸರಿಟ್ಟಿದ್ದಾರೆ.

ವಿಶ್ವದಲ್ಲಿಯೇ ಬಹುದೂರ (22,000 ಕಿ.ಮೀ.) ಪ್ರಯಾಣಿಸುವ ಹಕ್ಕಿ ಪ್ರಭೇದ.

ಪಕ್ಷಿ ಶಾಸ್ತ್ರ ಅಧ್ಯಯನವನ್ನು ಆರ್ನಿತಾಲಜಿ (Ornithology) ಎನ್ನುವರು.

ವಿಶ್ವ ಗುಬ್ಬಚ್ಚಿಗಳ ದಿನ ಮಾರ್ಚ್ 20.

ಪ್ರಶ್ನೋತ್ತರಗಳು

I. ಸಂಕ್ಷಿಪ್ತವಾಗಿ ಉತ್ತರಿಸಿ

1. ಪಕ್ಷಿಗಳ ವಲಸೆಗೆ ಕಾರಣಗಳೇನು ?
2. ವಲಸೆಯ ಸಮಯದಲ್ಲಿ ಹಕ್ಕಿಗಳ ದೇಹದಲ್ಲಾಗುವ ಬದಲಾವಣೆಗಳೇನು ?

II. ವಿವರವಾಗಿ ಉತ್ತರಿಸಿ.

1. ಗುಬ್ಬಚ್ಚಿಯ ಜೀವನವನ್ನು ಕುರಿತು ಟಿಪ್ಪಣಿ ಬರೆಯಿರಿ.
2. ವಲಸೆ ಹಕ್ಕಿಗಳ ಪ್ರಯಾಣವನ್ನು ಕುರಿತು ನೀವು ತಿಳಿದುಕೊಂಡಿರುವುದೇನು?

ಭಾಷಾಭ್ಯಾಸ

III. ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ.

1. ಮತ್ತೊಂದು – ಈ ಪದವನ್ನು ಬಿಡಿಸಿ ಬರೆದಾಗ _____

   ಅ) ಮುತ್ತು + ಒಂದು

   ಆ) ಮತ್ತು + ಒಂದು

   ಇ) ಮಾತು + ಒಂದು

   ಈ) ಮತ್ತೆ + ಒಂದು

2. ಗುರುತ್ವಾಕರ್ಷಣೆ ಎನ್ನುವ ಪದವನ್ನು ಬಿಡಿಸಿ ಬರೆದಾಗ _____

   ಅ) ಗುರು + ಆಕರ್ಷಣೆ

   ಆ) ಗುರುತ್ವಾ + ಕರ್ಷಣೆ

   ಇ) ಗುರುತ್ವ + ಆಕರ್ಷಣೆ

   ಈ) ಗುರುತ್ವ + ಅನ್ವೇಷಣೆ

3. ದೃಢ+ಪಡಿಸು – ಇದನ್ನು ಸೇರಿಸಿ ಬರೆದಾಗ _____

   ಅ) ದೃಢಾಪಡಿಸು ಆ) ದೃಢಪಡಿಸು

   ಇ) ದೃಢೀಕರಿಸು ಈ) ದೃಢಪಾಡಿಸು

4. ಗುಬ್ಬಚ್ಚಿಗಳು ಜೀವಿಸಲಾಗದ ಸ್ಥಳ _____

   ಅ) ಧೃವ ಪ್ರದೇಶ ಆ) ಹಿಮಾಲಯ

   ಇ) ಭಾರತ ಈ) ತಮಿಳುನಾಡು

IV. ಬಿಟ್ಟ ಸ್ಥಳ ತುಂಬಿರಿ.

1. ಬಹುದೂರ ಹಾರುವ ಹಕ್ಕಿ_____
2. ಹಕ್ಕಿಗಳು ವಲಸೆ ಹೋಗುವುದನ್ನು ಕುರಿತು ಹಾಡಿದ ತಮಿಳು ಕವಿ_____
3. ಹಕ್ಕಿಗಳು ಒಂದು ದೇಶದಿಂದ ಮತ್ತೊಂದು ದೇಶಕ್ಕೆ ಹೋಗುವ ಪ್ರಕ್ರಿಯೆ_____
4. ಭಾರತದ ಪಕ್ಷಿಶಾಸ್ತ್ರಜ್ಞ _____
5. ಹಕ್ಕಿಗಳ ವಲಸೆಗೆ ಇದೂ ಒಂದು ಕಾರಣ _____

V. ಈ ಪದಗಳನ್ನು ಬಳಸಿ ವಾಕ್ಯ ರಚಿಸಿ.

1. ವಿದೇಶ _____
2. ಜೀವವಿಜ್ಞಾನ _____
3. ರಾಸಾಯನಿಕ _____

VI. ಸರಿಯಾದ ಶಬ್ದಗಳನ್ನು ತುಂಬಿರಿ.

1. ಮರಗಳನ್ನು ಬೆಳಿಸಿ _____ ರಕ್ಷಿಸೋಣ. _____ ತಡೆದು ಭೂಮಿಯ ಸತ್ವವನ್ನು ರಕ್ಷಿಸೋಣ.

   (ಪರಿಸರ / ರಾಸಾಯನಿಕ ಗೊಬ್ಬರ)

2. ವಲಸೆ ಹಕ್ಕಿಗಳ ಪ್ರವೇಶ ಈಗ ತಮಿಳುನಾಡಿನಲ್ಲಿ _____ ಗುಬ್ಬಚ್ಚಿಗಳು ಕ್ರಮೇಣ _____

(ಕ್ಷೀಣಿಸುತ್ತಿದೆ/ಹೆಚ್ಚುತ್ತಿದೆ)

ಪಕ್ಷಿ ಸಂತತಿ ಉಳಿಸಲು ನಾವು ಕೈಗೊಳ್ಳಬೇಕಾದ ಕ್ರಮಗಳನ್ನು ಕುರಿತು ಚಿಂತಿಸಿ ಬರೆಯಿರಿ.

ಚಟುವಟಿಕೆ

ಕಲಿತದ್ದು – ಕಲಿಕೆಯ ಫಲ

1. ನಿಮ್ಮ ಸುತ್ತಮುತ್ತ ಕಂಡು ಬರುವ ಪಕ್ಷಿಗಳ ಹೆಸರುಗಳನ್ನು ಪಟ್ಟಿ ಮಾಡಿ.
2. ನಿಮ್ಮ ಮನೆಯ ಸಮೀಪ ಪಕ್ಷಿಗಳು ಬರಲು ಏನೆಲ್ಲಾ ಮಾಡಬಹುದು – ಎಂಬುದನ್ನು ಕುರಿತು ತರಗತಿಯ ಕೊಠಡಿಯಲ್ಲಿ ಗುಂಪು ಚರ್ಚೆ ಮಾಡಿ.
3. ಪಕ್ಷಿ ಸಂಬಂಧೀ ಗಾದೆಗಳನ್ನು ಸಂಗ್ರಹಿಸಿ ಬರೆಯಿರಿ.
4. ಪ್ರಕೃತಿಯ ಸಂರಕ್ಷಣಾ ವಿಧಾನವನ್ನು ಕುರಿತು ಘೋಷಣಾ ಫಲಕಗಳನ್ನು ಬರೆಯಿರಿ. ಉದಾಹರಣೆಗೆ, 'ರಕ್ಷಿಸೋಣ! ರಕ್ಷಿಸೋಣ! ಪಕ್ಷಿಗಳನ್ನು ರಕ್ಷಿಸೋಣ!'



ಉಪಪಠ್ಯ

ಘಟಕ ಎರಡು

ವೃದ್ಧನೂ ಕಡಲೂ



ಮನುಜನು ಪ್ರಕೃತಿಯೊಂದಿಗೆ ಸದಾ ಹೋರಾಡುತ್ತಲೇ ಇರುತ್ತಾನೆ. ಮಾನವನು ಈ ಭೂಮಿಯಲ್ಲಿ ತಲೆದೋರಿದ ಕಾಲದಿಂದ ಇಂದಿನವರೆಗೂ ಅನನ್ಯವಾಗಿ ಈ ಹೋರಾಟ ನಡೆಯುತ್ತಲೇ ಬಂದಿದೆ. ಕೆಲವು ಸಮಯಗಳಲ್ಲಿ ಮನುಷ್ಯ ಗೆಲುವು ಸಾಧಿಸುತ್ತಾನೆ. ಕೆಲವು ಸಮಯಗಳಲ್ಲಿ ಸೋಲನ್ನು ಅನುಭವಿಸುತ್ತಾನೆ. ಆದರೆ ಪ್ರಯತ್ನಗಳು ಎಂದಿಗೂ ಮುಗಿಯದು. ಪ್ರಕೃತಿಯೊಂದಿಗಿನ ಹೋರಾಟವೇ ಮನುಷ್ಯನ ಬದುಕನ್ನು ನಿರ್ಧರಿಸುತ್ತದೆ. ಹೋರಾಡುವುದರಲ್ಲಿ ತೃಪ್ತಿಯೂ ಸಂತೋಷವೂ ಅಡಗಿದೆ. ಮೀನು ಹಿಡಿಯಲು ಹೋರಾಡುವ ಮೀನುಗಾರನೊಬ್ಬನ ಬದುಕನ್ನು ನೋಡೋಣವೇ !



ವೃದ್ಧನೂ ಕಡಲೂ (*The old man and the sea*) ಎಂಬ ಆಂಗ್ಲಭಾಷಾ ಕಾದಂಬರಿ ಕನ್ನಡಕ್ಕೆ ಅನುವಾದಿಸಲ್ಪಟ್ಟು ಇಲ್ಲಿ ಚಿತ್ರಕಥೆಯಾಗಿ ಸರಳವಾಗಿ ಕೊಡಲಾಗಿದೆ. ಈ ಕೃತಿ 1954ರಲ್ಲಿ ನೊಬೆಲ್ ಪಾರಿತೋಷಕ ಪಡೆದಿದೆ. ಈ ಕೃತಿಯ ಕರ್ತೃ ಎರ್ನೆಸ್ಟ್ ಹೆಮಿಂಗ್ ವೇ.

ಪ್ರಕೃತಿ ಮತ್ತು ಮಾನವನೊಂದಿಗೆ ನಡೆಯುವ ಹೋರಾಟವೇ ಈ ಕಥಾ ವಸ್ತು. ಈ ಕಥೆಯ ನಾಯಕ ಚಾಂಡಿಯಾಗೋ. ಈತ ಒಬ್ಬ ವೃದ್ಧ ಮೀನುಗಾರ. ಪ್ರಾರಂಭದಲ್ಲಿ ಮೀನು ಹಿಡಿಯಲು ಸಮುದ್ರಕ್ಕೆ ಹೋದರೆ ಮೀನುಗಳಿಲ್ಲದೆ ಆತ ಎಂದೂ ಹಿಂದಿರುಗುತ್ತಿರಲಿಲ್ಲ. ಆದರೆ ಕಳೆದ 84 ದಿನಗಳಿಂದ ಯಾಕೋ ಅವನಿಗೆ ಒಂದು ಮೀನೂ ಸಿಗಲೇ ಇಲ್ಲ. ಮನೋಲಿನ್ ಎಂಬ ಹುಡುಗ ಮೀನು ಹಿಡಿಯುವುದನ್ನು ಕಲಿಯಲು ಎಂದು ಪ್ರಾರಂಭದ ನಲವತ್ತು ದಿನಗಳು ಆ ವೃದ್ಧನೊಂದಿಗೆ ಸಮುದ್ರಕ್ಕೆ ಬರುತ್ತಾನೆ. ಅವನು ಆ ವೃದ್ಧನಿಗೆ ಅಗತ್ಯವಾದ ಸಹಾಯವನ್ನು ಮಾಡುವುದರ ಮೂಲಕ ಪರಸ್ಪರ ಮಾತುಕತೆಗಳನ್ನೂ ಆಡುತ್ತಿರುತ್ತಾರೆ. ಈ ವೃದ್ಧನೊಂದಿಗೆ ಆ ಯುವಕ ಸಮುದ್ರಕ್ಕೆ ಹೋದರೆ ಒಂದು ಮೀನೂ ಸಿಗುವುದಿಲ್ಲವೆಂದು ಅವನ ತಾಯಿ ತಂದೆಯರು ಬೇರೆ ದೋಣಿಗೆ ಅವನನ್ನು ಕಳುಹಿಸಿದಾದರು. ಈಗ ಚಾಂಡಿಯಾಗೋ ಒಬ್ಬಂಟಿಗನಾಗಿಯೇ ಮೀನು ಹಿಡಿಯಲು ಸಾಗರಕ್ಕೆ ಹೋಗುತ್ತಿದ್ದನು.

ಅಂದು ಎಂಬತ್ತೈದನೇ ದಿನ


ಕಡಲಿಗೆ ಮೀನು ಹಿಡಿಯಲು ಹೊರಟನು ಚಾಂಡಿಯಾಗೋ.
ನನಗೆ ಮೀನುಗಳೇ ಸಿಗುವುದಿಲ್ಲವೆಂದು ಎಲ್ಲರೂ ಹೇಳುತ್ತಿದ್ದಾರೆ. ಅದನ್ನು ಬದಲಾಯಿಸಿ ತೋರಿಸಬೇಕು.


ಗಾಳ ಹಾಕಿ ಕಾಯುತ್ತಿದ್ದಾರೆ.
ಒಬ್ಬಂಟಿಗನಾಗಿ ಬಂದಿರಬಾರದು. ಪರಸ್ಪರ ಮಾತನಾಡಲು ಮನೋಲಿನ್ ಇದ್ದಿದ್ದರೆ ಚೆನ್ನಾಗಿರುತ್ತಿತ್ತು.


ಮಾರನೇ ದಿನ ಮುಂಜಾನೆ.
ಇಡೀ ರಾತ್ರಿ ಸಮುದ್ರದಲ್ಲೇ ಇದ್ದು ಬಿಟ್ಟೆ. ಒಂದು ಮೀನೂ ಸಿಗಲಿಲ್ಲವಲ್ಲ. ಆದದ್ದಾಯಿತು! ಇನ್ನು ನಾನು ಮೀನಿಲ್ಲದೆ ಕಡಲ ತೀರಕ್ಕೆ ಹೋಗಲಾರೆ.


ಮಧ್ಯಾಹ್ನ
ಆ... ಹಾ... ಹಾ... ! ಗಾಳದ ಹಗ್ಗವನ್ನು ಯಾವುದೋ ಎಳೆಯುವಂತಿದೆ. ಯಾವುದೋ ಮೀನು ಗಾಳಕ್ಕೆ ಸಿಕ್ಕಿದೆಯೆಂದು ಭಾವಿಸುತ್ತೇನೆ.


ಬಾ... ಬಾ...! ಬಾ...! ಮೀನೇ ! ಗಾಳದ ಮೊನೆಯಲ್ಲಿ ನಿನಗಾಗಿ ಎರೆಹುಳುವನ್ನು ಸಿಕ್ಕಿಸಿದ್ದೇನೆ. ತಿನ್ನು ತಿನ್ನು... ಆಗ ತಾನೇ ನೀನು ನನ್ನ ಗಾಳಕ್ಕೆ ಬೀಳುವೆ. ಬಾ...! ಬಾ...! ಹಾಗೆಯೇ... ಬಾ...!


ಗಾಳಕ್ಕೆ ಮೀನು ಸಿಕ್ಕಿ ಬಿತ್ತು.
ಗಾಳವನ್ನು ವೇಗವಾಗಿ ಎಳೆಯುತ್ತಿದೆ! ನಿಜವಾಗಿಯೂ ಇದು ದೊಡ್ಡ ಮೀನಾಗಿಯೇ ಇರಬೇಕು.


ಮೀನನ್ನು ದೋಣಿಯೊಳಕ್ಕೆ ಎಳೆಯಲು ಪ್ರಯತ್ನಿಸುತ್ತಿದ್ದಾನೆ. ಸಾಧ್ಯವಾಗಲಿಲ್ಲ.
ಮೀನೇ...! ಯಾಕೆ ಹೀಗೆ ಗಾಳವನ್ನು ಎಳೆಯುತ್ತಿರುವೆ? ನನ್ನನ್ನು ಸಮುದ್ರದೊಳಗೆ ತಳ್ಳಲು ನೋಡುವೆಯಾ?


ಮೀನು ಸಮುದ್ರದ ನೀರಿನಿಂದ ಮೇಲಕ್ಕೂ ಕೆಳಕ್ಕೂ ಮುಳುಗುವಂತೆಯೂ ಅನ್ನಿಸುತ್ತಿದೆ.
ಮೇಲಕ್ಕೂ ಬರದೆ ಆಳಕ್ಕೂ ಹೋಗದೆ ದೋಣಿಯನ್ನು ಎಳೆದುಕೊಂಡೇ ಹೋಗುತ್ತಿರುವಂತಿದೆಯಲ್ಲಾ! ಇರಲಿ! ಇರಲಿ! ಹೇಗಿದ್ದರೂ ಮೇಲೆ ಬರಲೇಬೇಕು ತಾನೇ!


ಸಾಯಂಕಾಲ
ಹಸಿವೂ ದಣಿವೂ ನನ್ನನ್ನು ಹಿಂಸಿಸುತ್ತಿದೆ. ಮಧ್ಯಾಹ್ನ ಗಾಳಕ್ಕೆ ಸಿಲುಕಿದ ಮೀನು ನಾಲ್ಕು ಗಂಟೆ ಸಮಯವಾದರೂ ನನ್ನೊಂದಿಗೆ ಪಂದ್ಯ ಹೂಡುತ್ತಿದೆ!


ಮೀನು ಸ್ತಬ್ಧವಾಗಿದೆ. ಮೀನಿನೊಂದಿಗೆ ಹೋರಾಡಿದ ಚಾಂಡಿಯಾಗೋ ತುಸು ಕಣ್ಣು ಮುಚ್ಚಿದನು.


ಮೀನು ಪುನಃ ಗಾಳವನ್ನು ಎಳೆಯುತ್ತಿದೆ. ಚಾಂಡಿಯಾಗೋವಿನ ನಿದ್ರೆ ತಿಳಿಯುತ್ತಿದೆ.
ಒಂದು ರಾತ್ರಿಯೆಲ್ಲಾ ನಿದ್ರೆಗೆಟ್ಟು ನನ್ನರಿವಿಲ್ಲದೆ ನಿದ್ದೆ ಹೋದೆನೇ ! ಇನ್ನು ಸುಮ್ಮನಿರಲಾಗದು.


ಮ್‌ಮ್... ಹಾಗೇ ಆಗಲಿ. ಮೇಲೆ ಬಾ! ಇಂದು ನೀನು ನನ್ನಿಂದ ತಪ್ಪಿಸಿಕೊಳ್ಳಲಾಗದು.

ಚಾಂಡಿಯಾಗೋ ಗಾಳವನ್ನು ಎಳೆಯುತ್ತಾನೆ. ಮೀನು ಮೊದಮೊದಲು ಸಮುದ್ರದ ಮೇಲೆ ಒದ್ದಾಡುತ್ತದೆ.



ಮೀನು ದೋಣಿಯ ಸುತ್ತಲೂ ಸುತ್ತುತ್ತಿದೆ.









ಮೀನು ದೋಣಿಯ ಸಮೀಪ ಮೇಲೆದ್ದು ಕುಣಿಯುತ್ತಿದೆ. ಚಾಂಡಿಯಾಗೋ ಈಟಿಯಿಂದ ಮೀನನ್ನು ಚುಚ್ಚುತ್ತಾನೆ.




ನನಗೆ ಮೀನು ಸಿಗುವುದಿಲ್ಲವೆಂದು ಎಲ್ಲರೂ ಹೇಳಿದರು. ನೋಡಿದಿರಾ? ಬಲೆಯೇ ಇಲ್ಲದೆ ಇಷ್ಟು ದೊಡ್ಡಗಾತ್ರದ ಮೀನನ್ನು ಯಾರಾದರೂ ಹಿಡಿದದ್ದುಂಟೇ? ನಿರಂತರ ಪ್ರಯತ್ನದಿಂದ ಇಂದು ನಾನು ಅನುಭವಿಸಿದೆ.
ಮೀನು ಬಹಳ ಉದ್ದವಾಗಿದ್ದ ಕಾರಣ ಅದನ್ನು ದೋಣಿಯ ಪಕ್ಕದಲ್ಲಿ ಕಟ್ಟಿದ.


ಆಗ ದೋಣಿಯತ್ತ ಒಂದು ಶಾರ್ಕ್ ಮೀನು ಧಾವಿಸಿ ಬರುತ್ತದೆ.
ನಾನು ಹಿಡಿದ ಮೀನನ್ನು ತಿನ್ನಲು ಧಾವಿಸಿ ಬರುತ್ತಿರುವೆಯಾ? ನನ್ನ ಈಟಿಗೆ ನೀನೂ ಮಾಂಸವಾಗಬೇಕಾಗುತ್ತದೆ.


ಇನ್ನೂ ಕೆಲವು ಶಾರ್ಕ್‌ಗಳು ಧಾವಿಸಿ ಬರುತ್ತಿವೆ.
ನಾನು ಹಿಡಿದ ಮೀನನ್ನು ಅಷ್ಟು ಸುಲಭವಾಗಿ ಕಸಿದುಕೊಳ್ಳಲು ನಾನು ಬಿಡಲಾರೆ.
ಚಾಂಡಿಯಾಗೋ ಶಾರ್ಕ್ ಮೀನುಗಳನ್ನು ಸಾಯಿಸುತ್ತಾನೆ.


ಎಂತಹ ಹೋರಾಟ! ಅಬ್ಬಾ! ಒಂದು ರೀತಿಯಲ್ಲಿ ಎಲ್ಲವೂ ಮುಗಿಯಿತು. ಈ ಮೀನಿನ ಅಟ್ಟಹಾಸವನ್ನು ಮನೋಲಿನ್ ನೋಡಿರಬೇಕಿತ್ತು. ಸರಿ. ಹೋಗಲಿ, ಕೂಡಲೇ ಹೋಗಿ ನಡೆದ ಸಂಗತಿಯನ್ನೆಲ್ಲಾ ಅವನ ಬಳಿ ಹೇಳಬೇಕು.


ಒಂದು ರೀತಿಯಲ್ಲಿ ದಡ ತಲುಪಿದ್ದಾಯಿತು. ತುಂಬಾ ಆಯಾಸವಾಗುತ್ತಿದೆ. ಸರಿ, ದಡದಲ್ಲಿ ದೋಣಿಯನ್ನು ಎಳೆದು ಕಟ್ಟುತ್ತೇನೆ.
ದಡದಲ್ಲಿ.


ಆ...! ಏನಿದು ! ಶಾರ್ಕ್‌ಗಳು ತಿಂದುಳಿದ ಮೀನಿನ ತಲೆ ಮತ್ತು ಮೂಳೆಗಳು ಮಾತ್ರವೇ ಉಳಿದಿವೆಯಲ್ಲ?
ದೋಣಿಗೆ ಕಟ್ಟಿ ಎಳೆ ತಂದಿದ್ದ ಮೀನನ್ನು ನೋಡುತ್ತಾನೆ.







ಪ್ರಶ್ನೋತ್ತರಗಳು

1. ವೃದ್ಧನೂ ಕಡಲೂ ಚಿತ್ರದ ಕಥೆಯನ್ನು ನಿಮ್ಮ ಸ್ವಂತ ವಾಕ್ಯದಲ್ಲಿ ಕಥೆಯಾಗಿ ಬರೆಯಿರಿ.
2. ಈ ಕಥೆಯ ಮೂಲಕ ನೀವು ಅನುಭವಿಸಿದ ಭಾವವನ್ನು ಚರ್ಚಿಸಿ.
3. ಚಾಂಡಿಯಾಗೋ ಕುರಿತು ನಿಮ್ಮ ಅನಿಸಿಕೆ ಏನು ?

ಕಲಿತದ್ದು – ಕಲಿಕೆಯ ಫಲ

ಕಡಲ ಚಿತ್ರವನ್ನು ಬರೆದು ಅದಕ್ಕೆ ಬಣ್ಣ ಹಚ್ಚಿರಿ. ಆ ಚಿತ್ರಕ್ಕೆ ಸಂಬಂಧಿಸಿದ ನಾಲ್ಕು ವಾಕ್ಯಗಳನ್ನು ಬರೆಯಿರಿ.

ಘಟಕ ಎರಡು

ವರ್ಗೀಯ ವ್ಯಂಜನಗಳು



ವರ್ಗ	ಅಲ್ಪಪ್ರಾಣ	ಮಹಾಪ್ರಾಣ	ಅಲ್ಪಪ್ರಾಣ	ಮಹಾಪ್ರಾಣ	ಅನುನಾಸಿಕ	ಒಟ್ಟು ವರ್ಗೀಯ ವ್ಯಂಜನಗಳು
ಕ ವರ್ಗ	ಕ್	ಖ್	ಗ್	ಘ್	ಙ್	5
ಚ ವರ್ಗ	ಚ್	ಛ್	ಜ್	ಝ್	ಞ್	5
ಟ ವರ್ಗ	ಟ್	ಠ್	ಡ್	ಢ್	ಣ್	5
ತ ವರ್ಗ	ತ್	ಥ್	ದ್	ಧ್	ನ್	5
ಪ ವರ್ಗ	ಪ್	ಫ್	ಬ್	ಭ್	ಮ್	5
	5	5	5	5	5	25

ವರ್ಗೀಯ ವ್ಯಂಜನಗಳು – 25

ವರ್ಗೀಯ ವ್ಯಂಜನಗಳಲ್ಲಿ ಅಲ್ಪಪ್ರಾಣ, ಮಹಾಪ್ರಾಣ, ಅನುನಾಸಿಕ ಎಂದು ಮೂರು ವಿಧದ ವರ್ಣಗಳಿವೆ.

ಅಲ್ಪ ಪ್ರಾಣಾಕ್ಷರಗಳು – 10

ಕಡಿಮೆ ಕಾಲಾವಧಿಯಲ್ಲಿ ಉಚ್ಚಾರವಾಗುವ ವ್ಯಂಜನಗಳನ್ನು ಅಲ್ಪಪ್ರಾಣಾಕ್ಷರಗಳು ಎಂದು ಕರೆಯಲಾಗುವುದು. ವರ್ಗದ ಮೊದಲ ಹಾಗೂ ಮೂರನೆಯ ಅಕ್ಷರಗಳು ಅಲ್ಪಪ್ರಾಣಾಕ್ಷರಗಳು.

ಅವು, ಕ್ ಗ್ ಚ್ ಜ್ ಟ್ ಡ್ ತ್ ದ್ ಪ್ ಬ್

ಮಹಾಪ್ರಾಣಾಕ್ಷರಗಳು – 10

ಹೆಚ್ಚು ಉಸಿರಿನಿಂದ ಉಚ್ಚಾರವಾಗುವ ವ್ಯಂಜನಗಳನ್ನು ಮಹಾಪ್ರಾಣಾಕ್ಷರಗಳು ಎಂದು ಕರೆಯುತ್ತಾರೆ. ಎರಡು ಮತ್ತು ನಾಲ್ಕನೇ ವರ್ಗದ ಅಕ್ಷರಗಳು ಮಹಾಪ್ರಾಣಾಕ್ಷರಗಳು.

ಅವು, ಖ್ ಫ್ ಛ್ ಝ್ ಠ್ ಢ್ ಥ್ ಧ್ ಫ್ ಭ್

ಅನುನಾಸಿಕ ಅಕ್ಷರಗಳು –05

ಮೂಗಿನ ಸಹಾಯದಿಂದ ಉಚ್ಚಾರವಾಗುವ ವ್ಯಂಜನಗಳನ್ನು ಅನುನಾಸಿಕ ಅಕ್ಷರಗಳು ಎಂದು ಕರೆಯುತ್ತಾರೆ. ವರ್ಗದ ಕಡೆಯ ಅಕ್ಷರಗಳು ಅನುನಾಸಿಕಾಕ್ಷರಗಳು.

ಅವು, ಙ್ ಞ್ ಣ್ ನ್ ಮ್

ಅವರ್ಗೀಯ ವ್ಯಂಜನಗಳು – 9

ಯ್ ರ್ ಲ್ ವ್ ಶ್ ಷ್ ಸ್ ಹ್ ಳ್

ಸೂಚನೆ : ವರ್ಗೀಯ ವ್ಯಂಜನದ ವರ್ಗದ ಪ್ರಥಮ ಅಕ್ಷರಗಳಾದ ಕ್ ಚ್ ಟ್ ತ್ ಪ್ ಗಳನ್ನು **ಅಘೋಷ ಧ್ವನಿಮಾಗಳೆಂದು** ಕರೆಯಲಾಗುವುದು.

ವರ್ಗದ ತೃತೀಯ ಅಕ್ಷರಗಳಾದ ಗ್ ಜ್ ಡ್ ದ್ ಬ್ ಗಳನ್ನು **ಘೋಷ ಧ್ವನಿಮಾಗಳೆಂದು** ಕರೆಯಲಾಗುವುದು.

ಗುಣಿತಾಕ್ಷರಗಳು

ವ್ಯಂಜನಗಳಿಗೆ ಸ್ವರಗಳು ಸೇರಿ ಆಗುವ ಅಕ್ಷರಗಳನ್ನು ಗುಣಿತಾಕ್ಷರಗಳು ಎನ್ನುವರು. ಉದಾಹರಣೆಗೆ, ಕ್+ಅ=ಕ, ಕ್+ಒ=ಕೊ, ಕ್+ೱ=ಕೃ = ಮುಂತಾದವು.

ವ್ಯಂಜನಗಳು	ಸ್ವರಗಳು	ಸ್ವರ ಚಿಹ್ನೆಗಳು	ಸ್ವರ ಚಿಹ್ನೆಗಳ ಹೆಸರುಗಳು	ಕ್ ಕಾರದ ಕಾಗುಣಿತದ ರೂಪಗಳು (ಸ್ವರ ಚಿಹ್ನೆ ಸೇರಿದ ಬಳಿಕ ತಾಳಿದ ರೂಪ)
ಕ್	ಅ	◌್	ತಲಕಟ್ಟು	ಕ
ಕ್	ಆ	◌ಾ	ಇಳಿ(ದೀರ್ಘ)	ಕಾ
ಕ್	ಇ	◌ಿ	ಗುಡಿಸು(ಇತ್ವ)	ಕಿ
ಕ್	ಈ	◌ೀ	ಗುಡಿಸು ಇಳಿ (ಈತ್ವ)	ಕೀ
ಕ್	ಉ	◌ು	ಕೊಂಬು (ಉತ್ವ)	ಕು
ಕ್	ಊ	◌ೂ	ಕೊಂಬು ಇಳಿ(ಊತ್ವ)	ಕೂ
ಕ್	ೱ	◌ೃ	ವಟ್ಟರ ಸುಳಿ (ೱತ್ವ)	ಕೃ
ಕ್	ಎ	◌ೆ	ಎತ್ವ	ಕೆ
ಕ್	ಏ	◌ೇ	ಏತ್ವ	ಕೇ
ಕ್	ಐ	◌ೈ	ಐತ್ವ	ಕೈ
ಕ್	ಒ	◌ೊ	ಒತ್ವ	ಕೊ
ಕ್	ಓ	◌ೋ	ಓತ್ವ	ಕೋ
ಕ್	ಔ	◌ೌ	ಔತ್ವ	ಕೌ

ಕಂ ಎಂಬುದು ಅನುಸ್ವಾರವನ್ನೂ, ಕಃ ಎಂಬುದು ವಿಸರ್ಗವನ್ನೂ ಸೂಚಿಸುತ್ತದೆ.

ಸಂಯುಕ್ತಾಕ್ಷರಗಳು

ವ್ಯಂಜನಕ್ಕೆ ವ್ಯಂಜನ ದ್ವಿತ್ವವಾಗಿ ಸೇರಿಕೊಂಡು (ಸ್ವರದ ಸಹಾಯದಿಂದ) ಉಂಟಾಗುವ ಅಕ್ಷರವನ್ನು ಸಂಯುಕ್ತಾಕ್ಷರ ಅಥವಾ ಒತ್ತಕ್ಷರ ಅಥವಾ ದ್ವಿತ್ವಾಕ್ಷರವೆಂದು ಕರೆಯುವರು.

ಸಂಯುಕ್ತಾಕ್ಷರಗಳಲ್ಲಿ ಎರಡು ವಿಧಗಳಿವೆ.

1. ಸಜಾತೀಯ ಸಂಯುಕ್ತಾಕ್ಷರ
2. ವಿಜಾತೀಯ ಸಂಯುಕ್ತಾಕ್ಷರ

ಸಜಾತೀಯ ಸಂಯುಕ್ತಾಕ್ಷರಗಳು

ಒಂದೇ ಜಾತಿಯ ಎರಡು ವ್ಯಂಜನಗಳು ಸ್ವರದ ಸಹಾಯದಿಂದ ಒಂದಕ್ಕೊಂದು ಸೇರಿದರೆ ಸಜಾತೀಯ ಸಂಯುಕ್ತಾಕ್ಷರಗಳಾಗುವುವು.

ಅ+ಮ್+ಮ್+ಅ=ಅಮ್ಮ

ಕ್+ಅ+ನ್+ನ್+ಅ+ಡ್+ಅ=ಕನ್ನಡ

ವಿಜಾತೀಯ ಸಂಯುಕ್ತಾಕ್ಷರಗಳು

ಬೇರೆ ಬೇರೆ ಜಾತಿಯ ಎರಡು ಅಥವಾ ಹೆಚ್ಚು ವ್ಯಂಜನಗಳು ಒಂದಕ್ಕೊಂದು ಕೂಡಿಕೊಂಡು ಉಂಟಾಗುವ ಅಕ್ಷರಗಳು ವಿಜಾತೀಯ ಸಂಯುಕ್ತಾಕ್ಷರ ಎನ್ನಿಸುವುದು.

ಉದಾಹರಣೆಗೆ, ವ್+ಯ್+ಅ = ವ್ಯ

ಸ್+ವ್+ಅ = ಸ್ವ

ಕ್+ರ್+ಅ = ಕ್ರ

ರ್+ಅ+ಕ್+ತ್+ಅ = ರಕ್ತ

ಕ್+ಆ+ವ್+ಯ್+ಅ = ಕಾವ್ಯ

ಅ+ಸ್+ತ್+ರ್+ಅ = ಅಸ್ತ್ರ

ಚ್+ಅ+ಕ್+ರ್+ಅ = ಚಕ್ರ

ರ್+ಆ+ಷ್+ಟ್+ರ್+ಅ = ರಾಷ್ಟ್ರ.

ಭಾಷಾ ಪ್ರೌಢಿಮೆ

ಕೇಳಿ ನೋಡಿ ಅರಿತು ಆನಂದಿಸಿ

1. ನಿಸರ್ಗಕ್ಕೆ ಸಂಬಂಧಿಸಿದ ಕಥೆ ಹಾಡು ಸಂಭಾಷಣೆಗಳನ್ನು ಕೇಳಿ ಸಂತೋಷ ಪಡೆ.
2. ಹಕ್ಕಿಗಳು ಪ್ರಾಣಿಗಳ ಜೀವನ ಕ್ರಮವನ್ನು ಕುರಿತು ದೂರದರ್ಶನದಲ್ಲಿ ನೋಡಿ ಆನಂದಿಸಿ.

ಶಿಕ್ಷಕರಿಂದ ಅರ್ಥ ಕೇಳಿ ಬರೆಯಿರಿ.

ಸಂಶೋಧಕ, ವೈಭವ, ಚೆಲುವ, ಕನ್ನಡ ನುಡಿ, ವೈಜ್ಞಾನಿಕ
ಪ್ರಭೇದ, ಕಾಣಿಕೆ, ಮಹರ್ಷಿ, ನೈಸರ್ಗಿಕ, ಋತುಮಾನ

ಭಾಷಾ ಕ್ರೀಡೆ

I. ಸಂಗ್ರಹಿಸಿ.

ಸಮುದ್ರ – ಈ ಶಬ್ದಕ್ಕೆ ಪೂರಕವಾದ ಶಬ್ದಗಳನ್ನು ಸಂಗ್ರಹಿಸಿ.

II. ಕೆಳಗಿನ ವಾಕ್ಯವನ್ನು ಅರ್ಥ ಕೆಡದಂತೆ ಎರಡು ವಾಕ್ಯಗಳಾಗಿ ಬರೆಯಿರಿ.

1. ಹಲವು ದಿನಗಳಿಂದ ಮಳೆ ಸುರಿಯದೆ ಬೆಳೆಗಳೆಲ್ಲಾ ಬಾಡಿದವು.
2. ರಾಧಾ ಹಾಡನ್ನು ಇಂಪಾಗಿ ಹಾಡಿ ಬಹುಮಾನ ಪಡೆದಳು.

III. ಸರಿಯಾದ ಪದಗಳಿಂದ ಚೌಕಗಳನ್ನು ತುಂಬಿರಿ.



1. 'ನಾರಿ' – ಎಂಬ ಪದದ ಇನ್ನೊಂದು ಹೆಸರು
2. ಪಕ್ಷಿಗಳು ಸ್ಥಳದಿಂದ ಸ್ಥಳಕ್ಕೆ ಹೋಗುವುದು
3. ಮೃಗಾಲಯ ಎನ್ನುವುದರ ಮತ್ತೊಂದು ಹೆಸರು

IV. ಕೆಳಗಿನ ಪದಗಳನ್ನು ಸರಿಯಾದ ಕ್ರಮದಲ್ಲಿ ಜೋಡಿಸಿ ವಾಕ್ಯ ರಚಿಸಿ.

1. ಭಾರತದ ಕುವೆಂಪು ಸಾಹಿತಿಗಳಲ್ಲಿ ಶ್ರೇಷ್ಠ ಒಬ್ಬ ಸಾಹಿತಿ
2. ಮನುಷ್ಯನು ಪ್ರಪಂಚದಲ್ಲಿ ಇಲ್ಲದ ಪಕ್ಷಿಗಳು ಜೀವಿಸಲಾರ
3. ಬೃಹತ್ತಾದ ಚಾಂಡಿಯಾಗೋ ಹಿಡಿದನು ಮೀನನ್ನು
4. ಪಕ್ಷಿ ಶಾಸ್ತ್ರಜ್ಞ ಭಾರತದ ಸಲೀಂ ಆಲಿ ಒಬ್ಬ ಶ್ರೇಷ್ಠ

V. ಈ ಚೌಕಟ್ಟಿನಲ್ಲಿರುವ ಅಕ್ಷರಗಳನ್ನು ಜೋಡಿಸಿ ಗುರುತಿಸಿ ಕೆಳಗೆ ನೀಡಿರುವ ಪ್ರಶ್ನೆಗಳಿಗೆ ಹೊಂದುವ ಪದಗಳನ್ನು ರಚಿಸಿ.

ಪ	ಕ	ದಿ	ರಿ	ಅ	ಹ	ಉ
ಮೂ	ಗ	ಳ	ಒ	ಂ	ಪ	ವ
ಯ	ಶ	ಎ	ಬ	ಅಂ	ಔ	ನ
ಮೀ	ನು	ಇ	ತ	ಖು	ಗು	ಲ
ಅ	ಳು	ರು	ಉ	ಥ	ಸ	ಶಿ

1. ಸಾಗರದಲ್ಲಿ ದೊರೆಯುವುದು.
2. ವರ್ಣಮಾಲೆಯಲ್ಲಿ ಸ್ವರಗಳ ಸಂಖ್ಯೆ.
3. ಚಂದ್ರನ ಮತ್ತೊಂದು ಹೆಸರು.
4. ರಂಗ ಎಂದರೆ ಯಾರು ?
5. ಕನ್ನಡದ ಆದಿ ಕವಿ.

VI. ಕವನ ಬರೆಯಿರಿ.

ಮಳೆ ಬಂತು ಮಳೆ
ಇಳೆಯ ತುಂಬ ನೀರ ಹೊಳೆ

_____ _____ _____

_____ _____ _____

VII. ನನ್ನ ಕರ್ತವ್ಯ.

ಅ) ಪರಿಸರವನ್ನು ಶುಭ್ರವಾಗಿಟ್ಟುಕೊಳ್ಳುತ್ತೇನೆ.
ಆ) ಪರಿಸರವನ್ನು ಸಂರಕ್ಷಿಸುತ್ತೇನೆ.

VIII. ತಿಳಿಯಿರಿ.

ಖಂಡ – Continent
ವಲಸೆ – Migration
ವಾತಾವರಣ – Climate
ಹವಾಮಾನ – Weather

IX. ಅಂತರ್ಜಾಲದಲ್ಲಿ ಹುಡುಕಿ ಮಾಹಿತಿ ತಿಳಿಯಿರಿ.

ಅಳಿವಿನ ಅಂಚಿನಲ್ಲಿರುವ ಪಕ್ಷಿ ಪ್ರಾಣಿಗಳನ್ನು ಹುಡುಕಿ ಪಟ್ಟಿ ಮಾಡಿ.

ಘಟಕ ಎರಡು

ಧರ್ಮಚಿಂತನೆ
ತಿರುಕ್ಕುರಳ್ – ವಚನಗಳು



ಸಂಘ ಜೀವಿಯಾದ ಮಾನವ ನಾಗರಿಕನಾಗಿ ಪ್ರಜ್ಞಾವಂತನಾಗಿ ಬದುಕಲು ಮಾರ್ಗದರ್ಶನ ನೀಡುವುದು ಧಾರ್ಮಿಕ ಗ್ರಂಥಗಳು. ಇಲ್ಲಿ ಜಗತ್ಪ್ರಸಿದ್ಧ ಕೃತಿಗಳಾದ ತಿರುಕ್ಕುರಳ್, ದೇವರ ದಾಸಿಮಯ್ಯ, ಬಸವಣ್ಣ, ಸರ್ವಜ್ಞರ ವಚನಗಳನ್ನೂ, ಆಧುನಿಕ ಶ್ರೇಷ್ಠ ಚಿಂತಕ, ದಾರ್ಶನಿಕರಾದ ಡಿ.ವಿ.ಜಿ.ಯವರ ಕವನಗಳ ಅರ್ಥಗಳನ್ನೂ ತಿಳಿಯೋಣ. ಬದುಕನ್ನು ಸನ್ಮಾರ್ಗದಲ್ಲಿ ದೂಡೋಣ.

ದೇವರ ಸ್ತುತಿ

ಅಗರ ಮುದಲ ಎಳುತ್ತೆಲ್ಲಾಂ ಆದಿ
ಭಗವನ್ ಮುದಟ್ರೇ ಉಲಗು

– ತಿರುವಳ್ಳುವರ್

ಅರ್ಥ : ಅಕ್ಷರಗಳಿಗೆಲ್ಲಾ 'ಅ'ಕಾರವೇ ಮೊದಲಾದಂತೆ ಆದಿ ಭಗವಂತನೇ ಅಖಿಲ ಲೋಕಗಳಿಗೆ ಮೊದಲು.

ಮಾನಿನ ಸ್ತುತಿ

ವಿಣ್ ಇನ್ರು ಪೊಯ್ಪ್ಪಿನ್ ವಿರಿನೀರ್ ವಿಯನುಲಗತ್ತು
ಉಳ್ ನಿನ್ರು ಉಡಟ್ರುಂ ಪಸಿ

– ತಿರುವಳ್ಳುವರ್

ಅರ್ಥ : ಮಳೆಯ ಮಹಿಮೆ. ಮಳೆ ಸಕಾಲದಲ್ಲಿ ಸುರಿದರೆ ಜಗದ ಜೀವಿಗಳಿಗೆಲ್ಲ ನೀಗುವುದು ಹಸಿವು. ಮಳೆ ಸುರಿಯದಿದ್ದರೆ ಇಳೆಯಲ್ಲಿ ತುಂಬುವುದು ಹಸಿವಿನ ಕೂಗು.

ನಿಷ್ಠೆಯುಳ್ಳ ಭಕ್ತ ದಟ್ಟಡವಿಯಲ್ಲಿರ್ದಡೇನು ?
ಅದು ಪಟ್ಟಣವೆಂದೆನಿಸುವುದು
ನಿಷ್ಠೆಯಿಲ್ಲದ ಭಕ್ತ ಪಟ್ಟಣದಲ್ಲಿರ್ದರೂ
ಅದು ನಟ್ಟಡವಿ ಕಾಣಾ ರಾಮನಾಥಾ !

– ದೇವರ ದಾಸಿಮಯ್ಯ

ಅರ್ಥ : ನಿಷ್ಠೆಯುಳ್ಳ ಭಕ್ತನು ಭಯಂಕರವಾದ ಕಾಡಿನಲ್ಲಿದ್ದರೂ ಅದು ಪಟ್ಟಣದಂತೆಯೇ. ಆದರೆ ಡಾಂಭಿಕ ಭಕ್ತನು ಪಟ್ಟಣದಲ್ಲಿದ್ದರೂ ದಟ್ಟಡವಿಗೆ ಸಮ ಎಂದು ತಿಳಿ.

ನುಡಿದರೆ ಮುತ್ತಿನ ಹಾರದಂತಿರಬೇಕು
ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು
ನುಡಿದರೆ ಸ್ಫಟಿಕದ ಸಲಾಕೆಯಂತಿರಬೇಕು
ನುಡಿದರೆ ಲಿಂಗ ಮೆಚ್ಚಿ ಅಹುದಹುದೆನಬೇಕು
ನುಡಿಯೊಳಗಾಗಿ ನಡೆಯದಿದ್ದರೆ
ಕೂಡಲ ಸಂಗಮ ದೇವನೆಂತೊಲಿವನಯ್ಯಾ !

– ಭಕ್ತಿ ಭಂಡಾರಿ ಬಸವಣ್ಣ

ಅರ್ಥ : ನಮ್ಮ ನುಡಿ ಮುತ್ತಿನ ಹಾರ, ಮಾಣಿಕ್ಯದ ದೀಪ್ತಿ ಹಾಗೂ ಸ್ಫಟಿಕದ ಸಲಾಕೆಯಂತಿರಬೇಕು. ಕಾರಣ ಮಾತೇ ಜ್ಯೋತಿರ್ಲಿಂಗ. ನುಡಿದಂತೆ ನಮ್ಮ ನಡೆ ಇರದಿದ್ದರೆ ದೇವರು ಯಾವ ರೀತಿ ಒಲಿಯುತ್ತಾನೆ

ಗುರುಪಾದ ಸೇವೆ ತಾ ದೊರಕೊಂಡಿತಾದರೆ
ಪಿರಿದಪ್ಪ ಪಾಪ ಹರಿವುದು । ಕರ್ಪುರದ
ಗಿರಿಯ ಸುಟ್ಟಂತೆ ಸರ್ವಜ್ಞ

– ತ್ರಿಪದಿ ಚಕ್ರವರ್ತಿ ಸರ್ವಜ್ಞ

ಅರ್ಥ : ಗುರುಸೇವೆ ಪಾವನವಾದುದು. ಅಂತಹ ಸೇವೆಯಿಂದ ಹಿರಿದಾದ ಪಾಪವೂ ಸಹ ಪರಿಹಾರವಾಗುವುದು. ಬೆಂಕಿಯ ಕಿಡಿಗೆ ಕರ್ಪೂರದ ಬೆಟ್ಟವೂ ಸುಡುವಂತೆ ಗುರು ಸೇವೆಯಿಂದ ನಮ್ಮ ಪಾಪ ಮುಕ್ತಿಯಾಗುತ್ತದೆ. 'ಗುರು ಚರಣ ಸೇವನಂ, ಆತ್ಮ ನಿವೇದನಂ' ಎಂಬುದಲ್ಲವೇ ಆರ್ಯೋಕ್ತಿ.

ಪುಸ್ತಕದಿ ದೊರೆತರಿವು ಮಸ್ತಕದಿ ತಳೆದ ಮಣಿ
ಚಿತ್ತದೊಳು ಬೆಳೆತರಿವು ತರು ತಳೆದ ಪುಷ್ಪ
ವಸ್ತು ಸಾಕ್ಷಾತ್ಕಾರ ಅಂತರೀಕ್ಷಣೆಯಿಂದ
ಶಾಸ್ತ್ರಿತನದಿಂದಲ್ಲ ಮಂಕುತಿಮ್ಮ

– ದಾರ್ಶನಿಕ ಡಿ.ವಿ.ಗುಂಡಪ್ಪ

ಅರ್ಥ : ಪುಸ್ತಕದಿಂದ ಕಲಿತ ಅರಿವು ಮಕುಟಕ್ಕೆ ಸೂಡಿದ ಮಣಿಯಾಗಬೇಕು. ಅದೇ ಜ್ಞಾನ ಮನದಲ್ಲಿ ಸ್ಥಿರಗೊಂಡರೆ ಅದು ಪರಿಮಳ ಭರಿತ ಹೂವಿನಂತಾಗುತ್ತದೆ. ಜ್ಞಾನ ಆತ್ಮಸಾಕ್ಷಾತ್ಕಾರಗೊಳ್ಳುವುದು ಮನನದಿಂದಲೇ ಹೊರತು ಶಾಸ್ತ್ರಿತನದಿಂದಲ್ಲ.

ಕವಿ–ಕಾವ್ಯ ಪರಿಚಯ


ತಿರುವಳ್ಳುವರ್

ತಿರುವಳ್ಳುವರ್ ತಮಿಳು ಸಾಹಿತ್ಯದ ಅಗ್ರಮಾನ್ಯ ದಾರ್ಶನಿಕ ಕವಿ. ಇವರ ಕಾಲ ಕ್ರಿ.ಶ. ಎರಡನೆಯ ಶತಮಾನ ಇರಬಹುದೆಂದು ವಿದ್ವಾಂಸರು ತಿಳಿಸುತ್ತಾರೆ. ಇವರು ರಚಿಸಿರುವ 'ತಿರುಕ್ಕುರಳ್' ಕೃತಿ ವಿಶ್ವದ ಪ್ರಸಿದ್ಧ ಕೃತಿಗಳಲ್ಲಿ ಒಂದು. ಇದನ್ನು ತಮಿಳಿನ ಐದನೆಯ ವೇದವೆಂದೂ ಹೇಳುವುದುಂಟು. ಇದೊಂದು ನೀತಿ ಗ್ರಂಥ.


ದೇವರ ದಾಸಿಮಯ್ಯ

ಇವರು ಕನ್ನಡ ನಾಡಿನಲ್ಲಿ ನಡೆದ ಕ್ರಾಂತಿಯ ಮಹಾಪುರುಷ. ಇವರು ಆದ್ಯ ವಚನಕಾರನೆಂದು ಪ್ರಸಿದ್ಧಿ ಪಡೆದಿದ್ದಾನೆ. ಇವರು ನೇಕಾರ ವೃತ್ತಿ ಮಾಡುವ ಕುಟುಂಬಕ್ಕೆ ಸೇರಿದವರು. ರಾಮನಾಥ ಎಂಬುದು ಇವರ ವಚನಗಳ ಅಂಕಿತ. ಇವರ ಕಾಲ ಕ್ರಿ.ಶ. ಹನ್ನೊಂದನೆಯ ಶತಮಾನ. ಸಾಮಾಜಿಕ ಕ್ರಾಂತಿಕಾರಿಯಾದ ವಚನಗಳನ್ನು ಇವರು ರಚಿಸಿದ್ದಾರೆ.

ಹನ್ನೆರಡನೆಯ ಶತಮಾನದಲ್ಲಿ ಕನ್ನಡ ನಾಡಿನಲ್ಲಿ ನಡೆದ ಕ್ರಾಂತಿಯ ನೇತಾರ ಪುರುಷ ಬಸವಣ್ಣನವರು. ಇವರು ಅರಸನಾಗಿದ್ದ ಬಿಜ್ಜಳನ ಆಸ್ಥಾನದಲ್ಲಿ ಭಂಡಾರಿಯಾಗಿದ್ದು, ಸರ್ವೋದಯ ಸಮಾಜದ ನಿರ್ಮಾಣಕ್ಕೆ ದುಡಿದ ಮಹಾನ್ ವ್ಯಕ್ತಿ. ಕೂಡಲ ಸಂಗಮದೇವ ಎನ್ನುವುದು ಇವರ ವಚನಗಳ ಅಂಕಿತ. ಬಸವಣ್ಣನವರ ಕಾಲ ಕ್ರಿ.ಶ. ಹನ್ನೆರಡನೆಯ ಶತಮಾನ. ವೈಚಾರಿಕ ಚಿಂತನೆಯುಳ್ಳ ಹಲವಾರು ವಚನಗಳನ್ನು ಇವರು ರಚಿಸಿದ್ದಾರೆ.



ಬಸವಣ್ಣ

ತ್ರಿಪದಿಯ ಚಕ್ರವರ್ತಿ ಎಂಬ ಹೆಸರು ಗಳಿಸಿದವರು ಸರ್ವಜ್ಞ. ಇವರು ತ್ರಿಪದಿ ಛಂದಸ್ಸಿನಲ್ಲಿ ವಚನಗಳನ್ನು ರಚಿಸಿದ್ದಾರೆ. ಲೋಕಾನುಭವಿಯಾದ ಇವರು ಸಮಾಜದ ಓರೆಕೋರೆಗಳನ್ನು ಸರಿಪಡಿಸಲು ಹವಣಿಸಿದ್ದಾರೆ. ಇವರು ತನ್ನ ವಚನಗಳಲ್ಲಿ ಹೇಳದ ವಿಷಯಗಳೇ ಇಲ್ಲ. ಮೂರು ಸಾಲುಗಳ ತ್ರಿಪದಿಗಳಲ್ಲಿ ಇವರು, ವಾಮನ ತನ್ನ ಮೂರು ಹೆಜ್ಜೆಯಲ್ಲಿ ಇಡೀ ಲೋಕವನ್ನು ಅಳೆದಂತೆ ಲೋಕದ ಎಲ್ಲ ವಿಷಯಗಳನ್ನೂ ಪ್ರತಿಪಾದಿಸಿದ್ದಾರೆ.



ಸರ್ವಜ್ಞ

ಆಧುನಿಕ ಕವಿಗಳಲ್ಲಿ ಡಿ.ವಿ.ಗುಂಡಪ್ಪನವರು ಪ್ರಸಿದ್ಧರು. 'ಮಂಕುತಿಮ್ಮನ ಕಗ್ಗ' ಎನ್ನುವುದು ಇವರ ಅನುಭವದ ಆದರ್ಶ ಕೃತಿ. ಇಲ್ಲಿ ಇವರು ತಮ್ಮ ಜೀವನಾನುಭವನ್ನು ನಿದರ್ಶನಗಳೊಂದಿಗೆ ನಿರೂಪಿಸಿದ್ದಾರೆ. ಕನ್ನಡದ ಭಗವದ್ಗೀತೆ ಎಂದೇ ಈ ಕೃತಿ ಪ್ರಸಿದ್ಧವಾಗಿದೆ. ನಾಲ್ಕು ಸಾಲುಗಳ ಚೌಪದಿಗಳಲ್ಲಿ ಇವರು ಪದ್ಯಗಳನ್ನು ರಚಿಸಿದ್ದಾರೆ.



ಡಿ.ವಿ.ಜಿ.

ಪ್ರಶ್ನೋತ್ತರಗಳು

I. ಸಂಕ್ಷಿಪ್ತವಾಗಿ ಉತ್ತರಿಸಿ.

1. ಮಳೆಯ ಮಹಿಮೆಯನ್ನು ತಿರುವಳ್ಳುವರ್ ಹೇಗೆ ತಿಳಿಸಿದ್ದಾರೆ?
2. ನಿಷ್ಠೆ ಇಲ್ಲದ ಭಕ್ತನು ಪಟ್ಟಣದಲ್ಲಿದ್ದರೂ ಯಾವುದಕ್ಕೆ ಸಮಾನ?
3. ನಮ್ಮ ನುಡಿ ಹೇಗಿರಬೇಕೆಂದು ಬಸವಣ್ಣನವರು ತಿಳಿಸಿದ್ದಾರೆ?
4. ತ್ರಿಪದಿಯ ಚಕ್ರವರ್ತಿ ಯಾರು?
5. ಡಿ.ವಿ.ಜಿ.ಯವರ ಪ್ರಸಿದ್ಧ ಕೃತಿ ಯಾವುದು?

ಭಾಷಾಭ್ಯಾಸ

II. ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ.

1. ಕೂಡಲ ಸಂಗಮದೇವಾ ಎನ್ನುವ ಅಂಕಿತವುಳ್ಳ ವಚನಕಾರ _____

ಅ) ಸರ್ವಜ್ಞ ಆ) ಬಸವಣ್ಣ
ಇ) ಡಿ.ವಿ.ಜಿ ಈ) ದೇವರ ದಾಸಿಮಯ್ಯ

2. ಅರಿವು – ಈ ಪದದ ವಿರುದ್ಧಾರ್ಥ _____

ಅ) ಅಜ್ಞಾನ ಆ) ಜ್ಞಾನ
ಇ) ಮಾನ ಈ) ಯಾನ

III. ಬಿಟ್ಟ ಸ್ಥಳ ತುಂಬಿರಿ.

1. ನುಡಿದರೆ _____ ದಂತಿರಬೇಕು.
2. ತ್ರಿಪದಿಯ ಚಕ್ರವರ್ತಿ _____

IV. ಪ್ರಾಸ ಪದಗಳನ್ನು ಗುರುತಿಸಿ.

ನುಡಿದರೆ ಮುತ್ತಿನ ಹಾರದಂತಿರಬೇಕು.
ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು.

ಘಟಕ
ಮೂರು

ವಿಜ್ಞಾನ–ತಂತ್ರಜ್ಞಾನ



ಕಲಿಕಾ ಉದ್ದೇಶಗಳು

- ಯಾವುದನ್ನು ಏಕೆ, ಹೇಗೆ ಎಂಬುದರ ಮೂಲಕ ತಿಳಿಯಲು ಪ್ರಯತ್ನಿಸುವುದು.
- ವೈಜ್ಞಾನಿಕ ಮನೋಭಾವವನ್ನು ಬೆಳೆಸಿಕೊಳ್ಳುವುದು
- ನಮ್ಮ ದೇಶದ ಭವಿಷ್ಯದ ಉದ್ಧಾರಕ್ಕಾಗಿ ಯಾವುದೆಲ್ಲಾ ಅಗತ್ಯ ಎಂಬುದನ್ನು ಅರಿತುಕೊಳ್ಳುವುದು
- ವೈಜ್ಞಾನಿಕ ಆವಿಷ್ಕಾರದಿಂದ ಆಗುವ ಪರಿಣಾಮಗಳನ್ನು ಚರ್ಚಿಸುವುದು.
- ಬೆಳವಣಿಗೆ ಹೊಂದುತ್ತಿರುವ ವಿಜ್ಞಾನ/ವೈಜ್ಞಾನಿಕ, ತಾಂತ್ರಿಕ ಸಂಬಂಧಗಳನ್ನು ಕುರಿತು ತಿಳಿಯುವ ಆಸಕ್ತಿ ಬೆಳೆಸಿಕೊಳ್ಳುವುದು.
- ಕನ್ನಡದಲ್ಲಿ ತಪ್ಪಿಲ್ಲದೆ ಬರೆಯುವುದು.

ಘಟಕ
ಮೂರು

ವಿಜ್ಞಾನ–ತಂತ್ರಜ್ಞಾನ

ಕಾವ್ಯ ಕಣಜ	:	ವಿಜ್ಞಾನದ ಅಕ್ಷರ ಮಾಲೆ
ಪೂರಕ ಪದ್ಯ	:	ವೈಜ್ಞಾನಿಕ ಆಳ್ವಿಕೆ
ಗದ್ಯ ವಿಹಾರ	:	ನರೇಂದ್ರನ ಗೆಳೆಯ
ಉಪಪಠ್ಯ	:	ಬೆಳಕು ಹರಿಯಿತು
ವ್ಯಾಕರಣ	:	ಅಕ್ಷರಗಳ ಉತ್ಪತ್ತಿ ಸ್ಥಾನಗಳು



ಘಟಕ ಮೂರು

ವಿಜ್ಞಾನದ ಅಕ್ಷರ ಮಾಲೆ

– ಟಿ.ಆರ್.ಕಣ್ಣನ್



ವಿಜ್ಞಾನದ ಅಕ್ಷರ ಮಾಲೆ ಎಂಬುದು ಅಕಾರದಿಂದ ಪ್ರಾರಂಭವಾಗಿ ತಿಳುವಳಿಕೆಯನ್ನು ನೀಡುವ ಸಾಹಿತ್ಯವಾಗಿದೆ. ತಮಿಳಿನ ಅವ್ವೈಯಾರ್ ಮತ್ತು ಸುಬ್ರಮಣ್ಯ ಭಾರತಿಯಾರ್ ಎಂಬ ಕವಿಗಳು ಹೊಸ ಅಕ್ಷರ ಮಾಲೆಯಲ್ಲಿ ಕಾಲಕ್ಕೆ ತಕ್ಕ ಜ್ಞಾನವನ್ನು ನೀಡುತ್ತಾ ಬಂದಿರುತ್ತಾರೆ. ಅಕಾರಾದಿಯಾಗಿ ಜ್ಞಾನವನ್ನು ಕಲಿಯೋಣ. ಅಖಿಲ ಜಗತ್ತನ್ನು ಸಂಶೋಧನೆ ಮಾಡೋಣ. ಎಲ್ಲವನ್ನೂ ವಿಶ್ವದ ಒಳಿತಿಗಾಗಿಯೇ ಬಳಸೋಣ

ಅ : ಅರಿವನ್ನು ಬೆಳೆಸಿಕೋ–ವೈಜ್ಞಾನಿಕ ಚಿಂತನೆಯಲ್ಲಿ ತೊಡಗು
ಆ : ಆಸಕ್ತಿಯಿಂದ ಕಲಿ–ಅನ್ವೇಷಣೆಯಲ್ಲಿ ತೊಡಗು
ಇ : ಇಳೆಯ ಮೌಢ್ಯದಿಂದ ದೂರ ಉಳಿ
ಈ : ಈರ್ಷೆ ಇಲ್ಲದೆ ಕಲಿಯಬಯಸು
ಉ : ಉತ್ಸಾಹದಿಂದ ಕಲಿಕೆಯಲ್ಲಿ ತೊಡಗು
ಊ : ಊಹೆಗೂ ಮೀರಿದ ಜ್ಞಾನವನ್ನು ಅರ್ಜಿಸು





ಋ : ಋತವನ್ನೇ ಹೇಳುವುದು ವಿಜ್ಞಾನ ಎಂದು ತಿಳಿ
ಎ : ಎಂದಿಗೂ ವಿಜ್ಞಾನಕ್ಕೆ ಜಯವುಂಟು
ಏ : ಏಳಿಗೆ ಕಾಣಲಿ ಈ ಜಗವು
ಐ : ಐಕ್ಯತೆಯಲ್ಲಿ ನಂಬಿಕೆ ಇರಲಿ
ಒ : ಒಲುಮೆ ಎಂದಿಗೂ ಬತ್ತದಿರಲಿ
ಓ : ಓದುವುದು ಒಂದು ಕಲೆ ಎಂದು ತಿಳಿ
ಔ : ಔದಾರ್ಯದಿಂದ ಜೀವಿಸು

ಕವಿ–ಕಾವ್ಯ ಪರಿಚಯ

ವಿಜ್ಞಾನದ ಅಕ್ಷರ ಮಾಲೆ ಎಂಬ ಈ ಕವನವನ್ನು ರಚಿಸಿದವರು ಟಿ.ಆರ್.ಕಣ್ಣನ್. ವಿದ್ಯಾರ್ಥಿಗಳಲ್ಲಿ ವಿಜ್ಞಾನದ ಬಗೆಗೆ ಒಲವನ್ನು ಮೂಡಿಸಲು ಈ ಕವನವನ್ನು ರಚಿಸಲಾಗಿದೆ.

ಪದಗಳ ಅರ್ಥ

ಅರಿವು– ಜ್ಞಾನ; ಸಂಶೋಧನೆ–ಅನ್ವೇಷಣೆ; ಮೌಢ್ಯ– ಅಜ್ಞಾನ; ಈರ್ಷೆ– ದುರಾಸೆ; ಋತ–ಸತ್ಯ

ಪ್ರಶ್ನೋತ್ತರಗಳು

I. ಸಂಕ್ಷಿಪ್ತವಾಗಿ ಉತ್ತರಿಸಿ.

1. ವಿಜ್ಞಾನವನ್ನು ಹೇಗೆ ಕಲಿಯಬೇಕು?

II. ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.

1. ಈ ಕವನದ ಸಾರಾಂಶವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

ಭಾಷಾಭ್ಯಾಸ

III. ಕೊಟ್ಟಿರುವ ಪ್ರಶ್ನೆಗಳಿಗೆ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ.

1. ದೈಹಿಕ ರೋಗ ಗುಣಪಡಿಸಲು _____ ಅಗತ್ಯ
   ಅ) ಔಷಧ ಆ) ಸಿಹಿ
   ಇ) ಉಡುಪು ಈ) ಊಟ
2. ಗೆಳೆಯರೊಂದಿಗೆ _____ ಆಡು
   ಅ) ಸ್ನೇಹದಿಂದ ಆ) ಅಸೂಯೆಯಿಂದ
   ಇ) ಒಂಟಿಯಾಗಿ ಈ) ಹಗೆಯಿಂದ
3. 'ಅರಿವನ್ನು' ಈ ಪದವನ್ನು ಬಿಡಿಸಿ ಬರೆದಾಗ
   ಅ) ಅರಿವು+ಅನ್ನು
   ಆ) ಅರಿ+ಅನ್ನು
   ಇ) ಅರಿವ+ಅನ್ನು
   ಈ) ಅರಿತವ+ಅನ್ನು
4. 'ಋತ' ಈ ಪದದ ಅರ್ಥ
   ಅ) ಸತ್ಯ ಆ) ಮಿಥ್ಯ
   ಇ) ನಿತ್ಯ ಈ) ಪಥ್ಯ
5. ಉತ್ಸಾಹ+ಇಂದ ಈ ಪದವನ್ನು ಸೇರಿಸಿ ಬರೆದಾಗ
   ಅ) ಉತ್ಸಾಹದಿಂದ ಆ) ಉತ್ಸಾಹನಿಂದ
   ಇ) ಉತ್ಸಾಹವೆಂದ ಈ) ಉತ್ಸಾಹಬಂದ

IV. ಹೊಂದಿಸಿ ಬರೆಯಿರಿ.

1. ಇಳೆ	–	ಸಂಶೋಧನೆ
2. ಉತ್ಸಾಹ	–	ಸತ್ಯ
3. ಋತ	–	ಭೂಮಿ
4. ಅನ್ವೇಷಣೆ	–	ಸಂತೋಷ

V. ಈ ವಾಕ್ಯಗಳನ್ನು ಸರಿಯಾದ ಕ್ರಮದಲ್ಲಿ ಬರೆಯಿರಿ.

1. ತೊಡಗು ವಿಜ್ಞಾನದ ಚಿಂತನೆಯಲ್ಲಿ
2. ಅರ್ಜಿಸು ಜ್ಞಾನ ಮೀರಿದ ಊಹೆಗೆ
3. ಹೇಳುವುದು ವಿಜ್ಞಾನ ಋತವನ್ನು
4. ತಿಳಿ ಕಲೆ ಎಂಬುದು ಓದು ಒಂದು

ಚಟುವಟಿಕೆ

1. ನಿಮಗೆ ಗೊತ್ತಿರುವ ವೈದ್ಯ ಪದ್ಧತಿಗಳನ್ನು ಹೆಸರಿಸಿ.

ಕಲಿತದ್ದು – ಕಲಿಕೆಯ ಫಲ

I. ವಿಜ್ಞಾನದ ಅಕ್ಷರ ಮಾಲೆಯಲ್ಲಿ ನೀವು ಮೆಚ್ಚಿದ ಸಾಲನ್ನು ಬರೆದು ಆ ವಿಷಯ ಕುರಿತು ನಾಲ್ಕು ಸಾಲುಗಳನ್ನು ನಿಮ್ಮ ಮಾತಿನಲ್ಲಿ ಬರೆಯಿರಿ?

II. ವೈಜ್ಞಾನಿಕ ಚಿಂತನೆಗಳನ್ನು ಪ್ರಚೋದಿಸುವ ಹೇಳಿಕೆಗಳನ್ನು ಬರೆಯಿರಿ.
ಉದಾಹರಣೆ : ವೈಜ್ಞಾನಿಕ ದೃಷ್ಟಿ ಬೆಳೆಸೋಣ, ವಿಶ್ವವ ಗೆಲ್ಲೋಣ

ಪೂರಕ ಪದ್ಯ

ಘಟಕ ಮೂರು

ವೈಜ್ಞಾನಿಕ ಆಳ್ವಿಕೆ



ವೈಜ್ಞಾನಿಕ ಸಂಶೋಧನೆಗೆ ಎಲ್ಲೆ ಎಂಬುದಿಲ್ಲ. ಭೂಮಿಯಲ್ಲಿ, ಗಗನದಲ್ಲಿ, ಕಡಲಲ್ಲಿ, ಗಾಳಿಯಲ್ಲಿ ಎಂದೆಲ್ಲಾ ಸಂಶೋಧನೆ ನಡೆಯುತ್ತಿರುತ್ತದೆ. ಮಾನವನನ್ನು ಹೋಲುವ ನಕಲು ಯಂತ್ರವನ್ನು (ರೋಬೋ) ಮಾನವರೇ ತಯಾರಿಸುತ್ತಾರೆ. ಮಾನವ ದೇಹದ ಅಂಗಾಂಗಗಳನ್ನು ಯಂತ್ರಗಳ ಭಾಗಗಳಂತೆ ಬದಲಾಯಿಸುತ್ತಾರೆ. ಗ್ರಹಗಳು ನಮಗಿನ್ನೇನೂ ದೂರವಿಲ್ಲ. ನಿನ್ನೆಯ ಮಾನವ ನೆನೆಯಲಾಗದ ಹಲವಾರು ಅದ್ಭುತಗಳನ್ನು ಇಂದಿನ ಮಾನವ ಮಾಡಿ ತೋರಿಸುತ್ತಿದ್ದಾನೆ. ಇಂದಿನ ಮನುಷ್ಯರ ಕನಸುಗಳನ್ನು ನಾಳೆ ನಾವು ನನಸಾಗಿಸೋಣ ಬನ್ನಿರಿ!



ಆಳದ ಕಡಲಿಗೆ ಮುಳುಗಿದ ಮನುಜನು
ಅನ್ವೇಷಣೆ ಮಾಡುವ ಛಲದಿಂದ
ಬಗೆ ಬಗೆ ಶೋಧನೆ ಕೈಗೊಂಡು
ಪ್ರಕೃತಿ ಸಿರಿಗೆ ಶರಣೆಂದ



ಕೃತಕ ಉಪಗ್ರಹಗಳ ನಿರ್ಮಿಸಿದ
ಬಾನಿಗೆ ಹಾರಿಸಿ ವ್ಯೂಹ ಕಕ್ಷೆಗೆ ಕೂರಿಸಿದ.
ನೆಲಜಲ ಮಾಹಿತಿ ಸಂಗ್ರಹಿಸಿ
ವಿಶ್ವದ ಜನತೆಗೆ ರವಾನಿಸಿದ





ಮಾಂಸವಿಲ್ಲದ ಮೂಳೆಗಳಿಲ್ಲದ
ಮನುಜನೋರ್ವನ ಸೃಷ್ಟಿಸಿದ
ದಣಿವಿಲ್ಲದೆಯೇ ದುಡಿದ ಈ ಯಂತ್ರ ಮನುಜಗೆ
ರೋಬೋ ಹೆಸರನು ದಯಪಾಲಿಸಿದ



ಮುಂದಿನ ಮನುಜನ ಘನತೆಯ ಸಾರುವೆ
ಗ್ರಹಗಳ ಮೇಲೆ ಗೃಹಗಳ ನಿರ್ಮಿಪನು
ಹಗಲಿರುಳೆನ್ನದೆ ಪಯಣವ ಮಾಡಲು
ಹಲ ಬಗೆ ರಸ್ತೆಯ ನಿರ್ಮಿಪನು



ಪದ್ಯದ ಭಾವಾರ್ಥ

ಮನುಷ್ಯನು ಆಳವಾದ ಕಡಲಿಗೆ ಲಗ್ಗೆ ಹಾಕಿ ಕಡಲ ತಳದಲ್ಲಿರುವ ವಿಭಿನ್ನ ವಸ್ತುಗಳನ್ನು ಕಂಡು ಆಶ್ಚರ್ಯದಿಂದ ಪ್ರಕೃತಿ ಮಾತೆಗೆ ವಂದಿಸುತ್ತಾನೆ.

ಕೃತಕ ಉಪಗ್ರಹಗಳನ್ನು ಬಾನಿಗೆ ಕಳುಹಿಸಿ ಸರಿಯಾದ ಕಕ್ಷೆಯಲ್ಲಿ ನಿಲ್ಲಿಸುತ್ತಾನೆ. ನೆಲ, ಜಲ, ಹವಾಮಾನ ಮಾಹಿತಿಗಳನ್ನು ವಿಶ್ವಕ್ಕೆ ನೀಡಿ ಸಹಕರಿಸುತ್ತಿದ್ದಾನೆ.

ಮಾಂಸಖಂಡಗಳಿಲ್ಲದ ಯಂತ್ರಮಾನವನನ್ನು ನಿರ್ಮಿಸಿ ಅವನಿಗೆ ರೋಬೋ ಎಂದು ನಾಮಕರಣ ಮಾಡಿದ್ದಾನೆ. ಆ ಯಂತ್ರವು ದಣಿವಿಲ್ಲದೆ ದುಡಿಯುವುದನ್ನು ಕಂಡು ಭಾವ ಪರವಶನಾಗುತ್ತಾನೆ.

ಮುಂದಣ ಮನುಜರ ಸಾಧನೆಯನ್ನು ಹೇಳುತ್ತೇನೆ, ಕೇಳು. ಬಾನಿನಲ್ಲಿ ಗ್ರಹಗಳ ಮೇಲೆ ಮನೆಗಳನ್ನು ನಿರ್ಮಿಸಿ ಲೀಲಾಜಾಲವಾಗಿ ವಿಹಾರ ಮಾಡುತ್ತಾನೆ.

ಬಾನನು ಅಳತೆಯ ಮಾಡುವೆವು
ಕಡಲಿನ ಮೀನನ್ನೂ ಅಳೆಯುವೆವು
ಚಂದ್ರಮಂಡಲ ಸೇರುವೆವು ಅಲ್ಲಿನ ಸೊಬಗನು ಸಾರುವೆವು
ಸಂಧಿಗೊಂದಿಗಳ ಗುಡಿಸುವ ಶಾಸ್ತ್ರವ ಕಲಿಯುವೆವು

– ಮಹಾಕವಿ ಭಾರತಿ

ಪ್ರಶ್ನೋತ್ತರಗಳು

I. ಸಂಕ್ಷಿಪ್ತವಾಗಿ ಉತ್ತರಿಸಿ.

1. ಕೃತಕ ಗ್ರಹಗಳನ್ನು ಯಾವುದಕ್ಕೆ ಬಳಸುತ್ತಾರೆ?
2. ಮುಂದಣ ಮನುಜನ ಬಾಳುವೆ ಹೇಗಿರುತ್ತದೆ?

ಭಾಷಾಭ್ಯಾಸ

II. ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ.

1. ಅವನು ಯಾವಾಗಲೂ ಕಷ್ಟ ಪಟ್ಟು _____

   ಅ) ದುಡಿಯುತ್ತಾನೆ ಆ) ಬೆವರುತ್ತಾನೆ
   ಇ) ನೋಡುತ್ತಾನೆ ಈ) ಹೇಳುತ್ತಾನೆ.

2. 'ಕೃತಕ' ಈ ಪದದ ವಿರುದ್ಧಾರ್ಥ

   ಅ) ಧಾರ್ಮಿಕ ಆ) ಸಾಂಸ್ಕೃತಿಕ
   ಇ) ಮಾನಸಿಕ ಈ) ಸ್ವಾಭಾವಿಕ

3. ಹಗಲಿರುಳೆನ್ನದೆ – ಈ ಪದವನ್ನು ಬಿಡಿಸಿ ಬರೆದಾಗ _____

   ಅ) ಹಗಲಿರುಳು+ತನ್ನದೆ
   ಆ) ಹಗಲಿರುಳು+ಎನ್ನದೆ
   ಇ) ಹಗಲಿರು+ಳೆನ್ನದೆ
   ಈ) ಹಗಲಿರುಳು+ಇದೆ

4. 'ನಿರ್ಮಿಸು' – ಪದದ ಅರ್ಥ

   ಅ) ಸೃಷ್ಟಿಸು ಆ) ದಿಟ್ಟಿಸು
   ಇ) ಮುಟ್ಟಿಸು ಈ) ಕಟ್ಟಿಸು

5. ವಿಶ್ವ – ಈ ಪದದ ಅರ್ಥ _____

   ಅ) ಕಡಲು ಆ) ಪ್ರಪಂಚ
   ಇ) ಬಾನು ಈ) ನಕ್ಷತ್ರ

III. ಈ ಪದ್ಯದಲ್ಲಿ ದೀರ್ಘ ಸ್ವರಗಳಿಂದ ಆರಂಭವಾಗಿರುವ ನಾಲ್ಕು ಪದಗಳನ್ನು ಬರೆಯಿರಿ.

ಉದಾಹರಣೆ : ಬಾನಿಗೆ.

ಚಟುವಟಿಕೆ

1. ಯಾವುದಕ್ಕೆಲ್ಲ ಹೊಸ ಅನ್ವೇಷಣೆಗಳು ಅಗತ್ಯ ಎಂಬುದನ್ನು ಕುರಿತು ಚಿಂತಿಸಿ ಬರೆಯಿರಿ.
2. ಇದುವರೆಗೂ ಕಂಡು ಹಿಡಿಯಲಾಗಿರುವ ಉಪಗ್ರಹಗಳು ಯಾವುವು ? ಹೆಸರಿಸಿ.
3. ಭಾರತ ಇತ್ತೀಚೆಗೆ ಉಡಾಯಿಸಿದ ಉಪಗ್ರಹ ಯಾವುದು ?

ಕಲಿತದ್ದು – ಕಲಿಕೆಯ ಫಲ

1. ವೈಜ್ಞಾನಿಕ ಆಲ್ಬಿಕೆ ಕವನದವನ್ನು ಧ್ವನಿಯುಕ್ತವಾಗಿ ಓದಿರಿ.
2. ನಿಮಗೆ ತಿಳಿದಿರುವ ಹಾಗೂ ನಿಮ್ಮನ್ನು ಬೆರಗುಗೊಳಿಸಿದ ವೈಜ್ಞಾನಿಕ ಉಪಕರಣಗಳ ಕುರಿತು ಬರೆಯಿರಿ.
3. ಸೆಲ್‌ಫೋನ್ ಬಳಕೆಯ ಅನುಕೂಲಗಳನ್ನು ಕುರಿತು ತರಗತಿಯಲ್ಲಿ ಚರ್ಚಿಸಿ.

ಘಟಕ ಮೂರು

ನರೇಂದ್ರನ ಗೆಳೆಯ



ಎಲ್ಲಾ ಕ್ಷೇತ್ರಗಳೂ ಯಂತ್ರಮಯವಾಗುತ್ತಿರುವ ಕಾಲ ಇದು. ಮನುಷ್ಯ ಮಾಡುವ ಎಲ್ಲಾ ಚಟುವಟಿಕೆಗಳೂ ಇಂದು ಯಂತ್ರಗಳನ್ನು ಬಳಸಿ ಮಾಡುವ ದಿಸೆಯೆಡೆಗೆ ಸಾಗುತ್ತಿದೆ. ಮನುಷ್ಯನಿಂದ ಮಾಡಲಾಗದ ಕೆಲಸಗಳನ್ನು ಯಂತ್ರಗಳು ಮಾಡುತ್ತಿವೆ. ಮನೆ, ಕಛೇರಿ, ಕಾರ್ಖಾನೆ, ಆಸ್ಪತ್ರೆ, ಮುಂತಾದ ಹಲವು ಸ್ಥಳಗಳಲ್ಲಿ ಯಂತ್ರಗಳು ಕಾರ್ಯ ನಿರತವಾಗಿವೆ. ಲೆಕ್ಕ ಹಾಕುವ ಯಂತ್ರ, ಕಲಿಕೆಯ ಯಂತ್ರ, ಕೆಲಸ ಮಾಡುವ ಯಂತ್ರ, ಕ್ರೀಡಾ ಯಂತ್ರ... ಎಂದು ಎಲ್ಲೆಲ್ಲೂ ಯಂತ್ರಗಳೇ! ಯಂತ್ರ ಜಗತ್ತಿನೊಳಗೆ ನಾವೀಗ ಪ್ರವೇಶಿಸೋಣ ! ಎಲ್ಲವನ್ನೂ ಕಲಿಯೋಣ !

ನರೇಂದ್ರನು ಶಾಲೆ ಮುಗಿಸಿ ಮನೆಗೆ ಹಿಂದಿರುಗಿದನು. ಮನೆಯ ಮುಂದಿನ ಕರೆಗಂಟೆಯನ್ನು ಒತ್ತಿದನು.

'ಯಾರಲ್ಲಿ?'

ಮನೆಯೊಳಗೆ ಹೊಸ ಧ್ವನಿ ! ಅದನ್ನು ಕೇಳಿ ನರೇಂದ್ರ ಆಶ್ಚರ್ಯಭರಿತನಾದನು. 'ಯಾರ ಧ್ವನಿ ಇದು ? ಅಮ್ಮನ ಧ್ವನಿಯಂತಿಲ್ಲವಲ್ಲ' ಎಂದು ಅವನು ಯೋಚಿಸಿದ. ಆಗ ಬಾಗಿಲು ತೆರೆಯಿತು! ಒಳಗೆ ನಿಂತಿದ್ದ ಆಕೃತಿಯನ್ನು ನೋಡಿ ಅವನು ಬೆರಗಾದ.



'ನರೇಂದ್ರ, ವಂದನೆಗಳು! ಒಳಗೆ ಬಾ!' ಎಂದಿತು ಆ ಆಕೃತಿ. ನರೇಂದ್ರ ಸ್ವಲ್ಪ ಭಯದಿಂದ ಭ್ರಾಂತನಾದನು. ಆಗ ಅಲ್ಲಿಗೆ ಬಂದ ಅವನ ತಾಯಿ, 'ನರೇಂದ್ರ, ಯಾಕಲ್ಲಿ ನಿಂತಿರುವೆ? ಭಯ ಬೇಡ. ಒಳಗೆ ಬಾ' ಎಂದರು. ಒಳಗೆ ಬಂದ ನರೇಂದ್ರನು, 'ಅಮ್ಮಾ, ಇದು ಯಾರು?' ಎಂದು ಕೇಳಿದ. 'ಇದು ಯಂತ್ರ ಮನುಜ. ಮಾಹಿತಿ ತಂತ್ರಜ್ಞಾನ ಸಮ್ಮೇಳನಕ್ಕೆ ನಿನ್ನ ತಂದೆ ಹೋಗಿದ್ದರಲ್ಲ, ಅಲ್ಲಿಂದ ಕೊಂಡು ತಂದಿದ್ದಾರೆ. ಇನ್ನು ಇದು ನಮ್ಮ ಮನೆಯ ಒಬ್ಬ ಸದಸ್ಯನೇ' ಎಂದರು ಅವನ ತಾಯಿ.

'ಇದು ನನ್ನೊಂದಿಗೆ ಮಾತನಾಡುತ್ತದೆಯೇ!' ಎಂದು ಕೇಳಿದ ನರೇಂದ್ರ.

'ಹೌದು! ಇದು ಮಾತನಾಡುತ್ತದೆ, ಹಾಡುತ್ತದೆ, ಮನೆಗೆಲಸಗಳನ್ನು ಮಾಡುತ್ತದೆ. ವ್ಯಾಸಂಗದಲ್ಲಿ ನಿನಗೆ ಸಹಾಯ ಮಾಡುತ್ತದೆ. ನನ್ನ ಕಛೇರಿ ಕೆಲಸಗಳಲ್ಲಿ ನೆರವಾಗುತ್ತದೆ. ಹಾಗೆಯೇ ತಂದೆಯವರ ಖರ್ಚು ವೆಚ್ಚಗಳನ್ನು ಮುಗಿಸಿ ಕೊಡುತ್ತದೆ' ಎಂದರು ಅವನ ತಾಯಿ.

'ಹಾಗಾದರೆ ನಾನು ಈ ಯಂತ್ರ ಮನುಜನೊಂದಿಗೆ ಮಾತನಾಡಬಹುದೇ?' ಎಂದು ನರೇಂದ್ರ ಉತ್ಸಾಹದಿಂದ ಕೇಳಿದ.

'ಮಾತನಾಡು, ಭಯಪಡದೆ ಮಾತನಾಡು...'

'ಇಲ್ಲಿ ಬಾ...' ಎಂದ ನರೇಂದ್ರ.

ಯಂತ್ರ ಮಾನವ ಚಲಿಸುತ್ತಾ ಬಂದು ನರೇಂದ್ರನ ಹತ್ತಿರ ಬಂದು ನಿಂತಿತು.

'ನೀನು ಯಾರು?' ಎಂದು ಕೇಳಿದ ನರೇಂದ್ರ.



'ನಾನು ಯಂತ್ರ ಮಾನವ. ನನ್ನನ್ನು ರೋಬೋ ಎಂದು ಕರೆಯುವರು' ಎಂದಿತು.

'ನೀನು ಎಲ್ಲ ಕೆಲಸಗಳನ್ನು ಮಾಡುವುದಾಗಿ ನನ್ನ ತಾಯಿ ಹೇಳಿದರು. ಅದು ನಿನ್ನಿಂದ ಹೇಗೆ ಸಾಧ್ಯ ?'

'ಅದಕ್ಕೆ ನಾನು ನಿರ್ಮಾಣವಾದ ಇತಿಹಾಸವನ್ನು ಮೊದಲು ತಿಳಿದುಕೊಳ್ಳಬೇಕು' ಎಂದು ಹೇಳಿ ರೋಬೋ ಮಾತನ್ನು ಮುಂದುವರೆಸಿತು.



'ನನ್ನ ಸೃಷ್ಟಿಗೆ ಮೊದಲೇ ನನ್ನ ಕುರಿತಾದ ಕಲ್ಪನೆ ಮನುಷ್ಯನ ಬಳಿ ಇದ್ದಿತು. ಕಾರಲ್ ಕೆಪೆಕ್ (*Karel capek*) ಎಂಬುವವರು 'ಜೆಕ್' ದೇಶಕ್ಕೆ ಸೇರಿದ ಒಬ್ಬ ನಾಟಕಕಾರ. ಈತ 1920ರಲ್ಲಿ ಒಂದು ನಾಟಕವನ್ನು ಬರೆದರು. ಅದರಲ್ಲಿ ರೋಬೋಟ್ ಎಂಬ ಶಬ್ದವನ್ನು ಮೊಟ್ಟ ಮೊದಲ ಬಾರಿಗೆ ಬಳಸಿದರು. ರೋಬೋ ಎಂಬ ಶಬ್ದಕ್ಕೆ ಸೇವಕ ಎಂದರ್ಥವಿದೆ. ಒಂದು ಕಾರ್ಖಾನೆಯಲ್ಲಿ ರೋಬೋಗಳು ಕೆಲಸ ಮಾಡುವುದಾಗಿ ಆ ನಾಟಕದಲ್ಲಿ ಪಾತ್ರಗಳನ್ನು ಅಳವಡಿಸಿದ್ದರು. ಹೀಗೆ ರೋಬೋ ಎಂಬ ಶಬ್ದ ಬಳಕೆಗೆ ಬಂದಿತು.

ಮನುಷ್ಯರು ತಮ್ಮ ಕೆಲಸವನ್ನು ಸುಲಭವಾಗಿ ಮಾಡಲು ಮೊದಲು ಯಂತ್ರಗಳನ್ನು ಕಂಡು ಹಿಡಿದರು. ಅವುಗಳನ್ನು ಚಾಲನೆಗೊಳಿಸಲು ಮಾನವ ಸಂಪನ್ಮೂಲದ ಅಗತ್ಯವಿತ್ತು. ಈ ಸಮಸ್ಯೆಗಳಿಗೆ ಪರಿಹಾರವಾಗಿ ಕಂಡು ಹಿಡಿಯಲ್ಪಟ್ಟವುಗಳೇ ಸ್ವಯಂ ಚಾಲಿತ ಯಂತ್ರಗಳು.

ಸ್ವಯಂ ಚಾಲಿತ ಯಂತ್ರಗಳೆಂದರೆ ಏನೆಂದು ಗೊತ್ತೇ? ಸೂಕ್ಷ್ಮವಾದ ಕಠಿಣವಾದ ಒಂದೇ ಮಾದರಿಯ ಕೆಲಸಗಳನ್ನು ಮನುಷ್ಯರಿಗಿಂತ ತ್ವರಿತವಾಗಿ ತಾವೇ ಮಾಡಿ ಮುಗಿಸುವ ಯಂತ್ರಗಳೇ ಸ್ವಯಂ ಚಾಲಿತ ಯಂತ್ರಗಳು. ಒಂದೊಂದು ಸ್ವಯಂ ಚಾಲಿತ ಯಂತ್ರಗಳೂ ಕಾರ್ಯ ನಿರ್ವಹಿಸಲು ಒಂದು ಗಣಕ ಯಂತ್ರವನ್ನು ಅದರೊಳಗೆ ಅಳವಡಿಸಲಾಗಿರುತ್ತದೆ. ಸ್ವಯಂ ಚಾಲಿತ ಯಂತ್ರಗಳ ಕಾರ್ಯ ಚಟುವಟಿಕೆಗಳನ್ನು ಈ ಯಂತ್ರಗಳು ನಿಯಂತ್ರಿಸುತ್ತವೆ.



ಈ ರೀತಿಯಲ್ಲಿರುವ ಸ್ವಯಂ ಚಾಲಿತ ಯಂತ್ರಗಳನ್ನು ಇಂದು ಹಲವು ಕಾರ್ಖಾನೆಗಳಲ್ಲಿ ಬಳಸಲಾಗುತ್ತಿದೆ. ಇವುಗಳು ಬಳಸಲ್ಪಡುವ ಸ್ಥಳಕ್ಕೆ ಅನುಗುಣವಾಗಿ ಕೈಗಳು, ಚಲಿಸುವ ಕಾಲುಗಳು, ಸನ್ನಿವೇಶವನ್ನು ಗ್ರಹಿಸಲು ಅಗತ್ಯವಾದ ಸೆನ್ಸಾರ್ (*Sensors*) ಗಳನ್ನು ಅಳವಡಿಸಲಾಗಿರುತ್ತದೆ' ಎಂದು ಹೇಳಿ ಅದು ಮಾತನಾಡುವುದನ್ನು ನಿಲ್ಲಿಸಿತು.



'ನಾನು ಅವುಗಳನ್ನು ನೋಡಬೇಕಲ್ಲ' ಎಂದನು ನರೇಂದ್ರ.



'ಬಾ, ತೋರಿಸುತ್ತೇನೆ' ಎಂದು ಹೇಳಿದ ಯಂತ್ರ ಮಾನವ ಗಣಕವನ್ನು ಚಾಲನೆ ಮಾಡತೊಡಗಿತು. ಗಣಕ ತೆರೆಯಲ್ಲಿ ದೃಶ್ಯಗಳು ಕಂಡು ಬಂದವು.

ಇವು ಕಾರ್ಖಾನೆಗಳಲ್ಲಿ ಬಳಸಲ್ಪಡುವ ಸ್ವಯಂ ಚಾಲಿತ ಯಂತ್ರಗಳು. ಉತ್ಪಾದನೆ ಮಾಡುವುದು, ದುರಸ್ತಿ ಮಾಡುವುದು ಮುಂತಾದ ಕೆಲಸಗಳನ್ನು ಇವು ಮಾಡುತ್ತವೆ. 'ಈ ದೃಶ್ಯವನ್ನು ನೋಡು ನರೇಂದ್ರ!' ಎಂದಿತು ಯಂತ್ರ ಮಾನವ.

'ಇದು ಏನು ಮಾಡುತ್ತಿದೆ ? ರೋಗಕ್ಕೆ ಔಷಧಿ ನೀಡುವಂತಿದೆಯಲ್ಲಾ?' ಎಂದು ಕೇಳಿದ ನರೇಂದ್ರ.

'ಹೌದು, ನರೇಂದ್ರ! ಇವು ವೈದ್ಯಕೀಯ ಕ್ಷೇತ್ರದಲ್ಲಿ ರೋಗ ಲಕ್ಷಣಗಳನ್ನು ಕಂಡು ಹಿಡಿಯಲು ಸಹಕರಿಸುತ್ತವೆ. ಚಿಕಿತ್ಸೆ ಮಾಡಲು ಇವುಗಳನ್ನು ಬಳಸಲಾಗುತ್ತಿದೆ. ಕ್ಲಿಷ್ಟವಾದ ಶಸ್ತ್ರಚಿಕಿತ್ಸೆ ಮಾಡುವ ರೋಬೋಗಳೂ ಇವೆ.

'ಹೌದಾ! ಆಮೇಲೆ...?' ಎಂದು ಕೇಳಿದ ನರೇಂದ್ರ.

'ಬೇರೆ ಗ್ರಹಗಳಿಗೆ ಹೋಗಿ ಸಂಶೋಧನೆ ನಡೆಸಲು ಕೃತಕ ಉಪಗ್ರಹಗಳನ್ನು ಉಡಾಯಿಸಲು ರೋಬೋಗಳನ್ನು ಬಳಸಲಾಗುತ್ತಿದೆ. ಪ್ರಪಂಚದಲ್ಲಿ ಮನುಷ್ಯರು ಹೋಗಲು ಸಾಧ್ಯವಾಗದ ಸ್ಥಳಗಳು ಹೆಚ್ಚಾಗಿವೆ. ಬೃಹತ್ ಸಾಗರಗಳ ಆಳ, ತಾಪಮಾನ, ಹಿಮಪ್ರದೇಶಗಳ ಅಡಿಯಲ್ಲಿರುವ ಧೃವ ಪ್ರದೇಶಗಳು ಮೊದಲಾದೆಡೆಗಳಿಗೆ ರೋಬೋಗಳನ್ನು ಅನ್ವೇಷಣಾ ಕೆಲಸಗಳಿಗಾಗಿ ಕಳುಹಿಸಲಾಗಿದೆ.

'ಆದರೆ ಇವು ಆಕಾರದಲ್ಲಿ ನಿನ್ನಂತಿಲ್ಲವಲ್ಲ ?' ಎಂದು ಕೇಳಿದ ನರೇಂದ್ರ.

'ತನ್ನ ಕೆಲಸಗಳನ್ನು ಸುಲಭವಾಗಿ ಮಾಡಲು ಪ್ರಾರಂಭದಲ್ಲಿ ಸ್ವಯಂ ಚಾಲಿತಯಂತ್ರಗಳನ್ನು ಮಾನವನು ತಯಾರಿಸಿದ. ನಂತರ ತನ್ನಂತೆ ಚಿಂತಿಸಿ ಕಾರ್ಯ ನಿರ್ವಹಿಸುವ ಸ್ವಯಂ ಚಾಲಿತ ಯಂತ್ರಗಳನ್ನು ತಯಾರಿಸಲು ಪ್ರಯತ್ನಿಸಿದ. ಆ ಪ್ರಯತ್ನಗಳ ಫಲವಾಗಿ ತಯಾರಾದವರೇ ನನ್ನಂತಹ ಯಂತ್ರಮಾನವರು. ಮನುಷ್ಯರಂತೆಯೇ ನಮಗೂ ತಲೆ ದೇಹ ಕೈಕಾಲುಗಳಿರುತ್ತವೆ.

'ಹಾಗಾದರೆ ಯಂತ್ರ ಮನುಷ್ಯರಿಗೂ ಸ್ವಯಂ ಚಾಲಿತ ಯಂತ್ರಗಳಿಗೂ ಇರುವ ವ್ಯತ್ಯಾಸ ಏನು?'

'ಅದುವೇ ನಮ್ಮಲ್ಲಿರುವ ಕೃತಕ ಸೂಕ್ಷ್ಮಜ್ಞಾನ...'

'ಹಾಂ... ಕೃತಕ ಸೂಕ್ಷ್ಮ ಜ್ಞಾನ... ಹಾಗೆಂದರೆ?'

'ಮನುಷ್ಯರಾದ ನೀವು ನಿಮ್ಮ ಸೂಕ್ಷ್ಮಜ್ಞಾನವನ್ನು ಬಳಸುವಿರಲ್ಲವೇ. ನಾವೂ ನಿಮ್ಮಂತೆ ಚಟುವಟಿಕೆಗಳಲ್ಲಿ ತೊಡಗಲು ನಮಗಾಗಿ ಕೆಲವು ನಿಬಂಧನೆಗಳನ್ನು ತಯಾರಿಸಿಡಲಾಗಿದೆ. ಈ ಕೃತಕ ಜ್ಞಾನದಿಂದ ನಾವು ಕಾರ್ಯ ನಿರ್ವಹಿಸುತ್ತೇವೆ'

'ನಿಜವಾಗಿಯೂ ಕೃತಕ ಸೂಕ್ಷ್ಮ ಜ್ಞಾನದಿಂದ ಮನುಷ್ಯರಂತೆ ಕಾರ್ಯ ನಿರ್ವಹಿಸಬಹುದೇ?'

ತಿಳಿದುಕೊಳ್ಳೋಣ

ಸೋಬಿಯಾ





'ಸಾಧ್ಯ. ಕೃತಕ ಸೂಕ್ಷ್ಮ ಜ್ಞಾನದ ಶಕ್ತಿಯನ್ನು ನೀನು ತಿಳಿದುಕೊಳ್ಳ ಬಯಸುವೆಯಾ? ಒಂದು ಘಟನೆಯನ್ನು ವಿವರಿಸುತ್ತೇನೆ ಕೇಳು. 1997ರ ಮೇ ತಿಂಗಳಿನಲ್ಲಿ ಒಂದು ಚದುರಂಗ ಆಟದ ಸ್ಪರ್ಧೆ ನಡೆಯಿತು. ಆ ಪಂದ್ಯದಲ್ಲಿ ವಿಶ್ವ ಚದುರಂಗದಲ್ಲಿ ಜಯ ಗಳಿಸಿದ ಕೇರಿಕೇಸ್ ಪುರೋವ್ ಎಂಬುವವರು ಭಾಗವಹಿಸಿದರು. ಐ.ಬಿ.ಎಂ. ಎಂಬ ಸಂಸ್ಥೆ ಪ್ರಾರಂಭಿಸಿದ ಡೀಪ್ ಬ್ಲೂ (Deep blue) ಎಂಬ ಉತ್ಕೃಷ್ಟ ಗಣಕಯಂತ್ರ (Super Computer) ಅವರೊಂದಿಗೆ ಸ್ಪರ್ಧೆಗಿಳಿಯಿತು.

ಪಂದ್ಯದ ಫಲಿತಾಂಶವೇನು ಗೊತ್ತೇ? ಹೌದು, ನಿನ್ನ ಗಣನೆ ಸರಿಯಾದುದು. ಪಂದ್ಯದಲ್ಲಿ ಡೀಪ್ ಬ್ಲೂವೇ ವಿಜಯ ಪತಾಕೆ ಹಾರಿಸಿತು!'

'ನನ್ನಿಂದ ನಂಬಲಾಗುತ್ತಿಲ್ಲ!

'ಹಾಗಾದರೆ ನೀನು ಚದುರಂಗದಾಟ ಆಡುವೆಯಾ?'

'ಓ! ಆಡುತ್ತೇನೆ'



'ನನ್ನಂತಹ ಯಂತ್ರ ಮನುಜರು ಉಪಹಾರ ಮಂದಿರಗಳಲ್ಲಿ ಉಪಚಾರಿಕೆ ಕೆಲಸಗಳನ್ನು ಮಾಡುತ್ತಿದ್ದಾರೆ. ಸಾರ್ವಜನಿಕ ಸ್ಥಳಗಳಲ್ಲಿ ಮಾರ್ಗಸೂಚಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಅಣುಬಾಂಬುಗಳ ಶೋಧನಾ ಕಾರ್ಯದಲ್ಲೂ ತೊಡಗಿದ್ದಾರೆ. ನಿನಗೆ ಇನ್ನೂ ಒಂದು ಆಶ್ಚರ್ಯದ ಸಂಗತಿಯನ್ನು ಹೇಳುವೆನು. ಕೇಳುವೆಯಾ...!'

'ಕೇಳುತ್ತೇನೆ, ಹೇಳು!' ಎಂದ ನರೇಂದ್ರ ಉತ್ಸಾಹದಿಂದ.

'ಜಗತ್ತಿನಲ್ಲಿ ಮೊದಮೊದಲು ಸೌದಿ ಅರೇಬಿಯಾ ಒಂದು ರೋಬೋಗೆ ನಾಗರಿಕ ಸ್ಥಾನವನ್ನು ಕೊಟ್ಟಿದೆ. ಆ ರೋಬೋದ ಹೆಸರು 'ಸೋಬಿಯಾ'. ಜೊತೆಗೆ ಐಕ್ಯ ರಾಷ್ಟ್ರಗಳ ಸಂಸ್ಥೆಯು 'ಹೊಸತುಗಳ ಜಯಕಾರ' ಎಂಬ ಬಿರುದನ್ನೂ ಸೋಬಿಯಾಗೆ ನೀಡಿದೆ.

'ಜೀವವಿಲ್ಲದ ಒಂದು ವಸ್ತುವಿಗೆ ಐಕ್ಯ ರಾಷ್ಟ್ರಗಳ ಸಂಸ್ಥೆಯು ಪ್ರಶಸ್ತಿ ನೀಡಿರುವುದು ಇದೇ ಮೊದಲು. ನನ್ನಂತಹ ಯಂತ್ರಮಾನವನಿಗೆ ಈ ಗೌರವ ದೊರೆತಿರುವುದು ನಿಜಕ್ಕೂ ಅತ್ಯಂತ ಹರ್ಷದಾಯಕ'



'ಹೀಗೂ ನಡೆಯುವುದುಂಟೇ?'

'ಮುಂದಣ ದಿನಗಳಲ್ಲಿ 'ಸೋಬಿಯಾ'ದಂತಹ ಹಲವಾರು ಯಂತ್ರ ಮಾನವರು ಸೃಷ್ಟಿಯಾಗುತ್ತಾರೆ. ಅವರೆಲ್ಲರೂ ಮಾನವ ಕುಲದ ಅಭಿವೃದ್ಧಿಗೆ ನೆರವಾಗುವರು' ಎಂದಿತು ಯಂತ್ರ ಮಾನವ.

'ನಿಮ್ಮನ್ನು ಕುರಿತು ತಿಳಿದುಕೊಂಡಿದ್ದು ನನಗೆ ಬಹಳ ಆನಂದವನ್ನು ನೀಡಿದೆ'

'ಸರಿ, ನನ್ನೊಂದಿಗೆ ಚದುರಂಗ ಆಡಲು ಬರುವೆಯಾ?' ಎಂದು ಕೇಳಿದ ನರೇಂದ್ರ.

ಯಂತ್ರಮಾನವ ತಲೆಯನ್ನು ಅಲುಗಾಡಿಸಿತು. ಅದರೊಂದಿಗೆ ಚದುರಂಗ ಆಡಲು ನರೇಂದ್ರ ಸಿದ್ಧವಾದ.

ಪ್ರಶ್ನೋತ್ತರಗಳು

I. ಸಂಕ್ಷಿಪ್ತವಾಗಿ ಉತ್ತರಿಸಿ.

1. 'ರೋಬೋ' ಎಂಬ ಶಬ್ದವನ್ನು ಮೊದಲು ಯಾರು ಉಪಯೋಗಿಸಿದರು ?
2. 'ಡೀಪ್ ಬ್ಲೂ' – ಉತ್ಕೃಷ್ಟ ಗಣಕ ಯಂತ್ರದ ಬಗ್ಗೆ ಬರೆಯಿರಿ.

II. ನಾಲ್ಕು ಅಥವಾ ಐದು ಸಾಲುಗಳಲ್ಲಿ ಉತ್ತರಿಸಿ.

1. ಯಂತ್ರ ಮಾನವನ ಉಪಯೋಗಗಳನ್ನು ವಿವರಿಸಿ.
2. ಧ್ರುವ ಪ್ರದೇಶಗಳಲ್ಲಿ ಸಂಶೋಧನೆಗಾಗಿ ಯಂತ್ರ ಮಾನವನನ್ನು ಕಳುಹಿಸುವ ಉದ್ದೇಶವೇನು ?

ಭಾಷಾಭ್ಯಾಸ

III. ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ.

1. ಸೂಕ್ಷ್ಮವಾಗಿ ಚಿಂತಿಸಿ ಕಲಿಯುವುದು _____

   ಅ) ಗ್ರಂಥ ಜ್ಞಾನ ಆ) ಸೂಕ್ಷ್ಮಜ್ಞಾನ
   ಇ) ಅಜ್ಞಾನ ಈ) ಅನುಭವ ಜ್ಞಾನ.
2. ಸ್ವಯಂ ಚಾಲಿತ ಯಂತ್ರಗಳು ಸ್ವತಂತ್ರವಾಗಿ ಕಾರ್ಯ ನಿರ್ವಹಿಸಲು ಅದರಲ್ಲಿ ಅಳವಡಿಸಲಾಗಿರುವುದು _____

   ಅ) ಗಣಕಯಂತ್ರ ಆ) ಬ್ಯಾಟರಿ
   ಇ) ಸೆಲ್‌ಫೋನ್ ಈ) ದೂರದರ್ಶನ
3. ಕಾರ್ಖಾನೆಯಲ್ಲಿ – ಈ ಪದವನ್ನು ಬಿಡಿಸಿದಾಗ _____

   ಅ) ಕಾರ್ಖಾನೆ+ಯಲ್ಲಿ ಆ) ಕಾರ್ಖಾನೆ+ಎಲ್ಲಿ
   ಇ) ಕಾರ್ಖಾನೆ+ಅಲ್ಲಿ ಈ) ಕಾರ್ಖಾನೆ+ಇಲ್ಲಿ
4. ಜೀವ+ಇಲ್ಲದ – ಈ ಪದವನ್ನು ಸೇರಿಸಿ ಬರೆದಾಗ _____

   ಅ) ಜೀವಇಲ್ಲದ ಆ) ಜೀವಿಲ್ಲದ
   ಇ) ಜೀವವಿಲ್ಲದ ಈ) ಜೀವವಲ್ಲದ
5. ಆಶ್ಚರ್ಯ ಪದದ ಅರ್ಥ _____

   ಅ) ಅದ್ಭುತ ಆ) ಅಚ್ಚರಿ
   ಇ) ಐಶ್ವರ್ಯ ಈ) ಅಕ್ಷಯ
6. ಕೃತಕ – ಈ ಪದದ ವಿರುದ್ಧ ಪದ _____

   ಅ) ಸ್ವಾಭಾವಿಕ ಆ) ಧಾರ್ಮಿಕ
   ಇ) ಬೌದ್ಧಿಕ ಈ) ಕಾರಣಿಕ
7. ಜ್ಞಾನ – ಈ ಪದದ ವಿರುದ್ಧ ಪದ _____

   ಅ) ವಿಜ್ಞಾನ ಆ) ಅಜ್ಞಾನ
   ಇ) ದಿವ್ಯಜ್ಞಾನ ಈ) ಧ್ಯಾನ

IV. ಬಿಟ್ಟ ಸ್ಥಳವನ್ನು ತುಂಬಿರಿ.

1. ಮನುಷ್ಯ ತನ್ನ ಕೆಲಸವನ್ನು ಸುಲಭಗೊಳಿಸಲು ಕಂಡು ಹಿಡಿದವುಗಳು _____
2. ಸ್ವಯಂಚಾಲಿತಯಂತ್ರಗಳಿಗೂ, ಯಂತ್ರಮನುಜನಿಗೂ ಇರುವ ವ್ಯತ್ಯಾಸ _____
3. ವಿಶ್ವ ಚದುರಂಗ ಪದ್ಯದಲ್ಲಿ ಜಯ ಗಳಿಸಿದ ಉತ್ಕೃಷ್ಟ ಗಣಕ ಯಂತ್ರದ ಹೆಸರು _____
4. 'ಸೋಬಿಯಾ' ರೋಬೋವಿಗೆ ನಾಗರಿಕ ಸ್ಥಾನ ನೀಡಿರುವ ದೇಶ _____

V. ಈ ಪದಗಳನ್ನು ಬಳಸಿ ಸ್ವಂತ ವಾಕ್ಯಗಳನ್ನು ರಚಿಸಿರಿ.

1. ಕಾರ್ಖಾನೆ : _____
2. ಉತ್ಪಾದನೆ : _____
3. ಸಂಶೋಧನೆ : _____
4. ಕೃತಕ : _____
5. ಸೂಕ್ಷ್ಮಜ್ಞಾನ : _____

ಚಟುವಟಿಕೆ

1. ನಿಮ್ಮಲ್ಲಿ ಒಂದು ಯಂತ್ರ ಮಾನವನಿದ್ದರೆ ಅದನ್ನು ನೀವು ಯಾವ ಯಾವ ಕೆಲಸಕ್ಕೆ ಬಳಸಿಕೊಳ್ಳುತ್ತೀರಿ ಎಂಬುದನ್ನು ಚಿಂತಿಸಿ ಬರೆಯಿರಿ.

ಕಲಿತದ್ದು – ಕಲಿಕೆಯ ಫಲ

ನಿಮ್ಮನ್ನು ಒಬ್ಬ ಯಂತ್ರಮಾನವನೆಂದು ಪರಿಭಾವಿಸಿಕೊಂಡು ನಿಮ್ಮ ಗೆಳೆಯರೊಂದಿಗೆ ವಿವಾದಿಸಿ.

ಉಪಪಠ್ಯ

ಘಟಕ ಮೂರು

ಬೆಳಕು ಹರಿಯಿತು

(ಡಾ.ಎ.ಪಿ.ಜೆ. ಅಬ್ದುಲ್ ಕಲಾಂ ಅವರೊಂದಿಗೆ ಸಂದರ್ಶನ)



ಮಕ್ಕಳೊಂದಿಗೆ ವಿದ್ಯಾರ್ಥಿಗಳೊಂದಿಗೆ ಅಪರಿಮಿತ ಪ್ರೀತಿ ತೋರಿಸುತ್ತಿದ್ದವರು ಡಾ. ಎ.ಪಿ.ಜೆ. ಅಬ್ದುಲ್ ಕಲಾಂ ಅವರು. ವಿದ್ಯಾರ್ಥಿಗಳು ತಮ್ಮ ಜೀವನದಲ್ಲಿ ಮುಂದುವರೆಯಲು ಹಲವು ರೀತಿಯ ಮಾರ್ಗದರ್ಶನ ನೀಡಿದವರು. ಭವಿಷ್ಯದ ಬಗೆಗೆ ಕನಸನ್ನು ಕಂಡು ಅದು ನನಸಾಗಲು ಕನಸು ಕಾಣುತ್ತಿದ್ದವರು. ವಿದ್ಯಾರ್ಥಿಗಳೊಂದಿಗೆ ಮುಕ್ತವಾಗಿ ಮಾತನಾಡುವುದೆಂದರೆ ಅವರಿಗೆ ಬಹಳ ಇಷ್ಟ. ಅವರನ್ನು ಭೇಟಿಯಾಗಿ ಸಂದರ್ಶನ ನಡೆಸುವುದೆಂದರೆ ಸಂತೋಷದ ಸಂಗತಿ ತಾನೇ! ಬನ್ನಿ, ಅವರನ್ನು ಭೇಟಿಯಾಗೋಣ! ವಿಜ್ಞಾನವನ್ನು ಕಲಿಯೋಣ.

ಸ್ಥಳ : ಮಾಹಿತಿ ತಂತ್ರಜ್ಞಾನ ವಸ್ತು ಪ್ರದರ್ಶನ.

ವಿದ್ಯಾರ್ಥಿಗಳು ಮಾಹಿತಿ ತಂತ್ರಜ್ಞಾನ ವಸ್ತು ಪ್ರದರ್ಶನಾಲಯದಲ್ಲಿರುವ ಪ್ರತಿಯೊಂದನ್ನೂ ಒಂದೊಂದಾಗಿ ವೀಕ್ಷಿಸುತ್ತಾ ಬರುತ್ತಿದ್ದಾರೆ. ಆಗ ಅಲ್ಲಿದ್ದ ಅಬ್ದುಲ್ ಕಲಾಂ ಅವರ ಹೆಸರಿನಲ್ಲಿರುವ ರಂಗಮಂದಿರ ಅವರ ಕಣ್ಣಿಗೆ ಬಿತ್ತು. ಅದು ಅವರನ್ನು ಬಹುವಾಗಿ ಸೆಳೆಯಿತು. ರಂಗಮಂದಿರದೊಳಗೆ ಉತ್ಸಾಹದಿಂದ ಪ್ರವೇಶಿಸಿದರು. ಅಲ್ಲಿ ಅಬ್ದುಲ್ ಕಲಾಂ ಅವರ ಭಾವಚಿತ್ರಗಳನ್ನೂ ಪ್ರದರ್ಶನಕ್ಕಿಡಲಾಗಿತ್ತು. ಅವುಗಳನ್ನು ನೋಡಿದ ನಂತರ ಅಲ್ಲಿ ಒಂದು ದೊಡ್ಡ ಪರದೆಯಿರುವುದನ್ನು ನೋಡಿದರು. ಆಗ.....

ರಂಗಮಂದಿರದ ಉಸ್ತುವಾರಿ ನೋಡಿಕೊಳ್ಳುತ್ತಿದ್ದ ವ್ಯಕ್ತಿ, 'ವಿದ್ಯಾರ್ಥಿಗಳೇ, ಇಲ್ಲಿ ಬನ್ನಿ' ಎಂದು ಕರೆದ. ವಿದ್ಯಾರ್ಥಿಗಳೆಲ್ಲರೂ ವಿಶಾಲವಾದ ಪರದೆಯ ಮುಂದೆ ಬಂದು ಸೇರಿದರು.

ರಂಗ ಮಂದಿರದ ಉಸ್ತುವಾರಿ	:	ನೀವು ಅಬ್ದುಲ್ ಕಲಾಂ ಅವರನ್ನು ಭೇಟಿಯಾಗಬೇಕೇ?
ವಿದ್ಯಾರ್ಥಿಗಳು	:	ಕಲಾಂ ಅವರನ್ನು ಭೇಟಿಯಾಗುವುದೇ? ಹೇಗೆ?
ರಂಗ ಮಂದಿರದ ಉಸ್ತುವಾರಿ	:	ಸ್ವಲ್ಪ ತಾಳಿರಿ. ಕಲಾಂ ಅವರು ಇದೋ ಬರುತ್ತಿದ್ದಾರೆ. (ಕೆಲವು ಕ್ಷಣಗಳ ನಂತರ ಪರದೆಯ ಮೇಲೆ ಅಬ್ದುಲ್ ಕಲಾಂ ಅವರು ಪ್ರತ್ಯಕ್ಷರಾದರು)
ವಿದ್ಯಾರ್ಥಿಗಳು		ಮಾನ್ಯ ಕಲಾಂ ಅವರು ನಮ್ಮ ಪ್ರಶ್ನೆಗಳಿಗೆ ಉತ್ತರ ನೀಡುತ್ತಾರೆಯೇ?
ರಂಗ ಮಂದಿರದ ಉಸ್ತುವಾರಿ	:	ಖಂಡಿತವಾಗಿ ಉತ್ತರ ನೀಡುತ್ತಾರೆ.
ವಿದ್ಯಾರ್ಥಿಗಳು	:	ನಾನು ಕೇಳುತ್ತೇನೆ... ನಾನು ಕೇಳುತ್ತೇನೆ... ನಾನು ಮೊದಲು ಕೇಳುತ್ತೇನೆ... ಏನು ಕೇಳಿದರೂ ಉತ್ತರ ಕೊಡುತ್ತಾರೇನು? (ಅಲ್ಲಿ ಒಂದೇ ಗದ್ದಲ)
ಕಲಾಂ ಅವರ ಧ್ವನಿ	:	ಮಕ್ಕಳೇ ನಮಸ್ಕಾರ.
ರಂಗ ಮಂದಿರದ ಉಸ್ತುವಾರಿ	:	ಸಮಾಧಾನದಿಂದಿರಿ. ನಿಮ್ಮ ಪ್ರಶ್ನೆಗಳನ್ನು ಒಬ್ಬೊಬ್ಬರಾಗಿ ಗಟ್ಟಿ ಧ್ವನಿಯಿಂದ ಪರದೆಯ ಮುಂದೆ ಹೇಳಿ. ಮಾನ್ಯ ಕಲಾಂ ಅವರು ಉತ್ತರ ನೀಡುತ್ತಾರೆ.



ಮಧುಮಾಲಾ	:	ಮೊದಲ ಪ್ರಶ್ನೆಯನ್ನು ನಾನು ಕೇಳುತ್ತೇನೆ. ವಿಜ್ಞಾನದಲ್ಲಿ ನಿಮಗೆ ಆಸಕ್ತಿ ಉಂಟಾಗಲು ಕಾರಣವಾದ ಮೊದಲ ಸನ್ನಿವೇಶ ಯಾವುದು ಎಂಬುದನ್ನು ತಿಳಿಸಿ.
ಅಬ್ದುಲ್ ಕಲಾಂ	:	ನಾನು ಹತ್ತು ವರ್ಷದ ಬಾಲಕನಾಗಿದ್ದಾಗ ನನ್ನ ವಿಜ್ಞಾನದ ಅಧ್ಯಾಪಕರು ಪಕ್ಷಿಗಳು ಹೇಗೆ ಹಾರುತ್ತವೆ ಎಂಬುದನ್ನು ವಿವರಿಸಿ ಹೇಳಿದರು. ಅಂದಿನಿಂದ ಬಾನಿನಲ್ಲಿ ಹಕ್ಕಿಯಂತೆ ಹಾರಾಡಬೇಕೆಂಬುದು ನನ್ನ ಜೀವನದ ಗುರಿಯಾಗಿ ಬಿಟ್ಟಿತು. ಅದೇ ನನ್ನ ವಿಜ್ಞಾನದ ಮೇಲಿನ ಆಸಕ್ತಿಗೆ ನಾಂದಿಯಾಯಿತು.
ವನಜಾಕ್ಷಿ	:	ಈಗ ನಾನು ಕೇಳಲೇ? ನಿಮಗೆ ಬಹಳ ಇಷ್ಟವಾದ ಪುಸ್ತಕ ಯಾವುದೆಂದು ತಿಳಿಸುವಿರಾ ಸಾರ್.
ಅಬ್ದುಲ್ ಕಲಾಂ	:	ತಮಿಳಿನ ಪ್ರಾಚೀನ ಗ್ರಂಥವಾದ 'ತಿರುಕ್ಕುರಳ್' ನನಗೆ ಅತ್ಯಂತ ಇಷ್ಟವಾದ ಕೃತಿ. 'ಅರಿವುಂ ಆಟ್ರುಂ ಕಾಕ್ಕುಂ ಕರುವಿ ಸಟುವಾಕ್ಕುಂ ಉಳ್ಳಳಿಕ್ಕಲ್ ಆಗಾ ಅರಣ್' – ಎಂಬ ಕುರಳ್ ನನ್ನ ಬದುಕಿಗೆ ಬಲವನ್ನು ನೀಡಿದೆ. ಅದೇ ರೀತಿ 'ಲಿಲಿಯನ್ ವಾಟ್ಸನ್' ರಚಿಸಿರುವ 'ಹಲವು ಹಣತೆಗಳು ತಂದ ಬೆಳಕು' (Light from many lamps) ಎಂಬ ಕೃತಿ ನನಗೆ ಬಹಳ ಇಷ್ಟವಾದದ್ದು. ಅದನ್ನು ಓದಿದಾಗ ಜ್ಞಾನ, ಆತ್ಮಸ್ಥೈರ್ಯ, ಉತ್ಸಾಹ ಮೂರನ್ನೂ ಪಡೆದೆನು.
ಅಕ್ಬರ್	:	ನೀವು ಅತ್ಯಂತ ಉತ್ಸಾಹಗೊಂಡ ಸನ್ನಿವೇಶ ಎಂದರೆ ಉಪಗ್ರಹ ಉಡಾವಣೆ ಮಾಡಿದ್ದಲ್ಲವೇ?
ಅಬ್ದುಲ್ ಕಲಾಂ	:	ಇಲ್ಲ. ಪೋಲಿಯೋ ರೋಗಕ್ಕೆ ತುತ್ತಾಗಿ ತೊಂದರೆಗೊಳಗಾದವರು ಮೂರು ಕೆ.ಜಿ. ತೂಕವಿರುವ ಕೃತಕ ಕಾಲುಗಳನ್ನು ಅಳವಡಿಸಿಕೊಂಡು ಶ್ರಮ ಪಟ್ಟು ನಡೆಯುವುದನ್ನು ನೋಡಿದೆ. ನಾವು ರಕ್ಷಣಾ ಉಪಕರಣಗಳಲ್ಲಿ ಬಳಸುವ ಇಂಗಾಲದ ಎಳೆ (ಕಾರ್ಬನ್ ಎಳೆ) ಯನ್ನು ಬಳಸಿ ಮುನ್ನೂರು ಗ್ರಾಂ ತೂಕವಿರುವ ಕೃತಕ ಕಾಲುಗಳನ್ನು ತಯಾರಿಸಿದೆವು. ಅದನ್ನು ಅವರು ಧರಿಸಿ ಸಂತೋಷಪಟ್ಟದ್ದೇ ನನಗೆ ಬಹಳ ಸಂತೋಷವನ್ನು ನೀಡಿದ ಗಳಿಗೆ. 

ಶ್ರೀವತ್ಸ	:	ಸಾರ್, ಸ್ವತಂತ್ರ್ಯ ಭಾರತದ ವಿಜಯೀ ಸಾಧನೆಗಳೆಂದು ಯಾವುದನ್ನು ಭಾವಿಸುವಿರಿ ?
ಅಬ್ದುಲ್ ಕಲಾಂ	:	* ಆಹಾರ ಉತ್ಪಾದನೆಯಲ್ಲಿ ನಾವು ಸ್ವಾವಲಂಬನೆ ಹೊಂದಿದ್ದೇವೆ. * ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ತುಂಬಾ ಅಭಿವೃದ್ಧಿ ಸಾಧಿಸಿದ್ದೇವೆ. * ಎಂತಹ ಕೃತಕ ಉಪಗ್ರಹಗಳನ್ನಾದರೂ ಉಡಾಯಿಸುವ ಸಾಮರ್ಥ್ಯ ನಮ್ಮಲ್ಲಿಯೂ ಇದೆ. * ಅಣುಸ್ಥಾವರಗಳ ಮೂಲಕ ವಿದ್ಯುಚ್ಛಕ್ತಿ ತಯಾರಿಸುವುದರಲ್ಲಿ ಮುಂಚೂಣಿಯಲ್ಲಿದ್ದೇವೆ. * ನವೀನ ಔಷಧಗಳು, ಪಾರಂಪರಿಕ ವೈದ್ಯ ಪದ್ಧತಿಗಳಲ್ಲಿ ಅಭಿವೃದ್ಧಿ ಸಾಧಿಸಿದ್ದೇವೆ. * ರಕ್ಷಣಾ ಇಲಾಖೆಗೆ ಸಂಬಂಧಿಸಿದಂತೆ 'ಅಗ್ನಿ ಮತ್ತು ಪೃಥ್ವಿ' ಉಪಗ್ರಹಗಳ ಉಡಾವಣೆಯಲ್ಲಿ ಜಯಶಾಲಿಗಳಾಗಿದ್ದೇವೆ. ಇವುಗಳೆಲ್ಲವನ್ನೂ ಸ್ವತಂತ್ರ ಭಾರತದ ವಿಜಯಗಳೆಂದೇ ನಾನು ಭಾವಿಸುತ್ತೇನೆ.
ಚಂದ್ರ	:	ಈ ಹಂತದವರೆಗೂ ನಾವು ಮುಂದುವರೆದಿದ್ದೇವೆ. ಆದರೆ ಮನುಷ್ಯರು ಹಲವು ಬಗೆಯ ರೋಗಗಳಿಂದ ನರಳುತ್ತಿದ್ದಾರೆ. ಆ ರೋಗಗಳಿಗೆ ಅಗತ್ಯವಾದ ಔಷಧಿಗಳು ನಮ್ಮಲ್ಲಿಲ್ಲವಲ್ಲ! ಅವುಗಳನ್ನು ಕಂಡು ಹಿಡಿಯಲು ಯಾವ ರೀತಿಯ ಮಾದರಿ ಸಂಶೋಧನೆಗಳು ನಡೆಯುತ್ತಿವೆ ಸರ್?
ಅಬ್ದುಲ್ ಕಲಾಂ	:	ಸಮುದ್ರದ ತಳಭಾಗದಲ್ಲಿ ಮಾನವನಿಂದ ಕಂಡುಹಿಡಿಯಲಾಗದ ಅಸಂಖ್ಯಾತ ಸಸ್ಯರಾಶಿಗಳು, ಜೀವ ಸಂಕುಲಗಳು ಇವೆ. ನವೀನ ಪರಮಾಣುಗಳ ಬಂಧವನ್ನು ಕಂಡು ಹಿಡಿಯಲು ಪ್ರಯತ್ನಗಳು ನಡೆಯುತ್ತಿವೆ. ಅವು ಸಾಬೀತಾದಲ್ಲಿ ಏಡ್ಸ್‌ನಂತಹ ಭೀಕರ ಮಾರಣಾಂತಿಕ ರೋಗಗಳಿಗೆ ಮಾತ್ರವಲ್ಲದೆ ಇಂತಹ ಇನ್ನೂ ಹಲವಾರು ಭಯಾನಕ ರೋಗಗಳನ್ನು ತಡೆಯಲು ಲಸಿಕೆ ಹಾಗೂ ಇತರ ಔಷಧಿಗಳನ್ನು ಕಂಡು ಹಿಡಿಯಬಹುದಾಗಿದೆ.
ಹೆಲೆನ್	:	ನೂರು ವರ್ಷಗಳ ತರುವಾಯ ನಮ್ಮ ಭಾರತ ಹೇಗಿರುತ್ತದೆ ಎಂಬುದನ್ನು ಹೇಗೆ ಭಾವಿಸುವಿರಿ ಸರ್ ?
ಅಬ್ದುಲ್ ಕಲಾಂ	:	ಮೂರು ಮಹತ್ವದ ಸಾಧನೆಗಳಾಗಿರುತ್ತದೆ ಎಂದು ನಂಬುತ್ತೇನೆ. 1. ಸಾವಿರ ವರ್ಷಗಳ ಹಿಂದೆ ನಳಂದಾ ವಿಶ್ವವಿದ್ಯಾಲಯದಲ್ಲಿದ್ದಂತಹ ಉತ್ತಮ ಶಿಕ್ಷಣ ಪದ್ಧತಿ ಇರುತ್ತದೆ. 2. ಎಲ್ಲ ರೀತಿಯ ಸ್ವಾಭಾವಿಕ ಸಂಪನ್ಮೂಲಗಳೂ ಅಂತ್ಯಗೊಂಡಿರುತ್ತವೆ. ಆದರೂ ನಾವು ನಾವು ಉಡಾಯಿಸಿರುವ ಉಪಗ್ರಹಗಳು ನಮಗೆ ಸೌರಶಕ್ತಿಯನ್ನು ಒದಗಿಸುತ್ತವೆ. 3. ಮಂಗಳ ಗ್ರಹದಲ್ಲಿ ಮಾನವ ಸಂತತಿ ನೆಲೆಯೂರುತ್ತದೆ.
ಮೇರಿ	:	ಮಂಗಳ ಗ್ರಹದಲ್ಲಿ ಮನುಷ್ಯ ಬದುಕಲು ಸಾಧ್ಯವೇ ? ಸರಿ, ನಮ್ಮನ್ನೆಲ್ಲಾ ನೀವು ಯಾವಾಗ ಚಂದ್ರನಲ್ಲಿಗೆ ಕರೆದೊಯ್ಯುತ್ತೀರಿ ?
ಅಬ್ದುಲ್ ಕಲಾಂ	:	525 ಕೆ.ಜಿ. ತೂಕವಿರುವ ಮಾನವ ರಹಿತ ಕೃತಕ ಉಪಗ್ರಹವನ್ನು ಭಾರತವು ಚಂದ್ರ ಲೋಕಕ್ಕೆ ಕಳುಹಿಸಿದೆ. ಮುಂಬರುವ ವರ್ಷಗಳಲ್ಲಿ ಉಪಗ್ರಹ ವಾಹನಗಳು ಮನುಷ್ಯರನ್ನು ಹೊತ್ತು ಚಂದ್ರಲೋಕಕ್ಕೆ ಹೋಗಲಿವೆ. ಅದಕ್ಕೆ ನೀವು ಚಂದ್ರಲೋಕಕ್ಕೆ ಹೋಗಲು ಸಿದ್ಧರಾಗಿರಿ.
ಪಾರ್ವತಿ	:	ಚಂದ್ರಲೋಕಕ್ಕೆ ಪ್ರಯಾಣ ಮಾಡುವ ನಾವು ಸೂರ್ಯ ಮಂಡಲಕ್ಕೂ ಹೋಗಬಹುದೇ ಸರ್?
ಅಬ್ದುಲ್ ಕಲಾಂ	:	ಸೂರ್ಯನು ನಿರಂತರವಾಗಿ ಉರಿಯುತ್ತಾ ಇದ್ದು ಬೆಳಕು ಹಾಗೂ ಶಾಖವನ್ನು ಬಿಡುಗಡೆ ಮಾಡುತ್ತಲೇ ಇರುವುದರಿಂದ ನಾವು ಆ ಶಾಖವನ್ನು ತಡೆಯುವ ಕವಚವನ್ನು ಇನ್ನೂ ಕಂಡು ಹಿಡಿದಿಲ್ಲ. ಮುಂದಿನ ದಿನಗಳಲ್ಲಿ ಅಧಿಕ ಶಾಖವನ್ನು ತಡೆಯುವ ಉಪಕರಣಗಳನ್ನು ಕಂಡು ಹಿಡಿಯಬಹುದು. ಆಗ ಮಾನವನು ಸೂರ್ಯ ಮಂಡಲಕ್ಕೂ ಪ್ರಯಾಣ ಮಾಡಬಹುದು.
ಮಧುರ	:	ಸ್ವಾಮಿ, ವಿಶ್ವದ ಮೊದಲ ವಿಜ್ಞಾನಿ ಎಂದು ಯಾರನ್ನು ಗ್ರಹಿಸಬಹುದು, ಹೇಳಿ?

ಅಬ್ದುಲ್ ಕಲಾಂ	:	ವಿಜ್ಞಾನದ ಮೂಲವಿರುವುದು ಪ್ರಶ್ನೆ ಕೇಳುವ ಮನಸ್ಸೇ ಆಗಿದೆ. ವಿಜ್ಞಾನದ ಉಗಮ, ಬೆಳವಣಿಗೆ, ಬಾಳ್ವೆ ಎಲ್ಲವೂ ಈ ಪ್ರಶ್ನೆ ಕೇಳುವ ಸಾಮರ್ಥ್ಯದಲ್ಲಿ ಅಡಗಿದೆ. ಮಕ್ಕಳ ಪ್ರಶ್ನೆಗಳಿಗೆ ಅಂತ್ಯವೇ ಇಲ್ಲ. ಪ್ರಶ್ನೆ ಕೇಳುವ ಪ್ರತಿಯೊಂದು ಮಗುವೂ ಒಬ್ಬ ವಿಜ್ಞಾನಿಯೇ. ಆದ ಕಾರಣ ಮಕ್ಕಳೇ, ನೀವೇ ವಿಶ್ವದ ಮೊದಲ ವಿಜ್ಞಾನಿಗಳು.
ಪೂರ್ಣಚಂದ್ರ	:	ನಾವೆ ಮೊದಲ ವಿಜ್ಞಾನಿಗಳಾ? ಹಾಗಾದರೆ ಭಾರತದ ಅಭಿವೃದ್ಧಿಯಲ್ಲಿ ಮಕ್ಕಳಾಗಿರುವ ನಮ್ಮ ಪಾತ್ರವೇನೆಂಬುದನ್ನು ತಿಳಿಸಿ ಸರ್?
ಅಬ್ದುಲ್ ಕಲಾಂ	:	ವಿದ್ಯಾರ್ಥಿಗಳಾದ ನೀವು ಭವಿಷ್ಯದಲ್ಲಿ ಯಾವ ಕ್ಷೇತ್ರಗಳಲ್ಲಿ ಕಲಿತರೂ ಅದರಲ್ಲಿ ಉದಾತ್ತ ಉದ್ದೇಶವನ್ನು ಮನದಲ್ಲಿ ದೃಢಗೊಳಿಸಿ. ಆ ಗುರಿಯನ್ನು ತಲುಪಲು ಪೂರಕವಾದ ಜ್ಞಾನ ಮತ್ತು ಅನುಭವವನ್ನು ಶೇಖರಿಸಿಕೊಳ್ಳಿರಿ. ಕಠಿಣ ಪರಿಶ್ರಮದಿಂದ ಜಯಶಾಲಿಗಳಾಗಿರಿ. ನಿಮ್ಮ ವಿಜಯವು ಭಾರತದ ವಿಜಯಕ್ಕೆ ಸಹಕಾರಿಯಾದೀತು.
ಗೋವಿಂದ	:	ಜಯವನ್ನು ಸಾಧಿಸುವ ಮಾರ್ಗ ಯಾವುದು ಸರ್?
ಅಬ್ದುಲ್ ಕಲಾಂ	:	ಎರಡು ಮಾರ್ಗಗಳಿವೆ. 1. ಜ್ಞಾನವನ್ನು ಅಭಿವೃದ್ಧಿ ಪಡಿಸುವ ಎಲ್ಲರ ಮಾತುಗಳನ್ನೂ ಗಮನಿಸಿ. 2. ಬೆವರು ಸುರಿಸಿ ! ಬೆವರು ಸುರಿಸಿ ! ಬೆವರು ಸುರಿಸಿ ! ('ಧನ್ಯವಾದಗಳು ಮಕ್ಕಳೇ !' ಎಂದು ನುಡಿದು ಪರದೆಯಲ್ಲಿ ಅಬ್ದುಲ್ ಕಲಾಂ ಅವರು ಹರ್ಷ ವ್ಯಕ್ತಪಡಿಸುತ್ತಾ ಮೆಲ್ಲನೆ ಮರೆಯಾದರು. ವಿದ್ಯಾರ್ಥಿಗಳು ಆಶ್ಚರ್ಯಚಕಿತರಾದರು!)
ರಂಗಮಂದಿರದ ಉಸ್ತುವಾರಿ	:	ಏನು ಮಕ್ಕಳೇ! ಮಾನ್ಯ ಅಬ್ದುಲ್ ಕಲಾಂ ಅವರಿಂದ ನಿಮ್ಮ ಎಲ್ಲ ಪ್ರಶ್ನೆಗಳಿಗೂ ಉತ್ತರ ದೊರಕಿತಲ್ಲವೇ? ಸಂತೋಷವಾಯಿತೇ?
ವಿದ್ಯಾರ್ಥಿಗಳು	:	ಬಹಳ ಸಂತೋಷ. ಧನ್ಯವಾದಗಳು ಸರ್, ವಿದ್ಯಾರ್ಥಿಗಳು ಹೊಸ ಉತ್ಸಾಹದಿಂದ ರಂಗ ಮಂದಿರದಿಂದ ಹೊರಗೆ ಹೊರಟರು.



ಪ್ರಶ್ನೋತ್ತರಗಳು

I. ಸಂಕ್ಷಿಪ್ತವಾಗಿ ಉತ್ತರಿಸಿ.

1. ಸ್ವತಂತ್ರ ಭಾರತ ಗಳಿಸಿದ ವಿಜಯಗಳು ಯಾವುವು ಎಂದು ಅಬ್ದುಲ್ ಕಲಾಂ ಅವರು ಹೇಳುತ್ತಾರೆ ?
2. ತಮಗೆ ಸಂತೋಷ ತಂದ ಸನ್ನಿವೇಶ ಯಾವುದೆಂದು ಅಬ್ದುಲ್ ಕಲಾಂ ಅವರು ತಿಳಿಸುತ್ತಾರೆ?

ಭಾಷಾಭ್ಯಾಸ

II. ಕೆಳಗೆ ಕೊಟ್ಟಿರುವ ಆಂಗ್ಲ ಶಬ್ದಗಳಿಗೆ ಸರಿ ಹೊಂದುವ ಕನ್ನಡ ಶಬ್ದಗಳನ್ನು ಬರೆಯಿರಿ.

1. Research _____
   Planet _____
   Medicine _____
   Satellite _____

III. ಚರ್ಚಿಸಿ.

1. ಯಂತ್ರಮಾನವನ ಅನ್ವೇಷಣೆಯಿಂದ ಉಂಟಾಗುವ ಪರಿಣಾಮಗಳನ್ನು ಕುರಿತು ಚರ್ಚಿಸಿ.

IV.ಮಿಶ್ರ ಅಕ್ಷರಗಳನ್ನು ಬಳಸಿ ಸರಿಪಡಿಸಿ ಪದದ ಶುದ್ಧ ರೂಪವನ್ನು ಬರೆಯಿರಿ.

1. ಹಿ ತಿ ಸಾ
2. ಡ ಲು ಕ
3. ಯಾ ಭ ಕ ನ
4. ಜ್ಞಾ ಕ ವೈ ನಿ
5. ಶೋ ಸಂ ನೆ ಧ

V. ಕೆಳಗಿನ ಅಕ್ಷರಗಳನ್ನು ಜೋಡಿಸಿ ವಿಜ್ಞಾನಿಯ ಹೆಸರನ್ನು ಬರೆಯಿರಿ.

ಕೆ	ರ	ಮೈ	ಡೆ	ಪ್ಯಾ	ಲ್

VI. ವಾಕ್ಯವನ್ನು ವಿಸ್ತರಿಸಿ ಬರೆಯಿರಿ.

1. ಉದಾಹರಣೆಗೆ : ನಾನು ಓದುತ್ತೇನೆ (ಪಾಠ, ವಿಜ್ಞಾನ, ಚೆನ್ನಾಗಿ)

VII. ವ್ಯಂಜನಾಕ್ಷರಗಳಿಂದ ಕೂಡಿರುವ ಪದಗಳನ್ನು ಬರೆಯಿರಿ.

ಮಾದರಿ – ಮನೆ :

ಮ

ಠ

ಲ

ರ

ನೆ

ಈ ಅಕ್ಷರಗಳನ್ನು ವೃತ್ತಾಕಾರವಾಗಿ ಜೋಡಿಸಬೇಕು

VIII. ನನ್ನ ಕರ್ತವ್ಯ.

ವೈಜ್ಞಾನಿಕ ಸಾಧನೆಗಳನ್ನು ಒಳಿತಿಗಾಗಿಯೇ ಬಳಸುತ್ತೇನೆ.

IX. ಕೆಳಗಿನ ಆಂಗ್ಲ ಶಬ್ದಗಳಿಗೆ ಕನ್ನಡ ಶಬ್ದಗಳನ್ನು ಬರೆಯಿರಿ.

Super Computer _____

Satellite _____

Research _____

Planet _____

Intelligence _____

X. ಅಂತರ್ಜಾಲದಲ್ಲಿ ಸಂಗ್ರಹಿಸಿ.

1. ಹಲವು ಬಗೆಯ ರೋಬೋಗಳ ಚಿತ್ರಗಳನ್ನು ಸಂಗ್ರಹಿಸಿ ಆಲ್ಬಂ ತಯಾರಿಸಿ.

2. ಕಂಡು ಕೇಳಿ ಆನಂದಿಸಿ.

ವಿಜ್ಞಾನದ ಆವಿಷ್ಕಾರಗಳನ್ನು ದೂರದರ್ಶನದಲ್ಲಿ ನೋಡಿ ಆನಂದಿಸಿ.

3. ಭಾಷಣ.

ನಿಮ್ಮನ್ನು ಒಬ್ಬ ವಿಜ್ಞಾನಿಯನ್ನಾಗಿ ಕಲ್ಪಿಸಿಕೊಂಡು ಎಂತಹ ಸಂಶೋಧನೆಯನ್ನು ಕೈಗೊಳ್ಳುವಿರಿ ಎಂಬುದನ್ನು ಕುರಿತು ಮಾತನಾಡಿ.

4. ಶಿಕ್ಷಕರ ನೆರವಿನಿಂದ ಕೆಳಗಿನ ಪದಗಳಲ್ಲಿರುವ ಸಂಯುಕ್ತಾಕ್ಷರಗಳನ್ನು ಬಿಡಿಸಿ ಬರೆಯಿರಿ.

ಉದಾಹರಣೆಗೆ : ಕಲ್ಪನೆ = ಕ್+ಅ+ಲ್+ಪ್+ಅ+ನ್+ಎ.

ಆಸಕ್ತಿ =

ಬೃಹತ್ =

ಸಾಗರ =

ತಂತ್ರಜ್ಞಾನ =

ಧೃವ ಪ್ರದೇಶ =

ಪಾರ್ಶ್ವವಾಯು =

ಸೂಕ್ಷ್ಮ =

ಗುರಿ =

ಚಟುವಟಿಕೆ

1. ನೀವು ಅಬ್ದುಲ್ ಕಲಾಂ ಅವರೊಂದಿಗೆ ಕೇಳ ಬಯಸುವ ಪ್ರಶ್ನೆಗಳನ್ನು ಕುರಿತು ಒಂದು ಪತ್ರ ಬರೆಯಿರಿ ?

ಕಲಿತದ್ದು – ಕಲಿಕೆಯ ಫಲ

1. ಕನಸು ಕಾಣಿರಿ ಎಂಬುದು ಅಬ್ದುಲ್ ಕಲಾಂ ಅವರ ಚೆನ್ನುಡಿ. ನಿಮ್ಮ ಕನಸುಗಳನ್ನು ಕುರಿತು ತರಗತಿಯ ಕೊಠಡಿಯಲ್ಲಿ ಸಂಭಾಷಿಸಿರಿ.
2. ನೀವು ಸಂದರ್ಶಿಸಲು ಬಯಸುವ ವ್ಯಕ್ತಿಯೊಬ್ಬರನ್ನು ಹೆಸರಿಸಿ. ಅವರ ಬಳಿ ನೀವು ಕೇಳ ಬಯಸುವ ಐದು ಪ್ರಶ್ನೆಗಳನ್ನು ಪಟ್ಟಿ ಮಾಡಿ.

ಘಟಕ ಮೂರು

ಅಕ್ಷರಗಳ ಉತ್ಪತ್ತಿ ಸ್ಥಾನಗಳು

ಬಾಯಲ್ಲಿ ಅಕ್ಷರಗಳನ್ನು ಉಚ್ಚರಿಸುವಾಗ ಅವು ಹುಟ್ಟುವ ಸ್ಥಾನಗಳನ್ನು ತಿಳಿದಿದ್ದರೆ ಅವುಗಳಲ್ಲಿ ಇರುವ ಪರಸ್ಪರ ಸಂಬಂಧ ಗೊತ್ತಾಗುತ್ತದೆ. ಸಂಧಿ ಕಾರ್ಯದಲ್ಲಿ ಇದರ ಸಂಬಂಧ ತಿಳಿಯುತ್ತದೆ. ಇವು ಕೆಲವು ಅವಯವಗಳ ಸಹಾಯದಿಂದ ಉಂಟಾಗುವುವು.

ಕಂಠದಿಂದ ಹುಟ್ಟುವ ವರ್ಣಗಳು (ಕಂಠ್ಯಗಳು)	ಅ, ಆ, ಕವರ್ಗ, ಹ ಮತ್ತು ವಿಸರ್ಗ
ದವಡೆಯಲ್ಲಿ ಹುಟ್ಟುವ ವರ್ಣಗಳು (ತಾಲವ್ಯಗಳು)	ಇ, ಈ, ಚವರ್ಗ, ಯ ಮತ್ತು ಶ
ಬಾಯ ಅಂಗಳದಲ್ಲಿ ಹುಟ್ಟುವ ವರ್ಣಗಳು (ಮೂರ್ಧನ್ಯ)	ಋ, ಟವರ್ಗ, ರ, ಷ, ಳ
ಹಲ್ಲಿನಲ್ಲಿ ಹುಟ್ಟುವ ವರ್ಣಗಳು (ದಂತ್ಯ)	ತವರ್ಗ, ಲ
ತುಟಿಯಲ್ಲಿ ಹುಟ್ಟುವ ವರ್ಣಗಳು (ಓಷ್ಠ್ಯ)	ಉ, ಊ, ಪವರ್ಗ
ಕಂಠ–ದವಡೆ ಇವೆರಡರ ಸಹಾಯದಿಂದಲೂ ಹುಟ್ಟುವ ಅಕ್ಷರಗಳು (ಕಂಠತಾಲವ್ಯಗಳು)	ಎ, ಏ, ಐ
ಕಂಠ–ತುಟಿ ಇವೆರಡರ ಸಹಾಯದಿಂದ ಹುಟ್ಟುವ ಅಕ್ಷರಗಳು (ಕಂಠೋಷ್ಠ್ಯಗಳು)	ಒ, ಓ, ಔ.
ದಂತ–ದವಡೆ ಎರಡೂ ಸ್ಥಾನಗಳಲ್ಲೂ ಹುಟ್ಟುವ ಅಕ್ಷರ (ದಂತ್ಯೋಷ್ಠ್ಯ)	ವ.

ವ್ಯಂಜನಗಳು					
ಕ್	ಖ್	ಗ್	ಘ್	ಙ್	(ಕ ವರ್ಗ)
ಚ್	ಛ್	ಜ್	ಝ್	ಞ್	(ಚ ವರ್ಗ)
ಟ್	ಠ್	ಡ್	ಢ್	ಣ್	(ಟ ವರ್ಗ)
ತ್	ಥ್	ದ್	ಧ್	ನ್	(ತ ವರ್ಗ)
ಪ್	ಫ್	ಬ್	ಭ್	ಮ್	(ಪ ವರ್ಗ)

ಯ್ ರ್ ಲ್ ವ್ ಶ್ ಷ್ ಸ್ ಹ್ ಳ್

ರಜೆಯ ಅರ್ಜಿಯನ್ನು ಪೂರ್ಣಗೊಳಿಸಿ

ಇಂದ

_____

ಆರನೇ ತರಗತಿ

_____ ವಿಭಾಗ

_____ ಶಾಲೆ

_____

_____

ಗೆ

ತರಗತಿಯ ಅಧ್ಯಾಪಕರು

_____

_____

_____

_____

ಮಾನ್ಯರೇ,

ವಿಷಯ : ರಜೆ ಕೋರಿ

_____

_____

_____

_____ ಕಾರಣದಿಂದ ನನಗೆ

_____ ದಿನಗಳು ರಜೆಯನ್ನು ಮಂಜೂರು ಮಾಡುವಂತೆ ಪ್ರಾರ್ಥಿಸುತ್ತೇನೆ.

ಧನ್ಯವಾದಗಳು.

ಇಂತಿ,

ನಿಮ್ಮ ವಿದೇಯ ವಿದ್ಯಾರ್ಥಿ,

_____ .

ಸ್ಥಳ :

ದಿನಾಂಕ :

ಪೋಷಕರ ಸಹಿ :

ಘಟಕ ನಾಲ್ಕು

ಶಿಕ್ಷಣ



ಕಲಿಕಾ ಉದ್ದೇಶಗಳು

- ಶಿಕ್ಷಣದ ಹಿರಿಮೆ ಹಾಗೂ ಮಹತ್ವವನ್ನು ಗ್ರಹಿಸುವುದು.
- ಶಿಕ್ಷಣಕ್ಕೆ ಕೊಡುಗೆ ನೀಡಿರುವ ಮಹಾತ್ಮರ ಕುರಿತು ತಿಳಿಯುವುದು.
- ಗ್ರಂಥಾಲಯವನ್ನು ಕುರಿತು ತಿಳಿಯುವುದು.
- ಗ್ರಂಥಾಲಯಕ್ಕೆ ಭೇಟಿ ನೀಡುವ ಹವ್ಯಾಸವನ್ನು ಬೆಳೆಸಿಕೊಳ್ಳುವುದು.
- ಲಿಪಿಗಳಿಂದ ಪದಗಳನ್ನು ಬರೆಯುವ ವಿಧಾನವನ್ನು ಅರಿತು ಬಳಸುವುದು.

ಘಟಕ ನಾಲ್ಕು

ಶಿಕ್ಷಣ

ಕಾವ್ಯ ಕಣಜ	:	ಜ್ಞಾನದ ಹಿರಿಮೆ
ಪೂರಕ ಪದ್ಯ	:	ಗ್ಯಾನದ್ ದೀಪ
ಗದ್ಯ ವಿಹಾರ	:	ಶಿಕ್ಷಣದ ಕಣ್ಣು ತೆರೆಸಿದ ಧೀಮಂತ
ಉಪಪಠ್ಯ	:	ಪುಸ್ತಕಗಳು
ವ್ಯಾಕರಣ	:	ನಾಮಪದ



ಘಟಕ ನಾಲ್ಕು

ಜ್ಞಾನದ ಹಿರಿಮೆ *

– ಪುಲಿಗೆರೆಯ ಸೋಮನಾಥ



ಶಿಕ್ಷಣಕ್ಕೆ ಎಲ್ಲೆ ಎಂಬುದೇ ಇಲ್ಲ. ಹುಟ್ಟಿನಿಂದ ಮೊದಲುಗೊಂಡು ಸಾವನ್ನು ಹೊಂದುವವರೆಗೂ ವ್ಯಕ್ತಿ ಕಲಿಯುತ್ತಲೇ ಇರುತ್ತಾನೆ. ಗರ್ಭದಿಂದ ಗೋರಿಯವರೆಗೂ ಪಡೆಯುವ ಶಿಕ್ಷಣದ ಮೂಲಕ ಪ್ರಗತಿಯನ್ನು ಹೊಂದುತ್ತಾನೆ. ಶಿಕ್ಷಣವನ್ನು ಸಂಪತ್ತು ಎಂದೇ ಬಯಸುವುದು ಸೂಕ್ತ. ಶಿಕ್ಷಣದಿಂದ ಪಡೆದ ಜ್ಞಾನವನ್ನು ಯಾರೂ ಅಪಹರಿಸಲಾಗದು. ಅದನ್ನು ನಾಶಗೊಳಿಸಲೂ ಸಾಧ್ಯವಿಲ್ಲ. ಹೀಗೆ ನಾಶವಾಗದ ಸಂಪತ್ತಾಗಿರುವ ಶಿಕ್ಷಣದಿಂದ ಮನುಷ್ಯ ಪ್ರತಿ ಹಂತದಲ್ಲೂ ಹಿರಿಮೆಗೆ ಗೌರವಕ್ಕೆ ಪಾತ್ರನಾಗುತ್ತಾನೆ. ಆದ ಕಾರಣ ನಾವೂ ಕಲಿಯೋಣ, ಪ್ರಗತಿಯನ್ನು ಹೊಂದೋಣ.

ಕೆಲವಂ ಬಲ್ಲವರಿಂದ ಕಲ್ತು ಕೆಲವಂ ಶಾಸ್ತ್ರಂಗಳಂ ಕೇಳುತಂ
ಕೆಲವಂ ಮಾಳ್ಪವರಿಂದ ಕಂಡು ಕೆಲವಂ ಸುಜ್ಞಾನದಿಂ ನೋಡುತಂ
ಕೆಲವಂ ಸಜ್ಜನ ಸಂಗದಿಂದರಿಯಲ್ ಸರ್ವಜ್ಞನಪ್ಪಂ ನರಂ
ಪಲವುಂ ಪಳ್ಳ ಸಮುದ್ರವೈ ಹರಹರಾ ಶ್ರೀಚನ್ನಸೋಮೇಶ್ವರಾ

ಕವಿ–ಕಾವ್ಯ ಪರಿಚಯ


ಪುಲಿಗೆರೆಯ ಸೋಮನಾಥ.

ಈ ಕಾವ್ಯದ ಕರ್ತೃ ಪುಲಿಗೆರೆಯ ಸೋಮನಾಥ. ಈ ಕವಿಯ ಕಾಲ ಕ್ರಿ.ಶ. 1229 ಎಂಬ ಅಭಿಪ್ರಾಯವಿದೆ. ಶತಕಗಳನ್ನು ರಚಿಸಿರುವ ಈತನ ಜನ್ಮಸ್ಥಳವು ಈಗಿನ ಧಾರವಾಡದ ಲಕ್ಷ್ಮೇಶ್ವರವಾಗಿದೆ. ಈತನ ಕೃತಿ 'ಸೋಮೇಶ್ವರ ಶತಕ'. ಇದೊಂದು ನೀತಿ ಪ್ರತಿಪಾದನೆಯ ಕಾವ್ಯವಾಗಿದೆ.

ಪದಗಳ ಅರ್ಥ

ಬಲ್ಲವರು–ತಿಳಿದವರು; ಮಾಳ್ಪವರು–ಮಾಡುವವರು; ಸರ್ವಜ್ಞ–ಎಲ್ಲವನ್ನೂ ತಿಳಿದವನು; ಪಳ್ಳ–ಆಳವಾದ; ಸಜ್ಜನ–ಒಳ್ಳೆಯ ಗುಣವುಳ್ಳವನು; ಸಂಗ–ಸಹವಾಸ; ಪಲವು–ಹಲವು; ನರ–ಮನುಷ್ಯ.

ಕವನದ ಭಾವಾರ್ಥ

ಅನೇಕ ತೊರೆಗಳು ಬಂದು ಸೇರಿ ಒಂದು ದೊಡ್ಡ ಸಮುದ್ರವಾಗುವಂತೆ ಮನುಷ್ಯನು ಕೆಲವು ಸಂಗತಿಗಳನ್ನು ಪಂಡಿತರಿಂದಲೂ, ಕೆಲವನ್ನು ಶಾಸ್ತ್ರಗಳಿಂದಲೂ, ಕೆಲವನ್ನು ಜ್ಞಾನಿಗಳ ನೆರವಿನಿಂದಲೂ, ಕೆಲವನ್ನು ಸ್ವಬುದ್ಧಿಯಿಂದಲೂ, ಕೆಲವನ್ನು ಸುಜನರ ಸಹವಾಸದಿಂದಲೂ ತಿಳಿದುಕೊಂಡು ಸರ್ವಜ್ಞನಾಗುತ್ತಾನೆ.

ಪ್ರಶ್ನೋತ್ತರಗಳು

I. ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.

1. ಪುಲಿಗೆರೆಯ ಸೋಮನಾಥನ ಅಂಕಿತ ಯಾವುದು?
2. ಪುಲಿಗೆರೆಯ ಸೋಮನಾಥನ ಕಾಲ ಯಾವುದು?

II. ಕೆಳಗಿನ ಪ್ರಶ್ನೆಗಳಿಗೆ ಮೂರ್ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.

1. ಮನುಷ್ಯನಾದವನು ಹೇಗೆ ಸರ್ವಜ್ಞನಾಗುತ್ತಾನೆ ?

III. ಕೆಳಗಿನ ಪ್ರಶ್ನೆಗೆ ವಿವರವಾಗಿ ಉತ್ತರಿಸಿ.

1. ಶಿಕ್ಷಣ ಪಡೆಯದವರಿಗೆ ಎದುರಾಗುವ ಸಮಸ್ಯೆಗಳನ್ನು ಪಟ್ಟಿ ಮಾಡಿರಿ.

ಭಾಷಾಭ್ಯಾಸ

I. ಸರಿಯಾದ ಉತ್ತರಗಳನ್ನು ಆರಿಸಿ ಬರೆಯಿರಿ.

1. ಮಕ್ಕಳು ಗ್ರಂಥಗಳನ್ನು
   ಅ) ಶ್ರದ್ಧೆಯಿಂದ ಓದುವರು
   ಆ) ಆಸಕ್ತಿಯಿಂದ ನೋಡುವರು
   ಇ) ಕೊಳೆ ಮಾಡುವರು
   ಈ) ಆಸಕ್ತಿ ವಹಿಸುವುದಿಲ್ಲ
2. ಬಲ್ಲವರಿಂದ – ಈ ಪದವನ್ನು ಬಿಡಿಸಿ ಬರೆದಾಗ,
   ಅ) ಬಲ್ಲವರು+ಇಂದ ಆ) ಬಲ್ಲಿದರು+ಇಂದ
   ಇ) ಬಲ್ಲ+ಅವರಿಂದ ಈ) ಬಲ್ಲವರೇ+ಎಂದ
3. ಸುಜ್ಞಾನ – ಈ ಪದದ ವಿರುದ್ಧ ಪದ ಯಾವುದು ?
   ಅ) ಅಜ್ಞಾನ ಆ) ಸನ್ಮಾನ
   ಇ) ವಿಜ್ಞಾನ ಈ) ದಿವ್ಯಜ್ಞಾನ.
4. ಸಜ್ಜನ – ಈ ಶಬ್ದದ ಅರ್ಥ ಇದಾಗಿದೆ :
   ಅ) ಒಳ್ಳೆಯ ಜನ
   ಆ) ಕೆಟ್ಟ ಜನ
   ಇ) ಸುಂದರ ಜನ
   ಈ) ಬುದ್ಧಿಹೀನ ಜನ



ಕಲಿತದ್ದು – ಕಲಿಕೆಯ ಫಲ

1. 'ಶಿಕ್ಷಣ ಅಳಿಯಲಾರದ ಸಂಪತ್ತು' – ಎಂಬ ವಿಷಯವನ್ನು ಕುರಿತು ಭಾಷಣವನ್ನು ಮಾಡಿ.
2. ಶಿಕ್ಷಣದ ಮಹತ್ವವನ್ನು ಕುರಿತಾದ ಸೂಕ್ತಿಗಳು, ಅನುಭವದ ಹೇಳಿಕೆಗಳನ್ನು ನಿಮ್ಮ ಹಿರಿಯರಿಂದ ಕೇಳಿ ತಿಳಿಯಿರಿ.

ಘಟಕ ನಾಲ್ಕು

ಪೂರಕ ಪದ್ಯ

ಗ್ನಾನದ್ ದೀಪ *

– ಜಿ.ಪಿ.ರಾಜರತ್ನಂ



ಶಿಕ್ಷಣದ ಸೊಬಗೇ ಸೊಬಗೆಂಬುವರು ಹಿರಿಯರು. ಕಲಿತಂತೆ ನಡೆದುಕೊಳ್ಳುವುದು ಆ ಸೊಬಗನ್ನು ಅನುಭವಿಸುವ ಮಾರ್ಗವೂ ಆಗಿದೆ. ಶಿಕ್ಷಣ ಜ್ಞಾನವನ್ನು ಬೆಳೆಸುವುದರೊಂದಿಗೆ ಅದರ ಬಳಕೆಯನ್ನೂ ತಿಳಿಸುತ್ತದೆ. ಎಷ್ಟೇ ಶಿಕ್ಷಣ ಪಡೆದಿದ್ದರೂ ಸಂಸ್ಕಾರ ಇಲ್ಲದೆ ಇದ್ದಲ್ಲಿ ಅದು ನಿಷ್ಪ್ರಯೋಜನ ಎಂದೇ ಹೇಳಬೇಕಾಗುತ್ತದೆ. ಪ್ರಜ್ಞಾವಂತ ವ್ಯಕ್ತಿಯ ಕೀರ್ತಿಯು ಚಿರಕಾಲ ಉಳಿಯುತ್ತದೆ. ಆದ ಕಾರಣ ಶಿಕ್ಷಣವನ್ನು ಪಡೆದು ಸಂಸ್ಕಾರವಂತರಾಗಿ ಬಾಳಲು ಕಲಿಯೋಣ ಬನ್ನಿರಿ.

ಯೆಂಡ ಕುಡಿದೋನ್ ಕತೇಂತ್ ಯೇಳಿ
ನೆಗದೆ ಯೋಳೋದ್ ಕೇಳು
ಒಂದ್ ದಿನಾರ ಸಾಜಾ ತಿಳ್‌ಕೊ
ಇದ್ದೇ ಇರುತೈತ್ ಗೋಳು 1

ಬೀದಿ ದೀಪ ಇರತೈತ್ ಅಂಗೆ
ಇರೋ ಜಾಗ್‌ದಾಗೇನೇ
ನಡೀತಾನಿದ್ರೆ ನೆರಳೊಂದ್ ಮಾತ್ರ
ಬತ್ತೈತ್ ಯಿಂದಾಗೇನೇ 2

ದೀಪದ್ ಬೆಳಕು ಬೇಕಂತ್ ಅಂದ್ರೆ
ಓಗ್ಬೇಕ್ ಅದರ ತಾಕೇನೆ
ನೆರಳಿನ್ ಕತ್ಲೆ ಬೇಡಾಂತ್ ಅಂದ್ರು
ಬತ್ತೈತ್ ಯಿಂದಾಗೇನೆ 3

ಇದನ್ ಕಾಣ್ತ ಕಾಣ್ತ ನಂಗೆ
ನೆಪ್ಗೆ ಬಂದಂಗ್ ಆಯ್ತು
ಬೆಳಕೆ ಗ್ನಾನ ಕತ್ಲ್ ಅಗ್ನಾನ
ಅನ್ನೋ ದೊಡ್ಡೋರ್ ಮಾತು 4

ಗ್ನಾನಕ್ ಮನ್ಸ ಕಷ್ಟ್ ಬೀಳ್ಬೇಕು
ಅನ್ನೋ ದೊಡ್ಡೋರ್ ಮಾತು
ಅಗ್ನಾನ್ಕ್ ಏನೂ ಬೇಡಾನ್ನೋದು
ಸಾಜ ಆದಂಗಾತು 5

ದೀಪದ್ ತಾಕೆ ಬಂತಂದ್ರದೋ
ಕಾಲಿನ್ ಕೆಳಗೆ ನೆರಳು
ಅಗ್ನಾನೆಲ್ಲ ಗ್ನಾನಕ್ ಸರಣು
ಅನ್ನೋದ್ ಅದಕೆ ತಿರುಳು 6

ಕವಿ–ಕಾವ್ಯ ಪರಿಚಯ



ಡಾ.ಜಿ.ಪಿ.ರಾಜರತ್ನಂ

ಕನ್ನಡ ಸಾಹಿತ್ಯ ನವೋದಯದ ಪ್ರಖ್ಯಾತ ಕವಿ ಹಾಗೂ ಸಾಹಿತಿಯಾದ ಡಾ.ಜಿ.ಪಿ.ರಾಜರತ್ನಂ ಅವರು "ಭ್ರಮರ" ಎನ್ನುವ ಕಾವ್ಯನಾಮದಿಂದ ಸಾಹಿತ್ಯ ರಚನಾ ಕಾರ್ಯದಲ್ಲಿ ತೊಡಗಿದರು. ಶಿಶುಸಾಹಿತ್ಯ ಕ್ಷೇತ್ರಕ್ಕೆ ಇವರ ಕೊಡುಗೆ ಅಪಾರ. ಕನ್ನಡ ಸಾಹಿತ್ಯ ಪ್ರಪಂಚವನ್ನು ಶ್ರೀಮಂತಗೊಳಿಸಿರುವ ಈ ಸಾಹಿತಿಗೆ 1977ರಲ್ಲಿ ಮೈಸೂರು ವಿಶ್ವವಿದ್ಯಾಲಯ ಗೌರವ ಡಾಕ್ಟರೇಟ್ ಪದವಿಯನ್ನು ನೀಡಿ ಗೌರವಿಸಿತು. ಶ್ರೀಯುತರು 1978ರಲ್ಲಿ ದೆಹಲಿಯಲ್ಲಿ ನಡೆದ 50ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು.

ಪದಗಳ ಅರ್ಥ

ಕಂತೆ–ಪುರಾಣ; ಸಾಜ–ಸಹಜ; ಗೋಳು–ತೊಂದರೆ; ಕತ್ತಲೆ–ತಮ; ನೆಪ್ಗೆ–ನೆನಪಿಗೆ; ಗ್ನಾನ–ಜ್ಞಾನ, ಅರಿವು; ಅಗ್ನಾನ–ಅಜ್ಞಾನ, ಅರಿವಿಲ್ಲದ, ಕತ್ತಲೆ; ಮನ್ಸ–ಮನುಷ್ಯ.

ಕವನದ ಭಾವಾರ್ಥ

'ವಿದ್ಯಾ ದಧಾತಿ ವಿನಯಂ' ಎಂಬುದು ಆರ್ಯೋಕ್ತಿ. ನಾವು ವಿದ್ಯೆಯನ್ನು ಕಲಿತು ಜ್ಞಾನವನ್ನು ಗಳಿಸುವುದರ ಮುಖ್ಯ ಉದ್ದೇಶ ನಾಗರಿಕರಾಗಿಯೂ, ಸಂಸ್ಕಾರವಂತರಾಗಿಯೂ ಬದುಕಬೇಕಾದುದೇ ಆಗಿದೆ. ಜ್ಞಾನಕ್ಕೆ ಮಿಗಿಲಾದ ಸಂಪತ್ತು ಈ ಲೋಕದಲ್ಲಿ ಯಾವುದೂ ಇಲ್ಲ. ಹಿರಿಯರು ಹೇಳುವ ಹಿತ ನುಡಿಗಳನ್ನು ತಿರಸ್ಕರಿಸದೆ ಜಾಣತನದಿಂದ ಮಾನವೀಯ ಗುಣಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ನಾವೂ ಬದುಕಿ ನಮ್ಮೊಂದಿಗಿರುವ ಇತರರೂ ನೆಮ್ಮದಿಯಿಂದ ಬದುಕಲು ಸಹಕರಿಸಬೇಕಾದುದು ಅಗತ್ಯವಾಗಿದೆ.

ಈ ಕವನದಲ್ಲಿ ಕವಿಯು ಗ್ರಾಮೀಣ ಭಾಷೆಯಲ್ಲಿ, ಹೆಂಡ ಕುಡುಕನೊಬ್ಬನ ಮಾತಿನ ಮೂಲಕ ಜ್ಞಾನವನ್ನು ಗಳಿಸಲು ಹೇಗೆ ಶ್ರಮ ಪಡಬೇಕು ಎಂಬುದನ್ನು ಹೃದಯಸ್ಪರ್ಷಿಯಾಗಿ ವಿವರಿಸಿದ್ದಾರೆ. ಕತ್ತಲು ಬೆಳಕಿಗೆ ಶರಣಾಗುವಂತೆ ಜ್ಞಾನಿಗೆ ಅಜ್ಞಾನವು ಶರಣಾಗುತ್ತದೆ ಎಂಬುದೇ ಈ ಕವನದ ತಿರುಳಾಗಿದೆ.

ಪ್ರಶ್ನೋತ್ತರಗಳು

I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.

1. ಯಾವುದನ್ನು ಕಂತೆಯೆಂದು ಹೇಳಿ ನಗದೆ ಕೇಳಬೇಕು ?
2. ನಾವು ನಡೆಯುವಾಗ ನಮ್ಮ ಹಿಂದೆ ಬರುವುದು ಯಾವುದು ?
3. ದೊಡ್ಡವರ ಮಾತು ಯಾವುದು ?
4. ಅಜ್ಞಾನವು ಯಾವುದಕ್ಕೆ ಶರಣಾಗುತ್ತದೆ ?

II. ಕೆಳಗಿನ ಪ್ರಶ್ನೆಗಳಿಗೆ ಮೂರ್ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.

1. ಗ್ನಾನದ್ ದೀಪ ಕವನದ ಸಾರಾಂಶವನ್ನು ಬರೆಯಿರಿ.

ಭಾಷಾಭ್ಯಾಸ

III. ಸರಿಯಾದ ಉತ್ತರಗಳನ್ನು ಆರಿಸಿ ಬರೆಯಿರಿ.

1. ನಡೆಯುತ್ತಿದ್ದಾಗ ನಮ್ಮ ಹಿಂದೆ ಬರುವುದು _____

   ಅ) ನೆರಳು ಆ) ಬೆಳಕು

   ಇ) ಕತ್ತಲು ಈ) ಗಾಳಿ.

2. ಬೆಳಕು – ಜ್ಞಾನದ ಸಂಕೇತವಾದರೆ, ಅಜ್ಞಾನದ ಸಂಕೇತವಾಗಿರುವುದು _____ .

   ಅ) ಸುತ್ತಲು ಆ) ಕತ್ತಲು

   ಇ) ಎತ್ತಲು ಈ) ಮುತ್ತಲು

3. ಅಜ್ಞಾನವು _____ಕ್ಕೆ ಶರಣಾಗುತ್ತದೆ.

   ಅ) ಧ್ಯಾನ ಆ) ಮೌನ

   ಇ) ಜ್ಞಾನ ಈ) ಮಾನ.

4.ಈ ಶಬ್ದಗಳ ಗ್ರಾಂಥಿಕ ರೂಪವನ್ನು ಬರೆಯಿರಿ.

1. ಯೋಳೋದ್
2. ಜಾಗ್‌ದಾಗೇನೆ
3. ಓಗ್ಟೇಕ್
4. ಗ್ನಾನ

ಚಟುವಟಿಕೆ

1. ಮಾನವ ಬಾಳಲು ಜ್ಞಾನದ ಸಂಪಾದನೆ ಬಹಳ ಮುಖ್ಯ. ನೀವು ಜ್ಞಾನವನ್ನು ಯಾವ ನೆಲೆಗಳಿಂದ ಅರ್ಜಿಸುತ್ತೀರಿ.

ಕಲಿತದ್ದು – ಕಲಿಕೆಯ ಫಲ

1. ಕವನವನ್ನು ಹಾವ ಭಾವಕ್ಕೆ ಅನುಗುಣವಾಗಿ ಹಾಡಿರಿ.
2. ಡಾ. ಜಿ.ಪಿ.ರಾಜರತ್ನಂ ಅವರ ಸಾಹಿತ್ಯವನ್ನು ಗ್ರಂಥಾಲಯದಲ್ಲಿ ಸಂಗ್ರಹಿಸಿ ಓದಿರಿ.
3. ಜ್ಞಾನದ ಮಹತ್ವವನ್ನು ಕುರಿತು ಚರ್ಚಿಸಿರಿ.

ಘಟಕ ನಾಲ್ಕು

ಶಿಕ್ಷಣದ ಕಣ್ಣು ತೆರೆಸಿದ ಧೀಮಂತ



ಶಿಕ್ಷಣ ಸಂಸ್ಥೆಗಳು ಕಾಲಾನುಕ್ರಮವಾಗಿ ಬದಲಾಗುತ್ತಿರುತ್ತವೆ. ಪ್ರಾರಂಭದಲ್ಲಿ ಗುರುಗಳ ಮನೆ(ಗುರುಕುಲ)ಯಲ್ಲೇ ನೆಲೆ ನಿಂತು ವಿದ್ಯಾರ್ಥಿಗಳು ಶಿಕ್ಷಣ ಪಡೆಯುತ್ತಿದ್ದರು. ತದನಂತರ ಪ್ರತಿದಿನ ಶಿಕ್ಷಕರ ಮನೆಗೆ ಹೋಗಿ ಕಲಿಯುತ್ತಿದ್ದರು. ನಂತರದ ಕಾಲದಲ್ಲಿ ಸಾರ್ವಜನಿಕ ಸ್ಥಳವೊಂದರಲ್ಲಿ ಶಿಕ್ಷಕರು ವಿದ್ಯಾರ್ಥಿಗಳಿಗೆ ಕಲಿಸತೊಡಗಿದರು. ಇದೇ ಇಂದಿನ ಶಿಕ್ಷಣ ಸಂಸ್ಥೆಗಳಾಗಿವೆ. ಮೊದಲು ಕೆಲವೇ ಹಳ್ಳಿಗಳಲ್ಲಿ ಮಾತ್ರ ಶಾಲೆಗಳಿದ್ದವು. ಇಂದು ಶಾಲೆಗಳ ಸಂಖ್ಯೆ ಹೆಚ್ಚಾಗುತ್ತಲಿದೆ. ತಮಿಳುನಾಡಿನಲ್ಲಿ ಇಂತಹ ಶಿಕ್ಷಣ ಕ್ರಾಂತಿಗೆ ನಾಂದಿ ಹಾಡಿದ ಧೀಮಂತ ಚೇತನ ಯಾರೆಂಬುದನ್ನು ತಿಳಿಯೋಣ ಬನ್ನಿರಿ.

ಸನ್ನಿವೇಶ –1



ಮಕ್ಕಳು ಆಡು ಮೇಯಿಸುತ್ತಾ ಇದ್ದರು. ಆ ದಾರಿಯಲ್ಲಿ ನಾಲ್ಕು ಚಕ್ರಗಳ ವಾಹನವೊಂದು ಬಂದು ನಿಂತಿತು. ಆ ವಾಹನದಿಂದ ಕೆಳಗಿಳಿದು ಬಂದ ವ್ಯಕ್ತಿಯೊಬ್ಬರು ಅಲ್ಲಿ ಆಡು ಮೇಯಿಸುತ್ತಿದ್ದ ಮಕ್ಕಳನ್ನು ಕುರಿತು ಅವರೊಂದಿಗೆ ಈ ರೀತಿ ಸಂಭಾಷಿಸಿದರು : 'ಏನಪ್ಪಾ ತಮ್ಮಂದಿರಾ, ಶಾಲೆಗೆ ಹೋಗದೆ ಆಡು ಮೇಯಿಸುತ್ತಿರುವಿರಿ ? ಯಾಕೆ ಶಾಲೆಗೆ ರಜೆಯೇನು ?' ಎಂದು ಅವರು ಕೇಳಿದರು.

'ಪಾಠ ಶಾಲೆ ?! ಅದೆಲ್ಲಾ ನಮ್ಮ ಊರಿನಲ್ಲಿ ಇಲ್ಲ!' ಎಂದರು ಮಕ್ಕಳು.

'ಹಾಗೇನು ? ನಿಮ್ಮ ಊರಿನಲ್ಲಿ ಒಂದು ಶಾಲೆ ಇದ್ದರೆ ನೀವೆಲ್ಲರೂ ಶಾಲೆಗೆ ಹೋಗಿ ಶಿಕ್ಷಣ ಪಡೆಯುತ್ತೀರಾ?' ಎಂದು ಅವರು ಕೇಳಿದರು.

'ಓ! ಖಂಡಿತಾ ಕಲಿಯುತ್ತೇವೆ' ಎಂದರು ಮಕ್ಕಳು.

ಆ ಕ್ಷಣವೇ, ಪ್ರತಿ ಊರಿನಲ್ಲಿಯೂ ಶಾಲೆಗಳನ್ನು ಪ್ರಾರಂಭಿಸಬೇಕೆಂಬ ನಿರ್ಧಾರವನ್ನು ಕೈಗೊಂಡರು ಅವರು.

ಸನ್ನಿವೇಶ – 2

ಶಾಲೆಯ ಸಮಾರಂಭವೊಂದರಲ್ಲಿ ಭಾಗವಹಿಸಲು ಅವರು ಹೋದರು. ಆಗ ಅಲ್ಲಿ, 'ಶಿಕ್ಷಣದ ಜ್ಞಾನ ಇದ್ದಾಗ ಮಾತ್ರ ನಾಡು ಅಭಿವೃದ್ಧಿ ಹೊಂದುತ್ತದೆ. ಆದ ಕಾರಣ ರಾಜ್ಯದ ತುಂಬಾ ಐವತ್ತು ಸಾವಿರ ಶಾಲೆಗಳನ್ನು ತೆರೆಯಲು ತೀರ್ಮಾನ ಕೈಗೊಂಡಿರುವೆ. ಮಕ್ಕಳೇ ನೀವು ಎಷ್ಟು ದೂರ ತಾನೇ ನಡೆಯಲು ಸಾಧ್ಯ ? ಬಹಳ ದೂರ ನಡೆದರೆ ಆಯಾಸಗೊಳ್ಳುವಿರಿ. ಆಗ ಹೇಗೆ ಕಲಿಯುವಿರಿ. ಅದರಿಂದ ಒಂದು ಮೈಲಿ ದೂರದಲ್ಲಿ ಪ್ರಾಥಮಿಕ ಶಾಲೆ, ಮೂರು ಮೈಲಿ ದೂರದಲ್ಲಿ ಮಾಧ್ಯಮಿಕ ಶಾಲೆ, ಐದು ಮೈಲಿ ದೂರದಲ್ಲಿ ಪ್ರೌಢಶಾಲೆಯನ್ನೂ ಪ್ರಾರಂಭಿಸುವಂತಹ ಯೋಜನೆಯಿದೆ' ಎಂದು ಅವರು ಹೇಳಿದರು.

ಸನ್ನಿವೇಶ – 3

ಆ ಮುಖ್ಯ ಅತಿಥಿಗಳನ್ನು ಶಾಲಾ ಸಮಾರಂಭವೊಂದರಲ್ಲಿ ರಾಷ್ಟ್ರಧ್ವಜಾರೋಹಣ ಮಾಡಲು ಬರುವಂತೆ ಆಹ್ವಾನಿಸಿದುದರಿಂದ, ಅವರು ವೇದಿಕೆಯಲ್ಲಿ ಎದ್ದು ನಿಂತರು. ಜೊತೆಗೆ ಅಲ್ಲಿ ನೆರೆದವರೆಲ್ಲರೂ ನಿಂತರು. ಆಗ ಅಲ್ಲಿ ನಿಂತಿದ್ದ ಒಬ್ಬ ವಿದ್ಯಾರ್ಥಿ ಪ್ರಜ್ಞೆ ತಪ್ಪಿ ನೆಲಕ್ಕೆ ಉರುಳಿದ. ಅಲ್ಲಿದ್ದ ಪ್ರತಿಯೊಬ್ಬರೂ ಗಾಬರಿಗೊಂಡರು. ತಣ್ಣೀರನ್ನು ಅವನ ಮುಖದ ಮೇಲೆ ಚಿಮುಕಿಸಿ ಅವನನ್ನು ಎಬ್ಬಿಸಿದರು.

ಪ್ರಜ್ಞೆಬಂದು ಎದ್ದು ನಿಂತ ಆ ವಿದ್ಯಾರ್ಥಿಯನ್ನು ಉದ್ದೇಶಿಸಿ ಅವರು, 'ಬೆಳಿಗ್ಗೆ ಏನಾದರೂ ತಿಂದೆಯಾ ಮಗು' ಎಂದು ಕೇಳಿದರು. ಅದಕ್ಕೆ ಆ ಬಾಲಕ, 'ಏನೂ ತಿಂದಿಲ್ಲ' ಎಂದು ಹೇಳಿದ. ಅದಕ್ಕವರು, 'ಯಾಕೆ ?' ಎಂದು ಕೇಳಿದರು. ಆ ಬಾಲಕ, 'ತಿನ್ನಲು ನಮ್ಮ ಮನೆಯಲ್ಲಿ ಏನೂ ಇರಲಿಲ್ಲ' ಎಂದ. ಇದನ್ನು ಕೇಳಿ ಅವರು ಶಾಲೆಗೆ ಬರುವ ಎಲ್ಲಾ ವಿದ್ಯಾರ್ಥಿಗಳಿಗೂ ಒಂದು ಹೊತ್ತಿನ ಊಟವನ್ನಾದರೂ ಕೊಡಬೇಕೆಂದು ನಿರ್ಧರಿಸಿದರು.

ಸನ್ನಿವೇಶ – 4



ಪರಮಕುಡಿ ಎಂಬಲ್ಲಿ ತುಂಬಿ ಹರಿಯುತ್ತಿದ್ದ ಹೊಳೆಯನ್ನು ನೋಡಿದಾಗ, ಅವರು ತಮ್ಮ ಜೊತೆಗಿದ್ದ ಶಿಕ್ಷಣಾಧಿಕಾರಿಗಳನ್ನು ಕುರಿತು ಕೇಳಿದರು : 'ಈ ಹೊಳೆಯಲ್ಲಿ ನೀರು ತುಂಬಿ ಹರಿಯುವಾಗ ಈ ಭಾಗದ ವಿದ್ಯಾರ್ಥಿಗಳು ಹೇಗೆ ಶಾಲೆಗೆ ಹೋಗುತ್ತಾರೆ?' ಎಂದರು. 'ಮಳೆಗಾಲದಲ್ಲಿ ಮಕ್ಕಳು ಶಾಲೆಗೆ ಬರುವುದಿಲ್ಲ ಸಾರ್' ಎಂದರು ಶಿಕ್ಷಣಾಧಿಕಾರಿಗಳು.

'ಹಾಗಾದರೆ ಈ ಜಾಗದಲ್ಲಿ ಒಂದು ಶಾಲೆಯನ್ನು ತೆರೆಯಬಹುದಲ್ಲ' ಎಂದರು ಅವರು. 'ಶಾಲಾ ಶಿಕ್ಷಣ ನಿಯಮದಂತೆ ಮೂರು ಮೈಲಿಯ ದೂರದೊಳಗೆ ಒಂದು ಪ್ರಾಥಮಿಕ ಶಾಲೆ ಇದ್ದರೆ ಪಕ್ಕದಲ್ಲಿ ಮತ್ತೊಂದು ಶಾಲೆಯನ್ನು ತೆರೆಯಲು ಅನುಮತಿ ಇಲ್ಲ' ಎಂದರು ಅಧಿಕಾರಿಯೊಬ್ಬರು. ಆ ಅಧಿಕಾರಿ ಮಾತು ಮುಗಿಸುವ ಮುನ್ನ, 'ನೀವು ಈ ಹೊಳೆಯನ್ನು ಕಾರಣ ತೋರಿಸಿ ಈ ಭಾಗದಲ್ಲಿ ಒಂದು ಶಾಲೆಯನ್ನು ತೆರೆಯಲು ಅನುಮತಿಯನ್ನು ಕೋರಿರಿ. ನಾನು ಏರ್ಪಾಡು ಮಾಡುತ್ತೇನೆ' ಎಂದರು.

ಆಡು ಮೇಯಿಸುತ್ತಿದ್ದ ಮಕ್ಕಳು ಶಾಲೆಯನ್ನು ಸೇರಿ ಕಲಿಯಲು ಮಾರ್ಗ ತೋರಿದವರು ಯಾರು ಗೊತ್ತೇ? ಮಕ್ಕಳು ಕಲಿಯಲು ಶಾಲೆಗೆ ಬಹಳ ದೂರ ನಡೆಯಬಾರದೆಂದು ಬಯಸಿದವರು ಯಾರು ಗೊತ್ತೇ ? ಕಲಿಯಲು ಶಾಲೆಗೆ ಬರುವ ಮಕ್ಕಳಿಗೆ ಒಂದು ವೇಳೆಯಾದರೂ ಉಪಹಾರ ನೀಡಬೇಕೆಂದು ಚಿಂತಿಸಿದವರು ಯಾರು ಗೊತ್ತೇ ? ಶಿಕ್ಷಣ ಇಲಾಖೆಯ ನಿಬಂಧನೆಗಳನ್ನು ವಿದ್ಯಾರ್ಥಿಗಳ ಕ್ಷೇಮಕ್ಕಾಗಿ ಬದಲಾಯಿಸಿ ಅವರು ಬದುಕುವ ಸ್ಥಳಗಳಲ್ಲಿಯೇ ಶಾಲೆಗಳನ್ನು ಪ್ರಾರಂಭಿಸಿದ ಧೀಮಂತ ವ್ಯಕ್ತಿ ಯಾರು ಗೊತ್ತೇ ?

ಆ ಮಹನೀಯರು ಯಾರೆಂದರೆ, 'ಶಿಕ್ಷಣದ ಕಣ್ತೆರೆಸಿದ ಧೀಮಂತ ಚೇತನ' ಎಂದು ತಂದೆ ಪೆರಿಯಾರ್ ಅವರಿಂದ ಮನಸಾರೆ ಹೊಗಳಲ್ಪಟ್ಟ ಮೇರು ಸದೃಶ ವ್ಯಕ್ತಿ, ಧೀಮಂತ ನಾಯಕ, 'ಕಾಮರಾಜರ್' ಅವರು.



ತಿಳಿದುಕೊಳ್ಳೋಣ

ಕಾಮರಾಜರ ಪ್ರಖ್ಯಾತ ಹೆಸರುಗಳು

ಓದದ ಮೇಧಾವಿ

ನಾಯಕರನ್ನು ಸೃಷ್ಟಿಸಿದವರು

ಕರ್ಮವೀರರು

ಕಪ್ಪು ಗಾಂಧಿ

ಬಡವರ ಬಂಧು

ಕಾಮರಾಜರ ಶೈಕ್ಷಣಿಕ ಕಾರ್ಯಗಳು

ಕಾಮರಾಜರು ಮೊಟ್ಟಮೊದಲು ಸಚಿವರಾಗಿ ಪದವಿ ಪ್ರಮಾಣವನ್ನು ಸ್ವೀಕರಿಸಿದಾಗ, ಆರು ಸಾವಿರ ಪ್ರಾಥಮಿಕ ಶಾಲೆಗಳು ಮುಚ್ಚಲ್ಪಟ್ಟಿದ್ದವು; ಆ ಶಾಲೆಗಳನ್ನು ತಕ್ಷಣ ತೆರೆಯುವಂತೆ ಆದೇಶ ಹೊರಡಿಸಿದರು. ರಾಜ್ಯದ ತುಂಬೆಲ್ಲ ಉಚಿತ ಹಾಗೂ ಕಡ್ಡಾಯ ಶಿಕ್ಷಣ ಕಾಯ್ದೆಯನ್ನು ಹೊರಡಿಸಿ ತೀವ್ರ ನಿಗಾ ವಹಿಸಿದರು. ವಿದ್ಯಾರ್ಥಿಗಳು ಹಸಿವಿಲ್ಲದೆ ಶಿಕ್ಷಣ ಪಡೆಯಲು ಮಧ್ಯಾಹ್ನದ ಉಪಾಹಾರ ಯೋಜನೆಯನ್ನು ಜಾರಿಗೆ ತಂದರು. ಶಾಲೆಯಲ್ಲಿ ಯಾವುದೇ ಭೇದಭಾವವಿಲ್ಲದೆ ಮಕ್ಕಳು ಶಿಕ್ಷಣ ಪಡೆಯಲು ಸಮವಸ್ತ್ರ ಯೋಜನೆಯನ್ನು ಜಾರಿಗೆ ತಂದರು. ಶಾಲೆಗಳ ವಸತಿ ಸೌಲಭ್ಯವನ್ನು ಅಭಿವೃದ್ಧಿ ಪಡಿಸಲು ಶಾಲಾಭಿವೃದ್ಧಿ ಸಮ್ಮೇಳನಗಳನ್ನು ನಡೆಸಿದರು. ತಮಿಳುನಾಡಿನಲ್ಲಿ ಹಲವಾರು ಉಪಗ್ರಂಥಾಲಯಗಳನ್ನು ಸ್ಥಾಪಿಸಿದರು. ವಿದ್ಯಾರ್ಥಿಗಳು ಪ್ರೌಢಶಿಕ್ಷಣ ಪಡೆಯಲು ತಾಂತ್ರಿಕ ವಿದ್ಯಾಲಯಗಳನ್ನು (Engineering College), ವೈದ್ಯಕೀಯ ಮಹಾವಿದ್ಯಾಲಯಗಳು, ಶಿಕ್ಷಕರ ತರಬೇತಿ ಸಂಸ್ಥೆಗಳನ್ನು ಹೊಸತಾಗಿ ಪ್ರಾರಂಭಿಸಿದರು. ಹೀಗೆ ಶೈಕ್ಷಣಿಕ ಕ್ರಾಂತಿಗೆ ನಾಂದಿ ಹಾಡಿದ ನಾಯಕರೇ ಕರ್ಮವೀರರಾದ ಕಾಮರಾಜರ್ ಅವರು.

ತಿಳಿದುಕೊಳ್ಳೋಣ

ತಮಿಳುನಾಡು ಸರ್ಕಾರ ಶ್ರೀ. ಕಾಮರಾಜರ್ ಅವರಿಗೆ ನೀಡಿದ ಗೌರವ, ಪ್ರಶಸ್ತಿ, ಬಿರುದು ಸನ್ಮಾನಗಳು

* ಮಧುರೈ ವಿಶ್ವವಿದ್ಯಾಲಯಕ್ಕೆ, 'ಮಧುರೈ ಕಾಮರಾಜರ್ ವಿಶ್ವವಿದ್ಯಾಲಯ' ಎಂದು ನಾಮಕರಣ ಮಾಡಲಾಗಿದೆ.
* ಕೇಂದ್ರ ಸರ್ಕಾರವು 1976ರಲ್ಲಿ, 'ಭಾರತ ರತ್ನ' ಬಿರುದನ್ನು ನೀಡಿ ಗೌರವಿಸಿದೆ.
* ಕಾಮರಾಜರ್ ಅವರು ಜೀವಿಸಿದ ಚೆನ್ನೈ ನಿವಾಸ ಹಾಗೂ ವಿರುದುನಗರದಲ್ಲಿರುವ ಅವರ ನಿವಾಸವನ್ನು ರಾಜ್ಯದ ಆಸ್ತಿ ಎಂದು ಪರಿಗಣಿಸಿ ಸ್ಮಾರಕಗಳನ್ನಾಗಿ ಅಭಿವೃದ್ಧಿಗೊಳಿಸಲಾಗಿದೆ.
* ಚೆನ್ನೈ ಮಹಾನಗರದ ಮೆರೀನಾ ಕಡಲ ತೀರದಲ್ಲಿ ಅವರ ವಿಗ್ರಹವನ್ನು ನಿಲ್ಲಿಸಲಾಗಿದೆ.
* ಚೆನ್ನೈ ಮಹಾನಗರದ ರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಕಾಮರಾಜರ ಹೆಸರನ್ನು ಇಡಲಾಗಿದೆ.
* ಕನ್ಯಾಕುಮಾರಿಯಲ್ಲಿ 02.10.2000ದಲ್ಲಿ ಕಾಮರಾಜರ ಹೆಸರಿನಲ್ಲಿ ಮಣಿಮಂಟಪವನ್ನು ಸ್ಥಾಪಿಸಲಾಗಿದೆ.

ಪ್ರಶ್ನೋತ್ತರಗಳು

I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.

1. ಆಡು ಮೇಯಿಸುತ್ತಿದ್ದ ಮಕ್ಕಳನ್ನು ಕುರಿತು ಕಾಮರಾಜರು ಏನೆಂದರು ?
2. ಕಾಮರಾಜರ ಕಾಲದಲ್ಲಿ ಪ್ರಾರಂಭಿಸಿದ ಶಿಕ್ಷಣ ಸಂಸ್ಥೆಗಳು ಯಾವುವು ?
3. ಕಾಮರಾಜರು ಮುಖ್ಯಮಂತ್ರಿಗಳಾದಾಗ ಮೊದಲು ಕೈಗೊಂಡ ಕಾರ್ಯವೇನು ?

II. ಕೆಳಗಿನ ಪ್ರಶ್ನೆಗಳಿಗೆ ಮೂರ್ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.

1. ಕಾಮರಾಜರ ಮಧ್ಯಾಹ್ನದ ಉಪಾಹಾರ ಯೋಜನೆಯನ್ನು ಕುರಿತು ಬರೆಯಿರಿ.
2. ಕಾಮರಾಜರು ಶಿಕ್ಷಣಕ್ಕೆ ನೀಡಿದ ಕೊಡುಗೆಗಳೇನು?
3. ಪರಮಕುಡಿಯಲ್ಲಿ ನಡೆದ ಘಟನೆಯನ್ನು ವಿವರಿಸಿ.

III.ಕೆಳಗಿನ ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ.

1. ನೀವು ಮುಖ್ಯಮಂತ್ರಿಯಾದರೆ ಶಿಕ್ಷಣ ಕ್ಷೇತ್ರಕ್ಕೆ ನಿಮ್ಮ ಕೊಡುಗೆಯೇನು ಎಂಬುದನ್ನು ಕುರಿತು ಚಿಂತಿಸಿ.

ಭಾಷಾಭ್ಯಾಸ

I. ಸರಿಯಾದ ಉತ್ತರಗಳನ್ನು ಆರಿಸಿ ಬರೆಯಿರಿ.

1. ಶಾಲೆಗೆ ಹೋಗದಿರಲು ಆಡು ಮೇಯಿಸಿದ ಮಕ್ಕಳು ಹೇಳಿದ ಕಾರಣ.

   ಅ) ಆಡು ಮೇಯಿಸಲು ಆಳಿಲ್ಲ

   ಆ) ಊರಿನಲ್ಲಿ ಶಾಲೆಯಿಲ್ಲದಿರುವುದು

ಇ) ದಾರಿ ಗೊತ್ತಿಲ್ಲ
ಈ) ಸಾರಿಗೆ ಸೌಲಭ್ಯಗಳಿಲ್ಲ

2. ವಿದ್ಯಾರ್ಥಿ – ಈ ಪದವನ್ನು ಬಿಡಿಸಿ ಬರೆದಾಗ _____
ಅ) ವಿದ್ಯ+ಅರ್ಥಿ ಆ) ವಿದ್ಯಾ+ರ್ಥಿ
ಇ) ವಿದ್ಯೆ+ಅರ್ಥಿ ಈ) ವಿದ್ಯಾ+ಅರ್ಥಿ

3. ಉಪ+ಆಹಾರ – ಈ ಶಬ್ದಗಳನ್ನು ಕೂಡಿಸಿ ಬರೆದಾಗ _____
ಅ) ಉಪಹಾರ ಆ) ಉಪಾಹಾರ
ಇ) ಉಪಾಆಹಾರ ಈ) ಉಪಾಹರ

4. ಗಾಬರಿ – ಈ ಪದದ ಅರ್ಥ _____
ಅ) ಸಂತೋಷ ಆ) ಭಯ
ಇ) ಸುಖ ಈ) ಸಂತೃಪ್ತಿ

5. ಕೆಳಗಿನ ಪದಗಳನ್ನು ಬಳಸಿ ಸ್ವಂತ ವಾಕ್ಯಗಳನ್ನು ರಚಿಸಿ.
ಅ) ತರಗತಿ ಆ) ಪ್ರೌಢಶಿಕ್ಷಣ
ಇ) ಸಮವಸ್ತ್ರ ಈ) ಸಂಭಾಷಣೆ
ಉ) ರಕ್ಷಣೆ

6. ಕೆಳಗಿನ ಪದಗಳನ್ನು ಬಿಡಿಸಿ ಬರೆದು ಸಂಧಿಯ ಹೆಸರನ್ನು ತಿಳಿಸಿ
ಅ) ಶಿಕ್ಷಣಾಧಿಕಾರಿ ಆ) ಮಳೆಗಾಲ
ಇ) ಕಣ್ತೆರೆಸಿದ ಈ) ಘಟನೆಯೊಂದು
ಉ) ಕೈಗೊಂಡು ಊ) ಧ್ವಜಾರೋಹಣ

7. ಕೆಳಗಿನ ಪದಗಳ ವಿರುದ್ಧ ಪದಗಳನ್ನು ಬರೆಯಿರಿ.
ಅ) ಸಾರ್ವಜನಿಕ ಆ) ಅಭಿವೃದ್ಧಿ
ಇ) ಚೇತನ ಈ) ಆಯಾಸ
ಉ) ಕ್ರಾಂತಿ

II. ಹೊಂದಿಸಿ ಬರೆಯಿರಿ.

1.	ಅಣ್ಣಾ ಮಲೈ ವಿಶ್ವವಿದ್ಯಾಲಯ	ಚೆನ್ನೈ
2.	ಭಾರತೀಯಾರ್ ವಿಶ್ವವಿದ್ಯಾಲಯ	ಚೆನ್ನೈ
3.	ಪೆರಿಯಾರ್ ವಿಶ್ವವಿದ್ಯಾಲಯ	ಚಿದಂಬರಂ
4.	ಎಂ.ಜಿ.ಆರ್. ವಿಶ್ವವಿದ್ಯಾಲಯ	ಕೊಯಮುತ್ತೂರು
5.	ಅಣ್ಣಾ ವಿಶ್ವವಿದ್ಯಾಲಯ	ಸೇಲಂ
6	.ಭಾರತಿದಾಸನ್ ವಿಶ್ವವಿದ್ಯಾಲಯ	ತಿರುಚ್ಚಿ.

III. ಮಾದರಿಯಂತೆ ವಾಕ್ಯ ರಚಿಸಿರಿ.

1. ನೆರೆ :

ಕ್ರಿಯಾಪದ = ಗುಂಪುಗೂಡು – 'ಜನರು ಗುಂಪುಗೂಡಿ ಬಂದರು'.

ನಾಮಪದ = ಪ್ರವಾಹ – 'ಪ್ರವಾಹದಿಂದಾಗಿ ಜನರು ತತ್ತರಿಸಿದರು'.

2. ತೆರೆ :

ಕ್ರಿಯಾಪದ = ತೆಗೆಯುವುದು–'ದ್ವಾರಪಾಲಕನು ಬಾಗಿಲನ್ನು ತೆರೆದನು'.

ನಾಮಪದ = ಪರದೆ – 'ನಾಟಕದಲ್ಲಿ ತೆರೆಯನ್ನು ತೆಗೆಯಲಾಯಿತು'.

1. ಕರೆ 2. ಹೊಳೆ 3. ಬರ 4. ಹರಿ

IV. ಬಿಟ್ಟ ಸ್ಥಳಗಳನ್ನು ಸರಿಯಾದ ಪದಗಳಿಂದ ತುಂಬಿರಿ.

1. ಮಕ್ಕಳು ಶಾಲೆಯಲ್ಲಿ ಭಾವೈಕ್ಯದಿಂದ ಕಲಿಯಲು _____ ಜಾರಿಗೆ ತಂದರು.

2. ಕಾಮರಾಜರು, 'ಶಿಕ್ಷಣದ ಕಣ್ಣನ್ನು ತೆರೆಸಿದವರು' ಎಂದು ಹೊಗಳಿದವರು _____ .

ಕಲಿತದ್ದು – ಕಲಿಕೆಯ ಫಲ

1. ಕಾಮರಾಜರ ಜೀವನದಲ್ಲಿ ನಡೆದ ಸ್ವಾರಸ್ಯಕರವಾದ ಘಟನೆಯೊಂದನ್ನು ಅರಿತು, ತರಗತಿಯಲ್ಲಿ ಚರ್ಚಿಸಿ.
2. ಪ್ರಸ್ತುತ ಸರ್ಕಾರ ವಿದ್ಯಾರ್ಥಿಗಳಿಗೆ ನೀಡುತ್ತಿರುವ ಉಚಿತ ಹಾಗೂ ಉತ್ತಮ ಯೋಜನೆಗಳನ್ನು ಪಟ್ಟಿ ಮಾಡಿರಿ.

ಘಟಕ ನಾಲ್ಕು

ಉಪಪಠ್ಯ

ಪುಸ್ತಕಗಳು

– ಡಾ. ವೀಣಾ ಶಾಂತೇಶ್ವರ



'ಜಗತ್ತನ್ನು ಬೆಳಗಲು ಸೂರ್ಯ ಬೇಕು; ಬದುಕನ್ನು ಬೆಳಗಲು ಪುಸ್ತಕಗಳು ಬೇಕು' ಎನ್ನುವ ರವೀಂದ್ರನಾಥ ಟಾಗೂರರ ಮಾತು ಪುಸ್ತಕದ ಮಹತ್ವವನ್ನು ತಿಳಿಸುತ್ತದೆ. ಪುಸ್ತಕವು ಶಿಕ್ಷಣದ ಭಾಗವಾಗಿ, ಬೋಧನೆಯ ಭಾಗವಾಗಿ ಬಳಕೆಗೆ ಬಂದು ಆ ಮೂಲಕ ಆದರ್ಶ ವ್ಯಕ್ತಿತ್ವವನ್ನು ರೂಪಿಸುವಲ್ಲಿ, ನೈತಿಕ ಮೌಲ್ಯಗಳನ್ನು ವಿಸ್ತರಿಸುವಲ್ಲಿ ಸಂಸ್ಕೃತಿ ಪ್ರಸಾರ ಮಾಧ್ಯಮವಾಗಿ ಬಳಕೆಯಾಗಿರುವುದನ್ನು ಕಾಣುತ್ತೇವೆ. ಹಾಗಾಗಿ ವಿದ್ಯಾರ್ಥಿಗಳು ಈ ಎಲ್ಲಾ ಲಾಭಗಳನ್ನೂ ಪಡೆಯಲು, ಜ್ಞಾನ ವಿಕಾಸ ಹೊಂದಲು ಪುಸ್ತಕಗಳನ್ನು ಅಧ್ಯಯನ ಮಾಡಬೇಕೆಂದು ತಿಳಿಸುವುದು ಈ ಲೇಖನದ ಉದ್ದೇಶವಾಗಿದೆ.



'ಪುಸ್ತಕಗಳು ಜ್ಞಾನ ಭಂಡಾರದ ಕೀಲಿ ಕೈ ಇದ್ದಂತೆ' ಎನ್ನುವ ಮಾತು ಹಳೆಯದಾದರೂ ಅದು ಚಿರಂತನ ಸತ್ಯ. ಜಗತ್ತಿನ ಎಲ್ಲ ಕಾಲದ ಜ್ಞಾನಿಗಳೂ ತಮ್ಮ ಸಮಸ್ತ ಜ್ಞಾನವನ್ನೂ ಪುಸ್ತಕ ರೂಪದಲ್ಲಿ ತಮ್ಮ ಹಾಗೂ ಮುಂದಿನ ಪೀಳಿಗೆಗೆ ಬಳುವಳಿಯಾಗಿ ಕೊಟ್ಟು ಹೋಗಿರುತ್ತಾರೆ. ಎಲ್ಲರಿಗೂ ಎಲ್ಲ ಸಂದರ್ಭಗಳಲ್ಲೂ ನಿಲುಕಬಹುದಾದ ಅಮೂಲ್ಯ ಸಂಪತ್ತು ಇದು. ಈ ನಿಧಿಯ ಮೌಲ್ಯದ ಅರಿವು ಇದ್ದವರು ಅದನ್ನು ಬಾಚಿ ಬಳಿದುಕೊಂಡು ತಮ್ಮ ಅರಿವಿನ ಪರಿಧಿಯನ್ನು ವಿಸ್ತರಿಸಿಕೊಳ್ಳುತ್ತಲೇ ಬಂದಿದ್ದಾರೆ. ಬೊಗಸೆಗಟ್ಟಲೆ ತುಂಬಿಕೊಂಡು ಎಷ್ಟು ಸವಿದರೂ ಎಂದೂ ಮುಗಿಯದ, ಆಳವಾದ ಸಿಹಿನೀರಿನ ಕೊಳಗಳು ಈ ಪುಸ್ತಕಗಳು. ಅಜ್ಞರಿಗೆ ಪುಸ್ತಕಗಳಲ್ಲಿ ಅಡಗಿರುವ ನಿಧಿಯ ಅರಿವಿರುವುದಿಲ್ಲ. ತಾತ್ಕಾಲಿಕ ಸುಖ ನೀಡುವಂತಹ ಹಣ, ವೈಭವ, ಅಂತಸ್ತು, ಕೀರ್ತಿ, ಅಧಿಕಾರ... ಇತ್ಯಾದಿ ಅರ್ಥಹೀನ ಪ್ರಲೋಭನೆಗಳನ್ನು ಅವರು ಬೆನ್ನಟ್ಟುತ್ತಾರೆ. ಅವುಗಳಿಗಾಗಿಯೇ ಬದುಕಿ, ಅವುಗಳಿಗಾಗಿಯೇ ಸಾಯುತ್ತಾರೆ. ಶಾಶ್ವತವಾಗಿ ಮನಸ್ಸನ್ನು ಮುದಗೊಳಿಸಬಲ್ಲ ಮೌಲಿಕವಾದ ಪುಸ್ತಕ ಪ್ರಪಂಚದ ಲಾಭಗಳಿಂದ ಅವರು ವಂಚಿತರಾಗಿಯೇ ಉಳಿಯುತ್ತಾರೆ. ಅಂಥವರ ಬಗ್ಗೆ, 'ಅಯ್ಯೋ ಪಾಪ!' ಎನ್ನಿಸುತ್ತದೆ.

'ಈ ಜೀವನದ ಸಾರ ಸರ್ವಸ್ವವನ್ನೂ, ಸಮಸ್ತ ಸುಖ ಸಂತೋಷಗಳನ್ನೂ ಪರಿಶೋಧಿಸಿ, ಈ ಎಲ್ಲದರ ತಿರುಳನ್ನು ಜೇನುತುಪ್ಪದ ಹಾಗೆ ಬೇರ್ಪಡಿಸಿ, ಜ್ಞಾನಿಗಳು ಪುಸ್ತಕಗಳಲ್ಲಿ ಪ್ರಸ್ತುತ ಪಡಿಸುತ್ತಾರೆ' ಎಂದು ಪ್ರಸಿದ್ಧ ಚಿಂತಕ ಮ್ಯಾಥ್ಯೂ ಆರ್ನಾಲ್ಡ್ ಹೇಳಿದ್ದಾನೆ. ಸಾಮಾನ್ಯ ಜನರಿಗೆ ಸುಲಭವಾಗಿ ತಿಳಿಯುವ ಹಾಗೆ ಜೀವನದ ಮರ್ಮವನ್ನೂ, ಸಂಧಿಗ್ಧತೆಯನ್ನೂ, ಅರ್ಥಪೂರ್ಣತೆಯನ್ನೂ ಪುಸ್ತಕಗಳು ವಿವರಿಸುತ್ತವೆ.

ಒಂದು ಒಳ್ಳೆಯ ಪುಸ್ತಕವು ಕಷ್ಟಕಾಲದಲ್ಲಿ ಸ್ನೇಹಿತನಾಗುತ್ತದೆ. ಸಮಸ್ಯೆಗಳಿಗೆ ಪರಿಹಾರ ನೀಡುತ್ತದೆ,

ಏಕಾಕಿತನದ ಭಾರವನ್ನು ಗಣನೀಯವಾಗಿ ಕಡಿಮೆ ಮಾಡುತ್ತದೆ. ಎಲ್ಲಕ್ಕಿಂತ ಹೆಚ್ಚಾಗಿ ಅದು ಎಂತಹ ಆಳವಾದ ದುಃಖವನ್ನೂ ಮರೆಯಲು ಸಹಾಯ ಮಾಡುತ್ತದೆ.

ಪುಸ್ತಕಗಳಿಂದ ಈ ಎಲ್ಲಾ ಲಾಭಗಳನ್ನೂ ಹೊಂದಬೇಕಾದಲ್ಲಿ ವ್ಯಕ್ತಿಯೊಬ್ಬ ಸಹೃದಯಿಯಾಗಿರುವುದು ಆವಶ್ಯಕ. ಜೀವನದ ಬಗ್ಗೆ ರಚನಾತ್ಮಕ ದೃಷ್ಟಿಯಲ್ಲಿ, ಮೌಲ್ಯಗಳನ್ನು ಗೌರವಿಸುವ, ಒಳ್ಳೆಯದನ್ನು ಮತ್ತು ಸುಂದರವಾದುದನ್ನು ಪ್ರೀತಿಸುವ ಮನಸ್ಸು ಹಾಗೂ ಹೃದಯವಂತಿಕೆ ವ್ಯಕ್ತಿಗೆ ಇರಬೇಕು. ಅಂದಾಗಲೇ ಆತ ಪುಸ್ತಕಗಳನ್ನು ಓದುವ ಹಾಗೂ ಪ್ರೀತಿಸುವ ಮತ್ತು ಅವುಗಳಿಂದ ವ್ಯಕ್ತಿತ್ವವನ್ನು ಉನ್ನತಗೊಳಿಸಿಕೊಳ್ಳುವ ಸಾಧ್ಯತೆ ಇರುತ್ತದೆ.

ದಿನದಿನಕ್ಕೂ ಭ್ರಷ್ಟವಾಗುತ್ತಿರುವ ಇಂದಿನ ಸಮಾಜದಲ್ಲಿ ಯಾವ ರಾಜಕೀಯ ಭಾಷಣಗಳಿಗೂ, ಯಾವ ಸಾಮಾಜಿಕ ಯೋಜನೆಗಳಿಗೂ, ಯಾವ ಧಾರ್ಮಿಕ ಉಪದೇಶಗಳಿಗೂ, ಸಾಧ್ಯವಾಗದಂತಹ ಮನುಷ್ಯರ ಮನಸ್ಸುಗಳ ಪರಿವರ್ತನೆಯ ಕೆಲವು ಒಳ್ಳೆಯ ಪುಸ್ತಕಗಳಿಂದ ಮಾತ್ರ ಆಗಬಹುದು.

ಕೃತಿ–ಕರ್ತೃ ಪರಿಚಯ



ಡಾ. ವೀಣಾ ಶಾಂತೇಶ್ವರ

ಡಾ. ವೀಣಾ ಶಾಂತೇಶ್ವರ : ಇವರು ಧಾರವಾಡದ ಕರ್ನಾಟಕ ಕಲಾ ವಿದ್ಯಾಲಯದಲ್ಲಿ ಪ್ರಾಚಾರ್ಯರಾಗಿದ್ದಾರೆ. ಇವರು ಇಂಗ್ಲಿಷ್, ಫ್ರೆಂಚ್, ಕನ್ನಡ ಹಾಗೂ ಹಿಂದಿ ಭಾಷೆಗಳಲ್ಲಿ ಪಾಂಡಿತ್ಯ ಹೊಂದಿದ್ದಾರೆ. ಡಾ. ವೀಣಾ ಅವರು ಕಥೆ, ಕಾದಂಬರಿ, ವಿಮರ್ಶೆ ಅನುವಾದ ಹಾಗೂ ಸಂಪಾದನಾ ಕೃತಿಗಳನ್ನು ಪ್ರಕಟಿಸಿ ಕನ್ನಡ ಸಾರಸ್ವತ ಲೋಕಕ್ಕೆ ಅರ್ಪಿಸಿದ್ದಾರೆ. ಕರ್ನಾಟಕ ಸಾಹಿತ್ಯ ಅಕಾಡೆಮಿ ಗೌರವ ಪ್ರಶಸ್ತಿ, ಅನುಪಮಾ ಪ್ರಶಸ್ತಿ, ಮಲ್ಲಿಕಾ ದತ್ತಿ ಪ್ರಶಸಿ, ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಮುಂತಾದ ಪ್ರಶಸ್ತಿ ಪುರಸ್ಕಾರಗಳಿಗೆ ಭಾಜನರಾಗಿದ್ದಾರೆ. ಇವರ ಕಥೆಗಳು ಹನ್ನೊಂದು ಭಾಷೆಗಳಿಗೆ ಅನುವಾದಗೊಂಡಿವೆ. ಪ್ರಸ್ತುತ ಈ ಪಾಠವನ್ನು ಶಿವಕುಮಾರ ಸ್ವಾಮಿಗಳು ಸಂಪಾದಿಸಿರುವ, 'ಪುಸ್ತಕ ಸಂಸ್ಕೃತಿ' ಎಂಬ ಕೃತಿಯಿಂದ ಆರಿಸಿಕೊಳ್ಳಲಾಗಿದೆ.

ಪದಗಳ ಅರ್ಥ

ಭಂಡಾರ–ಸಂಗ್ರಹ; ಚಿರಂತನ–ಶಾಶ್ವತವಾದ; ಬಳುವಳಿ–ಉಡುಗೊರೆ; ಪ್ರಲೋಭನೆ–ಆಮಿಷ; ಸಾರಸರ್ವಸ್ವ–ಸಕಲ ಸತ್ವವನ್ನೂ ಪ್ರಕಟಿಸು, ಎಲ್ಲವೂ; ಮರ್ಮ–ರಹಸ್ಯ; ಸಂದಿಗ್ಧತೆ–ಇಕ್ಕಟ್ಟು; ಸಂಕೀರ್ಣ–ಜಟಿಲ; ಸಹೃದಯಿ–ಸಹಾನುಭೂತಿಯುಳ್ಳ, ಕಲೆಯನ್ನು ಅರಿತು ಆಸ್ವಾದಿಸುವವ; ಭ್ರಷ್ಟ–ದಾರಿ ತಪ್ಪಿದ; ಅಂತಸ್ತು–ದರ್ಜೆ, ಅಜ್ಞ–ಅಜ್ಞಾನಿ, ತಿಳುವಳಿಕೆಯಿಲ್ಲದವ.

ಪ್ರಶ್ನೋತ್ತರಗಳು

I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯದಲ್ಲಿ ಉತ್ತರಿಸಿ.

1. ಜ್ಞಾನಿಗಳು ತಮ್ಮ ಮುಂದಿನ ಪೀಳಿಗೆಗೆ ಕೊಟ್ಟು ಹೋಗುವ ಬಳುವಳಿ ಯಾವುದು?

2. ಎಲ್ಲರಿಗೂ ಎಲ್ಲ ಸಂದರ್ಭಗಳಲ್ಲೂ ನಿಲುಕಬಹುದಾದ ಅಮೂಲ್ಯ ಸಂಪತ್ತು ಯಾವುದು ?

3. ತಾತ್ಕಾಲಿಕ ಸುಖ ನೀಡುವ ಪ್ರಲೋಭಗಳು ಯಾವುವು ?

4. ಜ್ಞಾನಿಗಳು ಪುಸ್ತಕಗಳಲ್ಲಿ ಯಾವ ತಿರುಳನ್ನು ಪ್ರಸ್ತುತ ಪಡಿಸುತ್ತಾರೆ ?

II. ಕೆಳಗಿನ ಪ್ರಶ್ನೆಗಳಿಗೆ ಮೂರ್ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.

1. ಅರಿವಿನ ಪರಿಧಿಯನ್ನು ವಿಸ್ತರಿಸಿಕೊಳ್ಳುವ ವಿಧಾನ ಯಾವುದು ?

2. ಸಾಮಾನ್ಯ ಜನರಿಗೂ ತಿಳಿಯುವ ಹಾಗೆ ಪುಸ್ತಕಗಳು ಏನನ್ನು ವಿವರಿಸುತ್ತವೆ ?

3. ಇಂದಿನ ಭ್ರಷ್ಟ ಸಮಾಜದಲ್ಲಿ ಒಳ್ಳೆಯ ಪುಸ್ತಕಗಳ ಪಾತ್ರವೇನು ?

III. ಕೆಳಗಿನ ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ.

1. ಎಂಥವರ ಬಗ್ಗೆ 'ಅಯ್ಯೋ ಪಾಪ!' ಎನ್ನಿಸುತ್ತದೆ? ವಿವರಿಸಿ.

2. ಪುಸ್ತಕಗಳಿಂದ ಲಾಭ ಪಡೆಯಬೇಕಾದಲ್ಲಿ ಬದುಕಿನ ಬಗ್ಗೆ ವ್ಯಕ್ತಿಗೆ ಇರಬೇಕಾದ ವಿಶೇಷತೆಗಳಾವುವು?

ಭಾಷಾಭ್ಯಾಸ

1. ಕೆಳಗಿನ ಪದಗಳಿಗೆ ತತ್ಸಮ ತದ್ಭವಗಳನ್ನು ಬರೆಯಿರಿ.

ಪುಸ್ತಕ, ಜ್ಞಾನ, ದುಃಖ, ಹೃದಯ, ದೃಷ್ಟಿ, ನಿಧಿ, ದಿನ.

2. ಕೆಳಗಿನ ಪದಗಳಿಗೆ ವಿರುದ್ಧ ಪದಗಳನ್ನು ಬರೆಯಿರಿ.

ಜ್ಞಾನಿ, ಮೌಲ್ಯ, ತಾತ್ಕಾಲಿಕ, ಸುಖ, ಕೀರ್ತಿ, ಪಾಪ, ಪ್ರಸಿದ್ಧ, ಒಳ್ಳೆಯ, ಲಾಭ, ಸಂತೋಷ.

3. ಕೆಳಗಿನ ಪದಗಳನ್ನು ಬಿಡಿಸಿ ಬರೆದು ಸಂಧಿಯನ್ನು ಹೆಸರಿಸಿ.

ಜ್ಞಾನವನ್ನು, ಬಳುವಳಿಯಾಗಿ, ಪರಿಧಿಯನ್ನು, ಆಳವಾದ, ಮೌಲ್ಯಗಳನ್ನು, ಪುಸ್ತಕಗಳಲ್ಲಿ.

4. ಬಿಟ್ಟ ಸ್ಥಳ ತುಂಬಿರಿ.

ಅ. _____ಗಳು ಜ್ಞಾನ ಭಂಡಾರದ ಕೀಲಿಕೈ ಇದ್ದಂತೆ.

ಆ.ಒಂದು ಒಳ್ಳೆಯ ಪುಸ್ತಕ ಕಷ್ಟಕಾಲದಲ್ಲಿ _____ ಆಗುತ್ತದೆ.

ಇ.'ಪುಸ್ತಕಗಳು' ಪಾಠದ ಲೇಖಕರು _____.

5. ಮಾದರಿಯಂತೆ ಬರೆಯಿರಿ :

ಮಾದರಿ : ಕರ್ಮ–ಕಾರ್ಮಿಕ

ಅ. ಧರ್ಮ – _____ .
ಆ. ಯಂತ್ರ – _____ .
ಇ. ತಂತ್ರ – _____ .
ಈ. ಸಮಾಜ – _____ .
ಉ. ಮೌಲ್ಯ – _____ .
ಊ. ಮಂತ್ರ – _____ .

6. ಕೆಳಗಿನ ಪದಗಳನ್ನು ಉಪಯೋಗಿಸಿ ಸ್ವಂತ ವಾಕ್ಯ ರಚಿಸಿರಿ.

ಬಳುವಳಿ, ಪುಸ್ತಕಗಳು, ಪ್ರಲೋಭನೆ, ಸಂಕೀರ್ಣ.

ಚಟುವಟಿಕೆ

1. ನಿಮ್ಮ ಮನೆಯಲ್ಲಿ ಒಂದು ಚಿಕ್ಕ ಪುಸ್ತಕ ಭಂಡಾರವನ್ನು ಪ್ರಾರಂಭಿಸಿ.
2. 'ನಾನು ಮೆಚ್ಚಿದ ಪುಸ್ತಕ' ಎನ್ನುವ ವಿಷಯದ ಬಗ್ಗೆ ಒಂದು ಪ್ರಬಂಧ ಬರೆಯಿರಿ.



ಘಟಕ ನಾಲ್ಕು

ನಾಮಪದ

ಭಾಷೆಯಲ್ಲಿರುವ ಶಬ್ದಗಳಲ್ಲಿ ಬಗೆಬಗೆಯ ಹೆಸರುಗಳನ್ನು ತಿಳಿಸತಕ್ಕವುಗಳಿಗೆ ನಾಮಪದ ಎಂಬ ಹೆಸರು ಬಂದಿದೆ. ಇದನ್ನು ನಾಮವಾಚಕ ಹಾಗೂ ವಸ್ತುವಾಚಕಗಳು ಎಂದು ಸಹ ಕರೆಯುತ್ತಾರೆ.

ವಸ್ತುಗಳ ಹೆಸರುಗಳನ್ನು ಹೇಳುವ ಪದಗಳೇ ವಸ್ತುವಾಚಕಗಳು. ವಸ್ತುಗಳನ್ನು ಚೇತನ(ಚೇತನವುಳ್ಳ), ಅಚೇತನ(ಚೇತನವಿಲ್ಲದ್ದು) ಎಂದು ಎರಡು ರೀತಿಯಲ್ಲಿ ವಿಭಾಗಿಸಲಾಗಿದೆ.

ಉದಾಹರಣೆಗೆ,

ಚೇತನವುಳ್ಳವು – ಮನುಷ್ಯ, ಪ್ರಾಣಿ, ಪಕ್ಷಿ, ಮುಂತಾದವು.

ಅಚೇತನವಾದವು – ನೆಲ, ಜಲ, ಹಣ್ಣು, ಕಾಯಿ, ಮನೆ, ಬೆಟ್ಟ ಮುಂತಾದವು.

1. ವಸ್ತುವಾಚಕ : ವಸ್ತು ವಾಚಕ(ನಾಮಪದ)ಗಳನ್ನು ಮೂರು ಭಾಗಗಳಾಗಿ ವಿಭಾಗ ಮಾಡಲಾಗಿದೆ. ಅವುಗಳೆಂದರೆ

1. ರೂಢನಾಮ.

2. ಅಂಕಿತನಾಮ.

3. ಅನ್ವರ್ಥ ನಾಮ.

1. ರೂಢನಾಮ : ಹಿಂದಿನ ಕಾಲದಿಂದಲೂ ಕರೆದುಕೊಂಡು ಬಂದಿರುವ (ರೂಢಿಯಿಂದ ಬಂದಿರುವ) ‘ ಹೆಸರುಗಳನ್ನು ರೂಢನಾಮ ಎಂದು ಕರೆಯುತ್ತೇವೆ.

ಉದಾಹರಣೆಗೆ,

ನದಿ, ಪರ್ವತ, ಹೆಂಗಸು, ಮರ, ದೇಶ, ಭಾಷೆ ಮುಂತಾದ ಪದಗಳು ರೂಢನಾಮಗಳು.

2. ಅಂಕಿತ ನಾಮ : ಒಬ್ಬ ವ್ಯಕ್ತಿ, ವಸ್ತು, ಸ್ಥಳ ಮುಂತಾದವುಗಳನ್ನು ಗುರುತಿಸುವುದಕ್ಕಾಗಿ ಇಟ್ಟ ಹೆಸರನ್ನು ಅಂಕಿತ ನಾಮ ಎಂದು ಕರೆಯುವರು.

ಉದಾಹರಣೆಗೆ,

ಕಾವೇರಿ, ನಕುಲ, ಹಿಮಾಲಯ, ಶಂಕರ, ಬೇವು, ಮಾವು, ಮುಂತಾದವು.

3. ಅನ್ವರ್ಥ ನಾಮ : ಅರ್ಥಕ್ಕೆ ಅನುಗುಣವಾಗಿ ರಚನೆಯಾದ ನಾಮಪದಗಳನ್ನು ಅನ್ವರ್ಥ ನಾಮ ಎಂದು ಕರೆಯುತ್ತೇವೆ.

ಉದಾಹರಣೆಗೆ,

ವ್ಯಾಪಾರಿ, ವಿದ್ವಾಂಸ, ಚಾಲಕ, ರೋಗಿ, ಶಿಕ್ಷಕ, ಕುರುಡ, ಕುಂಟ, ಕಿವುಡ ಇತ್ಯಾದಿ.

ಘಟಕ ಐದು

ಕಲೆ–ಸೌಂದರ್ಯ ಮೀಮಾಂಸೆ – ಆಧುನಿಕತೆ



ಕಲಿಕಾ ಉದ್ದೇಶಗಳು

- ಒಳ್ಳೆಯ ಗುಣಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳುವುದು.
- ಕನ್ನಡಿಗರ ಸಾಂಸ್ಕೃತಿಕ ಹಿರಿಮೆಯನ್ನು ತಿಳಿಯುವುದು.
- ಕನ್ನಡಿಗರ ಕಲೆ–ಶಿಲ್ಪಕಲೆಯ ಹಿರಿಮೆಯನ್ನು ತಿಳಿಯುವುದು.
- ಜಾನಪದ ಗೀತೆಗಳಲ್ಲಿ ವ್ಯಕ್ತವಾಗುವ ನಾಗರಿಕತೆ, ಆಚಾರ ವಿಚಾರಗಳನ್ನು ಗ್ರಹಿಸುವುದು.
- ನಾಮಪದಗಳ ವಿಧಗಳನ್ನು ತಿಳಿಯುವುದು.

ಘಟಕ
ಐದು

ಕಲೆ–ಸೌಂದರ್ಯ ಮೀಮಾಂಸೆ – ಆಧುನಿಕತೆ

ಕಾವ್ಯ ಕಣಜ	:	ತೂಗಿರೆ ರಂಗನ
ಪೂರಕ ಪದ್ಯ	:	ಸರ್ವಜ್ಞನ ತ್ರಿಪದಿಗಳು
ಗದ್ಯ ವಿಹಾರ	:	ಸುಗ್ಗಿಯ ಹಬ್ಬ–ಸಂಕ್ರಾಂತಿ
ಉಪಪಠ್ಯ	:	ಬೇಲೂರು–ಹಳೇಬೀಡು
ವ್ಯಾಕರಣ	:	ನಾಮಪದ





ಘಟಕ ಐದು

ತೂಗಿರೆ ರಂಗನ *

– ಪುರಂದರ ದಾಸರು



ಕೀರ್ತನೆಗಳು ಮನಸ್ಸಿಗೆ ನೆಮ್ಮದಿಯನ್ನೂ ಶಾಂತಿಯನ್ನೂ ನೀಡುತ್ತವೆ. ಕೀರ್ತನೆಗಳನ್ನು ಕೇಳಿದಾಗಲೂ, ಹಾಡಿದಾಗಲೂ ದೊರೆಯುವ ಸಂತೃಪ್ತಿ ವರ್ಣನಾತೀತವಾದುದು. ಕನ್ನಡಿಗರು ಜೀವನದಲ್ಲಿ ಎದುರಾಗುವ ಪ್ರತಿಯೊಂದು ಶುಭ ಸಮಾರಂಭಗಳಲ್ಲಿಯೂ ಒಂದಲ್ಲಾ ಒಂದು ರೀತಿಯ ಕೀರ್ತನೆ ಅಥವಾ ಹಾಡನ್ನು ಹೇಳುವುದನ್ನು ಕೇಳಿರುತ್ತೇವೆ. ಶ್ರೀಮಂತ ಸಾಂಸ್ಕೃತಿಕ ಹಿರಿಮೆಯನ್ನು ಬಿಂಬಿಸುವ ದಾಸರ ಕೀರ್ತನೆಗಳನ್ನು ನಾವೂ ಹಾಡೋಣ. ನಾಡಿನ ಸಾಂಸ್ಕೃತಿಕ ವೈಭವವನ್ನು ಸಾರೋಣ.



ತೂಗಿರೆ ರಂಗನ ತೂಗಿರೆ ಕೃಷ್ಣನ
ತೂಗಿರೆ ಅಚ್ಯುತಾನಂದನ
ತೂಗಿರೆ ವರಗಿರಿಯಪ್ಪ ತಿಮ್ಮಪ್ಪನ
ತೂಗಿರೆ ಕಾವೇರಿ ರಂಗಯ್ಯನ ॥ಪಲ್ಲವಿ॥

ನಾಗಲೋಕದಲ್ಲಿ ನಾರಾಯಣ ಮಲಗ್ಯಾನೆ
ನಾಗಕನ್ಯೆಯರು ತೂಗಿರೆ
ನಾಗವೇಣಿಯರು ನೇಣು ಪಿಡಿದುಕೊಂಡು
ಬೇಗನೆ ತೊಟ್ಟಿಲ ತೂಗಿರೆ ॥1॥

ಇಂದ್ರಲೋಕದಲ್ಲುಪೇಂದ್ರ ಮಲಗ್ಯಾನೆ
ಇಂದುಮುಖಿಯರೆಲ್ಲ ತೂಗಿರೆ
ಇಂದ್ರಕನ್ನಿಕೆಯರು ಚಂದದಿ ಬಂದು
ಮುಕುಂದನ ತೊಟ್ಟಿಲ ತೂಗಿರೆ ॥2॥

ಆಲದೆಲೆಯ ಮೇಲೆ ಶ್ರೀಲೋಲ ಮಲಗ್ಯಾನೆ
ನೀಲಕುಂತಳೆಯರು ತೂಗಿರೆ
ವ್ಯಾಳಶಯನ ಹರಿ ಮಲಗು ಮಲಗುಯೆಂದು
ಬಾಲಕೃಷ್ಣಯ್ಯನ ತೂಗಿರೆ ॥3॥

ಸಾಸಿರ ನಾಮನೆ ಸರ್ವೋತ್ತಮನೆಂದು
ಸೂಸುತ್ತ ತೊಟ್ಟಿಲ ತೂಗಿರೆ
ಲೇಸಾಗಿ ಮಡುವಿನೊಳ್ ಶೇಷನ ತುಳಿದಿಟ್ಟ
ದೋಷವಿದೂರನ ತೂಗಿರೆ ॥4॥

ಅರಳೆಲೆ ಮಾಗಾಯಿ ಕೊರಳ ಮುತ್ತಿನ ಹಾರ
ತರಳನ ತೊಟ್ಟಿಲ ತೂಗಿರೆ
ಸಿರಿದೇವಿ ರಮಣನೆ ಪುರಂದರ ವಿಠಲನೆ
ಕರುಣದಿ ಮಲಗೆಂದು ತೂಗಿರೆ ॥5॥

ಕವಿ–ಕಾವ್ಯ ಪರಿಚಯ

ಪುರಂದರ ದಾಸರು : ಈ ಕೀರ್ತನೆಯನ್ನು ಪುರಂದರ ದಾಸರ ಕೀರ್ತನೆಗಳಿಂದ ಆಯ್ದುಕೊಳ್ಳಲಾಗಿದೆ. ತಮ್ಮ ಗುರುಗಳಾದ ವ್ಯಾಸರಾಯರಿಂದ 'ದಾಸರೆಂದರೆ ಪುರಂದರ ದಾಸರಯ್ಯಾ' ಎಂದು ಹೊಗಳಿಸಿಕೊಂಡ ದಾಸಶ್ರೇಷ್ಠರಿವರು. ಇವರ ಪೂರ್ವಾಶ್ರಮದ ಹೆಸರು ಶ್ರೀನಿವಾಸ ನಾಯಕನೆಂದು ತಿಳಿದು ಬಂದಿದೆ. ಆಗರ್ಭ ಶ್ರೀಮಂತನಾಗಿದ್ದ ಇವರು ಯಾವುದೋ ಒಂದು ಸಂದರ್ಭದಲ್ಲಿ ದಾಸರಾಗಿ ವೈರಾಗ್ಯ ಹೊಂದಿದರೆಂದು ಪ್ರತೀತಿ. ಪುರಂದರ ವಿಠಲ ಎಂಬ ಅಂಕಿತದಿಂದ ಸಹಸ್ರಾರು ಕೀರ್ತನೆಗಳನ್ನು ರಚಿಸಿ ಹಾಡಿ ಹರಿಭಕ್ತಿ ಸುಧೆಯನ್ನು ಹರಿಸಿದ ಕೀರ್ತಿ ಇವರದು.

ಪದಗಳ ಅರ್ಥ

ಶ್ರೀಕೃಷ್ಣ–ಹರಿ; ಗಿರಿ–ಪರ್ವತ, ಬೆಟ್ಟ; ಕನ್ಯೆ–ಹುಡುಗಿ, ಹೆಣ್ಣುಮಗಳು; ಕಂದ–ಮಗು, ಕೂಸು; ಶಯನ–ನಿದ್ರೆ; ಸಾಸಿರ–ಸಾವಿರ; ಮಡು–ಸರೋವರ.

ಕವನದ ಭಾವಾರ್ಥ

ಈ ಕೀರ್ತನೆಯಲ್ಲಿ ದಾಸರು ಸೃಷ್ಟಿ, ಸ್ಥಿತಿ ಹಾಗೂ ಲಯ ಕಾರಣನೂ ಸರ್ವೋತ್ತಮನಾದವನೂ, ಪರಮಾತ್ಮನೂ ಆದ ಶ್ರೀಕೃಷ್ಣನನ್ನು ಹೆಂಗಸರು ತಮ್ಮ ಮನೆಯ ಮುದ್ದಿನ ಕೂಸೆಂದು ಭಾವಿಸಿ ಆತ ಸುಖವಾಗಿ ನಿದ್ರೆ ಮಾಡಲು ಬಯಸಿ ತೊಟ್ಟಿಲಿನಲ್ಲಿ ಹಾಕಿ ತೂಗುತ್ತಿದ್ದಾರೆ. ಆ ಮಹಾನುಭಾವನನ್ನು ತಮ್ಮ ಮಗುವೆಂದೇ ಭಾವಿಸುವ ರೀತಿ ಇಲ್ಲಿ ಅನನ್ಯವಾಗಿ ಚಿತ್ರಿತವಾಗಿದೆ.

ಪ್ರಶ್ನೋತ್ತರಗಳು

I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.

1. ಈ ಕೀರ್ತನೆಯನ್ನು ಮಲಗುವಂತೆ ಯಾರನ್ನು ಕೋರಲಾಗಿದೆ ?
2. ನಮ್ಮ ಮನೆಗೆ ಬರುವ ಅತಿಥಿಗಳನ್ನು ಆಹ್ವಾನಿಸುವ ಹಾಡನ್ನು ತಿಳಿಸಿರಿ ?

II. ಕೆಳಗಿನ ಪ್ರಶ್ನೆಗಳಿಗೆ ಮೂರ್ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.

1. ಈ ಪದ್ಯದಲ್ಲಿ ಕಂದನನ್ನು ಶ್ರೀಕೃಷ್ಣನಿಗೆ ಹೇಗೆ ಹೋಲಿಸಲಾಗಿದೆ.

ಭಾಷಾಭ್ಯಾಸ

I. ಸರಿಯಾದ ಉತ್ತರಗಳನ್ನು ಆರಿಸಿ ಬರೆಯಿರಿ.

1. ಗಿರಿಯಪ್ಪ

   ಅ) ಗಿರಿಯ+ಯಪ್ಪ ಆ) ಗಿರಿ+ಅಪ್ಪ

   ಇ) ಗಿರಿ+ಯಪ್ಪ ಈ) ಗಿರಿಯ+ಅಪ್ಪ

2. ರಂಗ ಎಂಬ ಹೆಸರು ಯಾರಿಗಿದೆ ?

   ಅ) ಕೃಷ್ಣ ಆ) ಶಿವ

   ಇ) ಇಂದ್ರ ಈ) ಹನುಮ

3. 'ಸಾಸಿರ' – ಈ ಶಬ್ದದ ಅರ್ಥ

   ಅ) ಸಾವಿರ ಆ) ಸಾವಿನ

   ಇ) ಸಾಸಿವೆ ಈ) ನೂರು

4. ಲೇಸಾಗಿ – ಈ ಪದವನ್ನು ಬಿಡಿಸಿ ಬರೆದಾಗಿ

   ಅ) ಲೇಸು+ಆಗಿ ಆ) ಲೇಸು+ಸಾಗಿ

   ಇ) ಲೇ+ಸಾಗಿ ಈ) ಲೇಸಾ+ಗಿ

5. ಮಲಗು – ಈ ಪದದ ವಿರುದ್ಧ ಪದ

   ಅ) ಏಳು ಆ) ನಿದ್ರಿಸು

   ಇ) ಕನಸು ಕಾಣು ಈ) ಬೀಳು

ಕಲಿತದ್ದು – ಕಲಿಕೆಯ ಫಲ

1. ನಿಮ್ಮ ಊರಿನ ದೇವಾಲಯಗಳ, ಹಬ್ಬಗಳ ಸಂದರ್ಭಗಳಲ್ಲಿ ಹಾಡುವ ಕೀರ್ತನೆಗಳನ್ನು ಕೇಳಿ ಆನಂದಿಸಿ.
2. ನಿಮ್ಮ ಕುಟುಂಬದ ಹಿರಿಯರಿಂದ ಗಾದೆ ಮಾತುಗಳನ್ನು ಸಂಗ್ರಹಿಸಿ ಓದಿರಿ.

ಘಟಕ ಐದು

ಸರ್ವಜ್ಞನ ತ್ರಿಪದಿಗಳು



ಸರ್ವಜ್ಞನು ತನ್ನ ವಚನಗಳಲ್ಲಿ ಸಾಮಾನ್ಯ ಜನರೂ ಅರ್ಥ ಮಾಡಿಕೊಳ್ಳುವ ಹಾಗೆ ಚಿಕ್ಕ ಚಿಕ್ಕ ಮಾತುಗಳಲ್ಲಿ ತನ್ನ ಲೋಕಾನುಭವವನ್ನೂ, ಪಾರಮಾರ್ಥಿಕ ವಿಚಾರಗಳನ್ನು ತಿಳಿಸಿದ್ದಾನೆ. ಇಲ್ಲಿನ ವಚನಗಳಲ್ಲಿ ಅತಿಥಿ ಸತ್ಕಾರ, ಆಸಕ್ತಿಯ ವಿಚಾರ, ಜ್ಞಾನದ ಮಹತ್ವ, ನುಡಿ ಹೇಗಿರಬೇಕೆಂಬುದನ್ನು ತಿಳಿಸಲಾಗಿದೆ.

ಅತಿಥಿ ಸತ್ಕಾರ

ಅನ್ನವನು ಇಕ್ಕುವುದು ನನ್ನಿಯನು ನುಡಿಯುವುದು
ತನ್ನಂತೆ ಪರರ ಬಗೆದಡೆ ಕೈಲಾಸ
ಬಿನ್ನಾಣವಕ್ಕು ಸರ್ವಜ್ಞ

ಆಸಕ್ತಿಯ ವಿಚಾರ

ಚಿತ್ತವಿಲ್ಲದೆ ಗುಡಿಯ ಸುತ್ತಿದಡೆ ಫಲವೇನು
ಎತ್ತು ಗಾಣವನು ಹೊತ್ತು ತಾ ನಿತ್ಯದಿ
ಸುತ್ತಿ ಬಂದಂತೆ ಸರ್ವಜ್ಞ

ನುಡಿ

ರಸಿಕನಾಡಿದ ಮಾತು ಶಶಿಯುದಿಸಿ ಬಂದಂತೆ
ರಸಿಕನಲ್ಲದವನ ಬರಿ ಮಾತು ಕಿವಿಗೆ ಕೂ
ರ್ದಸಿಯ ಬಡಿದಂತೆ ಸರ್ವಜ್ಞ

ಜ್ಞಾನದ ಮಹತ್ವ

ಜ್ಞಾನದಿಂ ಮೇಲಿಲ್ಲ ಶ್ವಾನನಿಂ ಕೀಳಿಲ್ಲ
ಭಾನುವಿಂದಧಿಕ ಬೆಳಗಿಲ್ಲ ಜಗದೊಳಗೆ
ಜ್ಞಾನವೇ ಮಿಗಿಲು ಸರ್ವಜ್ಞ

ತಂದೆಗೂ ಗುರುವಿಗೂ ಒಂದು ಅಂತರವುಂಟು
ತಂದೆ ತೋರುವನು ಸದ್ಗುರುವ ಗುರುರಾಯ
ಬಂಧನವ ಕಳೆವ ಸರ್ವಜ್ಞ

ಪದಗಳ ಅರ್ಥ

ನನ್ನಿ–ಸತ್ಯ, ನಿಜ; ಬಿನ್ನಾಣ–ಅಂದ; ಶ್ವಾನ–ನಾಯಿ; ಶಶಿ–ಚಂದ್ರ; ಭಾನು–ಸೂರ್ಯ; ಮಿಗಿಲು–ಹೆಚ್ಚು; ಕಳೆವ–ಬಿಡಿಸುವ.

ಪ್ರಶ್ನೋತ್ತರಗಳು

I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.

1. ಯಾವಾಗ ಕೈಲಾಸ ಬಿನ್ನಾಣವಾಗುತ್ತದೆ?
2. ಚಿತ್ತವಿಲ್ಲದೆ ಗುಡಿಯನ್ನು ಸುತ್ತುವುದು ಯಾವುದಕ್ಕೆ ಸಮವಾಗಿದೆ ?
3. ಜ್ಞಾನದ ಬಗ್ಗೆ ಸರ್ವಜ್ಞ ಏನು ಹೇಳುತ್ತಾನೆ ?
4. ತಂದೆ ಮತ್ತು ಗುರುವಿನ ಬಗ್ಗೆ ಸರ್ವಜ್ಞ ಏನು ಹೇಳುತ್ತಾನೆ ?
5. ರಸಿಕ ಹಾಗೂ ರಸಿಕನಲ್ಲದವನ ಮಾತುಗಳು ಹೇಗಿರುತ್ತವೆ ?

II. ಕೆಳಗಿನ ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ.

1. ಅತಿಥಿ ಮತ್ತು ಆಸಕ್ತಿಯ ಬಗ್ಗೆ ಸರ್ವಜ್ಞ ಏನೆಂದು ತಿಳಿಸಿದ್ದಾನೆ ?
2. ಜ್ಞಾನದ ಮಹತ್ವದ ಬಗ್ಗೆ ಸರ್ವಜ್ಞ ನೀಡಿದ ನಿದರ್ಶನಗಳನ್ನು ವಿವರಿಸಿ.
3. ಈ ಪದ್ಯಭಾಗದ ಸಾರಾಂಶವನ್ನು ಬರೆಯಿರಿ.

ಭಾಷಾಭ್ಯಾಸ

1. ಕೆಳಗಿನ ಪದಗಳಿಗೆ ಸಮಾನಾರ್ಥಕ ಪದಗಳನ್ನು ಬರೆಯಿರಿ.

   ನನ್ನಿ, ಬಿನ್ನಾಣ, ಫಲ, ಚಿತ್ತ, ಭಾನು, ಶಶಿ.

2. ಕೆಳಗಿನ ಪದಗಳನ್ನು ಬಳಸಿ ಸ್ವಂತವಾಕ್ಯಗಳನ್ನು ರಚಿಸಿ.

   ಫಲ, ಕೈಲಾಸ, ಮಿಗಿಲು, ಅಂತರ, ಬಂಧನ, ಕೂರ್ದಸಿ.

3. ಕೆಳಗಿನ ಪದಗಳ ವಿರುದ್ಧ ಪದಗಳನ್ನು ಬರೆಯಿರಿ.

   ಉಪಕಾರ, ಸ್ವರ್ಗ, ಹಿತ, ಸಜ್ಜನ, ಬಲ, ಆಸಕ್ತಿ.

4. ಕೆಳಗಿನ ಪದಗಳ ತತ್ಸಮ ತದ್ಭವ ರೂಪಗಳನ್ನು ಬರೆಯಿರಿ.

   ನಿತ್ಯ, ಶಶಿ, ಸ್ವರ್ಗ.

5. ಕೆಳಗಿನ ಪದಗಳನ್ನು ಬಿಡಿಸಿ ಬರೆದು ಸಂಧಿಯ ಹೆಸರನ್ನು ತಿಳಿಸಿ.

   ಪಾರಮಾರ್ಥಿಕ, ಲೋಕಾನುಭವ, ಸದ್ಗುರು, ಅನ್ನವನು, ಚಿತ್ತವಿಲ್ಲದೆ.

6. ಬಿಟ್ಟ ಸ್ಥಳದಲ್ಲಿ ಸರಿಯಾದ ಉತ್ತರಗಳನ್ನು ಬರೆಯಿರಿ.

   1. ತನ್ನಂತೆ _____ ಬಗೆದಡೆ _____ ಬಿನ್ನಾಣವಕ್ಕು.
   2. ರಸಿಕನಲ್ಲದವನ _____ ಕಿವಿಗೆ _____ ಬಡಿದಂತೆ.
   3. ಚಿತ್ತವಿಲ್ಲದ _____ ಸುತ್ತಿದಡೆ _____ .
   4. ತಂದೆಗೂ _____ ಒಂದು _____ .

ಚಟುವಟಿಕೆ

1. ಸರ್ವಜ್ಞನ ಬೇರೆ ತ್ರಿಪದಿಗಳನ್ನು ಓದಿ ಕಲಿತುಕೊಳ್ಳಿ.
2. ಮಾತಿನ ನಡುವೆ ಗಾದೆ, ಸರ್ವಜ್ಞನ ತ್ರಿಪದಿ, ಒಗಟುಗಳನ್ನು ಬಳಸುವುದನ್ನು ಅಭ್ಯಾಸ ಮಾಡಿಕೊಳ್ಳಿ.

ಘಟಕ ಐದು

ಸುಗ್ಗಿಯ ಹಬ್ಬ : ಸಂಕ್ರಾಂತಿ



ಸಂಬಂಧಗಳನ್ನು ಬಲಪಡಿಸುವ ದೃಷ್ಟಿಯಿಂದ ಆಚರಿಸಲ್ಪಡುವ ಸಂಭ್ರಮಗಳೇ ಹಬ್ಬಗಳು. ಮಾನವನ ಮನಸ್ಸಿಗೆ ಉಲ್ಲಾಸವನ್ನೂ, ಭಾವೈಕ್ಯತಾ ಮನೋಭಾವವನ್ನೂ ಹಬ್ಬಗಳು ಬೆಳೆಸುತ್ತವೆ. ಕನ್ನಡಿಗರ ನಾಗರಿಕತೆ, ವೀರತ್ವ, ಧರ್ಮ ಸಹಿಷ್ಣುತೆ ಮುಂತಾದವುಗಳನ್ನು ಸಾರಲು ಹಲವು ಹಬ್ಬಗಳನ್ನು ಆಚರಿಸಲಾಗುತ್ತದೆ. ಹಬ್ಬಗಳು ನಮ್ಮ ಸಾಂಸ್ಕೃತಿಕ ಹಿರಿಮೆಯನ್ನು ಎತ್ತಿ ತೋರಿಸುತ್ತವೆ. ಮುಂದಿನ ಜನಾಂಗಕ್ಕೆ ಬಳುವಳಿಯಾಗಿ ಶ್ರೀಮಂತ ಸಂಸ್ಕೃತಿಯನ್ನು ಕೊಂಡೊಯ್ಯುತ್ತವೆ. ಕನ್ನಡಿಗರು ಆಚರಿಸುವ ಹಬ್ಬಗಳಲ್ಲಿ ಒಂದಾದ ಸುಗ್ಗಿಯ ಹಬ್ಬವನ್ನು ಕುರಿತು ತಿಳಿಯೋಣ ಬನ್ನಿ.



ಭಾರತೀಯ ಸಂಸ್ಕೃತಿ ಅತಿ ಪುರಾತನವಾದದ್ದು. ಸಂಸ್ಕೃತಿ ಎಂಬ ಪದವು ವಿಶಾಲ ಅರ್ಥವನ್ನುಳ್ಳದ್ದು. ಯಾವುದೇ ದೇಶದ ಭಾಷೆ, ನಡತೆ, ಆಚಾರ ವಿಚಾರಗಳು, ಉಡುಪು, ಕಲೆ, ಸಾಹಿತ್ಯ, ಹಬ್ಬ ಹರಿದಿನ, ಆಚರಣೆ ಇತ್ಯಾದಿಗಳು ಸಂಸ್ಕೃತಿಯ ಕೈಗನ್ನಡಿಗಳು. ಸಂಸ್ಕೃತಿ ಎಂಬುದು ನಿಂತ ನೀರಲ್ಲ, ಹರಿವ ಹೊಳೆ. ನಮ್ಮ ದೇಶದ ಪುರಾತನ ಸಂಸ್ಕೃತಿಯನ್ನು ಉಳಿಸಿಕೊಳ್ಳುವುದು, ಬೆಳೆಸಿಕೊಂಡು ಹೋಗುವುದು ಪ್ರತಿಯೊಬ್ಬ ಭಾರತೀಯನ ಆದ್ಯ ಕರ್ತವ್ಯ.

ಪ್ರಕೃತಿಯೊಂದಿಗೆ ಮಾನವನ ಜೀವನವು ಬೆಸೆದುಕೊಂಡಿದೆ ಎಂದರೆ ಅದು ಅತಿಶಯೋಕ್ತಿಯೇನಲ್ಲ. ಪ್ರಕೃತಿಯನ್ನು ದೇವರೆಂದೇ ಭಾವಿಸಿ ಪೂಜಿಸುವುದು ಭಾರತೀಯರ ಸಂಸ್ಕೃತಿಯಾಗಿದೆ. ಸುಗ್ಗಿ ಹಬ್ಬ ಎಂದು ಕರೆಯಲ್ಪಡುವ ಸಂಕ್ರಾಂತಿ ಹಬ್ಬ ದಕ್ಷಿಣ ಭಾರತದಲ್ಲಿ ಆಚರಿಸಲಾಗುವ ಹಬ್ಬ. ಮುಖ್ಯವಾಗಿ ರೈತಾಪಿ ವರ್ಗದವರಿಗೆ ಅವು ಬೆಳೆದಂತಹ ಫಸಲು, ಧಾನ್ಯವನ್ನು ಹೊಲದಿಂದ ಮನೆಗೆ ತಂದು ಕಣಜ ತುಂಬಿಸಿಕೊಂಡು ಹಿಗ್ಗಿ ನಲಿದಾಡುವ ಸಿರಿಯ ಹಬ್ಬ. ಹಾಗೇ ಹಳ್ಳಿಗರು ಆ ದಿನದಂದು 'ಸುಗ್ಗಿಯು ಬಂದಿತು, ಹಿಗ್ಗನು ತಂದಿತು' ಎಂದು ನಮ್ಮ ನಾಡಿನ ಜನರೆಲ್ಲ ಹಾಡಿ ಆಚರಿಸುವ ಹಬ್ಬವೇ ಸುಗ್ಗಿಯ ಹಬ್ಬ.

ಸುಗ್ಗಿ ಎಂಬುದು ಸಮೃದ್ಧಿಯ ಸಂಕೇತ. ಕರ್ನಾಟಕದಲ್ಲಿ ಸುಗ್ಗಿಯ ಹಬ್ಬಕ್ಕೆ ಸಂಬಂಧ ಪಟ್ಟ ಆಚರಣೆಗಳಲ್ಲಿ ಮುಖ್ಯವಾಗಿ ಕಂಡು ಬರುವುದು, 'ಎಳ್ಳು ಬೆಲ್ಲ!' ಹಂಚುವುದು!. ಮನೆಯಲ್ಲಿ ಎಳ್ಳುಬೆಲ್ಲವನ್ನು ತಯಾರಿಸಿ ಸುತ್ತಮುತ್ತಲಿನ ಜನರಿಗೆ 'ಎಳ್ಳು ಬೆಲ್ಲ!' ಹಂಚುವುದು ಸಂಕ್ರಾಂತಿ ಹಬ್ಬದ ವಿಶೇಷ. ಎಳ್ಳಿನ ಜೊತೆಗೆ ಸಕ್ಕರೆ ಅಚ್ಚುಗಳೂ, ಹಣ್ಣು ಮತ್ತು ಕಬ್ಬಿನ ತುಂಡುಗಳನ್ನೂ ಸಹ ಮನೆಮನೆಗೆ ಬೀರುವುದುಂಟು. ಸಣ್ಣ ಸಣ್ಣ ಚೂರುಗಳಾಗಿ ಕತ್ತರಿಸಿದ ಬೆಲ್ಲ, ಒಣಕೊಬ್ಬರಿ, ಹುರಿಗಡಲೆ, ಕಡಲೆಬೀಜ ಹಾಗೂ ಹುರಿದ ಬಿಳಿ ಎಳ್ಳನ್ನು ಸೇರಿಸಿ ಎಳ್ಳು ಬೆಲ್ಲ ತಯಾರಿಸಲಾಗುತ್ತದೆ. ಮನುಕುಲಕ್ಕೆ ಅನ್ನದಾತನಾದ ರೈತ ತಾನು ಬೆವರು ಸುರಿಸಿ ಬೆಳೆದ ಫಸಲನ್ನು ತನ್ನ ಮನೆಯ ಕಣಜ ತುಂಬಿ ಹಸಿದ ಹೊಟ್ಟೆಗೆ ಅನ್ನ ನೀಡಿ ಆನಂದದಿಂದ ಇರುವ ಹಬ್ಬ ಇದಾಗಿದೆ.

ಕರ್ನಾಟಕದ ರೈತರಿಗೆ ಸುಗ್ಗಿಯ ಹಬ್ಬ ಮಂಗಳಕರವಾದದ್ದು. ಈ ದಿನ ಹೆಣ್ಣುಮಕ್ಕಳು ಹೊಸ ವಸ್ತ್ರಗಳನ್ನು ಧರಿಸಿ, ಒಂದು ತಟ್ಟೆಯಲ್ಲಿ ಎಳ್ಳುಬೆಲ್ಲದೊಂದಿಗೆ ಸಂಬಂಧಿಕರು, ಆಪ್ತಮಿತ್ರರನ್ನು ಭೇಟಿಯಾಗಿ ಪರಸ್ಪರ ಎಳ್ಳುಬೆಲ್ಲವನ್ನು ವಿನಿಮಯ ಮಾಡಿಕೊಳ್ಳುತ್ತಾರೆ. ಎಳ್ಳು ಬೆಲ್ಲ ತಿಂದು ಒಳ್ಳೆಯ ಮಾತನ್ನಾಡಿ ಎಂಬುದು ಹಿರಿಯರ ನಾಣ್ನುಡಿಯಾಗಿದೆ. ಈ ಹಬ್ಬದಲ್ಲಿ ರೈತರಿಗೆ ತಮ್ಮ ಕೃಷಿ ಚಟುವಟಿಕೆಗಳಲ್ಲಿ ಭಾಗಿಯಾಗಿ ದುಡಿದ ಜಾನುವಾರುಗಳ ಮೈದೊಳೆದು, ಕೊಂಬುಗಳಿಗೆ ಬಣ್ಣ ಹಚ್ಚಿ, ಅಲಂಕರಿಸಿ, ಪೂಜಿಸಿ ಸಂಜೆಯ ವೇಳೆ ಕಿಚ್ಚು ಹಾಯಿಸುತ್ತಾರೆ.

ತಿಳಿದುಕೊಳ್ಳೋಣ

ಬದುಕಿಗೆ ಸಮೃದ್ಧಿಯನ್ನು ತರುವ ವರುಣ ದೇವರನ್ನು ಆರಾಧಿಸುವ ಉದ್ದೇಶದಿಂದ ಹಿಂದಿನ ಕಾಲದಿಂದಲೂ ಭೋಗಿ ಹಬ್ಬವನ್ನು ಆಚರಿಸಲಾಗುತ್ತಿದೆ.

ತಮಿಳುನಾಡಿನಲ್ಲಿ ಈ ಹಬ್ಬವನ್ನು ತಮಿಳರ ಪರ್ವದಿನ, ಪೊಂಗಲ್ ತಿರುನಾಳ್ ಎಂಬ ಹೆಸರುಗಳಿಂದ ಕರೆಯಲಾಗುತ್ತದೆ. ತಮಿಳರು 'ಈ ಹಬ್ಬವನ್ನು ನಾಲ್ಕು ದಿನಗಳ ಕಾಲ ಆಚರಿಸುತ್ತಾರೆ. ಮೊದಲ ದಿನ 'ಭೋಗಿ' ಎಂದು ಕರೆದು, ಈ ದಿನದಂದು ಮನೆಯಲ್ಲಿರುವ ಹಳೆಯ ವಸ್ತುಗಳನ್ನೆಲ್ಲ ಸುಟ್ಟು ಮನೆಯನ್ನು ಶುದ್ಧಗೊಳಿಸುವ ದಿನವನ್ನಾಗಿ ಆಚರಿಸಲಾಗುತ್ತದೆ. ಈ ದಿನವು ಮಾರ್ಗಶಿರ ಮಾಸದ ಕೊನೆಯ ದಿನವಾಗಿರುತ್ತದೆ. ಪುಷ್ಯಮಾಸದ(ಥೈ ತಿಂಗಳಿನ) ಮೊದಲ ದಿನವೇ ಪೊಂಗಲ್ ಹಬ್ಬ. ಈ ದಿನ ಮುಂಜಾನೆ ಮನೆಯ ಮುಂದಿನ ಅಂಗಳವನ್ನು ಸಾರಿಸಿ ಬಣ್ಣಬಣ್ಣದ ರಂಗೋಲಿಯಿಂದ ಅಲಂಕರಿಸಲಾಗುತ್ತದೆ. ಮಾವಿನ ತೋರಣವನ್ನು ಹೆಬ್ಬಾಗಿಲಿಗೆ ಕಟ್ಟಿ ಹೊಸದಾದ ಮಡಿಕೆಯಲ್ಲಿ ಹೊಸ ಅಕ್ಕಿ, ಬೆಲ್ಲ, ತುಪ್ಪ, ಒಣದ್ರಾಕ್ಷಿ, ಎಲಕ್ಕಿ, ಗೋಡಂಬಿ ಮುಂತಾದ ಮಧುರ ಪದಾರ್ಥಗಳನ್ನು ಬಳಸಿ ಪೊಂಗಲ್ ಎನ್ನುವ ಸವಿಯಾದ, ರುಚಿಯಾದ ಸಿಹಿ ತಿನಿಸನ್ನು ತಯಾರಿಸಲಾಗುತ್ತದೆ.

ತಿಳಿದುಕೊಳ್ಳೋಣ

ತಮಿಳಿನ ಮೊದಲ ತಿಂಗಳನ್ನು ಥೈ ತಿಂಗಳೆಂದೂ, ವರ್ಷದ ಆರಂಭವನ್ನು ತಿರುವಳ್ಳುವರ್ ವರ್ಷವೆಂದೂ ಪರಿಗಣಿಸಲಾಗುತ್ತದೆ.

ಅದು ಉಕ್ಕಿ ಸುರಿಯುವಾಗ ಮನೆ ಮಂದಿಯೆಲ್ಲ 'ಪೊಂಗಲೋ ಪೊಂಗಲ್' ಎಂದು ಮನೆ ಮಂದಿಯೆಲ್ಲ ಏಕಕಂಠದಿಂದ ಕೂಗಿ ಸಂತೃಪ್ತಿ ಹೊಂದುತ್ತಾರೆ. ಇದರೊಂದಿಗೆ ಕಬ್ಬಿನ ಜಲ್ಲೆ, ಅರಿಶಿನ ಕೊಂಬು, ತೆಂಗಿನ ಕಾಯಿ, ಎಲೆಅಡಿಕೆಗಳನ್ನು ಸಮರ್ಪಿಸಿ ಈ ಜಗತ್ತಿನ ಚರಾಚರ ವಸ್ತುಗಳನ್ನೂ ನೆಮ್ಮದಿಯ ಜೀವನಕ್ಕೆ ಕಾರಣನಾಗಿರುವ ಸೂರ್ಯನನ್ನು ಆರಾಧಿಸುತ್ತಾರೆ.

ಪೊಂಗಲ್ ಹಬ್ಬದ ಮಾರನೇ ದಿನ ಮಾಟ್ಟು ಪೊಂಗಲ್ ಎಂದು ಜಾನುವಾರುಗಳಿಗೆ ಮೈದೊಳೆದು ಕೊಂಬುಗಳಿಗೆ ಬಣ್ಣ ಬಳಿದು ಶೃಂಗಾರಗೊಳಿಸಿ ಅವುಗಳನ್ನು ಪೂಜಿಸುತ್ತಾರೆ. ಇದರೊಂದಿಗೆ ತಮಿಳರ ಶೌರ್ಯ ಸಾಹಸ ಪ್ರದರ್ಶನಕ್ಕೆ ಜಲ್ಲಿಕಟ್ಟು, ಎತ್ತುಗಳನ್ನು ಓಡಿಸುವ ಸ್ಪರ್ಧೆ ಮುಂತಾದ ಕ್ರೀಡೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುತ್ತಾರೆ.

ಕಾಣುಂ ಪೊಂಗಲ್

ಪೊಂಗಲ್ ಹಬ್ಬದ ನಾಲ್ಕನೆಯ ದಿನ ತಮಿಳರು ಆಚರಿಸುವ ಹಬ್ಬವೇ ಕಾಣುಂ ಪೊಂಗಲ್. ಅಂದು ಬಂಧು ಬಳಗ ನಂಟರಿಷ್ಟರೊಡನೆ ಕೂಡಿ ಸಂತೋಷದಿಂದ ಕಾಲ ಕಳೆಯುತ್ತಾರೆ ಹಾಗೂ ಪ್ರೇಕ್ಷಣೀಯ ಸ್ಥಳಗಳಿಗೆ ಭೇಟಿ



ಕೊಡುವುದು, ಮನೋರಂಜನಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು ಮುಂತಾದ ಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳುವರು.

ತಿಳಿದುಕೊಳ್ಳೋಣ

ತಿರುವಳ್ಳುವರ್ ವರ್ಷವನ್ನು ಕಂಡುಹಿಡಿಯಲು ಪ್ರಸ್ತುತ ವರ್ಷಕ್ಕೆ 31ನ್ನು ಸೇರಿಸಿ ಕೂಡಬೇಕಾಗುತ್ತದೆ. ಉದಾಹರಣೆಗೆ, 2018+31=2049.

ಸಂಘ ಜೀವಿಯಾದ ಮನುಷ್ಯನಿಗೆ ಪ್ರಕೃತಿಯೊಂದಿಗಿನ ಸಂಬಂಧ, ದುಡಿಮೆ, ಸಮರ್ಪಣಾ ಮನೋಭಾವ, ಸಾಂಸ್ಕೃತಿಕ ಹಿರಿಮೆ ಗರಿಮೆಗಳನ್ನು ಜಗತ್ತಿಗೆ ತೋರಿಸಿ ಕೊಡುವುದು, ನೆಮ್ಮದಿಯಿಂದ ಶಾಂತಿಯುತ ಜೀವನ ನಡೆಸಲು ಹಬ್ಬಗಳು ಸಹಕಾರಿಯಾಗಿವೆ.

ಗಮನಿಸಿ

ಭಾರತೀಯ ಶಾಸ್ತ್ರದಂತೆ ಸೂರ್ಯನು ಮಕರ ರಾಶಿಯನ್ನು ಪ್ರವೇಶಿಸುವ ಪುಣ್ಯಕಾಲವನ್ನು ಮಕರ ಸಂಕ್ರಾಂತಿ ಎಂದೂ, ಈ ಕಾಲ ಪ್ರತಿವರ್ಷವೂ ಗ್ರೆಗೋರಿಯನ್ ಪಂಚಾಂಗದ ಪ್ರಕಾರ ಜನವರಿ 14ರ ಸುಮಾರಿಗೆ ಬರುತ್ತದೆ. ಅಂದರೆ, ಸೂರ್ಯನ ಉತ್ತರ ದಿಕ್ಕಿನ ಪ್ರಯಾಣದ ಆರಂಭವನ್ನು ಸೂಚಿಸುವ ಕಾಲ ಇದಾಗಿದ್ದು, ಭೂಮಿಯು ಉತ್ತರಾರ್ಧ ಗೋಳದಲ್ಲಿ ಚಳಿ ಬೆಚ್ಚನೆಯ ವಾತಾವರಣ ಆರಂಭವಾಗಿ, ಬೆಳೆ ಕಟಾವಿನ ಕಾಲವೂ ಇದಾಗಿರುತ್ತದೆ.

ಪ್ರಶ್ನೋತ್ತರಗಳು

I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯದಲ್ಲಿ ಉತ್ತರಿಸಿ.

1. ಹಬ್ಬಗಳ ಮೂಲಕ ಏನನ್ನು ತಿಳಿಯಬಹುದು ?
2. ಸಂಸ್ಕೃತಿಯ ಕೈಗನ್ನಡಿ ಯಾವುದು ?
3. ಸಂಕ್ರಾಂತಿಯನ್ನು ಎಂತಹ ಹಬ್ಬ ಎಂದು ಕರೆಯುತ್ತಾರೆ ?
4. ಕಿಚ್ಚು ಹಾಯಿಸುವುದು ಎಂದರೇನು ?
5. ಸಂಕ್ರಾಂತಿಯನ್ನು ತಮಿಳಿನಲ್ಲಿ ಏನೆಂದು ಕರೆಯುತ್ತಾರೆ ?
6. ಮಾಟ್ಟುಪೊಂಗಲ್ ಹಬ್ಬದ ವಿಶೇಷತೆಗಳೇನು ?

II. ಕೆಳಗಿನ ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ.

1. ಎಳ್ಳು ಬೆಲ್ಲವನ್ನು ಹೇಗೆ ತಯಾರಿಸುತ್ತಾರೆ ?
2. ಭೋಗಿ ಹಬ್ಬವನ್ನು ಹೇಗೆ ಆಚರಿಸುತ್ತಾರೆ ?
3. ಪೊಂಗಲ್ ಅನ್ನು ಹೇಗೆ ತಯಾರಿಸುತ್ತಾರೆ ?
4. ಕಾಣುಂ ಪೊಂಗಲ್‌ನ ವಿಶೇಷತೆಗಳೇನು ?

III. ಕೆಳಗಿನ ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ.

1. ಪ್ರಕೃತಿಯೊಂದಿಗೆ ಮಾನವ ಹೇಗೆ ಬೆಸೆದುಕೊಂಡಿದ್ದಾನೆ ?
2. ಕರ್ನಾಟಕದಲ್ಲಿ ಸಂಕ್ರಾಂತಿಯನ್ನು ಹೇಗೆ ಆಚರಿಸುತ್ತಾರೆ ?
3. ತಮಿಳುನಾಡಿನಲ್ಲಿ ಪೊಂಗಲ್ ಹಬ್ಬವನ್ನು ಹೇಗೆ ಆಚರಿಸುತ್ತಾರೆ ?

ಭಾಷಾಭ್ಯಾಸ

I. ಅ. ಸರಿಯಾದ ಉತ್ತರಗಳನ್ನು ಆರಿಸಿ ಬರೆಯಿರಿ.

1. ಬೆಳೆ ಬೆಳೆದಾಗ _____ ಮಾಡುವರು.

ಅ) ಬಿತ್ತನೆ ಆ) ಕಟಾವು

ಇ) ನಾಟಿ ಮಾಡುವುದು ಈ) ಹೊಲ ಉಳುವುದು.

2. ಹಬ್ಬದ ಸಂದರ್ಭದಲ್ಲಿ ಮನೆಯ ಹೆಬ್ಬಾಗಿಲಿಗೆ

ಮಾವಿನ ಎಲೆಗಳಿಂದ _____ ಕಟ್ಟುವರು.

ಅ) ತೋರಣ ಆ) ಚಪ್ಪರ

ಇ) ಬಳ್ಳಿ ಈ) ಗಿಡ

3. 'ಕ್ರಮಬದ್ಧತೆಯಿಂದ' – ಎನ್ನುವ ಪದವನ್ನು ಬಿಡಿಸಿ ಬರೆದಾಗ,

ಅ) ಕ್ರಮಬದ್ಧತೆ+ಇಂದ

ಆ) ಕ್ರಮಬದ್ಧತೆ+ಯಿಂದ

ಇ) ಕ್ರಮಬದ್ಧ+ತೆಯಿಂದ

ಈ) ಕ್ರಮಬದ್ಧ+ಯಿಂದ

4. 'ಕೈ+ಕನ್ನಡಿ' – ಎನ್ನುವ ಪದವನ್ನು ಸೇರಿಸಿ ಬರೆದಾಗ,

ಅ) ಕೈಗನ್ನಡಿ ಆ) ಕೈಕನ್ನಡಿ

ಇ) ಕೈಯಲ್ಲಿ ಕನ್ನಡಿ ಈ) ಕೈಯಿನ ಕನ್ನಡಿ

II. 1. ಕೆಳಗಿನ ಪದಗಳಿಗೆ ಸಮಾನಾರ್ಥಕ ಪದಗಳನ್ನು ಬರೆಯಿರಿ.

ಪುರಾತನ, ಸಂತೃಪ್ತಿ, ಜಾನುವಾರು, ಸ್ಪರ್ಧೆ.

2. ಕೆಳಗಿನ ಪದಗಳನ್ನು ಬಳಸಿ ಸ್ವಂತವಾಕ್ಯಗಳನ್ನು ರಚಿಸಿ.

ಸಂಸ್ಕೃತಿ, ತೋರಣ, ರಂಗೋಲಿ. ಜಲ್ಲಕಟ್ಟು.

3. ಕೆಳಗಿನ ಪದಗಳನ್ನು ಬಿಡಿಸಿ ಬರೆದು ಸಂಧಿಯನ್ನು ಹೆಸರಿಸಿ.

1. ಮನೆಯಲ್ಲಿನ 2. ತಟ್ಟೆಯಲ್ಲಿ 3. ಭೇಟಿಯಾಗಿ

4. ಅತಿಶಯೋಕ್ತಿ

III. ಈ ಪದಗಳ ಅರ್ಥಗಳನ್ನು ತಿಳಿದುಕೊಳ್ಳಿ.

ಪುರಾತನ	=	ಪ್ರಾಚೀನ
ಸಹಿಷ್ಣುತೆ	=	ಸಹನೆ
ಜಾನುವಾರು	=	ದನಕರುಗಳು
ಹೆಬ್ಬಾಗಿಲು	=	ದೊಡ್ಡ ಬಾಗಿಲು
ಸಂತೃಪ್ತಿ	=	ತೃಪ್ತಿ, ಪೂರ್ಣ ಸಮಾಧಾನ
ಜಲ್ಲಿಕಟ್ಟು	=	ಗೂಳಿಕಾಳಗ.

ಕಲಿತದ್ದು – ಕಲಿಕೆಯ ಫಲ

1. ನಿಮ್ಮ ಊರಿನಲ್ಲಿ ಆಚರಿಸಲ್ಪಡುವ ಹಬ್ಬಗಳನ್ನು ಕುರಿತು ಬರೆಯಿರಿ.
2. ನಿಮ್ಮ ಶಾಲೆಯಲ್ಲಿ ಆಚರಿಸಲ್ಪಡುವ ರಾಷ್ಟ್ರೀಯ ಹಬ್ಬಗಳನ್ನು ಪಟ್ಟಿಮಾಡಿರಿ.
3. ರೈತರು ಬೇಸಾಯ ಮಾಡುವ ವಿಧಾನಗಳನ್ನು ಕುರಿತು ಬರೆಯಿರಿ.
4. ನಿಮಗಿಷ್ಟವಾದ ಹಬ್ಬ ಯಾವುದು ? ಏಕೆ ?



ಘಟಕ ಐದು

ಬೇಲೂರು–ಹಳೇಬೀಡು



ನಮ್ಮ ನಾಡು ಕನ್ನಡ ನಾಡು. ಈ ನಾಡು ಕವಿಗಳ ನೆಲೆವೀಡು. ಪುಣ್ಯ ನದಿಗಳು ಹರಿಯುವ ಪವಿತ್ರ ನಾಡು. ಶೂರಧೀರರು ಹುಟ್ಟಿದ ನಾಡು. ವಿವಿಧ ಕಲೆಗಳ ಕಲಾವಿದರಿಂದ ಕಂಗೊಳಿಸಿದ ನಾಡು. ಇಂತಹ ಸುಂದರ ಸೊಬಗಿನ ನಾಡಾಗಿದೆ ನಮ್ಮೀ ನಾಡು. ಇಂತಹ ಕನ್ನಡ ನಾಡಿನ ಸೊಬಗು ಹಿರಿಮೆಗಳನ್ನು ಕವಿಗಳು ಹಾಗೂ ಲೇಖಕರು ಮುಕ್ತ ಕಂಠದಿಂದ ಹಾಡಿ ಹೊಗಳಿದ್ದಾರೆ. ಕಲೆಗಳಿಗೆ ಆಶ್ರಯ ಸ್ಥಾನವಾದ ಈ ನಾಡಿನ ಶಿಲ್ಪಕಲೆಯ ವೈಭವಕ್ಕೆ ನಿಲುಗನ್ನಡಿಯಾಗಿ ನಿಂತಿವೆ ಬೇಲೂರು ಹಳೇಬೀಡುಗಳು. ಇಲ್ಲಿಯ ವೈಭವ, ಶಿಲ್ಪಕಲೆಯ ವಿಶೇಷತೆಯನ್ನು ಈ ಪಾಠದಲ್ಲಿ ಸುಂದರವಾಗಿ ವರ್ಣಿಸಲಾಗಿದೆ.

ನಮ್ಮ ಕನ್ನಡ ನಾಡು ಶಿಲ್ಪಕಲೆಗಳ ಬೀಡು. ಶಿಲ್ಪಕಲೆಯ ವೈಭವಕ್ಕೆ ನಿಲುಗನ್ನಡಿಯಂತಿದೆ ಬೇಲೂರು. ಇದು ಹಾಸನದಿಂದ ಸುಮಾರು 40 ಕಿ.ಮೀ.ದೂರದಲ್ಲಿದೆ. ಇದು ನಮ್ಮ ನಾಡಿನ ಲಲಿತ ಕಲೆಗಳ ತೌರೂರು – ಸಂಸ್ಕೃತಿಯ ನೆಲೆವೀಡು. ಯಗಚಿ ನದಿಯ ದಡದಲ್ಲಿರುವ ಈ ಊರಿಗೆ ವೇಲಾಪುರ, ವೇಲೂರು, ಬೇಲೂರು ಮುಂತಾದ ಹೆಸರುಗಳಿದ್ದವು.

ಬೇಲೂರು ಸಣ್ಣ ಊರಾದರೂ ಜಗತ್ಪ್ರಸಿದ್ಧವಾಗಿದೆ. ಕೇಶವ, ಚನ್ನಕೇಶವ, ವಿಜಯನಾರಾಯಣ ಇತ್ಯಾದಿ ಹೆಸರುಗಳಿಂದ ಆರಾಧಿಸಲ್ಪಡುವ ದೇವರ ಆಲಯವೇ ಈ ಕೀರ್ತಿಗೆ ಮೂಲ ಕಾರಣ.

'ಸೌಂದರ್ಯವೇ ಸತ್ಯ, ಸತ್ಯವೇ ದೇವರು' ಎನ್ನುವ ಹೇಳಿಕೆಯನ್ನು ಈ ಬೇಲೂರು ದೇವಾಲಯವು ಸ್ಪಷ್ಟ ಪಡಿಸುತ್ತದೆ. ಚನ್ನಕೇಶವ ದೇವಾಲಯವನ್ನು ಹೊಯ್ಸಳರ ದೊರೆ ಬಿಟ್ಟಿದೇವನು 12ನೇ ಶತಮಾನದಲ್ಲಿ ಕಟ್ಟಿಸಿದನು. ಬಿಟ್ಟಿದೇವನು ಪಟ್ಟಕ್ಕೆ ಬಂದ ನಂತರ ಎರಡು ಮಹತ್ವಪೂರ್ಣವಾದ ಘಟನೆಗಳಿಗೆ ಕಾರಣನಾದನು.

ಬಿಟ್ಟಿದೇವನ ಕಾಲದಲ್ಲಿ ದಕ್ಷಿಣ ದೇಶದ ಚೋಳರು ಕರ್ನಾಟಕದ ಬಹುಭಾಗವನ್ನು ಆಕ್ರಮಿಸಿ



ತಲಕಾಡನ್ನು ತಮ್ಮ ರಾಜಧಾನಿಯನ್ನಾಗಿ ಮಾಡಿಕೊಂಡು ಆಳುತ್ತಿದ್ದರು. ಅಂತಹ ವಿಜಯೋನ್ಮತ್ತ ಚೋಳರನ್ನು ಸೋಲಿಸಿ, ಹೊಡೆದೋಡಿಸಿ ತಲಕಾಡನ್ನು ವಶಪಡಿಸಿಕೊಂಡದ್ದು ಮಹತ್ವಪೂರ್ಣವಾದ ಒಂದು

ಘಟನೆಯಾಗಿದೆ. ಅಜೇಯರಾಗಿದ್ದ ಚೋಳರನ್ನು ಸೋಲಿಸಿ ತಾನು ಗಳಿಸಿದ ಮಹಾವಿಜಯದ ಸೂಚಕವಾಗಿ ಬಿಟ್ಟಿದೇವನು ಬೇಲೂರಿನಲ್ಲಿ ವಿಜಯನಾರಾಯಣ ದೇವಾಲಯವನ್ನು ಕಟ್ಟಿಸಿದನು.



ಶೈವರಾದ ಚೋಳರು ಶ್ರೀ ವೈಷ್ಣವರಾದ ರಾಮಾನುಜಾಚಾರ್ಯರನ್ನು ನಾನಾ ಬಗೆಯ ಅವಮಾನ, ಹಿಂಸೆ, ಅಪಾಯಗಳಿಗೆ ಗುರಿ ಮಾಡಿದರು. ಆಗ ರಾಮಾನುಜಾರ್ಯರು ಕರ್ನಾಟಕಕ್ಕೆ ಓಡಿ ಬಂದರು. ಜೈನ ಧರ್ಮದಲ್ಲಿ ಹುಟ್ಟಿ ಬೆಳೆದ ಬಿಟ್ಟಿದೇವನು ಶ್ರೀರಾಮಾನುಜಾಚಾರ್ಯರಿಗೆ



ಚೆನ್ನಕೇಶವ ದೇವಾಲಯ

ಆಶ್ರಯವಿತ್ತು. ಅವರ ಅನುಗ್ರಹಕ್ಕೆ ಪಾತ್ರನಾಗಿ ಶ್ರೀವೈಷ್ಣವ ಧರ್ಮವನ್ನು ಅಂಗೀಕರಿಸಿದನು. ನಂತರ ಬಿಟ್ಟಿದೇವನು ವಿಷ್ಣುವರ್ಧನ ಎಂದು ಪ್ರಸಿದ್ಧನಾದನು. ಇದು ಎರಡನೆಯ ಮಹತ್ವಪೂರ್ಣ ಘಟನೆ.

ಈ ಚೆನ್ನಕೇಶವ ದೇವಾಲಯದ ನಿರ್ಮಾಣಕ್ಕೆ ಜಕಣಾಚಾರಿ, ಡಕಣಾಚಾರಿ ಎಂಬುವರು ಕಾರಣರು ಎನ್ನುವ ದಂತಕತೆಯಿದೆ. ಅಷ್ಟೇ ಅಲ್ಲದೆ, ಈ ದೇವಾಲಯವನ್ನು ದಾಸೋಜ, ಚಾವಣ, ಪಾದರಿ, ಕೇಶವದೇವ ಮುಂತಾದ ರೂವಾರಿಗಳು ನಿರ್ಮಿಸಿದ್ದಾರೆ. ಈ ದೇವಾಲಯ ಹೊಯ್ಸಳ ಮಾರ್ಗದ ಶಿಲ್ಪಶೈಲಿಗೆ ಸೇರಿದೆ.

ಬೇಲೂರು ದೇವಾಲಯದ ಗೋಪುರವು ಐದು ಅಂತಸ್ತುಗಳಿಂದ ಕೂಡಿದೆ. ಮಹಾದ್ವಾರವಾದ ಆನೆಯ ಬಾಗಿಲಿನಿಂದ ಪ್ರವೇಶಿಸಿದರೆ, ಎಡಪಕ್ಕದಲ್ಲಿ ಕಪ್ಪೆ ಚೆನ್ನಿಗರಾಯನ ದೇವಾಲಯವಿದೆ. ಇದನ್ನು ವಿಷ್ಣುವರ್ಧನನ ಹಿರಿಯರಾಣಿ ಶಾಂತಲೆ ಕಟ್ಟಿಸಿದಳು.

ದೇವಾಲಯದ ಕೆಳಗಿನ ಭಾಗದಲ್ಲಿ ಆನೆಯ ಸಾಲು, ಮೇಲಿನ ಭಾಗದಲ್ಲಿ ಸಿಂಹದ ಸಾಲುಗಳೂ ಇವೆ. ಪೂರ್ವ ದ್ವಾರದ ಬಲಗಡೆಯಲ್ಲಿ ಮಹಾಭಾರತದ ಕಥೆಯನ್ನು ಚಿತ್ರ ರೂಪದಲ್ಲಿ ಕೆತ್ತಲಾಗಿದೆ. ಶ್ರೀಕೃಷ್ಣನ ಬಾಲಲೀಲೆಯನ್ನು ಪರಿಚಯಿಸುವ ಶಿಲ್ಪಗಳು, ಕಾಳಿಂಗಮರ್ಧನದ ಚಿತ್ರ, ರಾಮಾಯಣದ ಕಥೆ, ನರಸಿಂಹನು ಹಿರಣ್ಯಕಶಿಪುವನ್ನು ಕೊಂದು ಪ್ರಹ್ಲಾದನನ್ನು ರಕ್ಷಿಸಿದ ಚಿತ್ರಗಳನ್ನೂ ಇಲ್ಲಿ ಸುಂದರವಾಗಿ ಕೆತ್ತಲಾಗಿದೆ. ಮೂರನೆಯ ಸಾಲಿನಲ್ಲಿ ವಿಷ್ಣುವರ್ಧನನ ದರ್ಬಾರಿನ ಚಿತ್ರವನ್ನು ಕೆತ್ತಲಾಗಿದೆ. ನಾಲ್ಕನೆಯ ಸಾಲಿನಲ್ಲಿ ಶಿಲಾಬಾಲಿಕೆಯರ ಚಿತ್ರಗಳಿವೆ. ಇವುಗಳನ್ನು ಮದನಿಕಾ ವಿಗ್ರಹಗಳು ಅಥವಾ ಸಾಲಭಂಜಿಕೆಗಳೆಂದು ಕರೆಯಲಾಗುವುದು. ಇವುಗಳನ್ನು ಸುರಸುಂದರಿ, ಶುಕಸುಂದರಿ, ದರ್ಪಣಸುಂದರಿ, ವಸಂತ ಸುಂದರಿ, ಶುಕ ಭಾಷಿಣಿ ಮುಂತಾದ ಹೆಸರುಗಳಿಂದ ಕರೆಯುವರು.

ದೇವಾಲಯದ ಒಳಭಾಗದಲ್ಲಿ ನಲವತ್ತೆರಡು ಕಂಭಗಳ ಮೇಲೆ ವಿವಿಧ ಶಿಲ್ಪಗಳನ್ನು ಕೆತ್ತಲಾಗಿದೆ. ಒಂದು ಕಂಭದಂತೆ ಮತ್ತೊಂದಿಲ್ಲ. ಅಷ್ಟೇ ಅಲ್ಲದೆ ಅತ್ಯಂತ ಸುಂದರವಾದ ಮೇಲ್ಛಾವಣಿಯೂ ಇದೆ. ಇದನ್ನು ಭುವನೇಶ್ವರಿ ಎಂದು ಕರೆಯಲಾಗುವುದು. ಇದರ ಒಳಗಡೆ ವಿವಿಧ ದೇವದೇವಿಯರ ಚಿತ್ರಗಳೂ,

ಭಾಗವತ ಮಹಾಭಾರತದ ದೃಶ್ಯಗಳೂ, ನೃತ್ಯ, ಮಲ್ಲಯುದ್ಧ, ಕೋಲಾಟ ಇತ್ಯಾದಿ ಶಿಲ್ಪಗಳೂ ಇವೆ. ವಿಷ್ಣುವರ್ಧನನ ಕಾಲದ ಜನರ ನಡೆನುಡಿ, ಆಚಾರ ವಿಚಾರ, ಉಡುಗೆ ತೊಡುಗೆಗಳು, ದಿನನಿತ್ಯ ಜೀವನದ ಕಷ್ಟಸುಖ ಇವೇ ಮೊದಲಾದ ವಿಷಯಗಳ ಪರಿಚಯವೂ ನಮಗೆ ಈ ದೇವಸ್ಥಾನದ ವಾಸ್ತುಶಿಲ್ಪದಿಂದ ದೊರೆಯುತ್ತದೆ.

ಬೇಲೂರಿನಿಂದ ಸುಮಾರು ಇಪ್ಪತ್ತು ಕಿ.ಮೀ. ದೂರದಲ್ಲಿ ಹಳೇಬೀಡು ಇದೆ. 11ನೇ ಶತಮಾನದಲ್ಲಿ ಇದು ಹೊಯ್ಸಳ ದೊರೆಗಳ ರಾಜಧಾನಿಯಾಗಿದ್ದು, ಇದಕ್ಕೆ ದ್ವಾರಸಮುದ್ರ ಎನ್ನುವ ಹೆಸರಿತ್ತು. ಇದನ್ನು ಮಹಮದೀಯರ ದಂಡನಾಯಕನಾಗಿದ್ದ ಮಲ್ಲಿಕಾಫರನು ದಾಳಿ ಮಾಡಿ ಅಲ್ಲಿದ್ದ ಐಶ್ವರ್ಯವನ್ನೆಲ್ಲ ದೋಚಿಕೊಂಡು ಹೋದನು. ಇದು ಮತ್ತೊಮ್ಮೆ ಕೂಡ ಮಹದೀಯರ ದಾಳಿಗೆ ಬಲಿಯಾಗಿ ಅವನತಿ ಹೊಂದಿತು. ಹೀಗಾಗಿ ಇದಕ್ಕೆ ಹಳೇಬೀಡು ಎಂಬ ಹೆಸರಾಯಿತು. ಇಲ್ಲಿರುವ ಹೊಯ್ಸಳೇಶ್ವರ ಮತ್ತು ಶಾಂತಲೇಶ್ವರ ಎನ್ನುವ ಜೋಡಿ ದೇವಾಲಯಗಳನ್ನು 12ನೇ ಶತಮಾನದಲ್ಲಿ ವಿಷ್ಣುವರ್ಧನನ ದಂಡನಾಯಕನಾದ ಕೇತಮಲ್ಲನು ಕಟ್ಟಿಸಿದನು.

ಇಲ್ಲಿನ ಪ್ರತಿಯೊಂದು ಗರ್ಭಗುಡಿಯ ಮುಂಭಾಗದಲ್ಲಿ ನಂದಿಯ ಶಿಲಾ ವಿಗ್ರಹಗಳಿಂದ ಕೂಡಿದ ಮಂಪಟಗಳಿವೆ. ದೇವಾಲಯದ ದ್ವಾರಗಳಲ್ಲಿ ದ್ವಾರಪಾಲಕರ ವಿಗ್ರಹಗಳಿವೆ. ಇಲ್ಲಿಯೂ ರಾಮಾಯಣ, ಮಹಾಭಾರತ ಮೊದಲಾದ ಪುರಾಣ ಕಥೆಗಳನ್ನು ತಿಳಿಸುವ ಚಿತ್ರಗಳಿವೆ. ಒಟ್ಟಿನಲ್ಲಿ ಬೇಲೂರು–ಹಳೇಬೀಡು ದೇವಾಲಯಗಳ ಶಿಲ್ಪವೈಭವವು ಅಚ್ಚಳಿಯದೆ ಇಂದಿಗೂ ಇದೆ.

ಪದಗಳ ಅರ್ಥ

ದ್ವಾರ–ಬಾಗಿಲು; ಆರಾಧಿಸು–ಪೂಜಿಸು; ವಿಜಯೋನ್ಮತ್ತ–ಜಯ ಪಡೆದುದರಿಂದ ಸೊಕ್ಕಿದವ; ಅನುಗ್ರಹ–ಕೃಪೆ; ಹಿರಿಯರಾಣಿ–ಮೊದಲನೆಯ ಪಟ್ಟದ ರಾಣಿ; ಸಾಲಭಂಜಿಕೆ–ಗೊಂಬೆ; ವಾಸ್ತುಶಿಲ್ಪ–ಕಟ್ಟಡಗಳನ್ನು ಕಟ್ಟುವ ಕಲೆ; ಅವನತಿ–ನಾಶ; ಭೃಂಗಿ–ರೀತಿ; ಜೋಡಿ–ಎರಡು.

ಪ್ರಶ್ನೋತ್ತರಗಳು

I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.

1. ಚೆನ್ನಕೇಶವ ದೇವಾಲಯವು ಎಲ್ಲಿದೆ?
2. ಚೆನ್ನಕೇಶವ ದೇವಾಲಯವನ್ನು ಯಾರು ಕಟ್ಟಿಸಿದರು?
3. ಬಿಟ್ಟಿದೇವನು ಯಾರನ್ನು ಸೋಲಿಸಿ ಹೊಡೆದೋಡಿಸಿದನು?
4. ರಾಮಾನುಜಾಚಾರ್ಯರು ಯಾರು?
5. ಬೇಲೂರು ದೇವಾಲಯದ ಗೋಪುರವು ಎಷ್ಟು ಅಂತಸ್ತುಗಳಿಂದ ಕೂಡಿದೆ?
6. ಹಳೇಬೀಡು ಎಲ್ಲಿದೆ?
7. ಹೊಯ್ಸಳೇಶ್ವರ ಮತ್ತು ಶಾಂತಲೇಶ್ವರ ದೇವಾಲಯಗಳನ್ನು ಯಾರು ಕಟ್ಟಿಸಿದರು?

II. ಕೆಳಗಿನ ಪ್ರಶ್ನೆಗಳಿಗೆ ಮೂರ್ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.

1. ಬಿಟ್ಟಿದೇವನು ಬೇಲೂರಿನಲ್ಲಿ ವಿಜಯನಾರಾಯಣ ದೇವಾಲಯವನ್ನು ಏಕೆ ಕಟ್ಟಿಸಿದನು?
2. ಬಿಟ್ಟಿದೇವನು ವಿಷ್ಣುವರ್ಧನನಾದ ಬಗೆ ಹೇಗೆ?
3. ಸಾಲಭಂಜಿಕೆಗಳು ಯಾವುವು ? ಅವುಗಳ ಬಗ್ಗೆ ಬರೆಯಿರಿ.
4. ದ್ವಾರಸಮುದ್ರವನ್ನು ಹಳೇಬೀಡು ಎಂದು ಏಕೆ ಕರೆಯಲಾಯಿತು?
5. ಹಳೇಬೀಡಿನ ದೇವಾಲಯದ ಬಗ್ಗೆ ಬರೆಯಿರಿ.

ಘಟಕ ಐದು

ನಾಮಪದ

1. **ವಸ್ತು ವಾಚಕಗಳು :** ವಸ್ತುವಿನ ಹೆಸರು ಹೇಳುವ ಶಬ್ದಗಳೆಲ್ಲ ವಸ್ತುವಾಚಕ ನಾಮಗಳು. ಇವುಗಳಲ್ಲಿ ಮೂರು ವಿಧ. ರೂಢ ನಾಮ, ಅಂಕಿತ ನಾಮ ಹಾಗೂ ಅನ್ವರ್ಥನಾಮ. ಇವುಗಳನ್ನು ಈಗಾಗಲೇ ನಾವು ನೋಡಿದ್ದೇವೆ.

2. **ಗುಣವಾಚಕಗಳು :** ವಸ್ತುಗಳು ಅಥವಾ ವ್ಯಕ್ತಿಯ ಗುಣವನ್ನು ಹೇಳುವ ಶಬ್ದಗಳು ಗುಣವಾಚಕಗಳು. ಉದಾಹರಣೆಗೆ ಒಳ್ಳೆಯ ಹುಡುಗಿ. ಇಲ್ಲಿ ಒಳ್ಳೆಯ ಎಂಬುದು ವಿಶೇಷವಾಗಿರುವ ಗುಣವಾಚಕ. ಅಂತೆಯೇ, ಕರಿಯ, ಕೆಂಪುಕೋತಿ ಇತ್ಯಾದಿ.

3. **ಸಂಖ್ಯಾವಾಚಗಳು :** ಸಂಖ್ಯೆಗಳನ್ನು ತಿಳಿಸುವ ಶಬ್ದಗಳೇ ಸಂಖ್ಯಾವಾಚಕಗಳು. ಉದಾಹರಣೆಗೆ ಒಂದು, ಹತ್ತು ನೂರು. ಒಬ್ಬ, ಐವರು. ಇತ್ಯಾದಿ.

4. **ಪರಿಮಾಣ(ಪ್ರಮಾಣ) ವಾಚಕಗಳು :** ವಸ್ತುಗಳ ಸಾಮಾನ್ಯ ಅಳತೆ ಗಾತ್ರ ಇತ್ಯಾದಿಗಳನ್ನು ಹೇಳುವ ಶಬ್ದಗಳನ್ನು ಪರಿಮಾಣ ವಾಚಕಗಳೆಂದು ಹೇಳುವರು. ಉದಾಹರಣೆಗೆ, ಹಲವು, ಕೆಲವು, ಅಷ್ಟು ಇಷ್ಟು ಇತ್ಯಾದಿ.

5. **ದಿಗ್ವಾಚಕಗಳು :** ದಿಕ್ಕುಗಳ ಹೆಸರುಗಳನ್ನು ಸೂಚಿಸುವ ಶಬ್ದಗಳನ್ನೆಲ್ಲ ದಿಗ್ವಾಚಕ ನಾಮಗಳೆಂದು ಕರೆಯುವರು. ಉದಾಹರಣೆಗೆ ಉತ್ತರ, ದಕ್ಷಿಣ, ಮೂಡಣ, ತೆಂಕಣ, ಕೆಳಗೆ, ಮೇಲೆ, ಅತ್ತ, ಇತ್ತ, ಅಲ್ಲಿ, ಎಲ್ಲಿ ಇತ್ಯಾದಿ.

6. **ಪ್ರಕಾರವಾಚಕಗಳು :** ವ್ಯಕ್ತಿ, ವಸ್ತು ಮತ್ತು ಸ್ಥಳಗಳ ಪ್ರಕಾರವನ್ನು ಎಂದರೆ ಅವುಗಳ ರೀತಿಯನ್ನು ತಿಳಿಸುವ ಪದಗಳನ್ನು ಪ್ರಕಾರ ವಾಚಕಗಳು ಎನ್ನಲಾಗುವುದು. ಉದಾಹರಣೆಗೆ, ಎಂತಹದ್ದು, ಇಂತಹವು, ಎಂತಹವಳು, ಅಂತಹವನು ಇತ್ಯಾದಿ.

7. **ಭಾವವಾಚಕಗಳು :** ವಸ್ತುಗಳ ಮತ್ತು ಕ್ರಿಯೆಯ ಭಾವವನ್ನು ತಿಳಿಸುವ ಶಬ್ದಗಳೇ ಭಾವವಾಚಕಗಳು. ಉದಾಹರಣೆಗೆ, ನೋಟ, ಬಿಳುಪು ಇತ್ಯಾದಿ.

ಸರ್ವನಾಮಗಳು

ನಾಮಪದಗಳ ಬದಲಾಗಿ ಉಪಯೋಗಿಸುವ ಪದಗಳೇ ಸರ್ವನಾಮಗಳು. ಒಂದು ನಾಮಪದದ ಸ್ಥಾನದಲ್ಲಿ ಬರುವ ಶಬ್ದಕ್ಕೂ ಒಂದು ವಸ್ತುವಿನ ಅಥವಾ ವಿಷಯದ ಹೆಸರು ಹೇಳದೆಯೇ ಅದನ್ನು ಸೂಚಿಸುವ ಶಬ್ದಕ್ಕೂ ಸರ್ವನಾಮವೆಂದು ಹೆಸರು. ಇದೂ ಸಹ ನಾಮಪದದ ಒಂದು ಬಗೆ. ಉದಾಹರಣೆಗೆ, ರಾಮಣ್ಣ ಪೇಟೆಯಿಂದ ಮನೆಗೆ ಬಂದನು. ಅವನು ತುಂಬ ಬಳಲಿದ್ದಂತೆ ತೋರುತ್ತಿತ್ತು. ಹೀಗೆ ನಾಮಪದಗಳಿಗೆ ಬದಲಾಗಿ ಅವನು, ಅವಳು, ನೀನು, ನೀವು, ಅದು, ಅವು, ನಾನು ಮುಂತಾದ ಶಬ್ದಗಳನ್ನು ಬಳಸುತ್ತೇವೆ.

ಸರ್ವನಾಮಗಳಲ್ಲಿ ಮೂರು ಬಗೆಗಳು ಇವೆ. ಅವುಗಳು,

ಪುರುಷವಾಚಕ ಸರ್ವನಾಮಗಳು

ಪ್ರಥಮ ಪುರುಷ:

ಪುಲ್ಲಿಂಗ : ಅವನು, ಅವರು.

ಸ್ತ್ರೀಲಿಂಗ : ಅವಳು, ಅವರು.

ನಪುಂಸಕ ಲಿಂಗ : ಅದು, ಅವು

ಮಧ್ಯಮ ಪುರುಷ:

ನೀನು, ನೀವು.

ಉತ್ತಮ ಪುರುಷ:

ನಾನು, ನಾವು.

ಪ್ರಶ್ನಾರ್ಥಕ ಸರ್ವನಾಮಗಳು:

ಯಾವುದು, ಏನು, ಯಾವಾಗ, ಯಾವನು, ಏತಕ್ಕೆ, ಹೇಗೆ ಇತ್ಯಾದಿಗಳು.

ಆತ್ಮಾರ್ಥಕ ಸರ್ವನಾಮಗಳು:

ತಾನು, ತಾವು, ತನ್ನ ಇತ್ಯಾದಿ.

ಘಟಕ
ಆರು

ನಾಗರಿಕತೆ–ವೃತ್ತಿ–ವಾಣಿಜ್ಯ



ಕಲಿಕಾ ಉದ್ದೇಶಗಳು

- ಕನ್ನಡಿಗರ ಪ್ರಾಚೀನ ವಾಣಿಜ್ಯದ ಬಗ್ಗೆ ತಿಳಿದುಕೊಳ್ಳುವುದು.
- ಹಲವು ಬಗೆಯ ಕಸುಬುಗಳ ಬಗ್ಗೆ ತಿಳಿದುಕೊಳ್ಳುವುದು.
- ವಾಣಿಜ್ಯದ ಬೆಳವಣಿಗೆಯ ಹಂತಗಳ ಬಗ್ಗೆ ತಿಳಿಯುವುದು.
- ಕಸುಬಿನ ಮೂಲಕ ಕಲಿತುಕೊಳ್ಳುವ ಬೆಳವಣಿಗೆಯ ಬಗ್ಗೆ ತಿಳಿದುಕೊಳ್ಳುವುದು.
- ವ್ಯಾಕರಣದಲ್ಲಿ ಕ್ರಿಯಾಪದದ ಬಗ್ಗೆ ತಿಳಿದುಕೊಳ್ಳುವುದು.

ಘಟಕ
ಆರು

ನಾಗರಿಕತೆ–ವೃತ್ತಿ–ವಾಣಿಜ್ಯ

ಕಾವ್ಯ ಕಣಜ	:	ಹಡಗದ ಚಂದ
ಪೂರಕ ಪದ್ಯ	:	ವಿದುರ ನೀತಿ
ಗದ್ಯ ವಿಹಾರ	:	ವಾಣಿಜ್ಯ – ವ್ಯವಹಾರ
ಉಪಪಠ್ಯ	:	ಬಂಡವಾಳ
ವ್ಯಾಕರಣ	:	ಕ್ರಿಯಾಪದ



ಘಟಕ ಆರು

ಹಡಗದ ಚಂದ

– ವಿ.ಕೃ.ಗೋಕಾಕ



ಮೇಲ್ನೋಟಕ್ಕೆ ಇದು ಗದ್ಯದಂತೆ ಕಂಡು ಬಂದರೂ ಅದರೊಳಗಿನ ಲಯಗಾರಿಕೆ, ಅರ್ಥವಂತಿಕೆ, ಸ್ವಚ್ಛಂದ ಛಂದ ನಿಮಿತ್ತವಾಗಿ ನವ್ಯ ಕವನಗಳು ಓದುಗರಿಗೆ ಹತ್ತಿರದ್ದಾಗುತ್ತವೆ. ವಸ್ತುವನ್ನು ರಂಜಕವಾಗಿ ಕಾಣದೆ, ವಸ್ತುನಿಷ್ಠವಾಗಿಯೇ ಕಾಣುವ ಕ್ರಮ ನವ್ಯದಲ್ಲಿ ಅಧಿಕ. ಅಗತ್ಯವಿದ್ದರೆ ಸಾಂಕೇತಿಕವಾಗಿಯೂ ಪ್ರಯೋಗಾತ್ಮಕವಾಗಿಯೂ ನವ್ಯ ಕಾವ್ಯ ಕೆಲಸ ಮಾಡುತ್ತದೆ.

ಒಂದು ಮಾಟವಿದೆ ಮೋಟು ಮರದಂಥ ಈ ಹಡಗದಲ್ಲಿ,
ಒಂದು ಕ್ರಮವಿದೆ – ಯಂತ್ರಯುಗದ ಈ ಭ್ರಮೆಯಲ್ಲಿ !
ಅಂದವಿದೆ – ಚಂದವಿದೆ ಸಹ ! ತಿಳಿದು ನೋಡಲಿದೀಗ !

ಇದು ದೋಣಿಯಲ್ಲ – ತೇಲುತಿರುವ ಹಿರಿಬಣದೋಣಿ !
ಕಬ್ಬಿಣದ ಕಟ್ಟಡವಲ್ಲ – ಇಟ್ಟಣಿಸುವ ಪಟ್ಟಣವಿದು !
ಇದು ಬ್ರಹ್ಮಾಂಡ – ನೂರು ಭಾಷೆಗಳ ನವಖಂಡ !

ಸಪ್ತಸಾಗರದ ಮೇಲೆ ಸೃಷ್ಟಿಯನ್ನು ತೇಲಿಬಿಟ್ಟಂತೆ
ವಿಶ್ವಕರ್ಮನು ರಚಿಸಿ ತೇಲಿಬಿಟ್ಟನಿದನು
ತಿಮಿಂಗಿಲದಂತೆ ತಿರುಗುತಿದೆ ! ತಿರುಗಿಸಿದೆ !

ಇಂದು ಭಾರತ, ನಾಳೆ ಅರಬ್ಬೀ ದೇಶ
ಇಂದು ಈಜಿಪ್ತದಲ್ಲಿ, ನಾಳೆ ಯೂರೋಪಿನಲ್ಲಿ,
ಇದರ ಗತಿ – ಕಾಲಗತಿ ! ಇದರ ವೇಗ – ವಾಯುವೇಗ !

ಇಲ್ಲಿಯ ಊಟ – ಉಪಚಾರ – ಮನೆಗಿಂತ ಹೆಚ್ಚು.
ಇಲ್ಲಿಯ ಆಟ – ನೋಟ – ಊರಿಗಿಂತ ಮೆಚ್ಚು.
ಮನದ ಮಹಲನು ಕಟ್ಟಬಹುದು ! ಮನ ಬಂದಂತೆ ಕುಣಿಯಬಹುದು !

ಇದು ಹಡಗವಲ್ಲ – ಸಂಕ್ಷಿಪ್ತ ಬ್ರಹ್ಮಾಂಡವಿದು !
ಮಾನವನ ಕೌಶಲ್ಯಕ್ಕೆ ಕಳಸವಿಟ್ಟಿದೆಯಿಲ್ಲಿ.
ನೆರವೇ ಗೆಲುವು, ಔಚಿತ್ಯವೇ ಚೆಲುವು –
ಎಂಬುದನ್ನು ಬರೆದು ಕೊರೆದು ಸಾರಿದೆ ಇಲ್ಲಿ !

ಕವಿ–ಕಾವ್ಯ ಪರಿಚಯ



ಡಾಕ್ಟರ್ ವಿನಾಯಕ ಕೃಷ್ಣ ಗೋಕಾಕ

ಧಾರವಾಡ ಜಿಲ್ಲೆಯ ಸವಣೂರು ಎಂಬಲ್ಲಿ 1909ರಲ್ಲಿ ಜನಿಸಿದ ಡಾಕ್ಟರ್ ವಿನಾಯಕ ಕೃಷ್ಣ ಗೋಕಾಕರು, 'ವಿನಾಯಕ' ಎನ್ನುವ ಕಾವ್ಯನಾಮದಿಂದ ಪ್ರಸಿದ್ಧರಾಗಿದ್ದಾರೆ. ಇಂಗ್ಲಿಷ್‌ನಲ್ಲಿ ಸ್ನಾತಕೋತ್ತರ ಪದವಿ ಗಳಿಸಿ ಕೊಲ್ಲಾಪುರ, ಹೈದರಾಬಾದ್, ಪುಣೆ, ಧಾರವಾಡಗಳಲ್ಲಿ ಅಧ್ಯಾಪಕ, ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದ್ದಾರೆ. ಬೆಂಗಳೂರು ವಿಶ್ವವಿದ್ಯಾಲಯದ ಉಪಕುಲಪತಿಗಳಾಗಿ, ಸತ್ಯಸಾಯಿಬಾಬಾರವರ ಪ್ರಶಾಂತಿ ನಿಲಯದ ಕುಲಪತಿಗಳಾಗಿ ನಿವೃತ್ತರಾದರು. ಕನ್ನಡ ಭಾಷೆಯ ಬೆಳವಣಿಗೆಯ ಮತ್ತು ಆಡಳಿತ ಭಾಷೆಯಾಗಿ ಅನುಷ್ಠಾನಗೊಳ್ಳುವ ದಿಸೆಯಲ್ಲಿ ಗೋಕಾಕ್ ಅವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚಿಸಲಾಯಿತು. ನಂತರ ಗೋಕಾಕ್ ಸಮಿತಿಯ ವರದಿ ಜಾರಿಗೆ ತರಲು ರಾಜ್ಯ ವ್ಯಾಪಿಯಾಗಿ ಚಳವಳಿಯೂ ನಡೆಯಿತು.

ನವ್ಯಕವಿತೆಗಳು, ಕಲೋಪಾಸಕ, ಪಯಣ, ಬಾಳ ದೇಗುಲದಲ್ಲಿ, ಊರ್ಣನಾಭ, ಚೆಲುವಿನ ನಿಲುವು, ಇಜ್ಜೋಡು, ಸಮರಸವೇ ಜೀವನ, ನವ್ಯತೆ, ಕಾವ್ಯ ಜೀವನ, ದ್ಯಾವಾ–ಪೃಥ್ವಿ ಮುಂತಾದವು ಇವರ ಕೆಲವು ಕೃತಿಗಳು. ಹಲವು ವಿಶ್ವವಿದ್ಯಾಲಯಗಳ ಗೌರವ ಡಾಕ್ಟರೇಟ್, ಕೇಂದ್ರ ಸರ್ಕಾರದ ಪದ್ಮಶ್ರೀ, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗಳನ್ನು ಇವರು ಪಡೆದಿದ್ದಾರೆ. 1958ರಲ್ಲಿ ಬಳ್ಳಾರಿಯಲ್ಲಿ ನಡೆದ ಅಖಿಲ ಭಾರತ 40ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. ಗೋಕಾಕರ ಸಮಗ್ರ ಸಾಹಿತ್ಯಕ್ಕೆ 1991ರಲ್ಲಿ ಭಾರತೀಯ ಜ್ಞಾನಪೀಠ ಪ್ರಶಸ್ತಿ ಲಭಿಸಿದೆ. 1992ರಲ್ಲಿ ಗೋಕಾಕರು ನಿಧನ ಹೊಂದಿದರು.

ಪದಗಳ ಅರ್ಥ

ಮಾಟ–ಚೆಲುವು, ಬೆಡಗು; ಮೋಟು–ಮೊಂಡಾದುದು; ಭ್ರಮೆ–ಭ್ರಾಂತಿ, ಒಂದನ್ನು ಮತ್ತೊಂದು ಎಂದು ಭಾವಿಸುವುದು; ಹಿರಿಬಣ–ದೊಡ್ಡ ನಿರ್ಜನತೆ; ಇಟ್ಟಣಿಸು–ಗುರಿಸಾಗು; ಬ್ರಹ್ಮಾಂಡ–ವಿಶ್ವ, ಜಗತ್ತು; ವಿಶ್ವಕರ್ಮ–ದೇವಶಿಲ್ಪಿ; ನೆರವು–ಸಹಾಯ, ಸಹಕಾರ; ಔಚಿತ್ಯ–ಉಚಿತವೆನಿಸುವ, ಯೋಗ್ಯವಾದ; ಸಪ್ತಸಾಗರ–ಕ್ಷಾರ, ಕ್ಷೀರ, ದಧಿ, ಘೃತ, ಇಕ್ಷುರಸ, ಮಧ್ಯ, ಸಿಹಿನೀರು ಹೀಗೆ ಏಳು ಬಗೆಯ ಸಾಗರಗಳು.

ಕವನದ ಭಾವಾರ್ಥ

ಪ್ರಸ್ತುತ ಕವನವನ್ನು ಗೋಕಾಕರ 'ನವ್ಯಕಾವ್ಯ' ಗ್ರಂಥದಿಂದ ಆಯ್ದುಕೊಳ್ಳಲಾಗಿದೆ.

ಸಾಗರಗಳಲ್ಲಿ ಸಾಗುವ ವಾಹನವೇ ಹಡಗು. ಸಾರಿಗೆ ವ್ಯವಸ್ಥೆಯಲ್ಲಿ ಜಲ ಮಾರ್ಗ ಪ್ರಮುಖ ಸ್ಥಾನ ಪಡೆದಿದೆ. ಯುದ್ಧ ಕಾಲದಲ್ಲಿ ಸಾಗರ ತೀರದ ಗಡಿಯನ್ನು ರಕ್ಷಿಸುವ ಯುದ್ಧ ಹಡಗುಗಳು ರಾಷ್ಟ್ರದ ರಕ್ಷಣೆಗೆ ಅನಿವಾರ್ಯ. ಬೃಹತ್ ಗಾತ್ರದ ಈ ಹಡಗುಗಳು ತಿಮಿಂಗಿಲದಂತಿರುತ್ತವೆ. ಸಪ್ತಸಾಗರದ ಮೇಲೆ, ವಿಶ್ವಕರ್ಮನೇ ರಚಿಸಿಬಿಟ್ಟಂತಿರುವ ಈ ಹಡಗುಗಳು ಮಾನವನ ಕೌಶಲ್ಯಕ್ಕೆ ಕಳಸವಿಟ್ಟಂತಿರುತ್ತವೆ. ಇದು ಹಡಗವಲ್ಲ, ಸಂಕ್ಷಿಪ್ತ ಬ್ರಹ್ಮಾಂಡವೆಂದು ಕವಿ ವರ್ಣಿಸಿದ್ದಾರೆ. ಹಡಗದ ಪ್ರವಾಸ ಕಡಿಮೆಯಾಗುತ್ತಾ ಬರುತ್ತಿರುವ ಇಂದಿನ ಸಂದರ್ಭದಲ್ಲಿ ಅದರ ಮಹತ್ವವನ್ನು ಯುವ ತಲೆಮಾರಿಗೆ ತಿಳಿಯ ಹೇಳುವ ಉದ್ದೇಶ ಇಲ್ಲಿದೆ.

ಪ್ರಶ್ನೋತ್ತರಗಳು

I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ

1. ಹಡಗವು ಎಷ್ಟು ಭಾಷೆಗಳ ನವಖಂಡ ?
2. ಈ ಹಡಗವನ್ನು ಯಾವುದರ ಮೇಲೆ ತೇಲಿ ಬಿಟ್ಟರು ?

3. ಹಡಗು ಹೇಗೆ ತಿರುಗುತ್ತಿದೆ ?

4. ಹಡಗದ ಗತಿ ಯಾವುದು ?

5. ಹಡಗವು ಯಾವ ವೇಗದಲ್ಲಿ ಚಲಿಸುತ್ತದೆ ?

6. ಹಡಗು ಯಾರ ಕೌಶಲ್ಯಕ್ಕೆ ಕಳಸವಿಟ್ಟಿದೆ ?

II. ಕೆಳಗಿನ ಪ್ರಶ್ನೆಗಳಿಗೆ ಮೂರು–ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.

1. ಕವಿ ಹಡಗನ್ನು ನವ ಖಂಡ ಎಂದು ಕರೆಯಲು ಕಾರಣವೇನು ?

2. ಹಡಗು ಯಾವ ಯಾವ ದೇಶಗಳಲ್ಲಿ ಸಂಚರಿಸುತ್ತದೆ ?

3. ಹಡಗನ್ನು ಸಂಕ್ಷಿಪ್ತ ಬ್ರಹ್ಮಾಂಡವೆಂದು ಏಕೆ ಕರೆಯಲಾಗಿದೆ ?

III. ಕೆಳಗಿನ ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ.

1. ಹಡಗಿನ ಅಂದ–ಚಂದದ ಬಗೆಗೆ ಕವಿ ನೀಡಿರುವ ವಿವರಣೆಯನ್ನು ಸಂಗ್ರಹಿಸಿ.

2. ಕವಿಗೆ ಹಡಗಿನ ಪ್ರಯಾಣ ನೀಡಿದ ಅನುಭವವೇನು? ವಿವರಿಸಿ.

ಭಾಷಾಭ್ಯಾಸ

1. ಕೆಳಗಿನ ಪದಗಳ ತತ್ಸಮ ತದ್ಭವ ರೂಪಗಳನ್ನು ಬರೆಯಿರಿ.

ಬ್ರಹ್ಮ, ಭ್ರಮೆ, ಕಲಶ, ಯಂತ್ರ, ಪಟ್ಟಣ.

2. ಕೆಳಗಿನ ಪದಗಳ ವಿರುದ್ಧ ಪದಗಳನ್ನು ಬರೆಯಿರಿ.

ಕ್ರಮ, ತೃಪ್ತಿ, ಖಂಡ, ಔಚಿತ್ಯ, ಗತಿ.

3. ಕೆಳಗಿನ ಪದಗಳಿಗೆ ಸಮಾನಾರ್ಥಕ ಪದಗಳನ್ನು ಬರೆಯಿರಿ.

ಹಡಗ, ಮಹಲು, ಕಾಲ, ಅಂದ.

4. ಕೆಳಗಿನ ನುಡಿಗಟ್ಟನ್ನು ಗಮನಿಸಿರಿ. ಈ ಕವನದಲ್ಲಿರುವ ಇದೇ ಬಗೆಯ ಇತರ ನುಡಿಗಟ್ಟುಗಳನ್ನು ಸಂಗ್ರಹಿಸಿರಿ.

ತೇಲಿಬಿಡು : _____ , _____ , _____ , _____ .

5. ಕೆಳಗಿನ ಪದಗಳನ್ನು ಬಳಸಿ ಹಡಗಿಗೆ ಸಂಬಂಧ ಪಡುವಂತೆ ಸ್ವಂತವಾಕ್ಯಗಳನ್ನು ರಚಿಸಿ.

ಮಹಲು, ಕಬ್ಬಿಣ, ಬ್ರಹ್ಮಾಂಡ, ಕಳಶ, ಕೌಶಲ್ಯ, ಸಪ್ತಸಾಗರ, ಚಲಿಸಿ.

ಚಟುವಟಿಕೆ

1. ಯಾವುದಾದರೂ ಬಂದರಿಗೆ ಭೇಟಿ ನೀಡಿ, ಹಡಗನ್ನು ವೀಕ್ಷಿಸಿ ಅದರ ಬಗ್ಗೆ ಪ್ರಬಂಧ ಬರೆಯಿರಿ.

2. ಸಾಗರ ಸಂಪತ್ತಿನ ಬಗೆಗೆ ಮಾಹಿತಿಯನ್ನು ಸಂಗ್ರಹಿಸಿರಿ.

3. ಇನ್ನಿತರ ನವ್ಯ ಕವನಗಳನ್ನು ಓದಿರಿ.



ಪೂರಕ ಪದ್ಯ

ಘಟಕ ಆರು

ವಿದುರ ನೀತಿ

– ಕುಮಾರವ್ಯಾಸ



ಸುಗುಣಗಳು ಮನುಷ್ಯನನ್ನು ಉತ್ತಮನನ್ನಾಗಿಸುತ್ತವೆ. ನಾವು ಮಾನವೀಯ ಗುಣಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಬಾಳುವುದು ಉತ್ತಮವಾದುದು. ಈ ದೃಷ್ಟಿಯಿಂದಲೇ ನಮ್ಮ ಪೂರ್ವಜರು ನೀತಿ ಗ್ರಂಥಗಳನ್ನು ರಚಿಸಿದ್ದಾರೆ. ನಾವು ಹೇಗೆ ಬದುಕಬೇಕೆಂಬುದನ್ನು ನೀತಿ ಗ್ರಂಥಗಳು ಪ್ರತಿಪಾದಿಸುತ್ತವೆ. ನೀತಿ ಗ್ರಂಥಗಳನ್ನು ಓದೋಣ. ನೀತಿ ಮಾರ್ಗದಲ್ಲಿ ಬದುಕು ದೂಡೋಣ.

ಯತಿ ಕೆಡುಗು ದುಸ್ಸಂಗದಲಿ ಭೂ
ಪತಿ ಕೆಡುಗು ದುರ್ಮಂತ್ರಿಯಲಿ ನರ
ಸುತ ಕೆಡುಗು ಲಾಲನೆಗಳಲಿ ಕೃಷಿ ಕೆಡುಗುಪೇಕ್ಷೆಯಲಿ
ಮತಿಕೆಡುಗು ಮಧುಪಾನದಲ್ಲಿ ಸ
ದ್ಗತಿ ಕೆಡುಗು ದುಶ್ಚರಿತದಲಿ ನಿಜ
ಸತಿ ಕೆಡುಗು ದುರ್ವ್ಯಸನದಲಿ ಭೂಪಾಲ ಕೇಳೆಂದ.

ಕವಿ–ಕಾವ್ಯ ಪರಿಚಯ

ಈ ಕಾವ್ಯ ಭಾಗವನ್ನು ಗದುಗಿನ ನಾರಣಪ್ಪನ 'ಕರ್ನಾಟ ಭಾರತ ಕಥಾ ಮಂಜರಿ' ಎನ್ನುವ ಕೃತಿಯಿಂದ ಆರಿಸಿಕೊಳ್ಳಲಾಗಿದೆ. ನಡುಗನ್ನಡ ಸಾಹಿತ್ಯದ ಶ್ರೇಷ್ಠ ಕವಿಯಾದ ನಾರಣಪ್ಪನು ವ್ಯಾಸಭಾರತದ ಹತ್ತು ಪರ್ವಗಳನ್ನು ಕನ್ನಡದ ಭಾಮಿನೀ ಷಟ್ಪದಿಯಲ್ಲಿ ರಚಿಸಿ ತನ್ನನ್ನು ತಾನೇ 'ಕುಮಾರವ್ಯಾಸ' ನೆಂದು ಕರೆದುಕೊಂಡಿದ್ದಾನೆ. ಈ ಮಹಾಕವಿಯ ಕಾಲ ಕ್ರಿ.ಶ. 1430. ಜನ್ಮಸ್ಥಳ: ಗದಗ ಜಿಲ್ಲೆಯ ಕೋಳಿವಾಡ. ಈತನು ವೈದಿಕ ಬ್ರಾಹ್ಮಣನಾದರೂ ಶ್ರೀಕೃಷ್ಣನ ಪರಮಭಕ್ತನಾಗಿದ್ದು ಭಾಗವತ ಸಂಪ್ರದಾಯದವನಾಗಿದ್ದನು. ಕವಿ, ವಿಮರ್ಶಕರು ಈ ಕವಿಯ ಪ್ರತಿಭೆಯನ್ನು ದೈತ್ಯ ಪ್ರತಿಭೆ ಎಂದು ವರ್ಣಿಸಿ ರೂಪಕ ಸಾಮ್ರಾಜ್ಯ ಚಕ್ರವರ್ತಿ, ನಾದಲೋಲ ಮುಂತಾದ ಬಿರುದುಗಳನ್ನು ನೀಡಿದ್ದಾರೆ.



ಕುಮಾರವ್ಯಾಸ

ಪದಗಳ ಅರ್ಥ

ಯತಿ–ಸನ್ಯಾಸಿ, ಭೂಪತಿ–ರಾಜ, ಅರಸ, ದೊರೆ; ಸುತ–ಮಗ, ಪುತ್ರ; ಕೃಷಿ–ಬೇಸಾಯ, ವ್ಯವಸಾಯ; ಮತಿ–ಬುದ್ಧಿ; ಸತಿ–ಹೆಂಡತಿ.

ಕಾವ್ಯದ ಭಾವಾರ್ಥ

ದುರ್ಜನರ ಸಹವಾಸದಿಂದ ಸನ್ಯಾಸಿಯು ಕೆಡುತ್ತಾನೆ; ದುರ್ಮಂತ್ರಿಯನ್ನು ನೇಮಿಸಿಕೊಳ್ಳುವುದರಿಂದ ರಾಜನು ಕೆಡುತ್ತಾನೆ; ಅತಿಯಾದ ಮುದ್ದಿನಿಂದ ಮಗನು ಕೆಡುತ್ತಾನೆ; ತಾತ್ಸಾರದಿಂದ ವ್ಯವಸಾಯವೂ ಹಾಳಾಗುತ್ತದೆ; ಹೆಂಡ ಕುಡಿಯುವುದರಿಂದ ಬುದ್ಧಿಯು ಕೆಡುತ್ತದೆ. ಕೆಟ್ಟ ನಡತೆಯಿಂದ ದುರ್ಬುದ್ಧಿಯು ಲಭಿಸುತ್ತದೆ. ಕೆಟ್ಟ ಅಭ್ಯಾಸದಿಂದ ಹೆಂಗಸು ಕೆಡುತ್ತಾಳೆ.

ಪ್ರಶ್ನೋತ್ತರಗಳು

I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.

1. ರಾಜನು ಹೇಗೆ ಕೆಡುತ್ತಾನೆ?
2. ಕೃಷಿಯು ಹಾಳಾಗುವುದು ಹೇಗೆ?

II. ಕೆಳಗಿನ ಪ್ರಶ್ನೆಗೆ ಮೂರ್ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.

1. ವಿದುರನು ನೀತಿಯನ್ನು ಯಾರಿಗೆ ಬೋಧಿಸಿದನು?

III. ಕೆಳಗಿನ ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ.

1. ನಿಮ್ಮ ನೆಚ್ಚಿನ ಗೆಳೆಯನಲ್ಲಿರುವ ಒಳ್ಳೆಯ ಗುಣಗಳನ್ನು ಪಟ್ಟಿ ಮಾಡಿರಿ ?
2. ನಮ್ಮ ಬಾಳಿಗೆ ಒಳ್ಳೆಯ ಗುಣಗಳು ಅಗತ್ಯ. ಏಕೆ ? ಚರ್ಚಿಸಿ.

ಭಾಷಾಭ್ಯಾಸ

IV.ಸರಿಯಾದ ಉತ್ತರಗಳನ್ನು ಆರಿಸಿ ಬರೆಯಿರಿ.

1. ಸನ್ಯಾಸಿಯು _____ನಿಂದ ಕೆಡುತ್ತಾನೆ.

   ಅ) ಸುಜನ ಆ) ದುರ್ಜನ

   ಇ) ಶ್ರೀಮಂತ ಈ) ಬಡವ

2. ಅತಿಯಾಗಿ ಮುದ್ದಿಸುವುದರಿಂದ ಮಗನು _____

   ಅ) ಒಳ್ಳೆಯವನಾಗುತ್ತಾನೆ

   ಆ) ಗುಣವಂತನಾಗುತ್ತಾನೆ

   ಇ) ಕೆಡುತ್ತಾನೆ

   ಈ) ನಗುತ್ತಾನೆ

3. ರಾಜ – ಈ ಪದದ ಅರ್ಥ

   ಅ) ಅರಸ ಆ) ವಿರಸ

   ಇ) ಸರಸ ಈ) ಅಗಸ

4. ಕೇಳೆಂದ – ಈ ಶಬ್ದವನ್ನು ಬಿಡಿಸಿ ಬರೆದಾಗ

   ಅ) ಕೇಳು+ಎಂದ ಆ) ಕೇಳು+ಯೆಂದ

   ಇ) ಕೇಳೆಂ+ದ ಈ) ಕೇಳ್+ಅಂದ

5. 'ಪತಿ' – ಈ ಪದದ ವಿರುದ್ಧಾರ್ಥ

   ಅ) ಸತಿ ಆ) ಮತಿ

   ಇ) ಗತಿ ಈ) ಯತಿ

6. ಹೆಂಡ ಕುಡಿಯುವುದರಿಂದ _____ ಕೆಡುತ್ತದೆ.

   ಅ) ಶುದ್ಧಿ ಆ) ಬುದ್ಧಿ

   ಇ) ಸಿದ್ಧಿ ಈ) ಯುಕ್ತಿ

ಕಲಿತದ್ದು – ಕಲಿಕೆಯ ಫಲ

1. ನಾವು ಹಿರಿಯರೊಂದಿಗೇ ಹೇಗೆ ವರ್ತಿಸಬೇಕು ಎಂಬುದನ್ನು ನಿಮ್ಮ ಗೆಳೆಯರೊಂದಿಗೆ ಚರ್ಚಿಸಿ.
2. ಯಾವುದರಿಂದ ಯಾರು ಹೇಗೆ ಕೆಡುತ್ತಾರೆ ಎಂಬುದನ್ನು ಕವಿ ಹೇಗೆ ವಿವರಿಸಿದ್ದಾರೆ.

ಘಟಕ ಆರು

ವಾಣಿಜ್ಯ – ವ್ಯವಹಾರ



ಕಷ್ಟ ಪಟ್ಟು ದುಡಿದ ಹಣವನ್ನು ಮಣ್ಣಿನಲ್ಲಿ ಮುಚ್ಚಬೇಡ ಎಂಬುದು ಹಿರಿಯ ಅನುಭಾವಿಗಳ ಜಾಣ ನುಡಿ. ಹಣವನ್ನು ಬಳಸದೇ ಇರುವುದು ಮೂರ್ಖತನವಾಗಿರುತ್ತದೆ. ಹಣವನ್ನು ಹೂಡಿ ಯಾವುದಾದರೊಂದು ಕಸುಬನ್ನು ಕೈಗೊಂಡು ಜೀವನದಲ್ಲಿ ಮುಂದುವರೆಯಬೇಕು. ಇತರರಿಗೆ ನೆರವಾಗಲು ನಾವು ಬಾಳಬೇಕು. ಅದೇ ಮಾನವನ ಬದುಕಿಗೆ ಬೆಲೆಯನ್ನು ಕೊಡುತ್ತದೆ. ಇದನ್ನು ವಿವರಿಸುವ ಕಥೆಯೊಂದನ್ನು ಕೇಳೋಣ ಬನ್ನಿ.



ಮಾನವ ಜೀವನದಲ್ಲಿ ವ್ಯಾಪಾರ ಪ್ರಮುಖ ಪಾತ್ರ ವಹಿಸುತ್ತದೆ. ವ್ಯಾಪಾರ ಇಲ್ಲದಿದ್ದರೆ ಮಾನವನು ತನ್ನ ದಿನನಿತ್ಯದ ಬೇಡಿಕೆಗಳನ್ನು ಪೂರೈಸಿಕೊಳ್ಳಲಾಗದು. ವ್ಯಾಪಾರ ಹಲವು ರೀತಿಯದ್ದಾಗಿದೆ. ವಾಣಿಜ್ಯ ಸಂಸ್ಥೆಗಳು ಹಲವು ತೆರನಾಗಿವೆ. ಕನ್ನಡಿಗರು ಪ್ರಾಚೀನ ಕಾಲದಿಂದಲೂ ವ್ಯಾಪಾರ ವ್ಯವಹಾರಗಳಲ್ಲಿ ತಮ್ಮನ್ನು ತೊಡಗಿಸಿದ್ದಾರೆ. ಇವರು ಪ್ರಪಂಚದ ಎಲ್ಲೆಡೆ ವ್ಯಾಪಾರ ವ್ಯವಹಾರವನ್ನು ಹೊಂದಿದ್ದರು. ಇದನ್ನು ಕುರಿತು ತಿಳಿಯೋಣ ಬನ್ನಿ...

ಮಾನವನು ತನಗೆ ಅಗತ್ಯವಾದ ಎಲ್ಲಾ ವಸ್ತುಗಳನ್ನೂ ತಾನು ಒಬ್ಬನೇ ಉತ್ಪತ್ತಿ ಮಾಡಲಾಗದು. ತನಗೆ ಅಗತ್ಯವಾದ ಕೆಲವು ವಸ್ತುಗಳನ್ನು ಇತರರಿಂದ ಪಡೆದುಕೊಳ್ಳುತ್ತಾನೆ. ಅದೇ ರೀತಿ ತನ್ನಲ್ಲಿರುವ ಕೆಲವು ವಸ್ತುಗಳನ್ನು ಇತರರಿಗೆ ಕೊಡುತ್ತಾನೆ. ಹೀಗೆ ಪರಸ್ಪರ ವಸ್ತುಗಳು ವಿನಿಮಯವಾಗುತ್ತವೆ. ಇದನ್ನೇ ವ್ಯಾಪಾರ ಎನ್ನುತ್ತೇವೆ.

ವಾಣಿಜ್ಯದಲ್ಲಿ ವಿನಿಮಯ

ನಮ್ಮಲ್ಲಿ ಅಧಿಕವಾಗಿರುವ ವಸ್ತುಗಳನ್ನು ಇತರರಿಗೆ ಕೊಟ್ಟು, ನಮಗೆ ಅಗತ್ಯವಾದ ವಸ್ತುಗಳನ್ನು ಪಡೆದುಕೊಳ್ಳುವ ವಿಧಾನವನ್ನು ವಿನಿಮಯ ವ್ಯಾಪಾರವೆಂದು ಕರೆಯಲಾಗುತ್ತದೆ. ಭತ್ತವನ್ನು ಕೊಟ್ಟು ಅದಕ್ಕೆ ಬದಲಾಗಿ ಉಪ್ಪನ್ನು ಪಡೆಯುತ್ತಿದ್ದರು,

ಮೇಕೆಯ ಹಾಲನ್ನು ಕೊಟ್ಟು ಧಾನ್ಯಗಳನ್ನು ಪಡೆಯುತ್ತಿದ್ದರು. ಈ ಸಂಗತಿಯು ಪ್ರಾಚೀನ ಕಾಲದ ವ್ಯಾಪಾರ ವ್ಯವಹಾರಗಳಿಂದ ತಿಳಿದು ಬರುತ್ತದೆ. ಇದೇ ಕಾಲದಲ್ಲಿ ಮನೆಗಳಿಗೆ ಬಂದು ಹಳೆಯ ಹಾಳೆ ಹಾಗೂ ಇತರ ವಸ್ತುಗಳನ್ನೂ ಖರೀದಿ ಮಾಡುತ್ತಿದ್ದರು. ಅದಕ್ಕೆ ಬದಲಾಗಿ ಗೃಹೋಪಯೋಗಿ ವಸ್ತುಗಳನ್ನು ಖರೀದಿ ಮಾಡಲಾಗುತ್ತಿತ್ತು.

ವ್ಯಾಪಾರದ ವಿಧಗಳು

ವ್ಯಾಪಾರವನ್ನು ಪ್ರಮುಖವಾಗಿ ಭೂ ವ್ಯಾಪಾರ ಹಾಗೂ ಜಲವ್ಯಾಪಾರ ಎಂದು ವಿಂಗಡಿಸಲಾಗಿದೆ. ಭೂಮಾರ್ಗದಲ್ಲಿ ವಸ್ತುಗಳನ್ನು ಸಾಗಿಸಲು ಒಂಟೆ, ಎತ್ತು, ಕತ್ತೆ, ಕುದುರೆಯಂತಹ ಪ್ರಾಣಿಗಳನ್ನು ಬಂಡಿಗಳಿಗೆ ಕಟ್ಟಿಕೊಂಡು, ಊರಿಂದ ಊರಿಗೆ ಗುಂಪುಗುಂಪಾಗಿ ಹೋಗಿ ವ್ಯಾಪಾರ ಮಾಡುತ್ತಿದ್ದರು. ಸಮುದ್ರ ಮಾರ್ಗದಲ್ಲಿ ಹಡಗುಗಳ ಮೂಲಕ ವಸ್ತುಗಳನ್ನು ಆಮದು ಮತ್ತು ರಫ್ತು ಮಾಡಿ ವಾಣಿಜ್ಯ ವ್ಯವಹಾರವನ್ನು ಕೈಗೊಳ್ಳುತ್ತಿದ್ದರು. ಹಡಗುಗಳು ಬಂದು ನಿಲ್ಲುವ ಸ್ಥಳಗಳಿಗೆ ಬಂದರು ಎಂದು ಕರೆಯುತ್ತಿದ್ದರು. ಬಂದರು ನಗರಗಳನ್ನು ಪಟ್ಟಣಗಳೆಂದು ಕರೆಯಲಾಗುತ್ತಿತ್ತು.

ವ್ಯಾಪಾರವನ್ನು ಖಾಸಗಿ ವ್ಯಾಪಾರ ಮತ್ತು ಸಂಸ್ಥೆಯ ವ್ಯಾಪಾರವೆಂದು ವಿಭಾಗಿಸಬಹುದು. ಸ್ವತಂತ್ರವಾಗಿ ವ್ಯಕ್ತಿಯೊಬ್ಬ ಸ್ಥಾಪಿಸಿ ನಡೆಸುವ ವ್ಯಾಪಾರವೇ ಸ್ವತಂತ್ರ ವ್ಯಾಪಾರ. ಒಬ್ಬನಿಗಿಂತ ಹೆಚ್ಚು ವ್ಯಕ್ತಿಗಳು ಒಟ್ಟುಗೂಡಿ ಪರಸ್ಪರ ಬಂಡವಾಳ ಹೂಡಿ ನಡೆಸುವ ವ್ಯಾಪಾರವನ್ನು ಸಂಸ್ಥೆಯ ವ್ಯಾಪಾರ ಎಂದು ಕರೆಯಲಾಗುವುದು.

ಸಣ್ಣ ವ್ಯಾಪಾರ

ಜನರ ದೈನಂದಿನ ಬೇಡಿಕೆಗಳಾದ ಹಾಲು, ಸೊಪ್ಪು, ತರಕಾರಿಗಳು ಇತ್ಯಾದಿಗಳನ್ನು ಮಾರುವವರನ್ನು ಕಿರು ವ್ಯಾಪಾರಿಗಳು ಎನ್ನುವರು. ಇವರು ಸರಳ ಬಂಡವಾಳ ಹೂಡಿ, ವಸ್ತುಗಳನ್ನು ಖರೀದಿಸಿ ಬೀದಿಗಳಲ್ಲಿ ಮಾರಾಟ ಮಾಡುತ್ತಾರೆ. ಮಂಕರಿಗಳಲ್ಲಿ ವಸ್ತುಗಳನ್ನು ತಲೆಯ ಮೇಲೆ ಹೊತ್ತು, ಸಣ್ಣ ಬಂಡಿಗಳಲ್ಲಿ ಸಾಗಿಸಿಯೂ ವ್ಯಾಪಾರ ಮಾಡುವುದುಂಟು. ಸಣ್ಣ ವ್ಯಾಪಾರಿಗಳು ಗ್ರಾಹಕರೊಂದಿಗೆ ನೇರ ವಾಣಿಜ್ಯ ಸಂಬಂಧ ಹೊಂದಿರುತ್ತಾರೆ.



ದೊಡ್ಡ ವ್ಯಾಪಾರಿಗಳು

ಹೆಚ್ಚು ಬಂಡವಾಳ ಹೂಡಿ ಅಧಿಕ ಸಂಖ್ಯೆಯಲ್ಲಿ ವಸ್ತುಗಳನ್ನು ಸಂಗ್ರಹಿಸಿ ವ್ಯಾಪಾರ ಮಾಡುವ ವಿಧಾನವೇ ದೊಡ್ಡ ವ್ಯಾಪಾರ. ದೊಡ್ಡ ವ್ಯಾಪಾರಿಗಳು ಉತ್ಪಾದಕರಿಂದಲೇ ವಸ್ತುಗಳನ್ನು ಖರೀದಿಸಿ ಅದನ್ನು ಸಂಸ್ಥೆಗಳ ಮೂಲಕ ವ್ಯಾಪಾರ ಮಾಡುತ್ತಾರೆ. ದೊಡ್ಡ ವ್ಯಾಪಾರದಾರರೊಂದಿಗೆ ಗ್ರಾಹಕರ ಸಂಬಂಧವು ಅತಿ ವಿರಳ.

ಆಮದು ಮತ್ತು ರಫ್ತು

ಒಂದು ದೇಶದಲ್ಲಿ ಉತ್ಪಾದಿಸುವ ವಸ್ತುಗಳನ್ನು ಇತರ ದೇಶಗಳಿಗೆ ಕಳಿಸುವ ವಿಧಾನವನ್ನು ರಫ್ತು ಎಂದು ಕರೆಯಲಾಗುತ್ತದೆ. ಅದೇ ರೀತಿ ಬೇರೆ ದೇಶಗಳಿಂದ 'ವಿದೇಶೀ' ವಸ್ತುಗಳನ್ನು ನಮ್ಮ ದೇಶಕ್ಕೆ ತರಿಸಿಕೊಳ್ಳುವ ವ್ಯಾಪಾರವನ್ನು 'ಆಮದು' ಎಂದು ಕರೆಯಲಾಗುವುದು. ಪುರಾತನ ಕಾಲದಿಂದಲೂ ಭಾರತೀಯರು ವಿದೇಶೀಯರೊಂದಿಗೆ ಆಮದು ಮತ್ತು ರಫ್ತಿನಲ್ಲಿ ತೊಡಗಿದ್ದರೆಂಬುದು ಗಮನಾರ್ಹವಾಗಿದೆ.



ಅಂತರ್ಜಾಲದ ವಾಣಿಜ್ಯ



ಮಾರುಕಟ್ಟೆಗೆ ಹೋಗಿ ವಸ್ತುಗಳನ್ನು ಖರೀದಿಸಲು ಸಮಯವಿಲ್ಲದವರು ಅಂತರ್ಜಾಲದ ಮೂಲಕ ವ್ಯಾಪಾರ ವ್ಯವಹಾರ ನಡೆಸಲು ಅನುಕೂಲವಾಗಿದೆ. ಅಂತರ್ಜಾಲದ ಮೂಲಕ ವ್ಯಾಪಾರ ವಹಿವಾಟು ನಡೆಸುವ ಸಂಸ್ಥೆಗಳು ಹಲವಾರು ಇವೆ. ಇವುಗಳನ್ನು ಅಂತರ್ಜಾಲದ ಮೂಲಕ ಪತ್ತೆ ಹಚ್ಚಿ ವ್ಯವಹರಿಸಬಹುದು ಹಾಗೂ ಪರಸ್ಪರ ಹೋಲಿಸಿ ನೋಡಬಹುದು. ನಮಗೆ ಇಷ್ಟವಾದ ವಸ್ತುವನ್ನು ನಮ್ಮ ಮನೆಯಲ್ಲೇ ನಾವು ನೇರವಾಗಿ ಪಡೆದುಕೊಂಡು ಹಣವನ್ನು ಸಂದಾಯ ಮಾಡಬಹುದು. ಇಲ್ಲವೇ ವಿದ್ಯುನ್ಮಾನ ಬ್ಯಾಂಕಿನ ಮೂಲಕ ಹಣ ಪಾವತಿ ಮಾಡಬಹುದು.

ಪ್ರಾರಂಭದಲ್ಲಿ ವ್ಯಾಪಾರವು ಪರಸ್ಪರ ಕೊಟ್ಟು ತೆಗೆಯುವ ವಿಧಾನದಿಂದ ಮೊದಲುಗೊಂಡು ಕ್ರಮೇಣ ಹಣದ ಮೂಲಕ – ಬೆಳೆದು ಇಂದು ವಿದ್ಯುನ್ಮಾನ ಬ್ಯಾಂಕಿನ ಮೂಲಕ (Online-net Banking) ವ್ಯವಹಾರ ನಡೆಸುವ ಮಟ್ಟಿಗೆ ಅಭಿವೃದ್ಧಿ ಹೊಂದಿರುವುದನ್ನು ಗಮನಿಸಿದರೆ ಭವಿಷ್ಯದಲ್ಲಿ ವ್ಯಾಪಾರವು ಇನ್ನೂ ಪ್ರಗತಿಯನ್ನು ಸಾಧಿಸುವ ಮುನ್ಸೂಚನೆಯಾಗಿದೆ ಎಂದೇ ಹೇಳಬಹುದು.

ತಿಳಿದುಕೊಳ್ಳಿ

ಸಂಸ್ಥೆ = ವ್ಯಾಪಾರ ಮಾಡಲು ಹಲವು ಜನರು ಸೇರಿ ಮಾಡಿಕೊಂಡ ಕೂಟ.

ರಫ್ತು = ಬೇರೆ ದೇಶಗಳಿಗೆ ನಮ್ಮ ದೇಶದ ವಸ್ತುಗಳನ್ನು ಕಳುಹಿಸುವುದು.

ಆಮದು = ವಿದೇಶಗಳಿಂದ ವಸ್ತುಗಳನ್ನು ತರಿಸಿಕೊಳ್ಳುವುದು.

ಗ್ರಾಹಕ = ವಸ್ತುಗಳನ್ನು ಕೊಂಡುಕೊಳ್ಳುವವನು.

ಪ್ರಶ್ನೋತ್ತರಗಳು

I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ

1. ವ್ಯಾಪಾರ ಎಂದರೇನು ?
2. ವ್ಯಾಪಾರದಲ್ಲಿ ಎಷ್ಟು ವಿಧಗಳಿವೆ ?
3. ಹಿಂದಿನ ಕಾಲದಲ್ಲಿ ವ್ಯಾಪಾರಕ್ಕೆ ಯಾವ ಯಾವ ಪ್ರಾಣಿಗಳನ್ನು ಬಳಸುತ್ತಿದ್ದರು?
4. ಬಂದರು ಎಂದರೇನು ?
5. ಸಣ್ಣ ವ್ಯಾಪಾರ ಎಂದರೇನು ?
6. ನೇರವಾಗಿ ಉತ್ಪಾದಕರಿಂದಲೇ ಖರೀದಿಸುವ ವ್ಯಾಪಾರಿಗಳು ಯಾರು ?
7. ಆಮದು ಎಂದರೇನು ?
8. ರಫ್ತು ಎಂದರೇನು ?
9. ಅಂತರ್‌ಜಾಲದ ಮೂಲಕ ಯಾರು ವ್ಯಾಪಾರ – ವಹಿವಾಟು ಮಾಡುತ್ತಾರೆ ?

II. ಕೆಳಗಿನ ಪ್ರಶ್ನೆಗಳಿಗೆ ಮೂರು–ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.

1. ಮಾನವ ಜೀವನದಲ್ಲಿ ವ್ಯಾಪಾರ ಪ್ರಮುಖ ಪಾತ್ರ ವಹಿಸುತ್ತದೆ. ಹೇಗೆ ?
2. ವ್ಯಾಪಾರದ ವಿಧಗಳ ಬಗ್ಗೆ ಬರೆಯಿರಿ ?
3. ಆಮದು ಮತ್ತು ರಫ್ತು ವ್ಯಾಪಾರದ ಬಗ್ಗೆ ಬರೆಯಿರಿ?
4. ಅಂತರ್‌ಜಾಲ ವ್ಯಾಪಾರ ಎಂದರೇನು ?

ಭಾಷಾಭ್ಯಾಸ

1. ಕೆಳಗಿನ ಪದಗಳ ವಿರುದ್ಧ ಪದಗಳನ್ನು ಬರೆಯಿರಿ.

ಪ್ರಾಚೀನ, ಅಗತ್ಯ, ವಿರಳ, ದೇಶ, ನೇರ.

2. ಈ ಪದಗಳನ್ನು ಬಿಡಿಸಿ ಬರೆದು ಸಂಧಿಯ ಹೆಸರನ್ನು ಬರೆಯಿರಿ.

ವಿದ್ಯುನ್ಮಾನ, ಇತ್ಯಾದಿ, ಗಮನಾರ್ಹ, ಸ್ವತಂತ್ರವಾಗಿ, ಕಥೆಯೊಂದನ್ನು.

3. ಕೆಳಗಿನ ಪದಗಳನ್ನು ಬಳಸಿ ಸ್ವಂತವಾಕ್ಯಗಳನ್ನು ರಚಿಸಿ

ಕಸುಬು, ಮೂರ್ಖತನ, ಧಾನ್ಯ, ಹಡಗು, ವ್ಯಾಪಾರಿ.

4. ಕೆಳಗಿನ ಪದಗಳಿಗೆ ಸಮಾನಾರ್ಥಕ ಪದಗಳನ್ನು ಬರೆಯಿರಿ.

ಹಿರಿಯ, ನೆರೆ, ಪ್ರಪಂಚ, ಸಮುದ್ರ, ಸ್ಥಳ.

5. ಮಾದರಿಯಂತೆ ಉತ್ತರಿಸಿ.

ಮಾದರಿ : ವ್ಯಾಪಾರ ಮಾಡುವವನು – ವ್ಯಾಪಾರಿ.

1. ಶಿಕ್ಷಣ ನೀಡುವವನು _____
2. ಚಾಲನೆ ಮಾಡುವವನು _____
3. ರೋಗ ಇರುವವನು _____
4. ಪೂಜೆ ಮಾಡುವವನು _____

6. ಹೊಂದಿಸಿ ಬರೆಯಿರಿ.

1.ಸಣ್ಣ ವ್ಯಾಪಾರ	ವಿದೇಶಗಳಿಗೆ ಕಳಿಸುವುದು
2.ಅಂತರ್‌ಜಾಲ ವ್ಯಾಪಾರ	ಗ್ರಾಹಕರೊಂದಿಗೆ ನೇರ ಸಂಪರ್ಕವಿಲ್ಲ
3.ದೊಡ್ಡ ವ್ಯಾಪಾರ	ವಿದ್ಯುನ್ಮಾನ ಬ್ಯಾಂಕಿಂಗ್
4.ರಫ್ತು	ವಿದೇಶಗಳಿಂದ ಖರೀದಿಸುವುದು
5.ಆಮದು	ತರಕಾರಿ

ಚಟುವಟಿಕೆ

1. ಅಂತರ್‌ಜಾಲ(ಆನ್‌ಲೈನ್)ದಲ್ಲಿ ವ್ಯಾಪಾರ ಮಾಡುವ ಸಂಸ್ಥೆಗಳನ್ನು ಪಟ್ಟಿಮಾಡಿ.
2. ನಿಮ್ಮ ಸಮೀಪದ ಊರಿನಲ್ಲಿರುವ ಸಂತೆಗೆ ಒಮ್ಮೆ ಭೇಟಿ ನೀಡಿ.
3. ಭಾರತದ ಮೊದಲ ಹತ್ತು ಬೃಹತ್ ವ್ಯಾಪಾರ ಸಂಸ್ಥೆಗಳ ಹೆಸರುಗಳನ್ನು ಬರೆಯಿರಿ.
4. 'ನಾನು ವ್ಯಾಪಾರಿಯಾದರೆ!' – ಈ ವಿಷಯವನ್ನು ಕುರಿತು ಪ್ರಬಂಧ ಬರೆಯಿರಿ.



ಉಪಪಠ್ಯ

ಘಟಕ ಆರು

ಬಂಡವಾಳ



"ಕಷ್ಟಪಟ್ಟು ದುಡಿದ ಹಣವನ್ನು ಮಣ್ಣಲ್ಲಿ ಮುಚ್ಚಿಡಬೇಡಿ' ಎಂದು ಅವ್ವೈಯಾರ್ ಹಿತನುಡಿಗಳನ್ನು ಹೇಳಿದ್ದಾರೆ. ಹಣವನ್ನು ಉಪಯೋಗಿಸದೆ ಬಚ್ಚಿಟ್ಟುಕೊಳ್ಳುವುದು ಬುದ್ಧಿಹೀನತೆಯಾಗಿದೆ. ಹಣವನ್ನು ಬಳಸಿಕೊಂಡು ಯಾವುದಾದರೂ ಒಂದು ಕಸುಬನ್ನು ಮಾಡಿ ಜೀವನದಲ್ಲಿ ಮುಂದುವರೆಯಬೇಕು. ಬೇರೆಯವರಿಗೆ ಸಹಾಯ ಮಾಡುತ್ತಾ ಬದುಕಬೇಕು. ಅದೇ ಹಣದ ಮಹತ್ವ. ಈ ಉದ್ದೇಶವನ್ನು ತಿಳಿಸುವ ಕಥೆಯನ್ನು ತಿಳಿಯೋಣ ಬನ್ನಿರಿ...

ಪೂಂಗೊಳಂ ಎನ್ನುವ ಊರಿನಲ್ಲಿ ಅರುಳಪ್ಪ ಎಂಬ ವ್ಯಾಪಾರಿ ಇದ್ದನು. ಒಂದು ಬಾರಿ ಆತ ಹೊರ ದೇಶಕ್ಕೆ ಹೋಗಬೇಕಾಗಿ ಬಂತು. ತನ್ನ ಮಕ್ಕಳಾದ ರಾಜ, ಅಮುದ, ರಘು – ಮೂವರನ್ನೂ ತನ್ನ ಬಳಿಗೆ ಕರೆದು,

'ಮಕ್ಕಳೇ ! ನಾನು ಹೊರ ದೇಶಕ್ಕೆ ಹೋಗುತ್ತಿದ್ದೇನೆ. ನಾನು ನಿಮ್ಮೆಲ್ಲರಿಗೂ ಹಣವನ್ನು ಕೊಡುತ್ತೇನೆ. ನಾನು ಕೊಡುವ ಹಣವನ್ನು ಜೋಪಾನವಾಗಿಟ್ಟುಕೊಂಡು ನಾನು ಬಂದ ಮೇಲೆ ನನಗೆ ಹಿಂದಿರುಗಿಸಬೇಕು' ಎಂದು ಹೇಳಿದ.

ಪ್ರತಿಯೊಬ್ಬರಿಗೂ ಐವತ್ತು ಸಾವಿರ ರೂಪಾಯಿಗಳನ್ನು ಆತ ನೀಡಿದ. ಮೂವರೂ ಸಂತೋಷದಿಂದ ತೆಗೆದುಕೊಂಡರು. ಅರುಳಪ್ಪನೂ ಹೊರದೇಶಕ್ಕೆ ಹೊರಟು ಹೋದ. ನಂತರ ಅವನ ಮೂರು ಮಂದಿ ಮಕ್ಕಳೂ ಕುಳಿತು ಆಲೋಚಿಸಿದರು.

'ನಮ್ಮ ಸಾಮರ್ಥ್ಯವನ್ನು ಪರೀಕ್ಷಿಸುವುದಕ್ಕಾಗಿ ನಮ್ಮ ತಂದೆ ಹಣವನ್ನು ಕೊಟ್ಟಿದ್ದಾರೆ' ಎಂದನು ರಾಜ.

'ನಾನೂ ಹಾಗೆಯೇ ಅಂದುಕೊಳ್ಳುತ್ತೇನೆ' ಎಂದಳು ಅಮುದ.

'ನಾನು ಹಾಗೆಂದುಕೊಳ್ಳುವುದಿಲ್ಲ. ನಮಗೆ ಹಣವನ್ನು ರಕ್ಷಿಸುವುದು ತಿಳಿದಿದೆಯೇ ಎಂದು ಪರೀಕ್ಷಿಸುವುದಕ್ಕಾಗಿಯೇ ಕೊಟ್ಟಿದ್ದಾರೆ' ಎಂದ ರಘು.

ರಾಜ ವ್ಯವಸಾಯದಲ್ಲಿ ಆಸಕ್ತಿಯುಳ್ಳವನು. ಆತ ತಂದೆ ತನಗೆ ಕೊಟ್ಟ ಹಣದಿಂದ ಭೂಮಿಯನ್ನು ಗುತ್ತಿಗೆಗೆ ತೆಗೆದುಕೊಂಡನು. ಆ ಭೂಮಿಯನ್ನು ಚೆನ್ನಾಗಿ ಉಳುಮೆ ಮಾಡಿ, ಬೇಲಿ ಹಾಕಿ, ತರಕಾರಿ ಬೀಜ ಹಾಕಿ ತೋಟವನ್ನಾಗಿ ಮಾಡಿದನು. ಪ್ರತಿದಿನವೂ ಎಚ್ಚರಿಕೆಯಿಂದ ಅದನ್ನು ನೋಡಿಕೊಳ್ಳುತ್ತಿದ್ದನು.



ತೋಟದಲ್ಲಿ ಅವರೆಕಾಯಿ, ಹಾಗಲಕಾಯಿ, ಬೆಂಡೆಕಾಯಿ, ಬದನೆಕಾಯಿ ಮುಂತಾದ ತರಕಾರಿಗಳನ್ನು ಬೆಳೆಸಿದನು. ಅವೆಲ್ಲ ಗಿಡಗಳೂ ಚೆನ್ನಾಗಿ ಬೆಳೆದು ಕಾಯಿಗಳು ಗೊಂಚಲು ಗೊಂಚಲಾಗಿ ಬಿಟ್ಟವು. ಅವುಗಳನ್ನು ಸಂತೆಗೆ ಕೊಂಡು ಹೋಗಿ ವ್ಯಾಪಾರ ಮಾಡಿ ಲಾಭ ಗಳಿಸಿದನು.

ಅಮುದಳಿಗೆ ಕುರಿ, ಹಸುಗಳನ್ನು ಕಂಡರೆ ಇಷ್ಟ. ಅದಕ್ಕಾಗಿ ತಂದೆ ಕೊಟ್ಟ ಹಣದಿಂದ ಕೆಲವು ನಾಡ ಹಸುಗಳನ್ನು ಕೊಂಡುಕೊಂಡು ಅವುಗಳನ್ನು ಪ್ರೀತಿಯಿಂದ ಸಾಕಿದಳು. ಅವುಗಳಿಂದ ಕರೆದ ಹಾಲನ್ನು ಮನೆಮನೆಗೆ ಕೊಂಡು ಹೋಗಿ ಮಾರಿದಳು. ಹಾಗೂ ಮಜ್ಜಿಗೆ, ಮೊಸರು, ಬೆಣ್ಣೆ, ತುಪ್ಪ ಮುಂತಾದವುಗಳನ್ನು ಮಹಿಳಾ ಸ್ವಸಹಾಯ ಸಂಘಗಳ ಮೂಲಕ ಮಾರಿ ಲಾಭ ಪಡೆದುಕೊಂಡಳು.

ರಘು ತಂದೆ ತನಗೆ ಕೊಟ್ಟ ಹಣವನ್ನು ಜೋಪಾನವಾಗಿಟ್ಟುಕೊಂಡಿದ್ದು, ಪುನಃ ಭದ್ರವಾಗಿ ಅವರಿಗೇ ಹಿಂದಿರುಗಿಸಬೇಕೆಂದು ಬಯಸಿದನು. ಅವನು,

ಮನೆಯಲ್ಲಿ ಹಣ ಇಟ್ಟರೆ ಕಾಣದೇ ಹೋಗಬಹುದು ಎಂದು ಭಾವಿಸಿ, ಒಂದು ಪೆಟ್ಟಿಗೆಯಲ್ಲಿಟ್ಟು ಮನೆಯ ಹಿಂದೆ ಹೂತಿಟ್ಟ.



ಅರುಳಪ್ಪ ತನ್ನ ವಿದೇಶಿ ಪ್ರವಾಸ ಮುಗಿಸಿಕೊಂಡು ಕೆಲವು ದಿನಗಳ ನಂತರ ಊರಿಗೆ ಹಿಂದಿರುಗಿದ.

ರಾಜನನ್ನು ಕರೆದು, 'ನಾನು ಕೊಟ್ಟು ಹೋದ ಹಣ ಎಲ್ಲಿ?' ಎಂದು ಕೇಳಿದ. ಅದಕ್ಕೆ ರಾಜ, 'ಅಪ್ಪಾ, ನೀವು ಕೊಟ್ಟ ಹಣವನ್ನು ಉಪಯೋಗಿಸಿಕೊಂಡು ವ್ಯವಸಾಯವನ್ನು ಮಾಡಿ ಲಾಭ ಗಳಿಸಿದ್ದೇನೆ. ನೀವು ಕೊಟ್ಟ ಹಣವನ್ನು ನಾನು ಎರಡು ಪಟ್ಟು ಮಾಡಿದ್ದೇನೆ' ಎಂದು ಹೇಳಿ ತಂದೆಯ ಮುಂದೆ ಹಣವನ್ನಿಟ್ಟನು. ತಂದೆಗೆ ತುಂಬಾ ಸಂತೋಷವಾಯಿತು.

ಸಂತೋಷದಿಂದ, 'ಒಳ್ಳೆಯದು. ಸತ್ಯ, ದುಡಿಮೆ ನಿನ್ನಲ್ಲಿದೆ. ಈ ಹಣವನ್ನು ನೀನೇ ಇಟ್ಟುಕೋ. ನಿನ್ನ ವ್ಯವಸಾಯವನ್ನು ಮುಂದುವರೆಸು' ಎಂದು ತಂದೆ ಅವನಿಗೆ ಹೇಳಿದರು.

ನಂತರ ಅಮುದಳನ್ನು ಕುರಿತು, 'ಅಮುದ...' ಎಂದು ಅವಳ ಕಡೆ ನೋಡಿದಾಗ ಅವಳು,

'ಅಪ್ಪಾ ! ನಾನು ಹಸುಗಳನ್ನು ಕೊಂಡುಕೊಂಡು ಬೆಳೆಸಿದೆ. ಅವು ನೀಡಿದ ಹಾಲಿನಿಂದ ನೀವು ಕೊಟ್ಟ ಹಣ ಎರಡರಷ್ಟು ಆಗಿದೆ. ಇದೋ ತೆಗೆದುಕೊಳ್ಳಿ' ಎಂದು ಆ ಹಣವನ್ನು ತಂದೆಗೆ ನೀಡಿದಳು.

'ತುಂಬಾ ಸಂತೋಷ. ಈ ಹಣವನ್ನು ನನ್ನ ಉಡುಗೊರೆಯಾಗಿ ನೀನೇ ಇಟ್ಟುಕೋ. ಇದರಿಂದ ಇನ್ನೂ ಹೆಚ್ಚು ಹಸುಗಳನ್ನು ತೆಗೆದುಕೊಂಡು ನಿನ್ನ ಕೆಲಸವನ್ನು ಮುಂದುವರೆಸು' ಎಂದು ತಂದೆ ಹೇಳಿದರು.

ನಂತರ ರಘುವನ್ನು ಕರೆದರು. ಅವನು ಒಂದು ಪೆಟ್ಟಿಗೆಯೊಡನೆ ಬಂದನು. 'ಅಪ್ಪಾ! ನೀವು ಕೊಟ್ಟ ಹಣವನ್ನು ಬಹಳ ಜೋಪಾನವಾಗಿ ಪೆಟ್ಟಿಗೆಯಲ್ಲಿ ಇಟ್ಟಿದ್ದೇನೆ' ಎಂದನು. ಅದನ್ನು ನೋಡಿ ತಂದೆ ಮೋಸ ಹೋದರು. ಅವನ ದಡ್ಡ ಬುದ್ಧಿಯನ್ನು ನೋಡಿ ತಂದೆಗೆ ಚಿಂತೆಯಾಯಿತು. 'ಹಣ ಎಂದರೆ ಪೆಟ್ಟಿಗೆಯಲ್ಲಿಟ್ಟು ಜೋಪಾನ ಮಾಡುವ ವಸ್ತುವಲ್ಲ. ಅದನ್ನು ಉಪಯೋಗಿಸಿಕೊಂಡು ಒಳ್ಳೆಯ ಕಸುಬನ್ನು ಮಾಡಿ ಅಭಿವೃದ್ಧಿ ಹೊಂದುವುದು ಮನುಷ್ಯನ ಕರ್ತವ್ಯ. ನೀನು ನಿನ್ನ ಕರ್ತವ್ಯವನ್ನು ಸರಿಯಾದ ರೀತಿಯಲ್ಲಿ ಮಾಡಿಲ್ಲ ರಘು! ನೀನು ನಾನು ಕೊಟ್ಟ ಹಣವನ್ನು ಸರಿಯಾಗಿ ಉಪಯೋಗಿಸಿಕೊಳ್ಳಲಿಲ್ಲ. ಸಮಯವನ್ನು ವ್ಯರ್ಥ ಮಾಡಿಕೊಂಡೆ. ನೀನು ವಯಸ್ಸಿನಲ್ಲಿ ಚಿಕ್ಕವನು. ನನ್ನೊಂದಿಗೆ ಕೆಲವು ದಿನಗಳಿದ್ದು ಕಸುಬನ್ನು ಕಲಿತುಕೋ. ನಿನ್ನ ಭವಿಷ್ಯತ್ಕಾಲಕ್ಕೆ ಅದು ಉಪಯೋಗವಾಗುತ್ತದೆ' ಎಂದು ತಂದೆ ಹೇಳಿದರು.

ರಘು ತನ್ನ ತಪ್ಪನ್ನು ತಿಳಿದುಕೊಂಡು, ತಂದೆಯಿಂದ ಕಸುಬನ್ನು ಕಲಿತು ಅಭಿವೃದ್ಧಿ ಹೊಂದಲು ತೀರ್ಮಾನಿಸಿದನು.

ಪ್ರಶ್ನೋತ್ತರಗಳು

I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.

1. ಅರುಳಪ್ಪ ವ್ಯಾಪಾರಿಗೆ ಎಷ್ಟು ಮಕ್ಕಳು ? ಅವರುಗಳ ಹೆಸರೇನು ?
2. ಹೊರ ದೇಶಕ್ಕೆ ಹೋಗುವಾಗ ಅರುಳಪ್ಪನು ತನ್ನ ಮಕ್ಕಳನ್ನು ಕರೆದು ಏನು ಹೇಳಿದನು ?
3. ತಂದೆ ಕೊಟ್ಟ ಹಣವನ್ನು ರಾಜ ಏನು ಮಾಡಿದನು?
4. ತಂದೆ ಕೊಟ್ಟ ಹಣದಿಂದ ಅಮುದ ಏನು ಮಾಡಿದಳು ?
5. ತಂದೆ ಕೊಟ್ಟ ಹಣವನ್ನು ರಘು ಏನು ಮಾಡಿದನು?
6. ರಘುವಿಗೆ ತಂದೆ ಏನೆಂದು ಬುದ್ಧಿ ಹೇಳಿದರು ?

II. ಕೆಳಗಿನ ಪ್ರಶ್ನೆಗೆ ವಿವರವಾಗಿ ಉತ್ತರಿಸಿ.

1. ಈ ಕಥೆಯಲ್ಲಿ ಬರುವ ಕಥಾ ಪಾತ್ರದಲ್ಲಿ ಬರುವ ವ್ಯಕ್ತಿಗಳಲ್ಲಿ ನಿಮಗಿಷ್ಟವಾದ ವ್ಯಕ್ತಿ ಯಾರು ? ಏಕೆ?

ಕಲಿತದ್ದು – ಕಲಿಕೆಯ ಫಲ

1. 'ಬಂಡವಾಳ' ಕಥೆಯನ್ನು ಶಾಲೆಯಲ್ಲಿ ನಾಟಕ ಮಾಡಿ ಅಭಿನಯಿಸಿ.
2. ನೀವು ರಘುವಾಗಿದ್ದರೆ ಆ ಹಣವನ್ನು ಏನು ಮಾಡುತ್ತಿದ್ದಿರಿ ಎಂಬ ಬಗ್ಗೆ ತರಗತಿಯಲ್ಲಿ ಚರ್ಚಿಸಿ.

ಘಟಕ ಆರು

ಕ್ರಿಯಾಪದ

ಕ್ರಿಯಾಪದಗಳು

ಕ್ರಿಯೆಯನ್ನು (ಕೆಲಸವನ್ನು) ಸೂಚಿಸುವ ಪದಗಳನ್ನು ಕ್ರಿಯಾಪದ ಎನ್ನುತ್ತೇವೆ.

ಉದಾಹರಣೆಗೆ, ಈಜು, ದಾಟು, ಹುಟ್ಟು, ಓಡು, ಕೊಡು, ಒದೆ, ಚಿಮ್ಮು.

ಕ್ರಿಯಾಪದದ ಮೂಲರೂಪವನ್ನು ಧಾತು ಎನ್ನುತ್ತೇವೆ. ಕ್ರಿಯಾಪದದಲ್ಲಿ ಎರಡು ವಿಧ.

1. ಸಕರ್ಮಕ ಕ್ರಿಯಾಪದ

2. ಅಕರ್ಮಕ ಕ್ರಿಯಾಪದ.

1. ಸಕರ್ಮಕ ಕ್ರಿಯಾಪದ

ಕರ್ಮಪದವನ್ನು ಬಯಸುವ ಕ್ರಿಯಾಪದಗಳನ್ನು ಸಕರ್ಮಕ ಕ್ರಿಯಾಪದ ಎಂದು ಕರೆಯುತ್ತೇವೆ.
ಉದಾಹರಣೆಗೆ,

ರಮೇಶನು ಗಿಡವನ್ನು **ನೆಟ್ಟನು.**
ಶಿಲ್ಪಿಗಳು ಗುಡಿಯನ್ನು **ಕಟ್ಟಿದರು.**
ವಿದ್ಯಾರ್ಥಿಗಳು ಪಾಠವನ್ನು **ಓದಿದರು.**

ಈ ಮೂರೂ ವಾಕ್ಯಗಳಲ್ಲಿರುವ ನೆಟ್ಟನು, ಕಟ್ಟಿದರು, ಓದಿದರು ಎಂಬ ಕ್ರಿಯಾಪದಗಳಿಗೆ ಏನನ್ನು ಎಂಬ ಪ್ರಶ್ನೆಯನ್ನು ಹಾಕಿಕೊಂಡಾಗ ಅನುಕ್ರಮವಾಗಿ ಗಿಡವನ್ನು, ಗುಡಿಯನ್ನು, ಪಾಠವನ್ನು ಎಂಬ ಉತ್ತರ ದೊರೆಯುವುದು. ಇಂತಹ ಕ್ರಿಯಾಪದವನ್ನು ಸಕರ್ಮಕ ಕ್ರಿಯಾಪದ ಎಂದು ಕರೆಯುವರು.

2. ಅಕರ್ಮಕ ಕ್ರಿಯಾಪದ

ಕರ್ಮಪದವನ್ನು ಬಯಸದೇ ಇರುವ ಕ್ರಿಯಾಪದಗಳೇ ಅಕರ್ಮಕ ಕ್ರಿಯಾಪದಗಳು ಎನ್ನಿಸುವುವು.
ಉದಾಹರಣೆಗೆ,

ಕೂಸು **ಮಲಗಿತು.**
ಅವನು **ಬದುಕಿದನು.**
ಆಕಾಶ **ಹೊಳೆಯುತ್ತಿದೆ.**

ಇಲ್ಲಿ ಮಲಗಿತು, ಬದುಕಿದನು, ಹೊಳೆಯುತ್ತಿದೆ ಎಂಬ ಕ್ರಿಯಾಪದಗಳಿಗೆ ಏನನ್ನು ಎಂಬ ಪ್ರಶ್ನೆ ಹಾಕಿಕೊಂಡರೆ ಉತ್ತರ ಇರುವುದಿಲ್ಲ. ಅಂದರೆ ಕರ್ಮಪದವನ್ನು ಇವು ಬಯಸುವುದಿಲ್ಲ. ಇಂತಹ ಕ್ರಿಯಾಪದಗಳಿಗೆ ಅಕರ್ಮಕ ಕ್ರಿಯಾಪದ ಎನ್ನುತ್ತೇವೆ.

ಘಟಕ ಏಳು

ನವಚೈತನ್ಯ ತುಂಬುವ ದೇಶವಿದು



ಕಲಿಕಾ ಉದ್ದೇಶಗಳು

- ಭಾರತದ ಹಿರಿಮೆ ಗರಿಮೆಗಳನ್ನು ಕಲಿಯುವುದು.
- ಸರಳ ಜೀವನದ ಘನತೆಯನ್ನು ತಿಳಿಯುವುದು.
- ಸಮಾಜ ಬದಲಾವಣೆಯಲ್ಲಿ ಮಹಾತ್ಮಾ ಗಾಂಧೀಜಿಯವರ ಪಾತ್ರವನ್ನು ತಿಳಿಯುವುದು.
- ಸ್ವಾತಂತ್ರ್ಯ ಸಂಗ್ರಾಮದಲ್ಲಿ ಮಹಿಳೆಯರ ಪಾತ್ರವನ್ನು ತಿಳಿದುಕೊಳ್ಳುವುದು.
- ಲೇಖನ ಚಿಹ್ನೆಗಳನ್ನು ಬಳಸುವ ವಿಧಾನ ತಿಳಿಯುವುದು.

ಘಟಕ ಏಳು

ನವಚೈತನ್ಯ ತುಂಬುವ ದೇಶವಿದು

ಕಾವ್ಯ ಕಣಜ	:	ಸ್ವಾತಂತ್ರ್ಯದ ಹಣತೆ*
ಗದ್ಯ ವಿಹಾರ	:	ಹಿಂದೂಸ್ತಾನಕ್ಕೆ ಹಿಂದಿರುಗಿದುದು
ಉಪಪಠ್ಯ	:	ವೀರರಾಣಿ ಕೆಳದಿಯ ಚೆನ್ನಮ್ಮ
ವ್ಯಾಕರಣ	:	ಲೇಖನ ಚಿಹ್ನೆಗಳು



ಘಟಕ ಏಳು

ಸ್ವಾತಂತ್ರ್ಯದ ಹಣತೆ *

– ಕೆ.ಎಸ್.ನಿಸಾರ್ ಅಹಮದ್



ನಮಗೆ ಬಂದಿರುವ ಸ್ವಾತಂತ್ರ್ಯವನ್ನು ಸದಾ ರಕ್ಷಣೆ ಮಾಡಿಕೊಳ್ಳಬೇಕು. ನಮ್ಮ ದೇಶದ ಅಭಿವೃದ್ಧಿಗಾಗಿ ಸದಾ ದುಡಿಯುತ್ತಿರಬೇಕು. ಧೀರತನದಿಂದ ದೇಶದ ಸ್ವಾತಂತ್ರ್ಯವನ್ನು ಕಾಪಾಡಿಕೊಳ್ಳಬೇಕು. ನಮ್ಮ ಸಾಧನೆಯ ಕಡೆಗೆ ಗಮನವಿರಬೇಕು. ದೇಶಕ್ಕಾಗಿ ಹೋರಾಡಿದ ಹುತಾತ್ಮರಿಗೆ ಗೌರವವನ್ನು ಸದಾ ಸಲ್ಲಿಸಬೇಕು ಎಂಬುದು ಈ ಪದ್ಯದ ಆಶಯವಾಗಿದೆ.

ಸದಾ ಉರಿಯುತಿರುವ ಹಾಗೆ ಸ್ವಾತಂತ್ರ್ಯದ ಹಣತೆ
ದುಡಿಮೆ ತೈಲವೆರೆಯುತಿರಲು ಬಿಡುವಿಲ್ಲದೆ ಜನತೆ
ಎಂತು ಕುಂದಬಹುದು ಎಮ್ಮ ತಾಯ್ನಾಡಿನ ಘನತೆ । ಸದಾ ।

ಮುಳ್ಳಿನಿಂದ ಅರಿವೆ ಬಿಡಿಸಿದಂತೆ ಬಂತೆ ಮುಕ್ತಿ?
ಹುಲಿಯ ಬಾಯ ಮೇವ ಕಸಿಯುವಂತೆ ಧೀರಶಕ್ತಿ
ಪಡೆಯಿತದನು ಜನತೆ, ಬಾಲ ಬೆಸೆಯೆ ನಾಡ ಭಕ್ತಿ । ಸದಾ ।

ಸ್ವಾತಂತ್ರ್ಯದ ಜೊತೆಗೆ ಬಂದು ಕೂಡಲಿಲ್ಲ ಗಳಿಕೆ
ವ್ಯಕ್ತಿ ವ್ಯಕ್ತಿ ಬೆವರ ಹೀರಿ ಮರವಾಗಿದೆ ಮೊಳಕೆ
ಮೇಲೇರಿದ ಹಾಗೆ ಭದ್ರಪಾಯವುಂಟು ಗೃಹಕೆ । ಸದಾ ।

ಸಾಗಿದಂತೆ ಸಲ್ಲುತಿರಲಿ ಸಾಧನೆಯೆಡೆ ಗಮನ
ಪ್ರಾಣವನ್ನೆ ಪಗಡಿಯಾಡಿದವರಿಗೆಮ್ಮ ನಮನ
ತಾಯ ಮುಡಿಗೆ ದಿನವೂ ಏರುತಿರಲು ಹೂವ ದವನ । ಸದಾ ।



ಕೆ.ಎಸ್ ನಿಸಾರ್ ಅಹಮದ್

ಕವಿ–ಕಾವ್ಯ ಪರಿಚಯ

ಕೊಕ್ಕರೆ ಹೊಸಹಳ್ಳಿ ಷೇಕ್ ಹೈದರ್ ನಿಸಾರ್ ಅಹಮದ್ ಅವರು 15.02.1936ರಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿಯಲ್ಲಿ ಜನಿಸಿದರು. ತಂದೆ ಷೇಕ್ ಹೈದರ್, ತಾಯಿ ಹಮೀದಾ ಬೇಗಂ. ಭೂಗರ್ಭಶಾಸ್ತ್ರದಲ್ಲಿ ಪದವಿಯನ್ನು ಪಡೆದು ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಅಧ್ಯಾಪಕರಾಗಿ ಸೇವೆಯನ್ನು ಪ್ರಾರಂಭಿಸಿದರು. ಇವರು, 'ಮನಸು ಗಾಂಧಿ ಬಜಾರು', 'ನೆನೆದವರ ಮನದಲ್ಲಿ', 'ನಿತ್ಯೋತ್ಸವ', 'ಸುಮುಹೂರ್ತ' ಮೊದಲಾದ ಕೃತಿಗಳನ್ನು ರಚಿಸಿದ್ದಾರೆ. ಇವರಿಗೆ ಪಂಪ ಪ್ರಶಸ್ತಿ, ನಾಡೋಜ ಪ್ರಶಸ್ತಿ, ಕೇಂದ್ರ ಮತ್ತು ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗಳನ್ನು ನೀಡಿ ಗೌರವಿಸಲಾಗಿದೆ.

ಕಠಿಣ ಪದಗಳ ಅರ್ಥ

ಅರಿವೆ–ಬಟ್ಟೆ; ಗಳಿಕೆ–ಸಂಪಾದನೆ; ಗೃಹ–ಮನೆ; ಘನತೆ–ಶ್ರೇಷ್ಠತೆ; ತೈಲ–ಎಣ್ಣೆ; ಬೆಸೆ–ಒಂದಾಗುವುದು; ಮೊಳಕೆ–ಕುಡಿ; ಪಗಡೆ–ಒಂದು ಬಗೆಯ ಆಟ; ಪಾಯ–ಬುನಾದಿ; ಹಣತೆ–ದೀಪ.

ಪ್ರಶ್ನೋತ್ತರಗಳು

I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.

1. ಸದಾ ಉರಿಯುತ್ತಿರಬೇಕಾದುದು ಯಾವುದು ?
2. ಧೀರ ಶಕ್ತಿಯುಳ್ಳವರು ಏನು ಮಾಡಬಲ್ಲರು ?
3. ಮೊಳಕೆ ಉಂಟಾದುದು ಹೇಗೆ?
4. ನಮ್ಮ ಗಮನ ಯಾವುದರ ಕಡೆಗೆ ನಿಲ್ಲಬೇಕು ?

II. ಕೆಳಗಿನ ಪ್ರಶ್ನೆಗಳಿಗೆ ಮೂರ್ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.

1. ತಾಯ್ನಾಡಿನ ಘನತೆ ಕುಂದಲು ಸಾಧ್ಯವಿಲ್ಲ ಎಂದು ಕವಿ ಹೇಗೆ ತಿಳಿಸಿದ್ದಾರೆ?
2. ನಾಡ ಭಕ್ತಿಯನ್ನು ಹೇಗೆ ಬೆಳೆಸಬಹುದು?

III. ಕೆಳಗಿನ ಪ್ರಶ್ನೆಗೆ ವಿವರವಾಗಿ ಉತ್ತರಿಸಿ.

1. ಸ್ವಾತಂತ್ರ್ಯದ ಉಳಿವು–ಬೆಳವಣಿಗೆಗೆ ವಿದ್ಯಾರ್ಥಿಗಳಾದ ನಮ್ಮ ಪಾತ್ರವೇನು? ಚರ್ಚಿಸಿ ಬರೆಯಿರಿ.

ಭಾಷಾಭ್ಯಾಸ

IV ಅ. ಸರಿಯಾದ ಉತ್ತರಗಳನ್ನು ಆರಿಸಿ ಬರೆಯಿರಿ.

1. ಸದಾ ಉರಿಯುತ್ತಿರುವ ಹಾಗೆ _____ ಹಣತೆ.
   (ಅ) ಬಿಡುವಿಲ್ಲದ (ಆ) ತಾಯ್ನಾಡಿನ
   (ಇ) ಸ್ವಾತಂತ್ರ್ಯದ (ಈ) ವಿದೇಶದ

2. _____ ಬಾಯ ಮೇವ ಕಸಿಯುವಂತ ಧೀರಶಕ್ತಿ.
   (ಅ) ಹಸುವಿನ (ಆ) ಹುಲಿಯ
   (ಇ) ಕರುವಿನ (ಈ) ಸಿಂಹದ

ಆ. ಕೆಳಗಿನ ಪದಗಳನ್ನು ಬಿಡಿಸಿ ಬರೆಯಿರಿ.

ಬಿಡುವಿಲ್ಲದ, ತಾಯ್ನಾಡಿನ, ಮೇಲೇರಿದ, ಏರುತಿರಲು.

ಇ. ವಿರುದ್ಧ ಪದ ಬರೆಯಿರಿ.

ಸ್ವಾತಂತ್ರ್ಯ, ಏರುತ, ಭದ್ರ, ಚಲಿಸು, ಶಕ್ತಿ.

ಈ. ತತ್ಸಮ–ತದ್ಭವ ಪದಗಳನ್ನು ಬರೆಯಿರಿ.

ಮುಕ್ತಿ, ಶಕ್ತಿ, ಭಕ್ತಿ, ಪ್ರಾಣ.

ಉ. ಕೆಳಗಿನ ಪದಗಳನ್ನು ಬಳಸಿ ಸ್ವಂತ ವಾಕ್ಯಗಳನ್ನು ರಚಿಸಿ.

ಸ್ವಾತಂತ್ರ್ಯ, ಸಾಧನೆ, ಗಮನ, ಭಕ್ತಿ.

ಚಟುವಟಿಕೆ

1. ಈ ಪದ್ಯವನ್ನು ಹಾವಭಾವಗಳೊಂದಿಗೆ ಲಯಬದ್ಧವಾಗಿ ಹಾಡಿರಿ.
2. ರಾಷ್ಟ್ರದ ಪ್ರಗತಿಗೆ ನಮ್ಮ ಪಾತ್ರ ಏನೆಂಬುದನ್ನು ಕುರಿತು ಬರೆಯಿರಿ.

ಘಟಕ ಏಳು

ಹಿಂದೂಸ್ತಾನಕ್ಕೆ ಹಿಂದಿರುಗಿದುದು

ಮೋಹನದಾಸ ಕರಮಚಂದ ಗಾಂಧಿ
ಅನು : ಗೊರೂರು ರಾಮಸ್ವಾಮಿ ಅಯ್ಯಂಗಾರ್



ಮಹಾತ್ಮಾಗಾಂಧೀಜಿ ಭಾರತದ ರಾಷ್ಟ್ರಪಿತ. ಜಗತ್ತಿಗೆ ಅವರ ಜೀವನ ಮಹಾತ್ಮರ ಜೀವನವಾಗಿ ಪರಿಣಮಿಸಿದೆ. ಅವರು ನಡೆಸಿದ ಸತ್ಯಶೋಧನೆಯ ಪ್ರಯತ್ನಗಳು ನಮ್ಮೆಲ್ಲರ ಬದುಕಿಗೆ ಮಾರ್ಗದರ್ಶಕಗಳಾಗಿವೆ. ಅವರೇ ತಮ್ಮ ಜೀವನದ ಪ್ರಯೋಗಗಳನ್ನು ಕುರಿತು ಹೀಗೆ ಹೇಳಿದ್ದಾರೆ: 'ಒಬ್ಬರಿಗೆ ಯಾವುದು ಸಾಧ್ಯವೋ ಅದು ಎಲ್ಲರಿಗೂ ಸಾಧ್ಯವೆಂದು ನಾನು ಯಾವಾಗಲೂ ನಂಬಿರುವುದರಿಂದ ನನ್ನ ಪ್ರಯೋಗಗಳು ರಹಸ್ಯದಲ್ಲಿ ನಡೆದಿಲ್ಲ. ಬಹಿರಂಗವಾಗಿಯೇ ನಡೆದಿವೆ. ಇಂತಹ ಒಂದು ಸತ್ಯ ಶೋಧನೆಯ ಪ್ರಸಂಗವನ್ನು ಈ ಪಾಠದಲ್ಲಿ ನೋಡಬಹುದು.



ಮಹಾತ್ಮಾಗಾಂಧೀಜಿ

ನಾನು ಯುದ್ಧದ ಕೆಲಸದಿಂದ ಬಿಡುಗಡೆ ಹೊಂದಿದ ಮೇಲೆ, ನನ್ನ ಕೆಲಸ ಇನ್ನು ಇರುವುದು ದಕ್ಷಿಣ ಆಫ್ರಿಕಾದಲ್ಲಲ್ಲ, ಆದರೆ ಭಾರತದಲ್ಲಿ ಎಂದು ನನಗೆ ತೋರಿತು. ದಕ್ಷಿಣ ಆಫ್ರಿಕಾದಲ್ಲಿ ಮಾಡಬೇಕಾದ ಕೆಲಸ ಇರಲಿಲ್ಲ ಎಂದಲ, ಆದರೆ ಅಲ್ಲಿದ್ದರೆ ಹಣ ಸಂಪಾದನೆಯೇ ನನ್ನ ಮುಖ್ಯ ಕಾರ್ಯವಾಗಬಹುದೆಂದು ನನಗೆ ಚಿಂತೆಯುಂಟಾಯಿತು.

ಭಾರತದಲ್ಲಿ ಮಿತ್ರರೂ ನನ್ನನ್ನು ಹಿಂದಿರುಗಬೇಕೆಂದು ಒತ್ತಾಯ ಪಡಿಸುತ್ತಿದ್ದರು.

ನನಗೂ ಸಹ ಭಾರತದಲ್ಲಿ ನನ್ನಿಂದ ಸೇವೆಯಾಗುತ್ತದೆ ಎಂದು ತೋರಿತು. ಆಫ್ರಿಕಾದ ಕೆಲಸ ಮಾಡಲು ಖಾನ್ ಮತ್ತು ಮನಸುಖಲಾಲ್ ನಾಝರ್ ಅಲ್ಲಿದ್ದರು. ಆದುದರಿಂದ ನಾನು ಸಹೋದ್ಯೋಗಿಗಳಿಗೆ ನನ್ನನ್ನು ಬಿಟ್ಟುಕೊಡುವಂತೆ ಕೇಳಿಕೊಂಡೆನು. ನಾನು ಬಹಳ ಕೇಳಿಕೊಂಡ ನಂತರ ನನ್ನ ಪ್ರಾರ್ಥನೆಯನ್ನು ಒಂದು ಷರತ್ತಿಗೆ ಒಳಪಡಿಸಿ ಒಪ್ಪಿಕೊಂಡರು. ಆ ಷರತ್ತು ಇದು : 'ನಾನು ಭಾರತಕ್ಕೆ ಪ್ರಯಾಣ ಮಾಡಿದ ಒಂದು ವರುಷದೊಳಗೆ, ಆಫ್ರಿಕಾದ ಭಾರತೀಯರಿಗೆ ನನ್ನ ಅವಶ್ಯಕತೆ ಉಂಟಾದರೆ ನಾನು ಮತ್ತೆ ಆಫ್ರಿಕಾಕ್ಕೆ ಹಿಂದಿರುಗಲು ಒಪ್ಪಬೇಕೆಂಬುದು. ಆ ಷರತ್ತು ಬಹಳ ಕಠಿಣವಾದುದೆಂದು ತೋರಿತು. ಆದರೆ ಭಾರತೀಯರಲ್ಲಿ ನನಗೆ ಇದ್ದ ಪ್ರೇಮ ಬಂಧನ, ನಾನು ಅದನ್ನು ಒಪ್ಪುವಂತೆ ಮಾಡಿತು.

ಕಾಚ ರೇ ತಾಂತಣೇ ಮನೇ ಹರಜೀ ಏ ಬಾಂಧೀ
ಜೇಮ ತಾಣೇ ತೇಮ ತೇಮನೀ ರೇ
ಮನೇ ಲಾಗೀ ಕಟಾರೀ ಪ್ರೇಮನೀ

'ದೇವರು ನನ್ನನ್ನು ಪ್ರೇಮವೆಂಬ ನೂಲೆಳೆಯಿಂದ ಬಂಧಿಸಿದ್ದಾನೆ. ನಾನು ಆತನ ದಾಸಿಯಾಗಿದ್ದೇನೆ' ಎಂದು ಹಾಡಿದಳು ಮೀರಾ. ನೆಟಾಲಿನ ಭಾರತೀಯರೊಂದಿಗೆ ನನ್ನನ್ನು ಬಂಧಿಸಿದ್ದ ನೂಲೆಳೆ ಕೀಳಲಾರದಷ್ಟು ಬಲವಾಗಿತ್ತು. ಜನತೆಯ ವಾಕ್ಯವೇ ದೇವರ ವಾಕ್ಯ. ನನ್ನ ಮಿತ್ರರ ಮಾತನ್ನು ತಿರಸ್ಕರಿಸಲು ನನಗೆ ಸಾಧ್ಯವಾಗಲಿಲ್ಲ. ಅವರ ಷರತ್ತಿಗೆ ನಾನು ಒಪ್ಪಿಕೊಂಡು ಹೊರಡಲು ಅವರ ಅನುಮತಿ ಪಡೆದೆ.

ಆಗ ನನಗೆ ನೆಟಾಲಿನೊಂದಿಗೆ ಮಾತ್ರ ನಿಕಟ ಬಾಂಧವ್ಯವಿದ್ದಿತು. ನೆಟಾಲ್ ಭಾರತೀಯರು. ನನಗೆ ಪ್ರೇಮಾಮೃತದಲ್ಲಿ ಸ್ನಾನ ಮಾಡಿಸಿದರು. ಎಲ್ಲೆಲ್ಲಿಯೂ ನನ್ನನ್ನು ಬೀಳ್ಕೊಡುವ ಸಮಾರಂಭ, ಸಭೆಗಳು ನಡೆದು ಅಭಿನಂದನ ಪತ್ರಗಳು ಕೊಡಲ್ಪಟ್ಟವು. ನನಗೆ ಅಮೂಲ್ಯವಾದ ಉಡುಗೊರೆಗಳನ್ನೂ, ಕಾಣಿಕೆಗಳನ್ನೂ ಕೊಟ್ಟರು.

ನಾನು 1899ರಲ್ಲಿ ಭಾರತಕ್ಕೆ ಹಿಂದಿರುಗಿದಾಗಲೂ ಉಡುಗೊರೆಗಳನ್ನು ಕೊಟ್ಟಿದ್ದರು. ಆದರೆ ಈ ಸಲದ ಬೀಳ್ಕೊಡುಗೆಯ ಸಮಾರಂಭಗಳು ಎಂದೂ ಇಲ್ಲದಷ್ಟು ವೈಭವಪೂರ್ಣವಾಗಿದ್ದವು. ಕಾಣಿಕೆಗಳಲ್ಲಿ ಚಿನ್ನ, ಬೆಳ್ಳಿಯ ವಸ್ತುಗಳಂತೂ ಇದ್ದೇ ಇದ್ದವು. ಜೊತೆಗೆ ಬೆಲೆಬಾಳುವ ವಜ್ರದ ವಸ್ತುಗಳೂ ಇದ್ದವು.

ಈ ಬಹುಮಾನಗಳನ್ನೆಲ್ಲ ತೆಗೆದುಕೊಳ್ಳಲು ನನಗೇನು ಹಕ್ಕು ? ಅವುಗಳನ್ನು ಸ್ವೀಕರಿಸಿ ಯಾವ ಪ್ರತಿಫಲವೂ ಇಲ್ಲದೆ ನಾನು ನಮ್ಮ ಜನರ ಸೇವೆ ಮಾಡುತ್ತಿರುವೆನೆಂದು ಹೇಗೆ ತಾನೇ ಹೇಳಿಕೊಳ್ಳಲಿ? ನನ್ನ ಕಕ್ಷಿಗಾರರು ಕೊಟ್ಟಿದ್ದ ಕೆಲವು ಬಹುಮಾನಗಳ ಹೊರತು, ಉಳಿದುವೆಲ್ಲಾ ನಮ್ಮ ಜನಕ್ಕೆ ನಾವು ಮಾಡಿದ್ದ ಸಾರ್ವಜನಿಕ ಸೇವೆಗಾಗಿ ಬಂದ ಬಹುಮಾನಗಳು. ಕಕ್ಷಿಗಾರರಿಗೂ ಸಹೋದ್ಯೋಗಿಗಳಿಗೂ ನಾನು ವ್ಯತ್ಯಾಸ ಮಾಡುವಂತೆ ಇರಲಿಲ್ಲ. ಏಕೆಂದರೆ ನನ್ನ ಕಕ್ಷಿಗಾರರೂ ನನ್ನ ಸಾರ್ವಜನಿಕ ಕಾರ್ಯದಲ್ಲಿ ಸಹಾಯಕರಾಗಿದ್ದರು.

ಬಹುಮಾನಗಳ ಪೈಕಿ ಒಂದು ಐವತ್ತು ಗಿನಿ (ಸುಮಾರು ಎಂಟುನೂರು ರೂಪಾಯಿ) ಬಾಳುವ ಚಿನ್ನದ ಸರ ನನ್ನ ಹೆಂಡತಿಗಾಗಿ. ಆದರೆ ಆ ವಸ್ತುವನ್ನು ಕೊಟ್ಟಿದ್ದುದೂ ನನ್ನ ಸಾರ್ವಜನಿಕ ಕಾರ್ಯಗಳಿಗಾಗಿಯೇ. ಆದುದರಿಂದ ಅದು ಇತರ ವಸ್ತುಗಳಿಂದ ಬೇರೆ ಎಂದು ಹೇಳುವಂತಿಲ್ಲ.

ಈ ವಸ್ತುಗಳಲ್ಲಿ ಹೆಚ್ಚು ಭಾಗ ನನಗೆ ಕೊಡಲ್ಪಟ್ಟ ದಿನ ನನಗೆ ರಾತ್ರಿ ನಿದ್ದೆಯೇ ಬರಲಿಲ್ಲ. ನಾನು ಅಶಾಂತನಾಗಿ ನನ್ನ ಕೊಠಡಿಯಲ್ಲಿ ಹಿಂದಕ್ಕೂ ಮುಂದಕ್ಕೂ ಹುಚ್ಚನಂತೆ ತಿರುಗಾಡಿದೆ. ಆದರೆ ನನಗೆ ಪರಿಹಾರ ಕಾಣಲಿಲ್ಲ. ಸಾವಿರಾರು ರೂಪಾಯಿ ಬಾಳುವ ಬಹುಮಾನಗಳನ್ನು ತ್ಯಜಿಸುವುದು ಕಷ್ಟವಾಗಿ ತೋರಿತು. ಆದರೆ ಅವುಗಳನ್ನು ಇಟ್ಟುಕೊಳ್ಳುವುದು ಅದಕ್ಕಿಂತಲೂ ಕಷ್ಟವಾಗಿ ತೋರಿತು.

ನಾನು ಒಂದು ಪಕ್ಷ ಇಟ್ಟುಕೊಂಡರೂ ನನ್ನ ಮಕ್ಕಳ ವಿಚಾರ ಹೇಗೆ ? ನನ್ನ ಹೆಂಡತಿಯ ವಿಚಾರ ಹೇಗೆ ? ಸೇವೆಯ ಜೀವನಕ್ಕೆ ಅವರನ್ನು ಸಿದ್ಧಗೊಳಿಸುತ್ತಿದ್ದೆ. 'ಸೇವೆಯ ಪ್ರತಿಫಲ ಸೇವೆಯೇ' ಎಂಬುದು ಅವರಿಗೆ ಕೊಟ್ಟ ಶಿಕ್ಷಣವಾಗಿತ್ತು.

ನನ್ನ ಮನೆಯಲ್ಲಿ ಬೆಲೆ ಬಾಳುವ ಒಡವೆಗಳಾವುವೂ ಇರಲಿಲ್ಲ. ನಾವು ಬೇಗಬೇಗ ನಮ್ಮ ಜೀವನವನ್ನು ಸರಳವಾಗಿ ಮಾಡಿಕೊಳ್ಳುತ್ತಿದ್ದೆವು. ಹೀಗಿರುವಾಗ ಚಿನ್ನದ ಗಡಿಯಾರಗಳನ್ನು ಇಟ್ಟುಕೊಳ್ಳಲು ಹೇಗೆ ತಾನೇ ಸಾಧ್ಯವಾದೀತು? ಚಿನ್ನದ ಸರಗಳನ್ನೂ, ವಜ್ರದ ಉಂಗುರಗಳನ್ನೂ ನಾವು ಹೇಗೆ ತಾನೇ ಧರಿಸಬಲ್ಲೆವು? ಆಗ ನಾನು ಜನರಿಗೆ 'ಒಡವೆಗಳ ಆಸೆಯನ್ನು ಜಯಿಸಿರಿ' ಎಂದು ಕೇಳಿಕೊಳ್ಳುತ್ತಿದ್ದೆ. ಈಗ ನನಗೆ ಬಂದಿರುವ ಒಡವೆಗಳನ್ನೆಲ್ಲ ನಾನು ಏನು ಮಾಡಬೇಕು?

ಈ ಒಡವೆಗಳನ್ನೆಲ್ಲ ನಾನು ಇಟ್ಟುಕೊಳ್ಳಲಾರನೆಂದು ನಿಶ್ಚಯಿಸಿದೆ. ಅವುಗಳನ್ನೆಲ್ಲ ನಮ್ಮ ಜನಕ್ಕಾಗಿ ಒಂದು ಟ್ರಸ್ಟ್ (ಧರ್ಮನಿಧಿ) ಮಾಡಿ ಅದಕ್ಕೆ ಪಾರಸೀ ರುಸ್ತುಂಜೀಯವರನ್ನೂ, ಇತರ ಕೆಲವರನ್ನೂ ಟ್ರಸ್ಟಿಗಳನ್ನಾಗಿ(ಧರ್ಮದರ್ಶಿಗಳನ್ನಾಗಿ) ಮಾಡಿದೆ. ಒಂದು ಪತ್ರವನ್ನೂ ಬರೆದೆ. ಮರುದಿನ ಬೆಳಿಗ್ಗೆ ನನ್ನ ಹೆಂಡತಿ ಮಕ್ಕಳೊಂದಿಗೆ ನಾನು ಸಮಾಲೋಚನೆ ನಡೆಸಿ ಈ ಹೊರೆಯನ್ನು ಕಳೆದುಕೊಳ್ಳಲು ನಿರ್ಣಯಿಸಿದೆ.

ನನ್ನ ಹೆಂಡತಿಯನ್ನು ಒಪ್ಪಿಸುವುದು ಸ್ವಲ್ಪ ಕಷ್ಟವಾಗಬಹುದೆಂದೂ, ಮಕ್ಕಳನ್ನು ಒಪ್ಪಿಸಲು ಏನೂ ಕಷ್ಟವಾಗದೆಂದು ನನಗೆ ತಿಳಿದಿತ್ತು. ಆದುದರಿಂದ ಆ ಹುಡುಗರೇ ನನ್ನ ಪಕ್ಷ ಹಿಡಿದು ವಾದಿಸುವಂತೆ ಮಾಡಲು ನಿಶ್ಚಯಿಸಿದೆ.

ಮಕ್ಕಳು ನನ್ನ ಸಲಹೆಗೆ ಕೂಡಲೇ ಒಪ್ಪಿದರು. 'ನಮಗೆ ಬೆಲೆಯಾದ ಒಡವೆಗಳು ಬೇಕಿಲ್ಲ. ಅವುಗಳನ್ನು ನಾವು ನಮ್ಮ ಜನರಿಗೆ ಹಿಂದಿರುಗಿಸಬೇಕು. ನಮಗೆ ಬೇಕಾದಾಗ ನಾವೇ ಅವುಗಳನ್ನು ಸುಲಭವಾಗಿ ಕೊಂಡುಕೊಳ್ಳಬಹುದು' ಎಂದರು.

ನನಗೆ ಬಹಳ ಸಂತೋಷವಾಯಿತು. 'ಹಾಗಾದರೆ ನೀವು ನಿಮ್ಮ ತಾಯಿಗೆ ಹೇಳಿ ಒಪ್ಪಿಸುವಿರಿ, ಅಲ್ಲವೇ?' ಎಂದೆ.

'ಹೌದು, ಅದು ನಮ್ಮ ಹೊಣೆಗಾರಿಕೆ. ಆಕೆ ಒಡವೆಗಳನ್ನು ಇಟ್ಟುಕೊಳ್ಳಲು ಬಯಸುವುದೇ ಇಲ್ಲ. ಅವಳು ಅವನ್ನು ಇಟ್ಟುಕೊಳ್ಳುವುದು ನಮಗಾಗಿ. ನಾವು ಬೇಡವೆಂದರೆ ಇವನ್ನು ಇಟ್ಟುಕೊಳ್ಳಲು ಆಕೆ ಏಕೆ ಬಯಸುತ್ತಾಳೆ' ಎಂದರು ಹುಡುಗರು.

ಆದರೆ ಹೇಳುವುದು ಸುಲಭವಾಯಿತು. ಮಾಡುವುದು ಕಷ್ಟವಾಯಿತು!

ನನ್ನ ಹೆಂಡತಿ ಹೀಗೆ ಹೇಳಿದಳು : 'ನಿಮಗೆ ಅವು ಬೇಕಾಗದೇ ಇರಬಹುದು. ನಿಮ್ಮ ಮಕ್ಕಳಿಗೂ ಬೇಕಾಗದಿರಬಹುದು. ನೀವು ಪುಸಲಾಯಿಸಿದರೆ ಅವರು ನಿಮ್ಮ ತಾಳಕ್ಕೆ ಕುಣಿಯುತ್ತಾರೆ. ನಾವು ಅವುಗಳನ್ನು ಧರಿಸುವುದನ್ನು ನೀವು ಒಪ್ಪುವುದಿಲ್ಲ. ಅದೂ ನನಗೆ ಅರ್ಥವಾಗುತ್ತದೆ. ಆದರೆ ನನ್ನ ಸೊಸೆಯಂದಿರ ವಿಚಾರ ಹೇಗೆ? ಅವರಿಗೆ ಇವು ಬೇಕೇ ಬೇಕು. ನಾಳೆ ಏನಾಗುತ್ತೋ ಬಲ್ಲವರಾರು? ಇಷ್ಟು ಪ್ರೀತಿಯಿಂದ ಅವರು ಕೊಟ್ಟಿರುವ ಬಹುಮಾನಗಳನ್ನು ನಾನು ಎಂದಿಗೂ ಹಿಂದಕ್ಕೆ ಕೊಡುವುದಿಲ್ಲ'

ಹೀಗೆ ವಾದ ಧಾರಾಕಾರವಾಗಿ ಹೊರಟಿತು. ಆದರ ಜೊತೆಯಲ್ಲಿ ಅಶ್ರುಧಾರೆಯೂ ಸೇರಿತು. ಆದರೆ ಮಕ್ಕಳು ದೃಢತೆಯನ್ನು ಬಿಡಲಿಲ್ಲ. ನಾನೂ ವಿಚಲಿತನಾಗಲಿಲ್ಲ.

ನಾನು ಮೃದುವಾಗಿ ಹೇಳಿದೆ : 'ಮಕ್ಕಳಿಗೆ ಮದುವೆಯಾಗಲು ಇನ್ನೂ ಕಾಲವಿದೆ. ಬಾಲ್ಯದಲ್ಲಿಯೇ ಅವರ ಮದುವೆ ಮಾಡುವುದು ನಮ್ಮ ಇಷ್ಟವಲ್ಲವಲ್ಲ. ಅವರಿಗೆ ವಯಸ್ಸಾದ ನಂತರ ಅವರ ಪಾಡನ್ನು ಅವರು ನೋಡಿಕೊಳ್ಳುತ್ತಾರೆ. ಒಡವೆಗಳ ಆಸೆ ಇರುವವರನ್ನು ನಾವೇನೂ ನಮ್ಮ ಸೊಸೆಯನ್ನಾಗಿ ತರುವುದಿಲ್ಲ. ಹಾಗೂ ಅವರಿಗೆ ಒಡವೆಗಳನ್ನು ಕೊಡಲೇಬೇಕಾದರೆ ನಾನು ಇದ್ದೇನಲ್ಲ. ಆಗ ನನ್ನನ್ನು ಕೇಳಿದರೆ ಆಯಿತು'

'ನಿಮ್ಮನ್ನು ಕೇಳುವುದೇ? ಈ ವೇಳೆಗೆ ನಿಮ್ಮ ವಿಷಯ ನನಗೆ ಚೆನ್ನಾಗಿ ಗೊತ್ತಾಗಿದೆ. ನನ್ನ ಒಡವೆಗಳೊಂದೂ ಇಲ್ಲದಂತೆ ಮಾಡಿದಿರಿ. ಅವು ಇರುವವರೆಗೆ ನನ್ನನ್ನು ಶಾಂತವಾಗಿರಲು ನೀವು ಬಿಡಲಿಲ್ಲ. ನೀವೇ ನಮ್ಮ ಸೊಸೆಯರಿಗೆ ಒಡವೆಗಳನ್ನು ಕೊಂಡುಕೊಡುವವರು? ಇವತ್ತಿನಿಂದಲೇ ನನ್ನ ಮಕ್ಕಳನ್ನು ಭೈರಾಗಿಗಳನ್ನಾಗಿ ಮಾಡಲು

ಪ್ರಯತ್ನಿಸುತ್ತಿದ್ದೀರಿ. ಇಲ್ಲ, ಆಭರಣಗಳನ್ನು ಹಿಂದಕ್ಕೆ ಕೊಡುವುದಿಲ್ಲ. ಅದಿರಲಿ, ನನ್ನ ಹಾರದ ಮೇಲೆ ನಿಮಗೇನು ಅಧಿಕಾರ?' ಎಂದಳು.

ನಾನು, 'ಆದರೆ ಹಾರವನ್ನು ನೀನು ಮಾಡಿದ ಸೇವೆಗಾಗಿ ಕೊಟ್ಟಿದ್ದಾರೆಯೇ?' ಎಂದು ಕೇಳಿದೆ.

'ಅದೇನೋ ಸರಿ. ಆದರೆ ನೀವು ಮಾಡಿದ ಸೇವೆಯೇ ನನ್ನ ಸೇವೆ. ನಾನು ಹಗಲೂ ರಾತ್ರಿ ನಿಮಗಾಗಿ ಎಡೆಬಿಡದೆ ದುಡಿದಿದ್ದೇನೆ. ಅದೇನು ಸೇವೆಯಲ್ಲವೇ? ನೀವು ಯಾರು ಯಾರನ್ನೋ ಮನೆಗೆ ಕರೆದುಕೊಂಡು ಬಂದು, ನನ್ನ ಕಣ್ಣೀರನ್ನು ಹರಿಸಿದಿರಿ. ನಾನು ಅವರೆಲ್ಲರ ಚಾಕರಿಯನ್ನೂ ಮಾಡಿದ್ದೇನೆ'.

ಆ ಬಾಣಗಳೆಲ್ಲ ತೀಕ್ಷ್ಣವಾಗಿದ್ದವು. ಕೆಲವು ನನ್ನಲ್ಲಿ ಆಳವಾಗಿ ನಾಟಿದವು. ಆದರೆ ಒಡವೆಗಳನ್ನು ಹಿಂದಿರುಗಿಸಬೇಕೆಂಬುದು ನನ್ನ ದೃಢ ಸಂಕಲ್ಪವಾಗಿದ್ದಿತು. ಹೇಗೋ ಅವಳ ಒಪ್ಪಿಗೆಯನ್ನು ಪಡೆದುಕೊಂಡೆನು. 1896ರಲ್ಲಿ ಮತ್ತು 1901ರಲ್ಲಿ ನನಗೆ ದೊರೆತಿದ್ದ ಬಹುಮಾನಗಳನ್ನೆಲ್ಲ ಹಿಂದಿರುಗಿಸಿದೆ. ಒಂದು ಟ್ರಸ್ಟ್ ಮಾಡಿ ಪತ್ರವನ್ನು ಬರೆದುಕೊಟ್ಟೆ. ಒಡವೆಗಳನ್ನು ನನ್ನ ಅಥವಾ ಧರ್ಮದರ್ಶಿಗಳ ಅಭಿಪ್ರಾಯಕ್ಕೆ ಅನುಗುಣವಾಗಿ, ದಕ್ಷಿಣ ಆಫ್ರಿಕಾದ ಭಾರತೀಯರ ಸೇವೆಗೆ ವಿನಿಯೋಗಿಸಬೇಕೆಂದು ಒಂದು ಬ್ಯಾಂಕಿನಲ್ಲಿ ಅವುಗಳನ್ನು ಇಟ್ಟೆವು.

ಸಾರ್ವಜನಿಕ ಕಾರ್ಯಗಳಿಗಾಗಿ ನನಗೆ ಹಣ ಬೇಕಾಗಿ ಅದನ್ನು ಟ್ರಸ್ಟ್‌ನಿಂದ ತೆಗೆದುಕೊಳ್ಳಬೇಕೆಂದು ತೋರಿದಾಗಲೂ ಕೂಡ, ಟ್ರಸ್ಟನ್ನು ಮುಟ್ಟದೆಯೇ ನನಗೆ ಬೇಕಾದ ಹಣವನ್ನು ಕೂಡಿಸಿದ್ದೇನೆ. ಟ್ರಸ್ಟ್ ಈಗಲೂ ಇದೆ. ಅವಶ್ಯಕವಾದಾಗ ಉಪಯೋಗವಾಗುತ್ತಿದೆ ಮತ್ತು ಅದು ಕ್ರಮವಾಗಿ ಹೆಚ್ಚುತ್ತಲೂ ಇದೆ.

ನನ್ನ ಈ ಕಾರ್ಯದಿಂದ ನನಗೆ ಎಂದಿಗೂ ಪಶ್ಚಾತ್ತಾಪ ಉಂಟಾಗುವುದಿಲ್ಲ. ದಿನಗಳು ಕಳೆದಂತೆ, ನನ್ನ ಹೆಂಡತಿಗೂ ಅದರ ಔಚಿತ್ಯ ಗೊತ್ತಾಗುತ್ತಾ ಬಂದಿದೆ. ಅದು ನಮ್ಮನ್ನು ಅನೇಕ ದುರಾಸೆಗಳಿಂದ ರಕ್ಷಿಸಿದೆ.

ಸಾರ್ವಜನಿಕ ಕೆಲಸಗಾರ, ಬೆಲೆಯಾದ ಬಹುಮಾನಗಳನ್ನು ಸ್ವೀಕರಿಸಕೂಡದೆಂಬುದು ನನ್ನ ಸ್ಪಷ್ಟ ಅಭಿಪ್ರಾಯವಾಗಿದೆ.



ಗೊರೂರು ರಾಮಸ್ವಾಮಿ ಅಯ್ಯಂಗಾರ್

ಕವಿ ಕೃತಿ ಪರಿಚಯ

ರಾಷ್ಟ್ರಪಿತ ಮಹಾತ್ಮಾ ಎಂದು ಹೆಸರಾದ ಮೋಹನದಾಸ ಕರಮಚಂದ ಗಾಂಧಿಯವರು ಹುಟ್ಟಿದ್ದು 1869ನೇ ಅಕ್ಟೋಬರ್ ಎರಡರಂದು, ಗುಜರಾತಿನ ಪೋರಬಂದರಿನಲ್ಲಿ. ತಮ್ಮ ಬದುಕಿನ ಘಟನೆಗಳನ್ನು ಕುರಿತು ಅವರು ಬರೆದ ಆತ್ಮಕಥೆಯು ಜಗತ್ತಿನ ಹಲವು ಭಾಷೆಗಳಿಗೆ ಅನುವಾದವಾಗಿದೆ. ಆತ್ಮಕಥೆ ಎಂದರೆ, 'ಒಬ್ಬ ವ್ಯಕ್ತಿ ತಾನೇ ಬರೆದ ತನ್ನ ಜೀವನ ಚರಿತೆ. ಅದು ಆ ವ್ಯಕ್ತಿಯ ಸಾಧನೆಯ ಹೆಜ್ಜೆ–ಗುರುತುಗಳನ್ನು ಮತ್ತು ಸಮಕಾಲೀನ ಜನಜೀವನವನ್ನು ಕಾಣಲು ಸಹಕಾರಿಯಾಗುವ ಬೆಳಕಿನ ಕಿಂಡಿ. ಗಾಂಧೀಜಿಯವರ ಆತ್ಮಕಥೆಯಲ್ಲಿ ಸುರಮ್ಯ ಕಥನ ಶೈಲಿ, ಘಟನೆಗಳ ಸ್ವಾರಸ್ಯಕರವಾದ ಮತ್ತು ಅಷ್ಟೇ ಪ್ರಾಮಾಣಿಕವಾದ ಹೃದಯಸ್ಪರ್ಶಿ ನಿರೂಪಣೆ, ಚಿತ್ರಕ ಶಕ್ತಿ, ಸಹಜ ಕವಿತ್ವ, ಐತಿಹಾಸಿಕ ಅಂಶಗಳು ಸರಳ – ನೇರ ಮಾತುಗಳು ಗಮನಾರ್ಹವಾದವುಗಳು. ಇಂತಹ ಮಹತ್ವಪೂರ್ಣವಾದ ಕೃತಿಯನ್ನು ಕನ್ನಡಕ್ಕೆ ಸಮರ್ಥವಾಗಿ ಭಾಷಾಂತರಿಸಿದವರು ಗೊರೂರು ರಾಮಸ್ವಾಮಿ ಅಯ್ಯಂಗಾರರು.

ಹಾಸನ ಜಿಲ್ಲೆಯ ಗೊರೂರು ಗ್ರಾಮದಲ್ಲಿ 1904ನೇ ಜುಲೈ ನಾಲ್ಕರಂದು ಜನಿಸಿದ ರಾಮಸ್ವಾಮಿ ಅಯ್ಯಂಗಾರರು ಹೊಸಗನ್ನಡ ಸಾಹಿತ್ಯದಲ್ಲಿ ಕಥೆ, ಕಾದಂಬರಿ, ಪ್ರಬಂಧ, ಜೀವನ ಚರಿತ್ರೆ, ಜನಪದ, ಪ್ರವಾಸ, ಅನುವಾದ ಮುಂತಾದ ವಿವಿಧ ಪ್ರಕಾರಗಳಲ್ಲಿ ಸುಮಾರು 60ಕ್ಕೂ ಹೆಚ್ಚು

ಕೃತಿಗಳನ್ನು ರಚಿಸಿದ್ದಾರೆ. 1969ರಲ್ಲಿ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಇವರಿಗೆ ದೊರಕಿದೆ. 1974ರಲ್ಲಿ ಮೈಸೂರು ವಿಶ್ವವಿದ್ಯಾಲಯವು ಗೌರವ ಡಿ.ಲಿಟ್., ಪದವಿಯನ್ನು ನೀಡಿ ಗೌರವಿಸಿದೆ. 1980ರಲ್ಲಿ 'ಅಮೇರಿಕದಲ್ಲಿ ಗೊರೂರು' ಪ್ರವಾಸ ಸಾಹಿತ್ಯ ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ದೊರಕಿದೆ. ಅಲ್ಲದೆ, ಶಿರಸಿಯಲ್ಲಿ ನಡೆದ 1982ರ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರೂ ಆಗಿದ್ದರು.

ಇವರ ಕೃತಿಗಳು : 'ಸ್ವಾತಂತ್ರ್ಯವೇ ಧರ್ಮ', 'ಹೇಮಾವತಿಯ ತೀರದಲ್ಲಿ ಮತ್ತು ಇತರ ಪ್ರಬಂಧಗಳು', 'ಮೆರವಣಿಗೆ', 'ಗರುಡಗಂಬದ ದಾಸಯ್ಯ', 'ಹಳ್ಳಿಯ ಹಾಡು', 'ನಮ್ಮ ಊರಿನ ರಸಿಕರು' ಮುಂತಾದವು. ಅವರ ಹೆಚ್ಚಿನ ಕೃತಿಗಳಲ್ಲಿ ಗ್ರಾಮೀಣ ಜೀವನದ ಹಿನ್ನೆಲೆ, ಸಮಾಜೋದ್ಧಾರ ಮತ್ತು ಗಾಂಧಿ ಚಿಂತನೆಗಳನ್ನು ಕಾಣಬಹುದಾಗಿದೆ. ಇವರಿಗೆ ಸಂಪೂರ್ಣ ಒಲಿದ ಪ್ರಕಾರವೆಂದರೆ 'ಪ್ರಬಂಧಗಳು'. ಇದರಲ್ಲಿ ಹಾಸ್ಯ, ವ್ಯಂಗ್ಯ, ವಿಡಂಬನೆಗಳನ್ನು ಉಕ್ಕಿಸುವುದು ಗೊರೂರರ ನೀತಿ. ಇವರು 28ನೇ ಸೆಪ್ಟೆಂಬರ್ 1991ರಲ್ಲಿ ನಿಧನರಾದರು.

ಪ್ರಸ್ತುತ ಪಠ್ಯ ಭಾಗವನ್ನು ಗಾಂಧೀಜಿಯವರ 'ನನ್ನ ಆತ್ಮಕಥೆ ಅಥವಾ ಸತ್ಯಾನ್ವೇಷಣೆ' ಎನ್ನುವ ಅನುವಾದ ಗ್ರಂಥದಿಂದ ಆಯ್ದುಕೊಳ್ಳಲಾಗಿದೆ.

ಆಶಯ

ಸಾರ್ವಜನಿಕ ಸೇವಕ ಬೆಲೆ ಬಾಳುವ ಬಹುಮಾನಗಳನ್ನು ಸ್ವೀಕರಿಸಕೂಡದು. ಒಮ್ಮೆ ಅನಿವಾರ್ಯವಾಗಿ ಸ್ವೀಕರಿಸಲೇಬೇಕಾದ ಸಂದರ್ಭ ಬಂದರೆ; ಅವು ಸಾರ್ವಜನಿಕ ಕೆಲಸಕ್ಕೇ ಬಳಕೆಯಾಗಬೇಕು. ಎಂದಿಗೂ ಅವುಗಳನ್ನು ಸ್ವಂತಕ್ಕೆ ಬಳಸಬಾರದು. ಕಾರಣ ಸೇವೆಯ ಪ್ರತಿಫಲ ಸೇವೆಯೇ. ಸಾರ್ವಜನಿಕ ಸೇವೆ ಮಾಡುವವರ ಜೀವನ, ದುರಾಸೆಯಿಂದ ದೂರವಿದ್ದು, ಸರಳವಾಗಿರಬೇಕು. ಸಾರ್ವಜನಿಕ ಸೇವಾ ಜೀವನದ ಅತಿ ಮುಖ್ಯವಾದ ಸೂತ್ರವೊಂದನ್ನು ಈ ಪಾಠದಿಂದ ಕಲಿಯಬಹುದು.

ಪದಗಳ ಅರ್ಥ

ಸಹೋದ್ಯೋಗಿ–ಜೊತೆಯಲ್ಲಿ ಕೆಲಸ ಮಾಡುವವರು; ಷರತ್ತು–ನಿಬಂಧನೆ, ಕರಾರು, ಒಪ್ಪಂದದ ನಿಯಮ; ನಿಕಟ ಬಾಂಧವ್ಯ–ಹತ್ತಿರದ ಸಂಬಂಧ; ಕಕ್ಷಿಗಾರ–ವಾದಿ ಅಥವಾ ಪ್ರತಿವಾದಿ; ಗಿನಿ–ಆಫ್ರಿಕಾದ ನಾಣ್ಯ; ಪುಸಲಾಯಿಸು–ಮಾತಿನಲ್ಲಿ ನಯವಾಗಿ ಒಪ್ಪಿಸು; ಪಾಡು–ಅವಸ್ಥೆ, ಕಷ್ಟಪಡು; ಬೈರಾಗಿ–ವಿರಾಗಿ, ಸಂತ, ಸನ್ಯಾಸಿ; ಚಾಕರಿ–ದುಡಿಮೆ, ಊಳಿಗ, ದುಡಿತ, ಸೇವೆ.

ಟಿಪ್ಪಣಿ

1. 'ನಾನು ಯುದ್ಧದ ಕೆಲಸದಿಂದ ಬಿಡುಗಡೆ ಹೊಂದಿದ ಮೇಲೆ' = 1899ರ ಅಕ್ಟೋಬರ್ ತಿಂಗಳಲ್ಲಿ ಡಚ್ ಮೂಲದ ಆಫ್ರಿಕನ್ನರಾದ ಬೋಯರ್ ಜನಾಂಗ ಮತ್ತು ಬ್ರಿಟೀಷರ ನಡುವೆ ಯುದ್ಧ ನಡೆಯಿತು. ಗಾಂಧೀಜಿ ಬ್ರಿಟೀಷರ ಪರವಾಗಿ, ತಾವೂ ಗಾಯಾಳುಗಳ ಸೇವೆಯಲ್ಲಿ ತೊಡಗಿಕೊಂಡು ಆಫ್ರಿಕಾದಲ್ಲಿದ್ದ ಹಲವು ಭಾರತೀಯರನ್ನೂ ತೊಡಗಿಸಿದರು.
2. ನೆಟಾಲ್ : ದಕ್ಷಿಣ ಆಫ್ರಿಕಾದ ದಕ್ಷಿಣ ಭಾಗದ ಒಂದು ಪ್ರಾಂತ್ಯ.

ಪ್ರಶ್ನೋತ್ತರಗಳು

I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.

1. ಭಾರತಕ್ಕೆ ಹಿಂದಿರುಗುವ ಗಾಂಧೀಜಿಯವರ ಪ್ರಾರ್ಥನೆಯನ್ನು ಒಪ್ಪಿಕೊಳ್ಳಲು ಯಾವ ಷರತ್ತನ್ನು ವಿಧಿಸಲಾಯಿತು ?
2. ಸೇವೆಯ ಪ್ರತಿಫಲ ಯಾವುದು ?
3. ಗಾಂಧೀಜಿಯವರ ಅಭಿಪ್ರಾಯದಲ್ಲಿ ಚಿನ್ನದ ಗಡಿಯಾರಗಳನ್ನು ಇಟ್ಟುಕೊಳ್ಳಲು ಏಕೆ ಸಾಧ್ಯವಿಲ್ಲ ?
4. ಗಾಂಧೀಜಿ ತಮ್ಮ ಮಡದಿ, ಮಕ್ಕಳಿಗೆ ಎಂತಹ ಶಿಕ್ಷಣ ಕೊಟ್ಟಿದ್ದರು ?
5. ಗಾಂಧೀಜಿಯವರ ದೃಷ್ಟಿಯಲ್ಲಿ ಯಾವುದು ದೇವರ ವಾಕ್ಯ ?

6. ಸಾರ್ವಜನಿಕರು ಕಸ್ತೂರಬಾ ಅವರಿಗೆ ಕೊಟ್ಟ ಬಹುಮಾನ ಯಾವುದು ?
7. ತಮ್ಮ ಜೀವನ ಪ್ರಯೋಗಗಳನ್ನು ಕುರಿತು ಗಾಂಧೀಜಿ ಹೇಳಿದ ಮಾತು ಯಾವುದು ?

II. ಕೆಳಗಿನ ಪ್ರಶ್ನೆಗಳಿಗೆ ಮೂರ್ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.

1. ಗಾಂಧೀಜಿ ತಮಗೆ ಬಹುಮಾನವಾಗಿ ಬಂದ ಚಿನ್ನಾಭರಣಗಳ ಮೇಲುಸ್ತುವಾರಿಯನ್ನು ಯಾರಿಗೆ ವಹಿಸಿದರು ? ಏಕೆ ?
2. ಸಾರ್ವಜನಿಕ ಕಾಣಿಕೆಗಳ ವಿಷಯದಲ್ಲಿ ಗಾಂಧೀಜಿ ಕೈಗೊಂಡ ನಿರ್ಧಾರದ ಬಗ್ಗೆ ಅವರ ಮಕ್ಕಳು ಏನು ಹೇಳಿದರು ?
3. ಬಹುಮಾನ ಸ್ವೀಕರಿಸದಿರುವ ವಿಷಯದಲ್ಲಿ ಗಾಂಧೀಜಿಯವರಿಗೆ ಕಸ್ತೂರಬಾ ಏನು ಹೇಳಿದರು ?
4. 'ಟ್ರಸ್ಟ್' ಸ್ಥಾಪನೆಯ ಬಗ್ಗೆ ಕಸ್ತೂರಬಾ ಅವರನ್ನು ಗಾಂಧೀಜಿ ಹೇಗೆ ಒಪ್ಪಿಸಿದರು ?

III. ಕೆಳಗಿನ ಪ್ರಶ್ನೆಗೆ ವಿವರವಾಗಿ ಉತ್ತರಿಸಿ.

1. 'ಸಾರ್ವಜನಿಕ ಸೇವೆಗಾಗಿ ಬಂದ ಕಾಣಿಕೆಗಳನ್ನು ಇಟ್ಟುಕೊಳ್ಳಬೇಕೇ? ಬೇಡವೇ?' ಎನ್ನುವ ವಿಷಯದಲ್ಲಿ ಗಾಂಧೀಜಿ ಮತ್ತು ಅವರ ಹೆಂಡತಿ ಮಕ್ಕಳ ನಡುವೆ ನಡೆದ ಸಂಭಾಷಣೆಯನ್ನು ಸಂಗ್ರಹಿಸಿ ಬರೆಯಿರಿ.

ಭಾಷಾಭ್ಯಾಸ

I. ಸರಿಯಾದ ಉತ್ತರಗಳನ್ನು ಆರಿಸಿ ಬರೆಯಿರಿ.

1. ನನ್ನ ಕೆಲಸ ಇರುವುದು ದಕ್ಷಿಣ ಆಫ್ರಿಕಾದಲ್ಲಲ್ಲ, ಆದರೆ _____
   (ಅ) ಇಂಗ್ಲೆಂಡಿನಲಿ
   (ಆ) ಭಾರತದಲ್ಲಿ
   (ಇ) ಪಾಕಿಸ್ತಾನದಲ್ಲಿ
   (ಈ) ಶ್ರೀಲಂಕಾದಲ್ಲಿ
2. ಜನತೆಯ ವಾಕ್ಯವೇ _____ ವಾಕ್ಯ.
   (ಅ) ಜನರ (ಆ) ಸೇವಕರ
   (ಇ) ರಾಜರ (ಈ) ದೇವರ
3. 'ಮೃದು' ಎಂಬ ಪದದ ವಿರುದ್ಧ ಪದವನ್ನು ಬರೆಯಿರಿ
   (ಅ) ಕಠಿಣ (ಆ) ಸಾಧು
   (ಇ) ಮೆತ್ತಗೆ (ಈ) ಸುಲಭ
4. 'ನೂಲೆಳೆ' – ಇದು ಯಾವ ಸಂಧಿ ?
   (ಅ) ಗುಣ ಸಂಧಿ (ಆ) ಲೋಪ ಸಂಧಿ
   (ಇ) ಆದೇಶ ಸಂಧಿ (ಈ) ಆಗಮ ಸಂಧಿ

ಆ. ಹೊಂದಿಸಿ ಬರೆಯಿರಿ

ಅ	ಆ
1. ಜನತೆಯ ವಾಕ್ಯ	– ಸನ್ಯಾಸಿ
2. ನೇಟಾಲ್	– ಧರ್ಮನಿಧಿ
3. ಟ್ರಸ್ಟ್	– ದೇವರ ವಾಕ್ಯ
4. ಬೈರಾಗಿ	– ದಕ್ಷಿಣ ಆಫ್ರಿಕಾದ
	– ಒಂದು ಪ್ರಾಂತ್ಯ

II. ಅ. ಕೆಳಗಿನ ಪದಗಳನ್ನು ಸ್ವಂತ ವಾಕ್ಯದಲ್ಲಿ ಬಳಸಿ.

ವಿಚಲಿತನಾಗು, ಹೊಣೆಗಾರಿಕೆ, ತಾಳಕ್ಕೆ ಕುಣಿ, ದೃಢತೆ

ಆ. ಕೆಳಗಿನ ಪದಗಳ ವಿರುದ್ಧ ಪದಗಳನ್ನು ಬರೆಯಿರಿ.

ಶಾಂತ, ಮೃದು, ಚಿಂತೆ, ಮಿತ್ರ, ಕಷ್ಟ.

ಇ. ತತ್ಸಮ–ತದ್ಭವ ಪದಗಳನ್ನು ಬರೆಯಿರಿ.

ಕಾರ್ಯ, ನಿದ್ರೆ, ಬೈರಾಗಿ.

ಈ. ಕೆಳಗಿನ ಪದಗಳನ್ನು ಬಿಡಿಸಿ ಬರೆಯಿರಿ.

ನೂಲೆಳೆ, ಧಾರಾಕಾರ, ಸಹೋದ್ಯೋಗಿ, ಪ್ರೇಮಾಮೃತ.

ಚಟುವಟಿಕೆ

1. ಗಾಂಧೀಜಿಯವರ ಚಿಂತನೆಗಳನ್ನು ಪಟ್ಟಿ ಮಾಡಿ.
2. ಗಾಂಧೀಜಿಯವರ ಸತ್ಯಶೋಧನೆಯ ಪ್ರಸಂಗವನ್ನು ತಿಳಿದುಕೊಳ್ಳಿ.

ಉಪಪಠ್ಯ

ಘಟಕ ಏಳು

ವೀರರಾಣಿ ಕೆಳದಿಯ ಚೆನ್ನಮ್ಮ



ಕೆಳದಿಯ ಚೆನ್ನಮ್ಮ ಕನ್ನಡದ ವೀರಮಹಿಳೆ. ಅವಳ ರಾಜ್ಯಭಾರ ಕ್ರಮ, ಅವಳು ಶತ್ರುಗಳನ್ನು ಜಯಿಸಿದ ರೀತಿ, ಶರಣಾಗತರಾದವರನ್ನು ರಕ್ಷಿಸಿದ ಬಗೆ ಇತಿಹಾಸದಲ್ಲಿ ಪ್ರಸಿದ್ಧವಾದವು.



ವೀರರಾಣಿ ಕೆಳದಿಯ ಚೆನ್ನಮ್ಮ

ಕೆಳದಿ, ಇಕ್ಕೇರಿ, ಬಿದನೂರು ಇವು ಕೆಳದಿ ರಾಜ್ಯದ ರಾಜಧಾನಿಗಳಾಗಿದ್ದವು. ನಾಲ್ಕನೇ ರಾಜಧಾನಿಯೇ ಭುವನಗಿರಿ ದುರ್ಗ. ಕೆಳದಿ ಅರಸರ ದುರ್ಗಗಳಲ್ಲಿಯೇ ಇದು ಅತ್ಯಂತ ಕಠಿಣ ದುರ್ಗ ಹಾಗೂ ಅತ್ಯಂತ ಸುರಕ್ಷಿತ ಸ್ಥಳವಾಗಿತ್ತು.

ಭುವನಗಿರಿ ದುರ್ಗದ ಅರಮನೆಯಲ್ಲಿಯೇ ಚೆನ್ನಮ್ಮಾಜಿಯ ಪಟ್ಟಾಭಿಷೇಕವಾಯಿತು. ಮಹಾರಾಣಿಯಾದ ಆಕೆ ಸೇನಾಪರಿವಾರದೊಂದಿಗೆ ಬಿದನೂರಿಗೆ ಹಿಂದಿರುಗಿದಳು.

ಬಿಜಾಪುರದ ಸುಲ್ತಾನನ ಸೈನಿಕರು ಕೆಳದಿಯನ್ನು ಕಬಳಿಸಬೇಕೆಂದು ಆಕ್ರಮಣಕ್ಕೆ ಬಂದರು. ಈ ಸಂಗತಿಯನ್ನು ತಿಳಿದ ಚೆನ್ನಮ್ಮಾಜಿ ಹೆದರಲಿಲ್ಲ. ಪ್ರಜೆಗಳನ್ನು ಒಟ್ಟು ಸೇರಿಸಿದಳು. ಸೈನಿಕರನ್ನೂ, ಪ್ರಜೆಗಳನ್ನೂ 'ಈ ರಾಜ್ಯದ ಅಳಿವು, ಉಳಿವು ನಿಮ್ಮ ಕೈಯಲ್ಲಿದೆ. ಗೆದ್ದರೆ ರಾಜ್ಯ, ಸತ್ತರೆ ಸ್ವರ್ಗ. ನಾಡಿಗಾಗಿ ಹೋರಾಡೋಣ' ಎಂದು ಹುರಿದುಂಬಿಸಿದಳು. ದುಡುಕದೆ ಉಪಾಯದಿಂದ ಶತ್ರುಗಳನ್ನು ಗೆಲ್ಲಲು ಸಿದ್ಧಳಾದಳು.

ಬಿಜಾಪುರದ ಸೈನಿಕರು ಬಿದನೂರನ್ನು ಆಕ್ರಮಿಸಿ ಸುಲಭವಾಗಿ ಗೆದ್ದರು. ಆದರೇನು, ಅಲ್ಲಿ ಧನಕನಕಗಳಿರಲಿಲ್ಲ. ಭಂಡಾರ ಬರಿದಾಗಿತ್ತು. ಸೈನಿಕರಿಗೆ ನಿರಾಶೆಯಾಯಿತು. ಕೋಪ ಧಗಧಗಿಸಿತು. ಚಾಣಾಕ್ಷತನದಿಂದ ಚೆನ್ನಮ್ಮ ಅಮೂಲ್ಯ ವಸ್ತುಗಳನ್ನು, ಸಂಪತ್ತನ್ನು ಭುವನಗಿರಿ ದುರ್ಗಕ್ಕೆ ಸಾಗಿಸಿಬಿಟ್ಟಿದ್ದಳು. ಶೂರ ಸೈನಿಕರೊಂದಿಗೆ ರಾಣಿಯೂ ಭುವನಗಿರಿ ದುರ್ಗದಲ್ಲಿದ್ದಳು.

ಬಿಜಾಪುರದ ಸೈನಿಕರು ಭುವನಗಿರಿ ದುರ್ಗಕ್ಕೆ ಲಗ್ಗೆ ಹಾಕಲು ಹೊರಟರು. ಭುವನಗಿರಿ ದುರ್ಗದ ಇಕ್ಕಟ್ಟಾದ ಮಾರ್ಗದಲ್ಲಿ ಈ ಸೈನಿಕರು ಕನ್ನಡ ವೀರರ ಕೈಗೆ ಸಿಕ್ಕಿದರು. ಹಲವರು ಸತ್ತರು. ಬದುಕಿದವರು ಕಾಲಿಗೆ ಬುದ್ಧಿ ಹೇಳಿದರು. ಕೆಳದಿಯ ಸೈನಿಕರು ಶತ್ರುಗಳ ಬೆನ್ನಟ್ಟಿ ಬಿದನೂರಿಗೆ ಬಂದರು. ಬಿಜಾಪುರದ ಸೈನಿಕರಿಂದ ಆ ರಾಜಧಾನಿಯನ್ನು ಮುಕ್ತಗೊಳಿಸಿದರು. ಸುಲ್ತಾನನ ಅಳಿದುಳಿದ ಸೈನಿಕರು ಬಿಜಾಪುರದತ್ತ ಓಡಿದರು. ಚೆನ್ನಮ್ಮನ ಯುದ್ಧತಂತ್ರಕ್ಕೆ ಜಯ ದೊರಕಿತ್ತು.

ಛತ್ರಪತಿ ಶಿವಾಜಿಯ ಮಗನಾದ ರಾಜಾರಾಮನು ಔರಂಗಜೇಬನ ಸೈನ್ಯವನ್ನು ಎದುರಿಸಲಾರದೆ ಕೆಳದಿ ಸಂಸ್ಥಾನಕ್ಕೆ ಬಂದನು. ಜಂಗಮ ವೇಷದಿಂದ ಬಂದು, ಚೆನ್ನಮ್ಮನ ಆಶ್ರಯ ಬೇಡಿದನು. ಔರಂಗಜೇಬನ ಕೋಪಕ್ಕೆ ಅಂಜಿ ಯಾವ ಹಿಂದೂ ರಾಜರೂ ರಾಜಾರಾಮನಿಗೆ ಆಶ್ರಯ ನೀಡಿರಲಿಲ್ಲ.

ಚೆನ್ನಮ್ಮ ಧೈರ್ಯ ಮಾಡಿದಳು. 'ಈ ಕೆಳದಿಯ ಅರಮನೆಗೆ ರಕ್ಷಣೆ ಬೇಡಿ ಬಂದವರು, ದಾನ ಧರ್ಮ ಕೇಳಿ ಬಂದವರು ಯಾರೂ ನಿರಾಶರಾಗಿ ಹೋಗಿಲ್ಲ. ನಾನು ಅಬಲೆಯಲ್ಲ, ವೀರ ಕನ್ನಡತಿ. ಆಶ್ರಯ ಬೇಡಿದವರಿಗೆ ಆಶ್ರಯ ನೀಡುವುದು ನಮ್ಮ ಧರ್ಮ. ಕನ್ನಡಿಗರು ಕೊಟ್ಟ ಮಾತಿಗೆ ತಪ್ಪುವವರಲ್ಲ. ಆಶ್ರಯ ಬೇಡಿ ಬಂದವರನ್ನು ರಕ್ಷಿಸಲಾರದಷ್ಟು ನಾವು ಹೇಡಿಗಳಲ್ಲ' ಎಂದು ಅಭಯ ಬೇಡಿ ಬಂದ ರಾಜಾರಾಮನಿಗೆ ಆಶ್ರಯ ಕೊಟ್ಟಳು, ರಕ್ಷಣೆ ನೀಡಿದಳು.

ಇದನ್ನು ತಿಳಿದ ಔರಂಗಜೇಬನು ಕೆಳದಿಯ ಮೇಲೆ ಕಿಡಿ ಕಾರಿದನು. ದಾಳಿ ಮಾಡಲು ಸೈನ್ಯವನ್ನು ಕಳಿಸಿದನು. ಕೆಳದಿಯ ರಾಣಿ ಚೆನ್ನಮ್ಮ ಮೊಘಲ್ ದೊರೆಯ ಬೆದರಿಕೆಗೆ ಜಗ್ಗಲಿಲ್ಲ. ಹೆದರಿ ಶರಣು ಬಂದವರನ್ನು ಒಪ್ಪಿಸಲಿಲ್ಲ.

ಚೆನ್ನಮ್ಮಾಜಿ ಸುಮಾರು ಇಪ್ಪತ್ತೈದು ವರ್ಷಗಳ ಕಾಲ ಕೆಳದಿ ಸಂಸ್ಥಾನದ ರಾಣಿಯಾಗಿ ಮೆರೆದಳು. ಶತ್ರುಗಳನ್ನು ಹಿಮ್ಮೆಟ್ಟಿಸುವುದರಲ್ಲಿ ಮಾತ್ರವಲ್ಲ, ಆಕೆ ಸಂಸ್ಥಾನದ ಸರ್ವತೋಮುಖ ಅಭಿವೃದ್ಧಿಗಾಗಿಯೂ ಶ್ರಮಿಸಿದಳು. ಹಿರಿಯರು ಸಾಧಿಸಿದ ವಿದ್ಯೆ, ಕಲೆ, ಶಿಲ್ಪಗಳ ವಿಚಾರದಲ್ಲಿಯೂ ಚೆನ್ನಮ್ಮ ಆಸಕ್ತಿ ತೋರಿದಳು. ಧರ್ಮದಿಂದ ದಕ್ಷತೆಯಿಂದ ರಾಜ್ಯವಾಳಿದಳು. ಕೀರ್ತಿ ವೈಭವಗಳಿಂದ ರಾಜಕಾರ್ಯ ನಿರ್ವಹಿಸಿದಳು.

ಕರ್ನಾಟಕದ ಇತಿಹಾಸದಲ್ಲಿ ವೀರರಾಣಿ ಚೆನ್ನಮ್ಮಾಜಿಯ ಹೆಸರು ಸುವರ್ಣಾಕ್ಷರಗಳಲ್ಲಿ ಮೂಡಿದೆ. ಆಕೆಯ ಜೀವನ ಕನ್ನಡಿಗರಿಗೆ ಮಾತ್ರವಲ್ಲ, ಭಾರತೀಯರಿಗೂ ಸ್ಫೂರ್ತಿಯ ನೆಲೆಯಾಗಿದೆ.

ಹೆಣ್ಣು ಅಬಲೆಯಲ್ಲ, ಶಕ್ತಿಯ ನೆಲೆ.

ಪದಗಳ ಅರ್ಥ

ಉಚ್ಛ್ರಾಯ–ಉನ್ನತ; ನಿಸರ್ಗ–ಪ್ರಕೃತಿ; ಪಿತೂರಿ–ಸಂಚು, ಒಳಸಂಚು, ಮೋಸ; ಕಬಳಿಸು–ನುಂಗಿಹಾಕು, ಕಿತ್ತುಕೋ; ಅಳಿವು–ನಾಶ; ಪ್ರಜ್ವಲಿಸು–ಹೆಚ್ಚಾಗಿ ಉರಿ, ಜೋರಾಗಿ ಪ್ರಕಾಶಿಸು; ಪಲಾಯನ–ಹಿಂದೆ ಓಡಿ ಹೋಗು; ಅಬಲೆ–ದೈಹಿಕವಾಗಿ ಬಲವಿಲ್ಲದವಳು, ಸ್ತ್ರೀ; ಔದಾರ್ಯ–ಉದಾರತನ; ಬೆದರಿಕೆ–ಅಂಜಿಕೆ; ಸುವರ್ಣ–ಬಂಗಾರ; ಉತ್ಕೃಷ್ಟ–ಶ್ರೇಷ್ಠ; ಸ್ಫೂರ್ತಿ–ಉತ್ಸಾಹ; ನೆಲೆ–ಬುಗ್ಗೆ.

ಪ್ರಶ್ನೋತ್ತರಗಳು

I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.

1. ಚೆನ್ನಮ್ಮಾಜಿ ರಾಜ್ಯಭಾರ ವಹಿಸಿಕೊಳ್ಳಲು ಕಾರಣವೇನು ?
2. ಚೆನ್ನಮ್ಮನ ಬಳಿಗೆ ಆಶ್ರಯ ಕೇಳಿ ಬಂದವರಾರು?
3. ಬಿಜಾಪುರದ ಸೈನಿಕರು ಬಂದಾಗ ಚೆನ್ನಮ್ಮ ಯಾವ ದುರ್ಗದಲ್ಲಿದ್ದಳು ?
4. ಕೆಳದಿ ರಾಜ್ಯದ ರಾಜಧಾನಿಗಳು ಯಾವುವು?

II. ಕೆಳಗಿನ ಪ್ರಶ್ನೆಗಳಿಗೆ ಮೂರ್ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.

1. ಔರಂಗಜೇಬನ ಸೈನಿಕರು ಕೆಳದಿಯ ಮೇಲೆ ಯುದ್ಧಕ್ಕೆ ಬರಲು ಕಾರಣವೇನು?
2. ಬಿಜಾಪುರದ ಸೈನಿಕರನ್ನು ಚೆನ್ನಮ್ಮ ಹೇಗೆ ಸೋಲಿಸಿದಳು ?
3. 'ಕನ್ನಡಿಗರು ಕೊಟ್ಟ ಮಾತಿಗೆ ತಪ್ಪುವವರಲ್ಲ'. ವಿವರಿಸಿ.

ಚಟುವಟಿಕೆ

1. ಈ ಕಥಾಭಾಗವನ್ನು ತರಗತಿಯಲ್ಲಿ ನಾಟಕ ಮಾಡಿ ಅಭಿನಯಿಸಿ.

ಘಟಕ ಏಳು

ಲೇಖನ ಚಿಹ್ನೆಗಳು

ಬರವಣಿಗೆಯ ವಾಕ್ಯಗಳಲ್ಲಿ ಅರ್ಥ ಸ್ಪಷ್ಟತೆ ಇರಬೇಕು. ಸಂದೇಹ, ಗೊಂದಲಗಳು ನಿವಾರಣೆಯಾಗಬೇಕು. ಅದಕ್ಕಾಗಿಯೇ ವಾಕ್ಯಗಳಲ್ಲಿ ಉಚಿತ ಸ್ಥಳಗಳಲ್ಲಿ ವಿರಾಮ, ಪ್ರಶ್ನೆ, ಆಶ್ಚರ್ಯ ಮೊದಲಾದ ಭಾವಗಳನ್ನು ಸೂಚಿಸಲು ಅವಶ್ಯಕವಾದ ಚಿಹ್ನೆಗಳನ್ನು ಬಳಸುತ್ತಾರೆ. ಇವುಗಳಿಗೆ, 'ಲೇಖನ ಚಿಹ್ನೆ'ಗಳೆಂದು ಹೆಸರು.

ವಿರಾಮ ಚಿಹ್ನೆಗಳಲ್ಲಿ ಪೂರ್ಣ ವಿರಾಮ, ಅರ್ಧ ವಿರಾಮ, ಅಲ್ಪ ವಿರಾಮ ಚಿಹ್ನೆಗಳಿವೆ. ಇವಲ್ಲದೆ ಪ್ರಶ್ನಾರ್ಥಕ ಚಿಹ್ನೆ, ಭಾವಸೂಚಕ ಚಿಹ್ನೆ, ಉದ್ಧರಣ ಚಿಹ್ನೆ, ಆವರಣ ಚಿಹ್ನೆ ಮತ್ತು ವಿವರಣಾತ್ಮಕ ಚಿಹ್ನೆಗಳೂ ಇವೆ.

ಪೂರ್ಣ ವಿರಾಮ (.)

ಸಂಪೂರ್ಣ ಅರ್ಥವನ್ನು ಕೊಡುವ ವಾಕ್ಯವು ಪೂರ್ಣ ಕ್ರಿಯೆಯಿಂದ ಕೂಡಿದ್ದರೆ ಕೊನೆಯಲ್ಲಿ ಪೂರ್ಣ ವಿರಾಮ(.) ಬರುತ್ತದೆ. ಒಂದು ವಾಕ್ಯ ಪರಿಪೂರ್ಣವಾಗಿರುವುದನ್ನು ಇದು ಸೂಚಿಸುತ್ತದೆ.

ಉದಾಹರಣೆ :

1. ಹಕ್ಕಿ ಕೂಗಿತು.
2. ಮಗು ಮಲಗಿತು.

ಅರ್ಧ ವಿರಾಮ (;)

ಒಂದು ಪ್ರಧಾನ ವಾಕ್ಯದಲ್ಲಿ ಅನೇಕ ಉಪವಾಕ್ಯಗಳಿದ್ದರೆ ಉಪವಾಕ್ಯಗಳ ಕೊನೆಯಲ್ಲಿ ಬಳಸುವ ಚಿಹ್ನೆಯನ್ನು ಅರ್ಧವಿರಾಮ ಚಿಹ್ನೆ (;) ಎನ್ನುವರು.

ಉದಾಹರಣೆ :

1. ಮನುಷ್ಯನಿಗೆ ಇತರ ಪ್ರಾಣಿಗಳಂತೆ ಹುಟ್ಟು ಸಾವುಗಳುಂಟು; ರೋಗಭೋಗಗಳುಂಟು; ಅವುಗಳ ಅರಿವಿರಬೇಕು.
2. ಪಾಠ ಮುಗಿಯಿತು; ಗಂಟೆ ಬಾರಿಸಿತು; ಹುಡುಗರು ಮನೆಗೆ ಹೋದರು.

ಅಲ್ಪ ವಿರಾಮ (,)

ಸಂಬೋಧನಾ ವಿಭಕ್ತಿಯ ಮುಂದೆ ಅಲ್ಲದೆ, ಕರ್ತೃ ಕರ್ಮ ಮತ್ತು ಕ್ರಿಯಾ ಪದಗಳಿಗೆ ವಿಶೇಷಣಗಳು ಬಂದಾಗ, ಕೊನೆಯ ಪದವನ್ನು ಬಿಟ್ಟು ಉಳಿದ ಪದಗಳ ಮುಂದೆ ಉಪಯೋಗಿಸಲ್ಪಡುವ ಚಿಹ್ನೆಯನ್ನು ಅಲ್ಪ ವಿರಾಮ(,) ಚಿಹ್ನೆ ಎನ್ನುವರು.

ಉದಾಹರಣೆ :

1. ವಿದ್ಯಾರ್ಥಿಗಳು ಸ್ನಾನ ಮಾಡಿ, ತಿಂಡಿ ತಿಂದು, ಶಾಲೆಗೆ ಬಂದರು.
2. ಶಾಸ್ತ್ರಿಗಳಿಗೆ ಸತ್ಯ ನಿಷ್ಠೆ, ಸಮಯ ನಿಷ್ಠೆ, ಕಾರ್ಯೋತ್ಸಾಹ, ಆತ್ಮವಿಶ್ವಾಸಗಳು ಲಕ್ಷಣಗಳಾಗಿದ್ದವು.

ಪ್ರಶ್ನಾರ್ಥಕ ಚಿಹ್ನೆ (?)

ಪ್ರಶ್ನಾರ್ಥಕ ವಾಕ್ಯಗಳ ಕೊನೆಯಲ್ಲಿ ಈ ಚಿಹ್ನೆಯನ್ನು ಬಳಸಲಾಗುವುದು. ಯಾರು? ಏನು? ಯಾವಾಗ? ಏಕೆ? ಹೇಗೆ? ಎಲ್ಲಿ? ಇತ್ಯಾದಿ ಪ್ರಶ್ನೆಗಳಿರುವ ವಾಕ್ಯಗಳ ಕಡೆಯಲ್ಲಿ ಈ ಚಿಹ್ನೆಯನ್ನು ಬಳಸಲಾಗುತ್ತದೆ.

ಉದಾಹರಣೆ :

1. ನಿನ್ನ ಹೆಸರೇನು ?
2. ನಿನ್ನ ಊರು ಯಾವುದು ?

ಭಾವಸೂಚಕ ಚಿಹ್ನೆ (!)

ವಾಕ್ಯದಲ್ಲಿ ಸಂತೋಷ, ಆಶ್ಚರ್ಯ, ದುಃಖ, ಕೋಪ ಮೊದಲಾದ ಭಾವನೆಗಳನ್ನು ವ್ಯಕ್ತ ಪಡಿಸುವಾಗ ಉಪಯೋಗಿಸುವ ಚಿಹ್ನೆಯೇ ಭಾವಸೂಚಕ ಚಿಹ್ನೆ(!)ಯಾಗಿರುತ್ತದೆ.

ಉದಾಹರಣೆ :

1. ಅಯ್ಯೋ! ಪಾಪ, ಅವನ ಗತಿ ಹೀಗಾಯಿತೇ!
2. ಆಹಾ! ಈ ಹೂವು ಎಷ್ಟು ಚೆನ್ನಾಗಿದೆ!

ಉದ್ಧರಣ ಚಿಹ್ನೆ (“ ”)

ವಾಕ್ಯದಲ್ಲಿ ಇನ್ನೊಬ್ಬರು ಹೇಳಿದ ಮಾತನ್ನು ಅವರು ಹೇಳಿದಂತೆಯೇ ಬರೆದು ತಿಳಿಸಬೇಕಾದಾಗ ಈ ಚಿಹ್ನೆಯನ್ನು (“ ”) ಬಳಸಬೇಕು.

ಉದಾಹರಣೆ :

1. ಗಾಂಧೀಜಿಯವರು, “ಗ್ರಾಮಗಳ ಉದ್ಧಾರವೇ ದೇಶದ ಉದ್ಧಾರ” ಎಂದು ಹೇಳಿದ್ದಾರೆ.
2. ಗಮಕಿಗಳು “ರಾಗ ಹಾಳಾಯಿತು!” ಎಂದರು.

ವಿವರಣಾತ್ಮಕ ಚಿಹ್ನೆ (:–)

ವಾಕ್ಯದಲ್ಲಿ ಒಂದು ವಿಷಯದ ವಿವರಣೆಯು ಮುಂದೆ ತಿಳಿಸುವಂತಿದೆ ಎಂದು ಸೂಚಿಸಲು ಈ ಚಿಹ್ನೆಯನ್ನು ಬಳಸುತ್ತಾರೆ.

ಉದಾಹರಣೆ :

1. ಕನ್ನಡ ಕವಿ ಚಕ್ರವರ್ತಿಗಳೆಂದರೆ :– ರನ್ನ, ಪೊನ್ನ ಮತ್ತು ಜನ್ನ.
2. ಕನ್ನಡದ ರತ್ನತ್ರಯರು :– ಪಂಪ, ಪೊನ್ನ ಮತ್ತು ರನ್ನ.

ಆವರಣ ಚಿಹ್ನೆ ( )

ವಾಕ್ಯದಲ್ಲಿ ಒಂದು ಪದವನ್ನು ಹೇಳಿ ಅದಕ್ಕೆ ಸಮಾನ ಅರ್ಥದ ಪದವನ್ನು ಹೇಳಬೇಕಾದಾಗ ಆ ಪದದ ಪಕ್ಕದಲ್ಲಿ ಈ ಚಿಹ್ನೆಯನ್ನು ಉಪಯೋಗಿಸಿ ಬರೆಯುವುದು ರೂಢಿಯಲ್ಲಿದೆ.

ಉದಾಹರಣೆ :

1. ಪ್ರಬಂಧವು ಪರಿಚ್ಛೇದ(ಪ್ಯಾರಾಗ್ರಾಫ್)ಗಳಿಂದ ಕೂಡಿರಬೇಕು.
2. ಅವನಿಗೆ ವಿಷಮಶೀತ ಜ್ವರ(ಟೈಫಾಯಿಡ್) ಬಂದಿದೆ.

ಘಟಕ ಎಂಟು

ಸಹಬಾಳ್ವೆಯಿಂದ ಸ್ವರ್ಗಸುಖ



ಕಲಿಕಾ ಉದ್ದೇಶಗಳು

- ಎಲ್ಲಾ ಜೀವಿಗಳಲ್ಲಿಯೂ ದಯೆ ತೋರುವುದು, ಇತರರಿಗೆ ಸಹಕರಿಸುವ ಗುಣ, ಧಾರ್ಮಿಕ ಚಿಂತನೆಗಳನ್ನುತಿಳಿಯುವುದು.
- ಬದುಕುವ ರೀತಿಯನ್ನು ತಿಳಿಯುವುದು.
- ಇತರರ ಹಸಿವನ್ನು ನೀಗಿಸುವ ಉದಾತ್ತ ಚಿಂತನೆಯನ್ನು ಬೆಳೆಸಿಕೊಳ್ಳುವುದು.
- ಪೋಷಕರನ್ನು, ಹಿರಿಯರನ್ನು ಗೌರವಿಸುವ ಸಂಸ್ಕಾರ ಗಳಿಸುವುದು.
- ಪರರ ವಸ್ತುಗಳನ್ನು ಬಯಸದಿರುವುದು ಒಂದು ಧರ್ಮ, ಎಂಬುದನ್ನು ಗ್ರಹಿಸುವುದು.
- ವಿಭಕ್ತಿ ಪ್ರತ್ಯಯಗಳು, ತತ್ಸಮ-ತದ್ಭವಗಳನ್ನು ತಿಳಿಯುವುದು.

ಘಟಕ ಎಂಟು

ಸಹಬಾಳ್ವೆಯಿಂದ ಸ್ವರ್ಗಸುಖ

ಕಾವ್ಯ ಕಣಜ	:	ಸರ್ವಜ್ಞನ ವಚನಗಳು*
ಪೂರಕ ಪದ್ಯ	:	ಮೊದಲು ಮಾನವನಾಗು
ಗದ್ಯ ವಿಹಾರ	:	ಹಸಿವೆಂಬ ರೋಗವನ್ನು ನಿವಾರಿಸಿದ ಹೆಣ್ಣು
ಉಪಪಠ್ಯ	:	ಗಿಳಿರಾಮ
ಬಾಳ ಬೆಳಕು	:	ವಚನಗಳು
ವ್ಯಾಕರಣ	:	ವಿಭಕ್ತಿ ಪ್ರತ್ಯಯಗಳು – ತತ್ಸಮ ಮತ್ತು ತದ್ಭವಗಳು



ಘಟಕ ಎಂಟು

ಸರ್ವಜ್ಞನ ವಚನಗಳು *

– ಸರ್ವಜ್ಞ



ಧಾರ್ಮಿಕ ಸಾಹಿತ್ಯವು ನಮ್ಮ ಪೂರ್ವಜರ ಜೀವನಾನುಭವಗಳನ್ನು ತಿಳಿಸುವ ಸಾಹಿತ್ಯ ಭಂಡಾರವಾಗಿದೆ. ಅವು ಬದುಕಿನ ರೀತಿ ನೀತಿ, ಶಿಸ್ತು–ಸಂಯಮಗಳನ್ನು ತಿಳಿಸುತ್ತವೆ. ನಮ್ಮ ಕನ್ನಡ ಸಾಹಿತ್ಯವು ತಿಳಿಸುವ ಬದುಕಿನ ಆಚಾರ ವಿಚಾರಗಳು ಸಾರ್ವಜನಿಕವಾದವುಗಳು. ಧಾರ್ಮಿಕ ಸಾಹಿತ್ಯವು ಬೋಧಿಸುವ ಸಾರವನ್ನು ಅರಿತು ಜೀವನವೇ ಶ್ರೇಷ್ಠ ಎಂಬ ತತ್ವವನ್ನು ಅಳವಡಿಸಿಕೊಂಡು ಬದುಕೋಣ.

ಗಾನ ವಿದ್ಯೆಯು ಲೇಸು । ಮಾನವತಿ ಸತಿ ಲೇಸು ।
ಸ್ವಾನುಭಾವಿಗಳ ಕೆಳೆ ಲೇಸು । ಎಲ್ಲಕ್ಕೂ
ದಾನಿಯೇ ಲೇಸು ಸರ್ವಜ್ಞ ॥1॥

ಈವಂಗೆ ದೇವಂಗೆ । ಆವುದಂತರವಯ್ಯಾ ।
ದೇವನು ಜಗಕೆ ಕೊಡುತಿಹನು । ಕೈಯಾರ
ಈವನೇ ದೇವ ಸರ್ವಜ್ಞ ॥2॥

ಅನ್ನವನು ಇಕ್ಕುವುದು । ನನ್ನಿಯನು ನುಡಿಯುವುದು ।
ತನ್ನಂತೆ ಪರರ ಬಗೆದಡೆ । ಕೈಲಾಸ
ಬಿನ್ನಾಣವಕ್ಕು ಸರ್ವಜ್ಞ ॥3॥



ಸರ್ವಜ್ಞ

ಕವಿ–ಕಾವ್ಯ ಪರಿಚಯ

ತ್ರಿಪದಿ ಚಕ್ರವರ್ತಿ ಎಂದು ಪ್ರಸಿದ್ಧನಾದವನು ಸರ್ವಜ್ಞ. ಈತ ಲೋಕಾನುಭವಿ. ಕಾಲ : ಹದಿನಾರನೇ ಶತಮಾನ. ಲೋಕ ನೀತಿಯನ್ನು ಮೂರು ಸಾಲಿನ ತ್ರಿಪದಿಯಲ್ಲಿ ಈತ ರಚಿಸಿರುತ್ತಾನೆ. ತಮಿಳು ಸಾಹಿತ್ಯದ ತಿರುವಳ್ಳುವರ್, ತೆಲುಗು ಸಾಹಿತ್ಯದ ವೇಮನರಂತೆ ಸರ್ವಜ್ಞ ಸಂತ ಕವಿ.

ಪದಗಳ ಅರ್ಥ

1. ಗಾನ–ಸಂಗೀತ, ಹಾಡು; ಮಾನವತಿ–ಪತಿವ್ರತೆ, ಮಾನವಂತೆಯಾದ ಹೆಣ್ಣು; ಕೆಳೆ–ಗೆಳೆತನ, ಸ್ನೇಹ; ಲೇಸು–ಮೇಲು, ಉತ್ತಮ; ಸರ್ವಜ್ಞ–ಎಲ್ಲ ಬಲ್ಲವನು.
2. ದೇವಂಗೆ–ದೇವರಿಗೆ; ಆವುದು–ಯಾವುದು; ಅಂತರ–ವ್ಯತ್ಯಾಸ; ಜಗಕೆ–ಜಗತ್ತಿಗೆ, ಲೋಕಕ್ಕೆ, ಜನರಿಗೆ; ಈವನೆ–ಕೊಡುವವನೇ, ದಾನ ನೀಡುವವನೇ.
3. ಇಕ್ಕುವುದು–ನೀಡುವುದು, ಕೊಡುವುದು; ನನ್ನಿ–ಸತ್ಯ, ನಿಜ; ಪರರು–ಇತರರು, ಸಹಜೀವಿಗಳು; ಕೈಲಾಸ–ಶಿವನ ವಾಸಸ್ಥಾನ; ಬಿನ್ನಾಣ–ಸೊಬಗು, ಸುಖ.

ಪದ್ಯದ ಅರ್ಥ

1. ವಿದ್ಯೆಗಳಲ್ಲಿ ಗಾನ ವಿದ್ಯೆಯು (ಗಂಧರ್ವ ವಿದ್ಯೆಯು) ಮೇಲಾದುದು, ಮರ್ಯಾದೆವಂತೆಯಾದ ಹೆಂಡತಿಯಿರುವುದು ಒಳ್ಳೆಯದು. ಆತ್ಮಜ್ಞಾನಿಗಳ ಗೆಳೆತನವಿರುವುದು ಉತ್ತಮ. ಭೂಮಿಯ ಮೇಲಿನ ಜನರಲ್ಲಿ ದಾನಿಯೇ ಶ್ರೇಷ್ಠನಾದವನು.
2. ಪ್ರತ್ಯಕ್ಷ ದಾನ ಮಾಡುವವನಿಗೂ ದೇವರಿಗೂ ಯಾವ ವ್ಯತ್ಯಾಸವಿದೆ? ದೇವರು ಜಗತ್ತಿಗೆ ಕೊಡುತ್ತಿರುವನು. ಆದರೆ ಲೋಕ ಜೀವನದಲ್ಲಿ ತನ್ನ ಕೈಯಿಂದ ಯಾರು ದಾನ ನೀಡುವನೋ ಅವನೇ ದೇವರಿಗೆ ಸಮಾನನಾದವನು.
3. ಅನ್ನ ದಾನ ಮಾಡುವುದು, ಸತ್ಯವನ್ನು ಮಾತಾಡುವುದು, ತನ್ನ ದುಃಖದಂತೆ ಪರರ ದುಃಖವೆಂದು ತಿಳಿದರೆ ಅವನಿಗೆ ಕೈಲಾಸ ಪ್ರಾಪ್ತಿಯಾಗುವುದು.

ಪ್ರಶ್ನೋತ್ತರಗಳು

I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.

1. ವಿದ್ಯೆಯಲ್ಲಿ ಮೇಲಾದ ವಿದ್ಯೆ ಯಾವುದು ?
2. ಯಾರು ದೇವರಿಗೆ ಸಮಾನನು ?

II. ಕೆಳಗಿನ ಪ್ರಶ್ನೆಗೆ ಮೂರ್ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.

1. ಸರ್ವಜ್ಞನ ಪ್ರಕಾರ ಭೂಮಿಯ ಮೇಲಿನ ಜನರಲ್ಲಿ ಶ್ರೇಷ್ಠನಾದವನು ಯಾರು?

III. ಕೆಳಗಿನ ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ.

1. ಚಳಿಯಿಂದ ನರಳುವವರಿಗೆ ನೀವು ಹೇಗೆ ಸಹಾಯ ಮಾಡುವಿರಿ ?
2. ನಾವು ಯಾರಿಗೆ ದಾನ ಮಾಡಬೇಕು? ಏಕೆ?

ಭಾಷಾಭ್ಯಾಸ

I. ಅ. ಸರಿಯಾದ ಉತ್ತರಗಳನ್ನು ಆರಿಸಿ ಬರೆಯಿರಿ.

1. 'ಸ್ವಾನುಭಾವಿ' – ಪದವನ್ನು ಬಿಡಿಸಿ ಬರೆದಾಗ _____

(ಅ) ಸ್ವ+ಅನುಭಾವಿ (ಆ) ಸ್ವಾನು+ಭಾವಿ
(ಇ) ಸ್ವಾನುಭಾ+ವಿ (ಈ) ಸ್ವಾನು+ಅನುಭಾವಿ

2. 'ಕೊಡುತ+ಇಹನು' – ಈ ಪದವನ್ನು ಸೇರಿಸಿ ಬರೆದಾಗ _____

(ಅ) ಕೊಡುತಹನು (ಆ) ಕೊಡುತಿಹನು
(ಇ) ಕೊಡುತ್ತಿಹನು (ಈ) ಕೊಡುತ್ತಿರುವವನು

3. 'ಜಗ' – ಈ ಪದದ ಅರ್ಥ _____

(ಅ) ಆಕಾಶ (ಆ) ವಿಶ್ವ
(ಇ) ಸೂರ್ಯ (ಈ) ಜಾಗ

4. 'ಸತಿ' – ಈ ಪದದ ವಿರುದ್ಧ ಪದ

(ಅ) ಪತಿ (ಆ) ಮತಿ
(ಇ) ಯತಿ (ಈ) ಗತಿ

II. ಅ. ಕೆಳಗಿನ ಪದಗಳಿಗೆ ತತ್ಸಮ ತದ್ಭವಗಳನ್ನು ಬರೆಯಿರಿ.

ಸಂಗೀತ, ಹದಿಬದೆ, ಭೂಮಿ, ಭಕ್ತಿ,

ಆ. ಕೆಳಗಿನವುಗಳ ವಿಭಕ್ತಿ ಪ್ರತ್ಯಯಗಳನ್ನು ಗುರುತಿಸಿ.

ಸ್ವಾನುಭಾವಿಗಳ, ದಾನಿಯೇ, ಈವಂಗೆ, ದೇವರಿಗೆ, ಕೈಯಿಂದ, ಪರರ.

ಇ. ಈ ಪದ್ಯವನ್ನು ಪೂರ್ತಿಗೊಳಿಸಿ.

ಗಾನ _____
_____
_____ ಸರ್ವಜ್ಞ ॥



ಪೂರಕ ಪದ್ಯ

ಘಟಕ ಎಂಟು

ಮೊದಲು ಮಾನವನಾಗು

– ಸಿದ್ಧಯ್ಯ ಪುರಾಣಿಕ



ಸಾಹಿತ್ಯಗಳು ವ್ಯಕ್ತಿಯ ಜೀವನವನ್ನು ಸರಿಯಾದ ಮಾರ್ಗದಲ್ಲಿ ಮುನ್ನಡೆಸಲು ದಾರಿ ತೋರುತ್ತವೆ. ಸಾಹಿತಿಗಳು ಜೀವನಾನುಭವದ ಸಾರವನ್ನು ತಮ್ಮ ಕಾವ್ಯಗಳ ಮೂಲಕ ಹೊರ ಜಗತ್ತಿಗೆ ಪಸರಿಸಿ ಮಾನವ ಕುಲವನ್ನು ಸನ್ಮಾರ್ಗದಲ್ಲಿ ದೂಡಲು ಸಹಕರಿಸುತ್ತಾರೆ. ವ್ಯಕ್ತಿ ಮಾನವೀಯತೆಯಿಂದ ಬದುಕಿದಾಗ ಮಾತ್ರ ತನಗೂ ತನ್ನ ಸುತ್ತಲಿನ ಸಮಾಜಕ್ಕೂ ಒಳಿತು. ಈ ನೀತಿಯನ್ನೇ ಈ ಕವನದಲ್ಲಿ 'ಮೊದಲು ಮಾನವನಾಗು' ಎಂದು ಕವಿ ಕರೆ ನೀಡಿದ್ದಾರೆ.

ಓದಿ ಬೋಧಕನಾಗು
ಕಾದಿ ಯೋಧನೆ ಆಗು
ಶ್ರಮಿಕ ವಣಿಕನೆ ಆಗು
ದುಡಿದು ಗಳಿಸಿ
ಏನಾದರೂ ಆಗು
ನಿನ್ನೊಲವಿನಂತಾಗು
ಏನಾದರೂ ಸರಿಯೆ
ಮೊದಲು ಮಾನವನಾಗು !

ಹಿಂದು ಮುಸ್ಲಿಮನಾಗು
ಬೌದ್ಧ ಕ್ರೈಸ್ತನೆ ಆಗು
ಚಾರ್ವಾಕನೆ ಆಗು
ಭೋಗ ಬಯಸಿ
ಏನಾದರೂ ಆಗು
ಹಾರೈಸಿದಂತಾಗು
ಏನಾದರೂ ಸರಿಯೆ
ಮೊದಲು ಮಾನವನಾಗು !

ರಾಜಕಾರಣಿಯಾಗು
ರಾಷ್ಟ್ರಭಕ್ತನೆ ಆಗು
ಕಲೆಗಾರ ವಿಜ್ಞಾನಿ
ವ್ಯಾಪಾರಿಯೇ ಆಗು
ಏನಾದರೂ ಆಗು
ನೀ ಬಯಸಿದಂತಾಗು
ಏನಾದರೂ ಸರಿಯೆ
ಮೊದಲು ಮಾನವನಾಗು !



ಡಾ. ಸಿದ್ಧಯ್ಯ ಪುರಾಣಿಕ

ಕವಿ–ಕಾವ್ಯ ಪರಿಚಯ

'ಕಾವ್ಯಾನಂದ' ಎಂಬುದು ಡಾ. ಸಿದ್ಧಯ್ಯ ಪುರಾಣಿಕರ ಕಾವ್ಯನಾಮ. ಇವರು 1918ರಲ್ಲಿ ದ್ಯಾಂಪುರ ಎಂಬಲ್ಲಿ ಜನಿಸಿದರು. ಇವರು ಐ.ಎ.ಎಸ್., ಅಧಿಕಾರಿಯಾಗಿ ಸೇವೆ ಸಲ್ಲಿಸಿದ್ದಾರೆ. ಜಲಪಾತ, ಕರುಣಾ ಶ್ರಾವಣ, ಮಾನಸ ಸರೋವರ ಮುಂತಾದ ಕೃತಿಗಳನ್ನು ರಚಿಸಿದ್ದಾರೆ.

ಈ ಪದ್ಯವನ್ನು ಇವರ ಆಯ್ದ ಕವನಗಳು ಎಂಬ ಕೃತಿಯಿಂದ ಆರಿಸಿಕೊಳ್ಳಲಾಗಿದೆ. ಇವರು 1987ರಲ್ಲಿ ಕಲಬುರ್ಗಿಯಲ್ಲಿ ನಡೆದ 58ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು.

'ಪದಗಳ ಅರ್ಥ

ಬೋಧಕ–ಬೋಧಿಸುವವನು, ಶಿಕ್ಷಕ; ಯೋಧ–ವೀರ, ಸೈನಿಕ, ಒಲವು–ಪ್ರೀತಿ; ಹಾರೈಸು–ಬಯಸು; ಭೋಗ–ಸುಖ, ಚಾರ್ವಾಕ–ನಾಸ್ತಿಕ.

ಪ್ರಶ್ನೋತ್ತರಗಳು

I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.

1. ವಣಿಕ ಎಂದರೆ ಯಾರು ?
2. ಬೋಧಿಸುವವನನ್ನು ಏನೆಂದು ಕರೆಯುವರು ?

II. ಕೆಳಗಿನ ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ.

1. ಈ ಕವನದ ಸಾರಾಂಶವನ್ನು ನಿಮ್ಮ ಮಾತಿನಲ್ಲಿ ಬರೆಯಿರಿ.

III. ಕೆಳಗಿನ ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ.

1. ನಾವು ಮಾನವೀಯತೆಯಿಂದ ಬದುಕಲು ಬೇಕಾದ ಗುಣಗಳು ಯಾವುವು?
2. ಮಾನವೀಯತೆಯಿಂದ ಬದುಕಿದ ಮಹಾಪುರುಷರ ಹೆಸರುಗಳನ್ನು ಪಟ್ಟಿ ಮಾಡಿ.

ಭಾಷಾಭ್ಯಾಸ

I. ಅ. ಸರಿಯಾದ ಉತ್ತರಗಳನ್ನು ಆರಿಸಿ ಬರೆಯಿರಿ.

1. 'ಕಲೆಗಾರ' – ಈ ಪದವನ್ನು ಬಿಡಿಸಿ ಬರೆದಾಗ _____

(ಅ) ಕಲೆ+ಕಾರ (ಆ) ಕಲೆ+ಗಾರ
(ಇ) ಕಲೆಯ+ಕಾರ (ಈ) ಕಳೆ+ಕಾರ

2. 'ಬೋಧಕ+ಆಗು' – ಈ ಪದವನ್ನು ಸೇರಿಸಿ ಬರೆದಾಗ _____

(ಅ) ಬೋಧಕರಾಗು (ಆ) ಬೋಧಕನಾಗು
(ಇ) ಬೋಧಕನೇಯಾಗು (ಈ) ಬೋಧನಾಗು

II. ಅ. ಕೆಳಗಿನ ಪದಗಳಿಗೆ ವಿರುದ್ಧ ಪದಗಳನ್ನು ಬರೆಯಿರಿ.

ಮೊದಲು, ಮಾನವ, ಸರಿ, ಹಿಂದು.

ಆ. ಮಾದರಿಯಂತೆ ವಾಕ್ಯ ರಚಿಸಿ.

ಮಾದರಿ ವಾಕ್ಯ

ದುಡಿದು : ನಾನು ದುಡಿದು ಹಣವಂತನಾಗಿ ಬಡವರಿಗೆ ಸಹಾಯ ಮಾಡುತ್ತೇನೆ.

ಯೋಧ, ರಾಷ್ಟ್ರಭಕ್ತ, ವ್ಯಾಪಾರಿ, ವಿಜ್ಞಾನಿ.

ಚಟುವಟಿಕೆ

1. ನಿಮ್ಮಲ್ಲಿರುವ ಒಳ್ಳೆಯ ಹಾಗೂ ಕೆಟ್ಟ ಗುಣಗಳನ್ನು ಪಟ್ಟಿ ಮಾಡಿರಿ.
2. ಮಾನವೀಯತೆಯ ಗುಣಗಳನ್ನು ಹೇಗೆ ಬೆಳೆಸಿಕೊಳ್ಳುವಿರಿ.
3. ರಾಷ್ಟ್ರಭಕ್ತರ ಭಾವಚಿತ್ರಗಳನ್ನು ಸಂಗ್ರಹಿಸಿ ಆಲ್ಬಂ ತಯಾರಿಸಿ.

ಘಟಕ ಎಂಟು

ಹಸಿವೆಂಬ ರೋಗವನ್ನು ನಿವಾರಿಸಿದ ಹೆಣ್ಣು

(ನಾಟಕ)



ಈ ಜಗತ್ತಿನ ಎಲ್ಲ ಜೀವರಾಶಿಗಳಿಗೂ ಆಹಾರ ಅತಿ ಅಗತ್ಯವಾಗಿ ಬೇಕಾದ ವಸ್ತು. ಜಗತ್ತಿನ ಎಲ್ಲ ಜೀವರಾಶಿಗಳೂ ಜೀವನಪರ್ಯಂತ ಆಹಾರವನ್ನು ಹುಡುಕಲು ಹವಣಿಸುತ್ತವೆ. ಆಹಾರವೇ ಜೀವಕ್ಕೆ ಆಧಾರವಾಗಿದೆ. ವ್ಯಕ್ತಿಯೊಬ್ಬನಿಗೆ ಆಹಾರ ಇಲ್ಲದಿದ್ದರೆ ಈ ಜಗವನ್ನೇ ನಾಶ ಮಾಡುತ್ತಾನೆ ಎನ್ನುತ್ತಾರೆ ಮಹಾಕವಿ ಭಾರತಿಯಾರ್ ಅವರು. ಹಸಿವಿನಿಂದ ನರಳುವ ಓರ್ವನಿಗೆ ಆಹಾರ ಒದಗಿಸುವುದು ಜೀವದಾನಕ್ಕೆ ಸಮನಾದುದು. ಅದೇ ಶ್ರೇಷ್ಠ ದಾನವಾಗಿದೆ.

ದೃಶ್ಯ – 1

ಸ್ಥಳ : ಮಣಿಪಲ್ಲವ ದ್ವೀಪ

ಪಾತ್ರಗಳು :

ಮಣಿಮೇಗಲೈ

ದ್ವೀಪ ತಿಲಕೆ

ಮಣಿಮೇಗಲೈ : (ಸ್ವಗತ) ಎಲ್ಲಿ ನೋಡಿದರೂ ಮರಳ ದಿಬ್ಬಗಳು. ಹಚ್ಚ ಹಸಿರಿನಿಂದ ಕಂಗೊಳಿಸುವ ಗಿಡಬಳ್ಳಿಗಳು. ದಟ್ಟವಾದ ಮರಗಳು. ಮಧ್ಯೆ ಸರೋವರಗಳು. ಮನಸ್ಸನ್ನು ತಣಿಸುವ ದೃಶ್ಯಗಳು... ಆಹಾ! ಸೊಬಗೇ ಸೊಬಗು!

(ಅವಳ ಎದುರಿನಿಂದ ದ್ವೀಪ ತಿಲಕೆ ನಡೆದು ಬರುತ್ತಾಳೆ)

ದ್ವೀಪ ತಿಲಕೆ : ಸುಂದರಾಂಗಿ ! ನೀನು ಯಾರು? ಇಲ್ಲಿಗೆ ಹೇಗೆ ಬಂದೆ?

ಮಣಿಮೇಗಲೈ : ನಾನು ಪೂಂಬುಹಾರ್ ನಗರಕ್ಕೆ ಸೇರಿದವಳು. ನನ್ನ ಹೆಸರು ಮಣಿಮೇಗಲೈ. ನನ್ನ ತಾಯಿ ನನ್ನನ್ನು ಇಲ್ಲಿಗೆ ಕರೆತಂದರು. ನೀವು ಯಾರು ತಾಯೇ? ನೀವು ಹೇಗೆ ಈ ದ್ವೀಪಕ್ಕೆ ಬಂದಿರಿ?

ದ್ವೀಪ ತಿಲಕೆ : ನನ್ನ ಹೆಸರು ದ್ವೀಪತಿಲಕೆ. ನಾನು ಈ ದ್ವೀಪವನ್ನೂ ಇದರಲ್ಲಿನ ಬುದ್ಧ ಪೀಠವನ್ನೂ ಕಾವಲು ಕಾಯುತ್ತಿದ್ದೇನೆ. ತೇಜೋವಂತರು ಮಾತ್ರವೇ ಈ ದ್ವೀಪಕ್ಕೆ ಬಂದು ಇಲ್ಲಿನ ಬುದ್ಧಪೀಠವನ್ನು ನಮಸ್ಕರಿಸಲು ಸಾಧ್ಯ! ನೀನು ಆ ಹಿರಿಮೆಯನ್ನು ಗಳಿಸಿರುವೆ. ಇದರೊಂದಿಗೆ ಇನ್ನೊಂದನ್ನೂ ನೀನು ತಿಳಿಯಬೇಕಾಗಿದೆ.

ಮಣಿಮೇಗಲೈ : ಅದು ಏನು ತಾಯೇ?

ದ್ವೀಪ ತಿಲಕೆ : ನಮ್ಮ ಎದುರಿನಲ್ಲಿ ಹೂಗಳು ತುಂಬಿರುವ ಸರೋವರವನ್ನು ನೋಡು. ಇದಕ್ಕೆ, 'ಗೋಮುಖಿ' ಎಂದು ಹೆಸರಿದೆ. ಗೋ ಎಂದರೆ ಹಸು, ಮುಖಿ ಎಂದರೆ ಮುಖ. ಹಸುವಿನ ಮುಖವನ್ನು ಹೋಲುವಂತಿರುವುದರಿಂದ ಈ ಸರೋವರಕ್ಕೆ ಗೋಮುಖಿ ಎಂದು ಹೆಸರು ಬಂದಿದೆ.

ಮಣಿಮೇಗಲೈ : ಓ! ಹಾಗೋ! ರಚನೆಗೆ ತಕ್ಕ ಹೆಸರಿನಂತಿದೆಯಲ್ಲ!

ದ್ವೀಪ ತಿಲಕೆ : ಈ ಸರೋವರಕ್ಕೆ ಮತ್ತೊಂದು ಮಹತ್ವವೂ ಉಂಟು. ವೈಶಾಖ ಮಾಸದ ಬೆಳದಿಂಗಳಿನಲ್ಲಿ ಈ ಸರೋವರದ ನೀರಿನ ಮೇಲೆ ಒಂದು ಅಮೂಲ್ಯವಾದ ಪಾತ್ರೆ ಕಾಣಿಸುತ್ತದೆ. ಅದು, 'ಆಪುತ್ತಿರನ್' ಕೈಗಳಲ್ಲಿರುವ 'ಅಕ್ಷಯ ಪಾತ್ರೆ'ಯೇ ಆಗಿದೆ.

ಮಣಿಮೇಗಲೈ : ಅಕ್ಷಯ ಪಾತ್ರೆಯೇ? ಅದರ ಮಹತ್ವವೇನು?

ದ್ವೀಪ ತಿಲಕೆ : ಆ ಪಾತ್ರೆಯಲ್ಲಿದ್ದ ಆಹಾರವನ್ನು ತೆಗೆದಂತೆಲ್ಲ ಮುಗಿಯದೇ ಬೆಳೆಯುತ್ತಲೇ ಇರುತ್ತದೆ. ಅದನ್ನು ಪಡೆದುಕೊಂಡು ಬಹಳಷ್ಟು ಜನರಿಗೆ ಆಹಾರ ಒದಗಿಸಬಹುದು.

ಮಣಿಮೇಗಲೈ : ಹೌದೇ! ಆಶ್ಚರ್ಯಕರವಾಗಿದೆಯಲ್ಲ!

ದ್ವೀಪ ತಿಲಕೆ : ಹೌದು! ಆ ಅಕ್ಷಯಪಾತ್ರೆ ಕಾಣುವ ವೈಶಾಖ ಮಾಸದ ಹುಣ್ಣಿಮೆಯ ದಿನ ಇಂದೇ ಆಗಿದೆ! (ಹೀಗೆ ದ್ವೀಪ ತಿಲಕೆ ಹೇಳುತ್ತಿರುವಾಗಲೇ ಆ ಸರೋವರದ ನೀರಿನ ಮೇಲೆ ಅಕ್ಷಯಪಾತ್ರೆ ಗೋಚರವಾಗುತ್ತದೆ. ಮಣಿಮೇಗಲೈ : ಆ ಪಾತ್ರೆಗೆ ನಮಸ್ಕರಿಸಿ ಕೈಯಲ್ಲಿ ತೆಗೆದುಕೊಳ್ಳುತ್ತಾಳೆ).

ದ್ವೀಪ ತಿಲಕೆ : ಮಣಿಮೇಗಲೈ! ಜೀವಿಗಳ ಹಸಿವನ್ನು ನೀಗಿಸುವ ಅಕ್ಷಯ ಪಾತ್ರೆಯನ್ನು ನೀನು ಪಡೆದಿರುವೆ. ಇನ್ನು ಈ ಜಗತ್ತಿನ ಜೀವಿಗಳಿಗೆ ಹಸಿವಾಗದಂತೆ ಆಹಾರವನ್ನು ನೀಡಿ ಅನುಗ್ರಹೀತಳಾಗು.

(ಮಣಿಮೇಗಲೈ ದ್ವೀಪ ತಿಲಕೆಗೆ ನಮಸ್ಕರಿಸಿ ಅಕ್ಷಯ ಪಾತ್ರೆಯೊಂದಿಗೆ ವಿರಮಿಸುತ್ತಾಳೆ. ಪೂಂಬುಹಾರ್‌ಗೆ ಪುನಃ ಹಿಂದಿರುಗುತ್ತಾಳೆ. ಆದಿರೈ ಬಳಿಗೆ ಹೋಗುತ್ತಾಳೆ).

* * *

ದೃಶ್ಯ 2

ಸ್ಥಳ : ಆದಿರೈಯಳ ಗೃಹ.

ಪಾತ್ರಗಳು :

ಆದಿರೈ

ಮಣಿಮೇಗಲೈ

(ಆದಿರೈಯಳ ಮನೆಯ ಬಾಗಿಲಿನಲ್ಲಿ ಮಣಿಮೇಗಲೈ ಕೈಗಳಲ್ಲಿ ಅಕ್ಷಯ ಪಾತ್ರೆಯೊಂದಿಗೆ ಅದರಲ್ಲಿ ಆಹಾರ ಪಡೆಯುವುದಕ್ಕಾಗಿ ಬಂದು ನಿಲ್ಲುತ್ತಾಳೆ).

ಆದಿರೈ : ಯಾರು ನೀವು ?

ಮಣಿಮೇಗಲೈ : ಈ ಊರಿನಲ್ಲಿ ವಾಸಿಸುತ್ತಿದ್ದ ಕೋವಲನ್ ಮತ್ತು ಮಾಧವಿಯರ ಮಗಳು ನಾನು. ನಿಮ್ಮ ಹಿರಿಮೆಯನ್ನು ಅರಿತು ಈ ಪಾತ್ರೆಯಲ್ಲಿ ಆಹಾರ ಪಡೆಯಲು ಬಂದಿರುವೆನು.

ಆದಿರೈ : ಓ! ನೀವೇನಾ ಮಣಿಮೇಗಲೈ! ನಿಮ್ಮ ತಾಯಿ–ತಂದೆಯರ ಬಗ್ಗೆ ಕೇಳಿ ತಿಳಿದಿದ್ದೇನೆ. ನಿಮ್ಮನ್ನು ಇಂದು ಕಾಣುತ್ತಿದ್ದೇನೆ. ಇದು ಯಾವ ಪಾತ್ರೆ? ಬಹಳ ಸುಂದರವಾಗಿದೆ.

ಮಣಿಮೇಗಲೈ : ಇದು ತಡೆಯಿಲ್ಲದೆ ಅನವರತ ಆಹಾರ ನೀಡುವ ಅಕ್ಷಯ ಪಾತ್ರೆಯಾಗಿದೆ.

ಆದಿರೈ : ಈ ಪಾತ್ರೆಯು ನಿಮಗೆ ಯಾವ ರೀತಿ ದೊರೆಯಿತು.

(ಮಣಿಮೇಖಲೈ ಮಣಿ ಪಲ್ಲವ ದ್ವೀಪದಲ್ಲಿ ಅಕ್ಷಯ ಪಾತ್ರೆಯನ್ನು ಪಡೆದ ಇತಿಹಾಸವನ್ನು ತಿಳಿಸುತ್ತಾಳೆ).



ಆದಿರೈ : (ಆಶ್ಚರ್ಯಚಕಿತಳಾಗಿ) ಹಾಗೇನು?! ಅಕ್ಷಯ ಪಾತ್ರೆಯ ಹಿರಿಮೆಯನ್ನು ನಾನು ತಿಳಿದಿದ್ದೇನೆ. ಈಗಲೇ ಇದರಲ್ಲಿ ಆಹಾರವನ್ನು ಇಡುತ್ತೇನೆ. ಹೌದು, ಇದನ್ನು ತೆಗೆದುಕೊಂಡು ಹೋಗಿ ಏನು ಮಾಡುವಿರಿ?

ಮಣಿಮೇಗಲೈ : ಆತ್ಮೀಯಳಾದ ಆದಿರೆಯೇ! ಬಡ ಜನರ ಹಸಿವನ್ನು ನೀಗಿಸುವುದೇ ನನ್ನ ಮುಖ್ಯ ಧರ್ಮವಾಗಿದೆ. ಆಹಾರವನ್ನು ನೀಡಿದವರು ಪ್ರಾಣ ನೀಡಿದವರೆಂದು ನಾನು ಅರಿತಿರುವೆನು. ಆದ್ದರಿಂದ ಈ ಪಾತ್ರೆಯಲ್ಲಿರುವ ಆಹಾರವನ್ನು ಹಸಿವಿನಿಂದ ನರಳುತ್ತಿರುವ ಎಲ್ಲರಿಗೂ ಕೊಡುತ್ತೇನೆ.

ಆದಿರೈ : ಬಹಳ ಸಂತೋಷ. ನಿಮ್ಮ ಧರ್ಮ ಗೆಲ್ಲಲಿ. ಜನರ ಹಸಿವಿನ ರೋಗ ತಣಿಯಲಿ. ಇದೋ ಈ ಅಕ್ಷಯ ಪಾತ್ರೆಯಲ್ಲಿ ಈಗಲೇ ನಾನು ಆಹಾರ ಇಡುತ್ತೇನೆ.

(ಆದಿರೈ ಅಕ್ಷಯ ಪಾತ್ರೆಯಲ್ಲಿ ಊಟವನ್ನು ಇಡುತ್ತಾಳೆ. ಮಣಿಮೇಗಲೈ ಅದನ್ನು ತೆಗೆದುಕೊಂಡು ಹೋಗಿ, ವಿಕಲಚೇತನರು, ರೋಗಿಗಳು ಹಾಗೂ ಅನಾಥರಿಗೆ ಆಹಾರವನ್ನು ನೀಡುತ್ತಾಳೆ. ನಂತರ ಪೂಂಬುಹಾರಿನ ಸೆರೆಮನೆಯ ಕೈದಿಗಳಿಗೂ ಆಹಾರ ಒದಗಿಸುತ್ತಾಳೆ).

* * *

ದೃಶ್ಯ 3

ಸ್ಥಳ : ಅರಮನೆ

ಪಾತ್ರಗಳು :

ಸೆರೆಮನೆಯ ಕಾವಲುಗಾರ

ಅರಸ

ಮಣಿಮೇಗಲೈ.

ಸೆರೆಮನೆಯ ಕಾವಲುಗಾರ : ಅರಸನೇ! ನಮಸ್ಕಾರ. ಇಂದು ಬೆಳಿಗ್ಗೆ ನಮ್ಮ ಸೆರೆಮನೆಗೆ ಒಬ್ಬ ಯುವತಿ ಬಂದಳು. ಅವಳ ಕೈಯಲ್ಲಿ ಒಂದು ಚಿಕ್ಕ ಪಾತ್ರೆ ಇತ್ತು. ಆ ಚಿಕ್ಕ ಪಾತ್ರೆಯಿಂದ ಊಟವನ್ನು ಸೆರೆಮನೆಯಲ್ಲಿರುವ ಕೈದಿಗಳಿಗೆಲ್ಲ ಧಾರಾಳವಾಗಿ ನೀಡಿದಳು. ಆದರೂ ಆ ಪಾತ್ರೆಯಲ್ಲಿದ್ದ ಊಟ ಮಾತ್ರ ಕಡಿಮೆಯಾಗಲೇ ಇಲ್ಲ.

ಅರಸ : (ಆಶ್ಚರ್ಯದಿಂದ) ಏನು ? ಒಂದು ಚಿಕ್ಕಪಾತ್ರೆಯಲ್ಲಿದ್ದ ಊಟವನ್ನು ಅಲ್ಲಿದ್ದವರೆಲ್ಲರಿಗೂ ನೀಡಿದಳೇ! ಆ ಯುವತಿಯನ್ನು ಈಗಲೇ ಕರೆದು ತನ್ನಿ.

ಕಾವಲುಗಾರ: ಅಪ್ಪಣೆ ಅರಸರೇ!

(ಕಾವಲುಗಾರರು ಮಣಿಮೇಗಲೆಯನ್ನು ಅರಸನ ಬಳಿಗೆ ಕರೆತರುವರು).

ಮಣಿಮೇಗಲೈ : (ಅರಸನಿಗೆ ನಮಸ್ಕರಿಸಿ) ದಯಾಶೀಲನಾದ ಅರಸನೇ! ನಮಸ್ಕಾರ.

ಅರಸ : ಹೆಣ್ಣೇ, ನೀನು ಯಾರು ? ಆಹಾರವನ್ನು ಅಪಾರವಾಗಿ ನೀಡಿದರೂ ಕಡಿಮೆಯಾಗದಿರುವ ಈ ಪಾತ್ರೆಯ ಹೆಸರೇನು? ಇದು ನಿನಗೆ ಹೇಗೆ ದೊರೆಯಿತು?

(ಮಣಿಮೇಗಲೈ ಆಕೆಗೆ ದೊರೆತ ಅಕ್ಷಯ ಪಾತ್ರೆಯ ಇತಿಹಾಸವನ್ನು ವಿವರಿಸುತ್ತಾಳೆ. ಅರಸನು ಬಹಳ ಸಂತೋಷದಿಂದ)

ಮಹಾ ತಪಸ್ವಿನಿಯೇ! ಈ ಪ್ರಪಂಚದ ಜನರ ಹಸಿವನ್ನು ತೀರಿಸಲು ಸನ್ಮಾರ್ಗದಲ್ಲಿ ಧರ್ಮವನ್ನು ಆಚರಿಸುತ್ತಿರುವೆ. ನಾನು ನಿನಗೆ ಏನಾದರೂ ಸಹಾಯ ಮಾಡಬೇಕಾಗಿದೆಯೇ?

ಮಣಿಮೇಗಲೈ : ಪ್ರೀತಿಯಿಂದ ರಾಜ್ಯವಾಳುತ್ತಿರುವ ಅರಸನೇ! ಸೆರೆಮನೆಯಲ್ಲಿ ಶಿಕ್ಷೆಯನ್ನು ಅನುಭವಿಸುತ್ತಿರುವವರು ತಮ್ಮ ತಪ್ಪನ್ನು ಅರಿತು ಮರುಜೀವನ ನಡೆಸಲು ದಾರಿ ತೋರಬೇಕು. ಸೆರೆಮನೆಯು ಧರ್ಮಶಾಲೆಯಾಗಬೇಕು.

ಅರಸ : ಅದಕ್ಕೆ ಏನು ಮಾಡಬೇಕು?

ಮಣಿಮೇಗಲೈ : ಜೀವನ ಧರ್ಮವನ್ನು ಬೋಧಿಸಿದ ಸಂತ ತಿರುವಳ್ಳುವರ್ ಬದುಕಿದ ರಾಜ್ಯ ಇದು. ಬುದ್ಧ ಜನಿಸಿದ ಪುಣ್ಯ ಭೂಮಿ ಇದು. ಯಾವುದು ಧರ್ಮ? ಯಾವುದು ಅಧರ್ಮ? ಯಾವುದು ಒಳಿತು? ಯಾವುದು ಕೆಡುಕು? ಎಂಬುದನ್ನೆಲ್ಲ ಎತ್ತಿ ತೋರಿಸಬೇಕು. ಇದರೊಂದಿಗೆ ಹೆತ್ತವರನ್ನು ಗೌರವಿಸಬೇಕು, ಹಿರಿಯರನ್ನು ರಕ್ಷಿಸಬೇಕು. ಅತಿಥಿ ಸತ್ಕಾರವನ್ನು ಮಾಡಬೇಕು ಮುಂತಾದವುಗಳನ್ನು ಒತ್ತಾಯಪೂರ್ವಕವಾಗಿ ತಿಳಿಹೇಳಿ ಧಾರ್ಮಿಕ ಶಿಕ್ಷಣವನ್ನು ನೀಡಬೇಕು ಇದೇ ನನ್ನ ಕೋರಿಕೆ ಅರಸರೇ!

ಅರಸ : ಧರ್ಮದೇವತೆಯೇ! ನಿನ್ನ ಕೋರಿಕೆಯೆಲ್ಲವನ್ನೂ ನೆರವೇರಿಸಲು ನಾನು ಆದೇಶ ನೀಡುತ್ತೇನೆ. ನೀನು ಬಾಳ್ಗೆ! ನಿನ್ನ ಧರ್ಮ ಬಾಳ್ಗೆ!

ಮಣಿಮೇಗಲೈ : ಧನ್ಯವಾದ ಅರಸನೇ!

(ವಂದಿಸಿ ವಿರಮಿಸುತ್ತಾಳೆ.)

* * *

ಪ್ರಶ್ನೋತ್ತರಗಳು

I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.

1. ಮಣಿಮೇಗಲೈಯ ತಾಯಿ–ತಂದೆ ಯಾರು ?
2. ಮಣಿಮೇಗಲೈ ಯಾರನ್ನು ಭೇಟಿಯಾದಳು ?
3. ಮಣಿಪಲ್ಲವ ದ್ವೀಪಕ್ಕೆ ಮಣಿಮೇಗಲೈಯನ್ನು ಕರೆತಂದವರು ಯಾರು ?
4. ಗೋಮುಖ ಎಂಬುದರ ಅರ್ಥವೇನು ?
5. ಮಣಿಮೇಗಲೈ ಸರೋವರದಿಂದ ಯಾವ ಪಾತ್ರೆಯನ್ನು ಪಡೆದಳು ?

II. ಕೆಳಗಿನ ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ.

1. ಮಣಿಪಲ್ಲವ ದ್ವೀಪವನ್ನು ಕುರಿತು ಬರೆಯಿರಿ.
2. ಅಕ್ಷಯ ಪಾತ್ರೆಯ ಮಹತ್ವವನ್ನು ತಿಳಿಸಿ.
3. ಮಣಿಮೇಗಲೈ ಅರಸನಲ್ಲಿ ಏನೆಂದು ಬೇಡಿದಳು?
4. ಮಣಿಮೇಗಲೈ ಅಕ್ಷಯ ಪಾತ್ರೆಯಿಂದ ಯಾರ್ಯಾರಿಗೆ ಊಟವನ್ನು ನೀಡಿದಳು?
5. ಅರಸನು ಮಣಿಮೇಗಲೈಯನ್ನು ಏನೆಂದು ಪ್ರಶ್ನಿಸಿದನು?

III. ಕೆಳಗಿನ ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ.

1. ಧರ್ಮಕಾರ್ಯಗಳು ಎಂದು ನೀವು ಯಾವುದನ್ನೆಲ್ಲ ಗುರುತಿಸುವಿರಿ?
2. ಪ್ರಾಚೀನ ತಮಿಳು ಸಾಹಿತ್ಯದ ಐದು ಮಹಾಕಾವ್ಯಗಳನ್ನು ಹೆಸರಿಸಿ.

ಭಾಷಾಭ್ಯಾಸ

I. ಸರಿಯಾದ ಉತ್ತರಗಳನ್ನು ಆರಿಸಿ ಬರೆಯಿರಿ.

1. ಮಣಿಮೇಗಲೈಯ ತಾಯಿ ಮಣಿಮೇಗಲೈಯನ್ನು ಕರೆ ತಂದ ದ್ವೀಪ _____
   (ಅ) ಲಂಕಾ ದ್ವೀಪ
   (ಆ) ಲಕ್ಷ ದ್ವೀಪ
   (ಇ) ಮಣಿಪಲ್ಲವ ದ್ವೀಪ
   (ಈ) ಮಾಲ್ಡೀವ್ಸ್ ದ್ವೀಪ
2. ಮಣಿಮೇಗಲೈ ಕೈಯಲ್ಲಿದ್ದ ಅಕ್ಷಯ ಪಾತ್ರೆಗೆ ಆಹಾರ ನೀಡಿದ ಹೆಣ್ಣು _____ .
   (ಅ) ಚಿತ್ತಿರೈ
   (ಆ) ಆದಿರೈ
   (ಇ) ಚಂಡಿಕೈ
   (ಈ) ದ್ವೀಪ ತಿಲಕೆ

II. ಅ. ಕೆಳಗಿನ ಪದಗಳನ್ನು ಉಪಯೋಗಿಸಿ ಸ್ವಂತ ವಾಕ್ಯಗಳನ್ನು ರಚಿಸಿ.

(ಅ) ಗಿಡಬಳ್ಳಿಗಳು
(ಆ) ಬೆಳದಿಂಗಳು
(ಇ) ಅಕ್ಷಯ ಪಾತ್ರೆ
(ಈ) ಸದ್ಧರ್ಮ.

ಆ. ಕೊಟ್ಟಿರುವ ಶಬ್ದಗಳ ಲಿಂಗ ಮತ್ತು ವಚನಗಳನ್ನು ಹೆಸರಿಸಿ.

(1) ಸುಂದರಾಂಗಿ
(2) ಮಣಿಮೇಗಲೈ
(3) ಸರೋವರ
(4) ಅರಸ
(5) ತಾಯಿ
(6) ಬುದ್ಧ
(7) ಅಕ್ಷಯ ಪಾತ್ರೆ
(8) ಮರಗಳು
(9) ಕೋವಲನ್
(10) ಮಾಧವಿ
(11) ವಿಕಲ ಚೇತನರು.

ಇ. ಕೆಳಗಿನ ಪದಗಳ ತತ್ಸಮ–ತದ್ಭವ ರೂಪಗಳನ್ನು ಬರೆಯಿರಿ.

(1) ಧರ್ಮ
(2) ಬಳ್ಳಿ
(3) ವೈಶಾಖ
(4) ಆಶ್ಚರ್ಯ
(5) ಹುಣ್ಣಿಮೆ

ಚಟುವಟಿಕೆ

1. ದಯೆ, ಕರುಣೆ, ಜೀವನ ಪ್ರೀತಿ ಮುಂತಾದ ಗುಣಗಳಿಂದ ಪ್ರಸಿದ್ಧರಾದ ಮಹಾಪುರುಷರ ಇತಿಹಾಸವನ್ನು ಶಿಕ್ಷಕರಿಂದ ಕೇಳಿ ತಿಳಿಯಿರಿ.
2. 'ಹಸಿವೆಂಬ ರೋಗವನ್ನು ನಿವಾರಿಸಿದ ಹೆಣ್ಣು' – ನಾಟಕವನ್ನು ತರಗತಿಯಲ್ಲಿ ಅಭಿನಯಿಸಿರಿ.
3. ಈ ನಾಟಕವನ್ನು ಕಥಾ ರೂಪದಲ್ಲಿ ಬರೆಯಿರಿ.

ಉಪಪಠ್ಯ

ಘಟಕ ಎಂಟು

ಗಿಳಿರಾಮ



ಕತೆ ಯಾರಿಗೆ ಬೇಡ ? ಕತೆಯೆಂದರೆ ಎಲ್ಲರಿಗೂ ಇಷ್ಟ. ಕಲ್ಪನಾ ಕತೆಗಳು ಎಲ್ಲರ ಮನಸ್ಸನ್ನೂ ಆಕರ್ಷಿಸುತ್ತವೆ. ಕತೆಯೊಂದಿಗೆ ನೀತಿಯು ಮಿಳಿತವಾಗಿದ್ದರೆ ಸಕ್ಕರೆಯನ್ನು ಜೇನುತುಪ್ಪದಲ್ಲಿ ಬೆರೆಸಿ ಉಂಡಂತಾಗುತ್ತದೆ. ಬನ್ನಿ, ಅಂತಹ ಸವಿಯಾದ ಕತೆಯೊಂದನ್ನು ಓದೋಣ...



ಅದೊಂದು ದಟ್ಟ ಅಡವಿ. ಅಡವಿಯಲ್ಲೊಂದು ಭಾರೀ ದೊಡ್ಡದಾದ ಆಲದ ಮರ. ಮರದ ಮೇಲೊಂದು ಗಿಳಿಯ ಗೂಡು. ಗೂಡಿನಲ್ಲಿ ತಾಯಿಗಿಳಿ ಮತ್ತು ಅದರ ಮರಿ ಗಿಳಿ ರಾಮ ಇಬ್ಬರೇ ಇದ್ದರು.

ಗಿಳಿರಾಮ ತಾಯಿ ಗಿಳಿಯ ಮುದ್ದುಮರಿ. ತಾಯಿಗಿಳಿ ಗಿಳಿರಾಮನನ್ನು ಅತ್ಯಂತ ಪ್ರೀತಿಯಿಂದ ನೋಡಿಕೊಳ್ಳುತ್ತಿತ್ತು. ವಿರಾಮ ದೊರೆತಾಗಲೆಲ್ಲಾ ಮಗನಿಗೆ ಒಳ್ಳೊಳ್ಳೆ ವಿಚಾರಗಳನ್ನು ತಿಳಿಸುತ್ತಿತ್ತು. 'ನಾವು ಯಾರನ್ನೂ ಕೀಳಾಗಿ ಕಾಣಬಾರದು. ಯಾರೊಂದಿಗೂ ಜಗಳ ಆಡಬಾರದು. ಎಲ್ಲರನ್ನೂ ನಮ್ಮ ಅಣ್ಣ ತಮ್ಮಂದಿರಂತೆಯೇ ಕಾಣಬೇಕು. ದೇವರ ಮಕ್ಕಳೆಂದೇ ತಿಳಿಯಬೇಕು'.

ಹೀಗೆ ಪ್ರತಿಯೊಂದು ವಿಚಾರವನ್ನೂ ತಾಯಿಗಿಳಿ ಯಾವುದಾದರೊಂದು ಕಥೆಯ ಮೂಲಕ ಗಿಳಿರಾಮನ ಮನಸ್ಸಿಗೆ ನಾಟುವಂತೆ ನಿರೂಪಿಸುತ್ತಿತ್ತು. ಗಿಳಿರಾಮನೂ ಸಹ ತಾಯಿಯ ಮಾತನ್ನು ಮನಸ್ಸಿಟ್ಟು ಕಿವಿಗೊಟ್ಟು ಆಲಿಸುತ್ತಿತ್ತು. ಅದರಂತೆ ಜೀವನದಲ್ಲಿ ನಡೆದುಕೊಳ್ಳಲು ತೊಡಗಿತ್ತು.

ಗಿಳಿರಾಮ ವಾಸಿಸುತ್ತಿದ್ದ ಮರದ ಪಕ್ಕದಲ್ಲಿಯೇ

ಒಂದು ನೇರಳೆಯ ಮರ. ಮರದ ತುಂಬಾ ನೇರಳೆ ಹಣ್ಣುಗಳು ತೊನೆಯುತ್ತಿದ್ದವು. ಗಿಳಿರಾಮ ಹಸಿವಾದಾಗ ಮೆಲ್ಲನೆ ಹಾರಿ ನೇರಳೆಯ ಮರದ ಮೇಲೆ ಕೂಡುತ್ತಿತ್ತು. ಸವಿಸವಿಯಾದ ಹಣ್ಣುಗಳನ್ನು ತಿನ್ನುತ್ತಿತ್ತು. ಅದೇ ಮರದ ಮೇಲೆ ಒಂದು ಕಾಗೆ ಗೂಡು ಕಟ್ಟಿಕೊಂಡಿತ್ತು. ಗಿಳಿರಾಮ ಪುಟಪುಟನೆ ಹಾರಾಡುವುದು, ಹಣ್ಣನ್ನು ಮುದ್ದಾಗಿ ಕೊಕ್ಕಿನಿಂದ ಕುಕ್ಕಿ, ಸಂತೋಷದಿಂದ ತಿನ್ನುತ್ತಾ, ಅತ್ತಿತ್ತ ತಲೆ ತಿರುಗಿಸುವುದು ತನ್ನದೇ ಭಾಷೆಯಲ್ಲಿ ತನ್ನಷ್ಟಕ್ಕೇ ತಾನೇ ಮಾತನಾಡಿಕೊಳ್ಳುವುದು, ಇವೆಲ್ಲವನ್ನೂ ಕಣ್ಣಲ್ಲಿ ಕಣ್ಣಿಟ್ಟು ನೋಡುತ್ತಿತ್ತು. ತಾನು ಕೂಡ ಆನಂದಿಸುತ್ತಿತ್ತು.

ದಿನಕ್ರಮೇಣ ಎರಡರ ನಡುವೆ ಸ್ನೇಹ ಬೆಳೆಯಿತು. ಆಪ್ತಮಿತ್ರರಾಗಿ ಹೋದವು. ಎರಡೂ ಒಂದೇ ಮನೆಯವರಂತೆ ಒಡನಾಡಿಗಳಾಗಿ, ಅನ್ಯೋನ್ಯವಾಗಿದ್ದವು.

ಇವುಗಳ ಒಲವು–ನಲಿವನ್ನು ತಾಯಿಗಿಳಿ ಗಮನಿಸಿತು. ಅದಕ್ಕೆ ಯಾಕೋ ಕಸಿವಿಸಿ ಅನ್ನಿಸಿತು. 'ಥೂ... ಈ ಹಾಳು ಕೊಳಕು ಕರಿಯ ಪ್ರಾಣಿಯೊಂದಿಗೆ ನನ್ನ ಮುದ್ದು ಕಂದ ಸದಾಕಾಲ ಇರುತ್ತಿದ್ದಾನಲ್ಲಾ! ನನ್ನ ಬಳಗದವರು ಏನೆಂದಾರು? ಅಲ್ಲದೆ ಇವನೂ ಅವನ ಬುದ್ಧಿಯನ್ನೇ ಕಲಿತರೆ?' ಎಂದು ಪೇಚಾಡತೊಡಗಿತು.

ಸಂಜೆ ಎಂದಿನಂತೆ ಗಿಳಿರಾಮ ಗೂಡಿಗೆ ಬಂತು. ತಾಯಿಯ ಮುಖ ಮುದುಡಿರುವುದನ್ನು ಕಂಡಿತು. ಸಂದೇಹದಿಂದಲೇ, ಏಕೆಂದು ತಾಯಿಯನ್ನು ಕೇಳಿತು : 'ಯಾಕಮ್ಮಾ? ಈ ಹೊತ್ತು ಅದ್ಯಾಕೋ ಒಂದು ಥರಾ ಸಪ್ಪೆಯಾಗಿ ಇದ್ದೀಯಾ?"

ತಾಯಿಗಿಳಿ ಥಟ್ಟನೆ ಹುಬ್ಬು ಗಂಟಿಡುತ್ತಾ ಹೇಳಿತು : 'ನೀನು ಆ ಕೊಳಕ ಕರಿಯನ ಸಂಗ ಬಿಟ್ಟು ಬಿಡು. ನಾವು ಉತ್ತಮ ಕುಲದವರು, ನಾಗರಿಕರು. ಅದು ನಮಗೆ ಈಡಲ್ಲ. ನಮಗೂ ಅದಕ್ಕೂ ಅಜಗಜಾಂತರ ವ್ಯತ್ಯಾಸ'.

ಗಿಳಿರಾಮ ಒಂದು ಘಳಿಗೆ ತಾಯಿಯ ಮುಖ ನೋಡಿತು. ತಾಯಿ ಹಿಂದೆ ಹೇಳಿದ್ದ ಉಪದೇಶದ ಮಾತುಗಳನ್ನೇ ಮೆಲುಕು ಹಾಕುತ್ತಾ ಕೇಳಿತು : 'ಅಲ್ಲಮ್ಮಾ, ಇದುವರೆಗೂ ನೀನೇ ನನಗೆ "ಯಾರನ್ನೂ ಕೀಳಾಗಿ ಕಾಣಬಾರದು. ಎಲ್ಲರನ್ನೂ ನಮ್ಮ ಅಣ್ಣ–ತಮ್ಮಂದಿರಂತೆಯೇ ಕಾಣಬೇಕು" ಅಂತ ಹೇಳುತ್ತಿದ್ದೆ. ಈಗ ನೀನೇ ನನ್ನ ಸ್ನೇಹಿತನನ್ನ "ಕರಿಯ, ಕೊಳಕ" ಅಂತ ಮೂದಲಿಸುತ್ತಿದ್ದೀಯಲ್ಲಾ! ಅವನು ಕರಿಯನೇ ಇರಬಹುದು. ಕೊಳಕನೂ ಆಗಿರಬಹುದು. ನಮ್ಮ ಹಾಗೇ ಅವನೂ ಸಹ ದೇವರ ಮಕ್ಕಳಲ್ಲಿ ಒಬ್ಬ ತಾನೇ? ನಮ್ಮ ಮನೆಯಲ್ಲಿಯೇ ಅಂತ ತಮ್ಮ ಒಬ್ಬ ಇದ್ದಿದ್ದರೆ, ಅವನನ್ನೂ ಹೀಗೆಯೇ ಕಾಣುತ್ತಿದ್ದೆಯಾ?'

ತಾಯಿಗಿಳಿಗೆ ಬಾಯಿಂದ ಮಾತೇ ಹೊರಬರಲಿಲ್ಲ. ತನ್ನ ಮಗನ ಮಾತು ಈಗ ತನ್ನ ಕಣ್ಣನ್ನೇ ತೆರೆಸಿತು ಎಂದು ಆನಂದಿಸಿತು. ಮಗನ ಸದ್ಬುದ್ಧಿಯನ್ನು ಮನಸಾರೆ ಕೊಂಡಾಡಿತು.

ಪ್ರಶ್ನೋತ್ತರಗಳು

I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.

1. ತಾಯಿಗಿಳಿ ಗಿಳಿರಾಮನಿಗೆ ಏನೇನು ಹೇಳಿ ಕೊಟ್ಟಿತು ?
2. ಗಿಳಿರಾಮನಿಗೆ ಯಾರೊಡನೆ ಸ್ನೇಹ ಬೆಳೆಯಿತು ?
3. ತಾಯಿ ಗಿಳಿ ಏನೆಂದು ಪೇಚಾಡತೊಡಗಿತು ?
4. ಗಿಳಿರಾಮ ತಾಯಿ ಗಿಳಿಯ ಕಣ್ಣನ್ನು ಹೇಗೆ ತೆರೆಸಿತು ?

II. ಕೆಳಗಿನ ಪ್ರಶ್ನೆಗಳಿಗೆ ಮೂರ್ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.

1. ಗಿಳಿರಾಮನಿಗೆ ತಾಯಿ ಹೇಳಿದ ಬುದ್ಧಿವಾದವೇನು?
2. ಮಗನ ವಿವೇಕದ ಮಾತುಗಳು ತಾಯಿಯ ಕಣ್ಣನ್ನು ಹೇಗೆ ತೆರೆಸಿತು ?

III. ಕೆಳಗಿನ ಪ್ರಶ್ನೆಗೆ ವಿವರವಾಗಿ ಉತ್ತರಿಸಿ.

1. 'ಗಿಳಿ ರಾಮ' ಕಥೆಯ ನೀತಿಯನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

ಕಲಿತದ್ದು – ಕಲಿಕೆಯ ಫಲ

1. ಮಕ್ಕಳಲ್ಲಿ ಒಳ್ಳೆಯ ಆಲೋಚನಾ ಗುಣಗಳನ್ನು ಬೆಳೆಸುವುದು.
2. ಮಕ್ಕಳಲ್ಲಿ ಚಿಂತನಾ ಶಕ್ತಿ ಬೆಳೆಸುವುದು.

ಘಟಕ ಎಂಟು

ವಚನಗಳು



ಅರಿಯದ ಗುರು ಅರಿಯದ ಶಿಷ್ಯಂಗೆ ಬೋಧಿಸಿದಡೆ
ಅಂಧಕನ ಕೈಯನಂಧಕ ಹಿಡಿದಡೆ
ಮುಂದನಾರು ಕಾಬರು ಹೇಳಿಲೆ ಮರುಳೆ
ತೊರೆಯಲದ್ದವನ ನೀಸಲರಿಯದವ
ತೆಗೆವ ತೆರನಂತೆ ಎಂದನಂಬಿಗ ಚೌಡಯ್ಯ

– ಅಂಬಿಗರ ಚೌಡಯ್ಯ



ಬಂಧುಗಳು ಆದವರು ಬಂದುಂಡು ಹೋಗುವರು
ಬಂಧನವ ಕಳೆಯಲರಿಯರಾ ಗುರುವಿಗಿಂತ
ಬಂಧುಗಳುಂಟೆ ಸರ್ವಜ್ಞ

– ಸರ್ವಜ್ಞ



ಬೆಟ್ಟಕ್ಕೆ ಚಳಿಯಾದಡೆ
ಏನ ಹೊದಿಸುವರಯ್ಯಾ?
ಬಯಲು ಬತ್ತಲೆಯಾದಡೆ
ಏನನುಡಿಸುವರಯ್ಯ ?
ಭಕ್ತನು ಭವಿಯಾದಡೆ
ಏನನುಪಮಿಸುವರಯ್ಯಾ?

– ಅಲ್ಲಮಪ್ರಭು.



ನುಡಿದರೆ ಮುತ್ತಿನ ಹಾರದಂತಿರಬೇಕು
ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು
ನುಡಿದರೆ ಸ್ಫಟಿಕದ ಸಲಾಕೆಯಂತಿರಬೇಕು
ನುಡಿದರೆ ಲಿಂಗ ಮೆಚ್ಚಿ ಅಹುದಹುದೆನಬೇಕು
ನುಡಿಯೊಳಗಾಗಿ ನಡೆಯದಿದ್ದರೆ
ಕೂಡಲಸಂಗಮದೇವನೆಂತೊಲಿವನಯ್ಯಾ ?

– ಬಸವಣ್ಣ

ತನು ಕರಗದವರಲ್ಲಿ ಪುಷ್ಪವನೊಲ್ಲೆಯಯ್ಯಾ ನೀನು
ಮನ ಕರಗದವರಲ್ಲಿ ಗಂಧಾಕ್ಷತೆಯನೊಲ್ಲೆಯಯ್ಯಾ ನೀನು
ಅರಿವು ಕಣ್ತೆರೆಯದವರಲ್ಲಿ ಆರತಿಯನೊಲ್ಲೆಯಯ್ಯಾ ನೀನು
ಭಾವಶುದ್ಧವಿಲ್ಲದವರಲ್ಲಿ ಧೂಪವನೊಲ್ಲೆಯಯ್ಯಾ ನೀನು
ಪರಿಣಾಮಿಗಳಲ್ಲದವರಲ್ಲಿ ನೈವೇದ್ಯವನೊಲ್ಲೆಯಯ್ಯಾ ನೀನು
ಹೃದಯ ಕಮಲವಿಲ್ಲದವರಲ್ಲಿ ಇರಲೊಲ್ಲೆಯಯ್ಯಾ ನೀನು
ಎನ್ನಲ್ಲಿ ಏನುಂಟೆಂದು ಕರಸ್ಥಳದಲ್ಲಿ ಇಂಬುಗೊಂಡೆ
ಹೇಳಾ ಚೆನ್ನಮಲ್ಲಿಕಾರ್ಜುನಾ!

– ಅಕ್ಕಮಹಾದೇವಿ

ಪದಗಳ ಅರ್ಥ

1. ಗುರು–ಆತ್ಮಜ್ಞಾನಿ, ಒಳಿತನ್ನು ಬೋಧಿಸುವವನು; ಅಂಧ–ಕುರುಡ; ಕಾಬರು–ಕಾಣುವರು; ಮರುಳ–ಹುಚ್ಚ, ತೊರೆ–ನದಿ, ಹೊಳೆ; ಈಸಲರಿಯದವ–ಈಜಲು ತಿಳಿಯದವ; ತೆರ–ರೀತಿ.
2. ಬಂಧು–ನೆಂಟ, ಉಂಡು–ತಿಂದು, ಕಳೆ–ತೊಲಗಿಸು, ಅರಿಯರು–ತಿಳಿಯರು.
3. ಬೆಟ್ಟ–ಪರ್ವತ; ಬತ್ತಲೆ–ನಗ್ನ; ಭವಿ–ಸಂಸಾರಿ, ಉಪಮಿಸು–ಹೋಲಿಸು.
4. ಹಾರ–ಮಾಲೆ; ದೀಪ್ತಿ–ಬೆಳಕು; ಸಲಾಕೆ–ಈಟಿ; ನುಡಿ–ಮಾತು; ಅಹುದು–ಹೌದು; ಲಿಂಗ–ಈಶ್ವರ.
5. ತನು–ದೇಹ; ಮನ–ಮನಸ್ಸು; ಪುಷ್ಪ–ಹೂವು; ಗಂಧ–ಚಂದನ; ಒಲ್ಲೆ–ಬಯಸುವುದಿಲ್ಲ; ಅರಿವು–ಜ್ಞಾನ; ಪರಿಮಳ–ಸುಗಂಧ, ಕರಸ್ಥಳ–ಅಂಗೈ.

ಪದ್ಯದ ಸಾರಾಂಶ

1. ತಿಳುವಳಿಕೆಯಿಲ್ಲದ ಗುರುವು ಅಜ್ಞಾನಿಯಾದ ಶಿಷ್ಯನಿಗೆ ಬೋಧಿಸುವ ವಿದ್ಯೆಯು ಕುರುಡರಿಬ್ಬರು ಒಬ್ಬರ ಕೈಯನ್ನು ಮತ್ತೊಬ್ಬರು ಹಿಡಿದು ಪ್ರಯಾಣ ಮಾಡಿದಂತಾಗುತ್ತದೆಂದು ಚೌಡಯ್ಯನ ಅಭಿಪ್ರಾಯವಾಗಿದೆ.
2. ನೆಂಟರಾದವರು ಮನೆಯಲ್ಲಿ ಚೆನ್ನಾಗಿ ಉಂಡು ಹೋಗುವರೇ ವಿನಃ ನಮ್ಮನ್ನು ಜೀವನಮುಕ್ತಗೊಳಿಸಲಾರರು. ಆದರೆ ಗುರು ನಮ್ಮ ಕತ್ತಲೆಯನ್ನು ದೂರ ಸರಿಸಿ ನಮ್ಮನ್ನು ಸುಜ್ಞಾನದತ್ತ ದಾರಿ ತೋರಿಸುತ್ತಾನೆ. ಆದ್ದರಿಂದಲೇ ಗುರುವೇ ನಿಜವಾದ ಬಂಧು ಎಂದು ತಿಳಿ.



3. ಬೆಟ್ಟಕ್ಕೆ ಚಳಿಯಾದರೆ ನಾವು ಏನನ್ನೂ ಅದಕ್ಕೆ ಹೊದಿಸಲು ಸಾಧ್ಯವಿಲ್ಲ. ಬತ್ತಲೆಯಾಗಿರುವ ಬಯಲಿಗೆ ಏನನ್ನೂ ಉಡಿಸಲಾರೆವು. ಭಕ್ತನು ನಿಜ ಸಂಸಾರದಲ್ಲಿ ಮುಳುಗಿರುವಾಗ ಅವನೆಂದೂ ದೈವ ಸಾಕ್ಷಾತ್ಕಾರ ಪಡೆಯಲಾರನು.
4. ನಮ್ಮ ಮಾತು ಮುತ್ತಿನ ಹಾರದಂತೆಯೂ, ಮಾಣಿಕ್ಯದ ಬೆಳಕಿನಂತೆಯೂ, ಸ್ಫಟಿಕದ ಈಟಿಯಂತೆಯೂ ಇರಬೇಕು. ನಾವು ನುಡಿದಂತೆ ನಡೆಯದಿದ್ದರೆ ಶಿವನು ಎಂದಿಗೂ ಮೆಚ್ಚುವುದಿಲ್ಲ ಎಂಬುದು ಬಸವಣ್ಣನವರ ಅಭಿಪ್ರಾಯ.
5. ದೇಹ ಹಾಗೂ ಮನಸ್ಸು ಕರಗದವರಲ್ಲಿ ಪರಮಾತ್ಮನು ಪುಷ್ಪ ಹಾಗೂ ಗಂಧವನ್ನು ಬಯಸಲಾರನು. ಜ್ಞಾನ ಎಂಬುದು ಅಜ್ಞಾನದಲ್ಲಿ ಮುಳುಗಿ ಭಾವಶುದ್ಧಿ ಸರಿಯಿಲ್ಲದಿದ್ದರೆ ಅಂತಹವರಲ್ಲಿ ಆರತಿ, ನೈವೇದ್ಯವನ್ನು ಬಯಸನು. ಯಾರ ಮನಸ್ಸು ಶುದ್ಧವಿಲ್ಲವೋ ಅಲ್ಲಿ ದೇವರು ನೆಲೆಸಿರಲಾರ. ಆದರೆ ನೀನು ಹೇಗೆ ನನ್ನ ಮನಸ್ಸಿನಲ್ಲಿ ನೆಲೆ ನಿಂತಿರುವೆ ಎಂದು ಅಕ್ಕಮಹಾದೇವಿ ಶಿವನಲ್ಲಿ ಕೇಳುತ್ತಾಳೆ.

ಪ್ರಶ್ನೋತ್ತರಗಳು

I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.

1. ನಿಜವಾದ ಬಂಧು ಯಾರು ?
2. ಯಾರಲ್ಲಿ ಆರತಿಯನ್ನು ಶಿವನು ಒಲ್ಲೆನೆಂದು ಹೇಳುವನು ?
3. ಯಾರು ನಮ್ಮನ್ನು ಮೆಚ್ಚುವುದಿಲ್ಲ? ಮತ್ತು ಏಕೆ ಮೆಚ್ಚುವುದಿಲ್ಲ?

4. ಯಾರ ಬಳಿ ಶಿವನು ಗಂಧಾಕ್ಷತೆಯನ್ನು ಒಪ್ಪುವುದಿಲ್ಲ?
5. ಯಾರ ಹೃದಯ ಕಮಲದಲ್ಲಿ ಪರಶಿವನು ನೆಲೆಸುವುದಿಲ್ಲ ?
6. ಯಾರ ಬಳಿ ಆರತಿಯನ್ನು ಶಿವನು ಒಲ್ಲೆನೆನ್ನುತ್ತಾನೆ?
7. ಬಸವಣ್ಣನವರ ಅಂಕಿತನಾಮ ಯಾವುದು ?

II. ಕೆಳಗಿನ ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ.

1. ಅಜ್ಞಾನಿಯಾದ ಗುರು ಬೋಧಿಸುವ ವಿದ್ಯೆಯನ್ನು ಅಂಬಿಗರ ಚೌಡಯ್ಯ ಯಾವುದಕ್ಕೆ ಹೋಲಿಸುತ್ತಾನೆ ?
2. ಗುರುವಿನ ಬಗ್ಗೆ ಸರ್ವಜ್ಞ ಏನು ಹೇಳುತ್ತಾನೆ?

III. ಕೆಳಗಿನ ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ.

1. ನಿಜವಾದ ಬಂಧುವೇ ಗುರುವೆಂದು ಹೇಳಲು ಕಾರಣವೇನು ?
2. ನಮ್ಮ ನುಡಿ ಹೇಗಿರಬೇಕು ಎಂದು ಬಸವಣ್ಣನವರು ಹೇಳುತ್ತಾರೆ?

ಭಾಷಾಭ್ಯಾಸ

I. ಅ. ಸರಿಯಾದ ಉತ್ತರಗಳನ್ನು ಆರಿಸಿ

1. 'ಅರಿವು' – ಈ ಪದದ ಅರ್ಥ
   (ಅ) ಜ್ಞಾನ (ಆ) ಅಜ್ಞಾನ
   (ಇ) ಸುಜ್ಞಾನ (ಈ) ವಿಜ್ಞಾನ
2. 'ಅಂಧ' – ಈ ಪದದ ಅರ್ಥ
   (ಅ) ಕಿವುಡ (ಆ) ಕುರುಡ
   (ಇ) ಮೂಗ (ಈ) ಕುಂಟ
3. ಕೂಡಲಸಂಗಮದೇವ ಎಂಬುದು ಯಾರ ವಚನಗಳ ಅಂಕಿತ ?
   (ಅ) ಸರ್ವಜ್ಞ (ಆ) ಬಸವಣ್ಣ
   (ಇ) ಚೆನ್ನಬಸವಣ್ಣ (ಈ) ಅಕ್ಕಮಹಾದೇವಿ
4. 'ಕರಗದವರಲ್ಲಿ' ಈ ಪದವನ್ನು ಬಿಡಿಸಿ ಬರೆದಾಗ _____
   ಕರಗದ+ಅವರಲ್ಲಿ ಕರಗದಾ+ಅವರಲ್ಲಿ
   ಕರಗದ+ವರಲ್ಲಿ ಕರಗದವರು+ಅಲ್ಲಿ
5. 'ಶುದ್ಧ' – ಈ ಪದದ ವಿರುದ್ಧ ಪದ
   (1) ಬದ್ಧ (2) ಪ್ರಬುದ್ಧ
   (3) ಅಶುದ್ಧ (4) ಅಪದ್ಧ

ಆ. ಕೆಳಗಿನ ಪದಗಳನ್ನು ಬಳಸಿ ಸ್ವಂತ ವಾಕ್ಯಗಳನ್ನು ರಚಿಸಿ.

ಹೃದಯ ಕಮಲ, ಆರತಿ, ನೈವೇದ್ಯ, ಮುತ್ತಿನಹಾರ

ಇ. ಕೆಳಗಿನ ಪದಗಳ ವಿರುದ್ಧ ಪದಗಳನ್ನು ಬರೆಯಿರಿ.

ಮೆಚ್ಚು, ಅರಿವು, ಅಹುದು, ಹಿಡಿ

ಈ. ಕೆಳಗಿನ ಪದಗಳ ಅರ್ಥ ತಿಳಿಸಿ.

ಭಕ್ತ, ಭವಿ, ಸ್ಫಟಿಕ, ಅರಿವು.

II. ಕೆಳಗಿನ ಅಕ್ಷರವೃಂದದಲ್ಲಿ ಹತ್ತು ಜನ ವಚನಕಾರರು ಅಡಗಿದ್ದಾರೆ. ನಿಮಗೆ ಸಾಧ್ಯವಾದಷ್ಟು ಹೆಸರನ್ನು ಗುರುತಿಸಿ ಬರೆಯಿರಿ.

ಬ	ಸಿ	ದ್ದ	ಯ್ಯ	ಮಾ	ಕ	ಕ್ಕ	ಯ್ಯ
ಅ	ಸ	ಹಾ	ಪು	ದ	ಚಿ	ನ್ನ	ಯ್ಯ
ಕ್ಕ	ವ	ಣ್ಣ	ರಾ	ಣಿ	ಕ	ಸಿ	ಜ
ಮ	ಹಾ	ಮ	ಡಿ	ವಾ	ಳ	ದ್ಧ	ರ
ದಾ	ದೇ	ವಿ	ಪ್ರ	ಭು	ಮಾ	ರಾ	ಮ
ಸಿ	ಅ	ಲ್ಲ	ಮ	ಕ	ಚ	ಯ್ಯ	ಕ
ಮ	ಯ್ಯ	ಚ	ನ್ನ	ಬ	ಸ	ವ	ಣ್ಣ

ತಿಳಿದುಕೊಳ್ಳಿ

ಜಾನಪದ ಸಾಹಿತ್ಯ : ಒಗಟುಗಳು

1. ನೀರಲ್ಲೇ ಹುಟ್ಟೋದು ನೀರಲ್ಲೇ ಬೆಳೆಯೋದು ನೀರು ತಾಕಿದರೆ ಮಟಮಾಯ । ಕನ್ನಡದ ಬೆಡಗಿನ ಜಾಣೆ ತಿಳಿದ್ಹೇಳೆ ॥
2. ಬದಿನಲ್ಲಿ ಹುಟ್ಟೋದು ಬದಿನಲ್ಲಿ ಬೆಳೆಯೋದು ಹೋಗೋರ ಮುಂಜೆರಗ ಹಿಡಿಯೋದು । ಎಲೆ ಬಾಲೆ ಬಾರೆ ಇದರರ್ಥ ಒಡೆದ್ಹೇಳೆ ॥
3. ಕೆಸರಲ್ಲಿ ಹುಟ್ಟೋದು ಕೆಸರಲ್ಲಿ ಬೆಳೆಯೋದು ಅದು ಒಂದು ಗಿಡದ ಪರಿವಾರ । ಎಲೆ ಬಾಲೆ ಬಾರೆ ನಮ್ಮರ್ಥ ಒಡೆದ್ಹೇಳೆ ॥
4. ಹೊಲದಲ್ಲಿ ಹುಟ್ಟೋದು ಹೊಲದಲ್ಲಿ ಬೆಳೆಯೋದು ಉಳುವಾನ ಕಂಡು ನಗುವುದು । ಎಲೆ ಬಾಲೆ ಬಾರೆ ನಮ್ಮರ್ಥ ಒಡೆದ್ಹೇಳೆ ॥

(ಉತ್ತರಗಳು : 1.ಉಪ್ಪು 2.ಉತ್ತರಾಣಿಗಿಡ 3.ತಾವರೆಹೂ 4.ಗರಿಕೆಹುಲ್ಲು)

ಘಟಕ ಎಂಟು

ವಿಭಕ್ತಿ ಪ್ರತ್ಯಯಗಳು, ತತ್ಸಮ–ತದ್ಭವಗಳು

ವಿಭಕ್ತಿ ಪ್ರತ್ಯಯಗಳು

ಸ್ವತಂತ್ರವಾಗಿ ಅರ್ಥವಿಲ್ಲದೆ, ನಾಮ ಪ್ರಕೃತಿಗಳ ಮುಂದೆ ಸೇರಿ ಬೇರೆ ಬೇರೆ ಅರ್ಥವನ್ನುಂಟು ಮಾಡುವ ಉ, ಅನ್ನು, ಇಂದ, ಗೆ ಮುಂತಾದ ಪ್ರತ್ಯಯಗಳಿಗೆ ವಿಭಕ್ತಿ ಪ್ರತ್ಯಯಗಳೆನ್ನುವರು. ಕ್ರಿಯಾಪದಗಳೊಂದಿಗೆ ನಾಮಪದಗಳ ಸಂಬಂಧವನ್ನು ತಿಳಿಸುವ ಕರ್ತೃ, ಕರ್ಮ, ಕರಣ, ಸಂಪ್ರದಾನ, ಅಪಾದಾನ, ಸಂಬಂಧ ಮತ್ತು ಅಧಿಕರಣಗಳು ಕಾರಕಾರ್ಥಗಳೆನಿಸುತ್ತವೆ. ಕಾರಕಾರ್ಥಗಳನ್ನು ವಿಭಜಿಸಿ ಹೇಳುವ ಪ್ರತ್ಯಯಗಳೇ ವಿಭಕ್ತಿ ಪ್ರತ್ಯಯಗಳು.

ವಿಭಕ್ತಿಗಳು	ವಿಭಕ್ತಿ ಪ್ರತ್ಯಯಗಳು	ಕಾರಕಾರ್ಥ	ಏಕವಚನ	ಬಹುವಚನ
ಪ್ರಥಮಾ	ಉ	ಕರ್ತೃ	ಹುಡುಗನು	ಹುಡುಗರು
ದ್ವಿತೀಯಾ	ಅನ್ನು	ಕರ್ಮ	ಹುಡುಗನನ್ನು	ಹುಡುಗರನ್ನು
ತೃತೀಯಾ	ಇಂದ	ಕರಣ	ಹುಡುಗನಿಂದ	ಹುಡುಗರಿಂದ
ಚತುರ್ಥಿ	ಗೆ, ಇಗೆ, ಅಕ್ಕೆ	ಸಂಪ್ರದಾನ	ಹುಡುಗನಿಗೆ	ಹುಡುಗರಿಗೆ
ಪಂಚಮೀ	ಇಂದ, ದೆಸೆಯಿಂದ	ಅಪಾದಾನ	ಹುಡುಗನಿಂದ	ಹುಡುಗರಿಂದ
ಷಷ್ಠೀ	ಅ	ಸಂಬಂಧ	ಹುಡುಗನ	ಹುಡುಗರ
ಸಪ್ತಮೀ	ಅಲ್ಲಿ, ಒಳಗೆ	ಅಧಿಕರಣ	ಹುಡುಗನಲ್ಲಿ	ಹುಡುಗರಲ್ಲಿ

(ಸೂಚನೆ : ತೃತೀಯಾ ವಿಭಕ್ತಿ ಪ್ರತ್ಯಯವೇ ಪಂಚಮೀ ವಿಭಕ್ತಿಯ ಕೆಲಸವನ್ನೂ ಮಾಡುವುದರಿಂದ ತೃತೀಯಾ ವಿಭಕ್ತಿಯ 'ಇಂದ'ವನ್ನೇ ಪಂಚಮಿಗೂ ಉಪಯೋಗಿಸಲಾಗುತ್ತದೆ)

ತತ್ಸಮ–ತದ್ಭವಗಳು

ತತ್ಸಮ :

ತತ್ಸಮ ಎಂದರೆ ಸಂಸ್ಕೃತ ಎಂದರ್ಥ. ಸಂಸ್ಕೃತ ಭಾಷೆಯ ಶಬ್ದವನ್ನು ಅದು ಇರುವಂತೆಯೇ ಅಥವಾ ಕಡೆಯಲ್ಲಿ ಸ್ವಲ್ಪ ಬದಲಾಯಿಸಿ ಕನ್ನಡದಲ್ಲಿ ಬಳಸಿದರೆ ಅಂತಹ ಪದಗಳನ್ನು ತತ್ಸಮ ಎಂದು ಕರೆಯುತ್ತಾರೆ.

ಉದಾ : ಸೀತೆ, ಗ್ರಹ, ಧರ್ಮ, ರಾಜ, ಮಾತೃ, ಕರ್ತೃ ಇತ್ಯಾದಿ.

ತದ್ಭವ :

ಕೆಲವು ಸಂಸ್ಕೃತ ಪದಗಳು ರೂಪ ವ್ಯತ್ಯಾಸ ಹೊಂದಿ ಕನ್ನಡದಲ್ಲಿ ಬಳಕೆಯಾಗುತ್ತವೆ. ಇವುಗಳಿಗೆ ತದ್ಭವಗಳೆಂದು ಕರೆಯುತ್ತಾರೆ.

ಉದಾ : ಜಾತ್ರೆ, ಜೋಗಿ, ಆಸೆ, ದಡ, ಜಾವ ಇತ್ಯಾದಿ.

ತತ್ಸಮ	ತದ್ಭವ
ಅಕ್ಷರ	ಅಕ್ಕರ
ಅಗ್ನಿ	ಅಗ್ಗಿ
ಆಶಾ	ಆಸೆ
ಇಂದ್ರ	ಇಂದಿರ
ಈಶ	ಈಸ
ಕೋಗಿಲೆ	ಕೋಕಿಲ
ಕುಮಾರ	ಕುವರ
ಚಂದ್ರ	ಚಂದಿರ
ಯಾತ್ರಾ	ಜಾತ್ರಾ
ಯೋಗಿ	ಜೋಗಿ

ಘಟಕ ಒಂಬತ್ತು

ಜೀವ ಕಾರುಣ್ಯ



ಕಲಿಕಾ ಉದ್ದೇಶಗಳು

- ಜೀವಿಗಳಿಗೆ ಜೀವರಕ್ಷಣೆ ನೀಡುವುದು.
- ಪರರಿಗೆ ಹಿಂಸೆ ಕೊಡದೆ ಇರುವುದು.
- ದಯಾ ಗುಣವನ್ನು ಬೆಳೆಸಿಕೊಳ್ಳುವುದು.
- ಅಂಗದಾನದ ಮಹತ್ವವನ್ನು ತಿಳಿಯುವುದು.
- ಕಾಲಗಳು (ವರ್ತಮಾನ, ಭೂತ, ಭವಿಷ್ಯತ್ ಕಾಲಗಳನ್ನು ತಿಳಿಯುವರು).

ಘಟಕ
ಒಂಬತ್ತು

ಜೀವ ಕಾರುಣ್ಯ

ಕಾವ್ಯ ಕಣಜ	:	ಬುದ್ಧ
ಗದ್ಯ ವಿಹಾರ	:	ಮಾನವೀಯತೆ
ಉಪಪಠ್ಯ	:	ಅಂಗದಾನದ ಮಹತ್ವ
ವ್ಯಾಕರಣ	:	ಕಾಲಗಳು, ಕಾಲ ಸೂಚಕ ಪ್ರತ್ಯಯಗಳು





ಘಟಕ ಒಂಬತ್ತು

ಬುದ್ಧ

– ಅಂಬಿಕಾತನಯದತ್ತ



ಭಾರತದ ಇತಿಹಾಸದಲ್ಲಿ ಬುದ್ಧ ಬಹು ದೊಡ್ಡ ವ್ಯಕ್ತಿ. ಕೌಟುಂಬಿಕ ಸುಖ ಹಾಗೂ ರಾಜ್ಯಸುಖಗಳ ಎಲ್ಲೆಯನ್ನು ಮೀರಿ, ಆತ್ಮಸುಖದ ಶೋಧದಲ್ಲಿ ತೊಡಗಿದವನು. ಆ ದಾರಿಯಲ್ಲಿ ಎದುರಾದ ಎಲ್ಲಾ ತೊಡಕು–ತೊಂದರೆಗಳನ್ನೂ ದಾಟಿ ಸಮಾಜೋದ್ಧಾರದ ದಾರಿಯನ್ನು ಕಂಡುಕೊಂಡವನು. ಹೀಗಾಗಿ ಅವನು ಇಂದೂ ಪ್ರಸ್ತುತನಾಗುತ್ತಾನೆ.

ಬುದ್ಧ... ಬುದ್ಧ...
ಜಗವೆಲ್ಲ ಮಲಗಿರಲು ಇವನೊಬ್ಬನೆದ್ದ
ಮಡದಿ–ಮಗು ಮನೆ–ಮಾರು ರಾಜ್ಯ–ಗೀಜ್ಯ
ಹೊತ್ತಿರುವ ಉರಿಯಲ್ಲಿ ಆಯಿತಾಜ್ಯ
ಹಿಂದೆ ಬಿದ್ದವು ಎಲ್ಲೊ ಕುದುರೆ ಕಾಲಾಳು
ಬಿಚ್ಚಿ ಉದುರಿತು ಎಲ್ಲೊ ಮನದ ಬಾಳು
ಹೊರಟ, ಹೊರಟೇ ಹೊರಟ... ಹೊರಟನೆತ್ತೋ...
ಸಾಹಸಿಯ ಗೊತ್ತು ಗುರಿ ಅವಗು ಗೊತ್ತೋ!

ಕಾಮ–ಕ್ರೋಧವ ದಾಟಿ, ಮದ–ಮತ್ಸರವ ತುಳಿದು
ಮೋಹ ಲೋಭವ ಮೆಟ್ಟಿ ಅಡಿಕಿತ್ತಿ ಇಟ್ಟ,
ಇದೊ ತಗ್ಗು, ಅದೊ ಗುಡ್ಡ, ಅಗೊ ಮಲೆಯ ಬೆಟ್ಟ
ನೆಲ ತಳಗೆ ಬಿಟ್ಟ.

ಏರಿದೇರಿದನೇರಿ ಗಾಳಿಗುದುರೆ ಸವಾರಿ
ಚಂದ್ರ ಕಿರಣವ ಮೀರಿ ಸೂರ್ಯ ಸೇರಿ
ಬೆಳಕ್ನ ಹಿಂದೊಗೆದು ತಮದ ಬಸಿರನೆ ಬಗೆದು
ಅಸ್ಪರ್ಶ ಅವಕಾಶದಲ್ಲಿ ಇದ್ದ.
ಬುದ್ಧ... ಬುದ್ಧ... ಬುದ್ಧ...
ಶಬ್ದ–ನಾದ ಧ್ವನಿಯ ಸದ್ದ ಮೀರಿದ್ದ.
ಇಲ್ಲ ಎಂಬುವ ಕೊನೆಗೆ ಆತ್ಮಶುದ್ಧ
ಇದ್ದರೇನಿರದಿದ್ದರೇನೆನಲು ಗೆದ್ದ.
ಅಲ್ಲಿಂದ ಇಲ್ಲಿವರೆ ಹೊರಳಿ ನೋಡಿ
ಇದ್ದುದಿದ್ದಂತಿತ್ತು ಜನನ–ಮರಣದ ಜೋಡಿ
ಗೆದ್ದುದೇನೆಂದೆನುತ ಮರಳಿ ಜಿಗಿದ
ಭೂತಜಾತದ ಎಳೆಯ ಸೀಳಿ ಸಿಗಿದ
ಅದೇ ತನ್ನ ಮನೆಯೆಂದು ಸಿದ್ಧ ಬಗೆದ.
ಬುದ್ಧನೆಂಬುವ ಒಬ್ಬ ಎಂದೊ ಇದ್ದ
ಎನುವಂತೆ ಇಂದಿಗೂ ಇಲ್ಲೆ ಇಲ್ಲ
ಬುದ್ಧ ಹುಟ್ಟಿದ ಮೇಲೆ ಹಳೆ ಜಗವು ಸತ್ತು
ಇದ್ದು ಇಲ್ಲದ ಹಾಗೆ, ಹಾಗೆ ಇತ್ತು.
ಬುದ್ಧ ಸತ್ತನು ಎಂದು ಯಾರೆಂದರೂ
ಬುದ್ಧನ ಜಯಂತಿಗಿದೆ ಜಯವೆಂದಿಗೂ...
ಬುದ್ಧನ ಸಮಾಧಿಯದು ಮಾನವನ ಹೃದಯ
ಅದುವೆ ಕಾಯುತ್ತಲಿದೆ ಕಲ್ಕಿ ಉದಯ.



ದತ್ತಾತ್ರೇಯ ರಾಮಚಂದ್ರ ಬೇಂದ್ರೆ.

ಕವಿ –ಕಾವ್ಯ ಪರಿಚಯ

ನವೋದಯ ಕಾವ್ಯ ಪಂಥವನ್ನು ರೂಢಿಸಿ, 'ಅಂಬಿಕಾತನಯದತ್ತ' ಎಂಬ ಕಾವ್ಯನಾಮದೊಂದಿಗೆ ಪ್ರಸಿದ್ಧರಾದವರು ದತ್ತಾತ್ರೇಯ ರಾಮಚಂದ್ರ ಬೇಂದ್ರೆ. 'ಗೆಳೆಯರ ಬಳಗ'ದ ಮೂಲಕದ ಉತ್ತರ ಕರ್ನಾಟಕದಲ್ಲಿ ಸಾಹಿತ್ಯಕ ಸಾಂಸ್ಕೃತಿಕ ವಾತಾವರಣವನ್ನು ಹುಟ್ಟು ಹಾಕಿದರು. ಬ್ರಿಟೀಷರ ವಿರುದ್ಧದ ಹೋರಾಟದಲ್ಲಿ ಸಕ್ರಿಯವಾಗಿ ಪಾಲ್ಗೊಂಡಿದ್ದರು. ರಾಷ್ಟ್ರೀಯ ಶಾಲೆಗಳನ್ನು ಪ್ರಾರಂಭಿಸಿ, ಶಿಕ್ಷಕ ವೃತ್ತಿಯನ್ನು ಕೈಗೊಂಡು ದುಡಿದರು. ಹೊಸಗನ್ನಡ ಕಾವ್ಯಕ್ಕೆ ಜಾನಪದದ ಸೊಗಡನ್ನು ನೀಡಿದ ಶ್ರೀಯುತರು ಬಡತನ, ನಿರುದ್ಯೋಗ ಮುಂತಾದ ಸಮಸ್ಯೆಗಳನ್ನು ತಮ್ಮ ಕವಿತೆಗಳಲ್ಲಿ ಚಿತ್ರಿಸಿದ್ದಾರೆ. ತಮ್ಮ ಅಪಾರ ಕಾವ್ಯ ಪ್ರತಿಭೆಯಿಂದ, 'ಕನ್ನಡದ ವರಕವಿ' ಎನಿಸಿಕೊಂಡಿದ್ದಾರೆ. ತಮ್ಮ ಮಾತಿನ ಮೋಡಿಯಿಂದ ಕನ್ನಡದ 'ಗಾರುಡಿಗ ಕವಿ' ಎಂದು ಕರೆಸಿಕೊಂಡಿದ್ದಾರೆ.

ಗಂಗಾವತರಣ, ನಾದಲೀಲೆ, ಸಖೀಗೀತ, ಗರಿ, ಅರಳುಮರಳು(ಕವನ ಸಂಕಲನಗಳು); ಹುಚ್ಚಾಟಗಳು, ಹೊಸ ಸಂಸಾರ(ನಾಟಕಗಳು); ಸಾಹಿತ್ಯದ ವಿರಾಟ್ ಸ್ವರೂಪ ಮೊದಲಾದ ವಿಮರ್ಶಾ ಕೃತಿಗಳು ಇವರು ಕನ್ನಡಕ್ಕಿತ್ತ ಅಮೂಲ್ಯ ಕೊಡುಗೆಗಳಾಗಿವೆ. ಇವರ 'ನಾಕುತಂತಿ' ಕೃತಿಯು ಭಾರತೀಯ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಕವನ ಸಂಕಲನವಾಗಿದೆ.

ಪದಗಳ ಅರ್ಥ

ಸಾಹಸಿ–ವೀರ, ಪರಾಕ್ರಮಿ, ಶೂರ; ಕ್ರೋಧ–ಕೋಪ, ಸಿಟ್ಟು; ಮತ್ಸರ–ದ್ವೇಷ; ಲೋಭ–ಅತ್ಯಾಸೆ, ಅತಿಯಾದ ಆಸೆ; ತಮ–ಕತ್ತಲೆ, ಇರುಳು; ಬಸಿರು–ಹೊಟ್ಟೆ; ಜಾತ–ಮಗ; ಸಿದ್ಧ–ಸಾಧನೆಯನ್ನು ಮಾಡಿ ಸಿದ್ಧಿಸಿಕೊಂಡವನು, ಸತ್ಯವಂತ.

ಪ್ರಶ್ನೋತ್ತರಗಳು

I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.

1. ಜಗವು ಮಲಗಿರಲು ಎದ್ದವನು ಯಾರು ?
2. ಬುದ್ಧ ಹೋಗುವಾಗ ಯಾವುವು ಹಿಂದೆ ಬಿದ್ದವು ?
3. ಬುದ್ಧ ಯಾವುದನ್ನು ಮೆಟ್ಟಿ ಹೊರಟ ?
4. ಬುದ್ಧ ಯಾವುದನ್ನು ಏರಿ ಎಲ್ಲಿಗೆ ಹೋದ ?
5. ಬುದ್ಧ ಏನನ್ನು ಗೆದ್ದ ?
6. ಬುದ್ಧ ಯಾವುದನ್ನು ಮನೆಯೆಂದು ನೆನೆಸಿದ ?
7. ಬುದ್ಧ ಹುಟ್ಟಿದ ಮೇಲೆ ಯಾವುದು ಸತ್ತಿತು?
8. ಮಾನವರ ಹೃದಯ ಯಾವುದನ್ನು ಕಾಯುತ್ತಿದೆ ?

II. ಕೆಳಗಿನ ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ.

1. ಬುದ್ಧ ಯಾವುದನ್ನೆಲ್ಲ ಬಿಟ್ಟು ಹೊರಟ ?
2. ಬುದ್ಧ ಯಾವುದನ್ನೆಲ್ಲ ಮೀರಿ ನಿಂತು, ಏನೇನನ್ನು ಗೆದ್ದ ?
3. ಯಾವುದಕ್ಕೆ ಜಯವಿದೆ ಎಂದು ಕವಿ ಹೇಳುತ್ತಾರೆ ?

III. ಕೆಳಗಿನ ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ.

1. ಬುದ್ಧ ಆತ್ಮಸುಖದ ದಾರಿಯನ್ನು ಕಂಡು ಕೊಂಡದ್ದು ಹೇಗೆ ? ವಿವರಿಸಿ.

ಭಾಷಾಭ್ಯಾಸ

I. ಸರಿಯಾದ ಉತ್ತರಗಳನ್ನು ಆರಿಸಿ ಬರೆಯಿರಿ.

1. ಜಗವೆಲ್ಲ _____ ಇವನೊಬ್ಬ ಎದ್ದ.
   (ಅ) ಮಲಗಿರಲು (ಆ) ಎದ್ದಿರಲು
   (ಇ) ಕತ್ತಲಾಗಿರಲು (ಈ) ಬೆಳಕಾಗಿರಲು
2. ಹಿಂದೆ ಬಿದ್ದವು _____ ಕಾಲಾಳು.
   (ಅ) ಆನೆ (ಆ) ಕುದುರೆ
   (ಇ) ಕುರಿ (ಈ) ದನ
3. ಚಂದ್ರಕಿರಣವ ಮೀರಿ _____ ಸೇರಿದ ಬೆಳಕನ್ನು ಹಿಂದೊಗೆದ
   (ಅ) ಆಕಾಶ (ಆ) ಚಂದ್ರ
   (ಇ) ಸೂರ್ಯ (ಈ) ಮೋಡ

II. ಅ. ಕೆಳಕಂಡ ಪದಗಳನ್ನು ಬಿಡಿಸಿ ಬರೆದು ಸಂಧಿಯ ಹೆಸರನ್ನು ತಿಳಿಸಿ.

ಇವನೊಬ್ಬ, ಏರಿದೇರಿದ, ಹಿಂದೊಗೆದು, ಗಾಳಿಗುದುರೆ, ಮನೆಯೊಂದು.

ಆ. ಕೆಳಕಂಡ ಪದಗಳನ್ನು ಉಪಯೋಗಿಸಿ ಸ್ವಂತ ವಾಕ್ಯಗಳನ್ನು ರಚಿಸಿ.

ಜಗವೆಲ್ಲ, ಸವಾರಿ, ಜಿಗಿದು, ನಾದ, ಅವಕಾಶ.

ಇ. ಪಾಠದಲ್ಲಿ ಕಂಡು ಬರುವ ಪ್ರಾಸ ಪದಗಳನ್ನು ಪಟ್ಟಿ ಮಾಡಿ.

ಉದಾಹರಣೆ : ಕಾಲಾಳು–ಬಾಳು.

೧. ಇಟ್ಟ –
೨. ಸವಾರಿ –
೩. ನೋಡಿ –
೪. ಹೃದಯ –

ಚಟುವಟಿಕೆ

1. ನೀವು ಹೆಚ್ಚಾಗಿ ಪ್ರೀತಿಸುವ ಗಿಡಗಳು, ಹೂಗಳು, ವ್ಯಕ್ತಿಗಳು, ಪ್ರಾಣಿಗಳ ಹೆಸರುಗಳನ್ನು ಬರೆಯಿರಿ.
2. 'ನಿಮ್ಮಂತೆಯೇ ಇತರರನ್ನೂ ಪ್ರೀತಿಸಿ' – ಎಂಬ ಹೇಳಿಕೆಯನ್ನು ಕುರಿತು ಚರ್ಚಿಸಿ.



ಘಟಕ ಒಂಬತ್ತು

ಮಾನವೀಯತೆ



ಇಲ್ಲದವರಿಗೆ ಕೊಟ್ಟು ಸಹಾಯ ಮಾಡಿ ಸಂತೋಷ ಪಡುವುದೇ ಜೀವನ. ಹಸಿವು ಎಂದು ಬಂದವರಿಗೆ ಹೊಟ್ಟೆ ತುಂಬಾ ಆಹಾರ ನೀಡಬೇಕು. ನಮಗೆ ಕೇಡು ಬಗೆದವರಿಗೂ ಒಳ್ಳೆಯದನ್ನೇ ಮಾಡಬೇಕು. ಆಶ್ರಯ ಇಲ್ಲದವರನ್ನು ಪ್ರೀತಿಯಿಂದ ನೋಡಿಕೊಳ್ಳಬೇಕು. ಬೇರೆಯವರ ದುಃಖವನ್ನು ನಮ್ಮ ದುಃಖವೆಂದು ನೆನೆಸಿಕೊಳ್ಳಬೇಕು. ಈ ಗುಣಗಳನ್ನು ಬೆಳೆಸಿಕೊಂಡು, ಬಳಸಿಕೊಂಡವರು ಜೀವನದಲ್ಲಿ ಅಭಿವೃದ್ಧಿ ಹೊಂದುತ್ತಾರೆ. ಈ ರೀತಿ ಜೀವಿಸಿದವರ ಜೀವನದಲ್ಲಿ ನಡೆದ ಕೆಲವು ಘಟನೆಗಳನ್ನು ಈ ಪಾಠದ ಮೂಲಕ ತಿಳಿಯೋಣ.

ವಿಶ್ವದಲ್ಲಿ ಯಾವುದೇ ನದಿಯು ತನ್ನ ದಾಹಕ್ಕಾಗಿ ಹರಿಯುವುದಿಲ್ಲ. ಯಾವುದೇ ಭೂಮಿ ತನ್ನ ಹಸಿವಿಗಾಗಿ ಬೆಳೆಯುವುದಿಲ್ಲ. ಯಾವುದೇ ಮರವೂ ತನಗಾಗಿ ಫಲ ಬಿಡುವುದಿಲ್ಲ. ಇದೇ ರೀತಿ ಮಾನವನೂ ಸಹ ತನಗಾಗಿ ಜೀವಿಸದೆ ಬೇರೆಯವರಿಗಾಗಿ ಜೀವಿಸಬೇಕು. ಆ ರೀತಿ ಜೀವಿಸಲು ಕರುಣೆ, ಸಹನೆ, ದಯೆ, ಕೃತಜ್ಞತೆ, ತೆಗಳಿಕೆಯಿಲ್ಲದಿರುವಿಕೆ ಮುಂತಾದ ಗುಣಗಳನ್ನು ಹೊಂದಿರಬೇಕು. ಎಲ್ಲಾ ಜೀವಿಗಳೊಡನೆಯೂ ಪ್ರೀತಿಯಿಂದಿರಬೇಕು. ಅದೇ ಮಾನವೀಯತೆ. ಮಾನವೀಯತೆಯಿಂದ ಜೀವಿಸುವವರಿಂದ ಮಾತ್ರ ಈ ವಿಶ್ವ ನಿಂತಿದೆ.

ತನಗಾಗಿ ಬಾಳದೆ ಬೇರೆಯವರಿಗಾಗಿ ಬಾಳುವವನೇ ನಿಜವಾದ ಮಾನವ ಎಂದು 'ಪುರನಾನೂರು' ಗ್ರಂಥವು ತಿಳಿಸುತ್ತದೆ.

ವಳ್ಳಲಾರ್

ವಳ್ಳಲಾರ್ ಅವರು 1823ರಲ್ಲಿ ಚಿದಂಬರಂ ಹತ್ತಿರವಿರುವ ಚೆನ್ನಮರುದೂರಿನಲ್ಲಿ ಜನಿಸಿದರು.

ವಳ್ಳಲಾರ್ ಅವರ ಬಾಲ್ಯದಲ್ಲಿ ನಡೆದ ಘಟನೆಯನ್ನು ಎಲ್ಲರೂ ಹೇಳುತ್ತಾರೆ. ಒಂದು ದಿನ ವಳ್ಳಲಾರ್ ಅವರು ತಮ್ಮ ಬಾಲ್ಯ ಜೀವನದಲ್ಲಿ ನಡೆದುಕೊಂಡು ತುಂಬಾ ದೂರ ಹೋದರು.



ಆದುದರಿಂದ ಅವರಿಗೆ ಆಯಾಸವಾಯಿತು. ಆದುದರಿಂದ ವಿಶ್ರಾಂತಿ ಪಡೆಯಲೆಂದು ಬಳಿಯಲ್ಲಿದ್ದ ಒಂದು ಛತ್ರದ ಜಗುಲಿಯಲ್ಲಿ ಮಲಗಿದರು. ಸುಮಾರು ಸಮಯ ಕಳೆದ ನಂತರ ಒಬ್ಬ ವ್ಯಕ್ತಿ ಬಂದನು. ಮಲಗಿದ್ದ ವಳ್ಳಲಾರರ ಕಿವಿಯಲ್ಲಿದ್ದ ಕುಂಡಲವನ್ನು ನೋಡಿ ಅದನ್ನು ಕದಿಯಲು ತೀರ್ಮಾನಿಸಿ ಅದನ್ನು ಜೋಪಾನವಾಗಿ ಬಿಚ್ಚಲು ಪ್ರಾರಂಭಿಸಿದನು. ವಳ್ಳಾಲಾರ್ ಅವರಿಗೆ ಎಚ್ಚರವಾಯಿತು. ಅದರೂ ಕಣ್ಣು ಬಿಡದೆ ಸುಮ್ಮನೆ ಮಲಗಿಕೊಂಡಿದ್ದರು. ಆ ವ್ಯಕ್ತಿ ಒಂದು ಕಿವಿಯ ಕುಂಡಲವನ್ನು ಬಿಚ್ಚಿಕೊಂಡರು.

ಆಗ ವಳ್ಳಲಾರ್ ಅವರು ಮತ್ತೊಂದು ಕಿವಿಯಲ್ಲಿರುವ ಕುಂಡಲವನ್ನೂ ಬಿಚ್ಚಿಕೊಳ್ಳಲಿ ಎಂದು ಮಗ್ಗುಲು ಬದಲಾಯಿಸಿ ಮಲಗಿದರು. ಆಗ ಆ ವ್ಯಕ್ತಿಯು ಅವರ ಮತ್ತೊಂದು ಕಿವಿಯಲ್ಲಿದ್ದ ಕುಂಡಲವನ್ನೂ ಬಿಚ್ಚಿಕೊಂಡು ತೆಗೆದುಕೊಂಡು ಹೊರಡಬೇಕೆನ್ನುವಾಗ, ವಳ್ಳಲಾರ್ ಅವರು ಮೆಲು ಧ್ವನಿಯಲ್ಲಿ, 'ಅಯ್ಯಾ! ಇವು ಚಿನ್ನದ ಕುಂಡಲಗಳು. ಇವುಗಳನ್ನು ಕಡಿಮೆ ಬೆಲೆಗೆ ಮಾರಬೇಡ. ಹಾಗೂ ಒಂದನ್ನು ಮಾರಿದರೆ ನೀನು ಕಳ್ಳ ಎಂದು ತಿಳಿಯುತ್ತಾರೆ. ಅದಕ್ಕಾಗಿ ನನ್ನ ಎರಡೂ ಕುಂಡಲಗಳನ್ನು ತೆಗೆದುಕೊಳ್ಳಲಿ ಎಂದು ನಾನು ಮಗ್ಗಲು ಬದಲಾಯಿಸಿ ಮಲಗಿಕೊಂಡೆ' ಎಂದರು. ಈ ಮಾತುಗಳನ್ನು ಕೇಳಿದ ಅವನು ನಾಚಿಕೆಯಿಂದ ತಲೆ ತಗ್ಗಿಸಿದನು. ಹೀಗೆ ತಮ್ಮ ವಸ್ತುವನ್ನು ಕದ್ದವನ ಮೇಲೂ ಪ್ರೀತಿ ತೋರಿಸಿದವರು ವಳ್ಳಲಾರ್ ಅವರು.

ವಳ್ಳಲಾರ್ ಅವರು ಹಸಿವಿನಿಂದಿರುವವರನ್ನು ನೋಡಿ ಬಹಳ ಮರುಗಿದರು. ಬಡವರ ಹಸಿವನ್ನು ನೀಗಿಸುವುದಕ್ಕಾಗಿ ವಡಲೂರಿನಲ್ಲಿ 'ಸತ್ಯ ಧರ್ಮ ಶಾಲೆ'ಯೊಂದನ್ನು ಪ್ರಾರಂಭಿಸಿದರು. ಹಸಿದವರಿಗೆ ಇಲ್ಲಿ ಆಹಾರ ನೀಡಲು ತೀರ್ಮಾನಿಸಿದರು. ಇಲ್ಲಿ ವರ್ಷ ಪೂರ್ತಿ ಜಾತಿ ಮತ ಭೇದವಿಲ್ಲದೆ ಎಲ್ಲರಿಗೂ, ಇಂದಿಗೂ ಸಹ ಆಹಾರವನ್ನು ಉಣಬಡಿಸಲಾಗುತ್ತಿದೆ.

ತಿಳಿದುಕೊಳ್ಳೋಣ

'ಬಾಡಿ ಹೋದ ಪೈರನ್ನು ನೋಡಿದಾಗಲೆಲ್ಲಾ ನಾನೂ ಬಾಡಿ ಹೋದೆನು'

– ವಳ್ಳಲಾರ್

ಮದರ್ ತೆರೇಸಾ

ಮದರ್ ತೆರೇಸಾ ಅವರು ಮ್ಯಾಸಿಡೋನಿಯಾದ ಸ್ಕೋಪ್ಜಿ ಎಂಬಲ್ಲಿ 27.08.1910ರಲ್ಲಿ ಜನಿಸಿದರು.

ಒಂದು ದಿನ ಮದರ್ ತೆರೇಸಾ ಅವರು ರಸ್ತೆಯಲ್ಲಿ ನಡೆದುಕೊಂಡು ಹೋಗುವಾಗ ರಸ್ತೆಯ ಬದಿಯಲ್ಲಿ ವಯಸ್ಸಾದ ಮುದುಕಿಯೊಬ್ಬಳು ಮಲಗಿದ್ದಳು. ಅವಳು ತನ್ನ ಮುಖವನ್ನು ಬಟ್ಟೆಯಿಂದ ಮುಚ್ಚಿಕೊಂಡಿದ್ದಳು. ಮತ್ತೊಂದು ಕೈಯಲ್ಲಿ ಬೆಕ್ಕೊಂದನ್ನು



ಹಿಡಿದುಕೊಂಡಿದ್ದಳು. ಮದರ್ ತೆರೇಸಾ ಅವರು ಅವಳ ಪಕ್ಕದಲ್ಲಿ ಹೋಗಿ ದೃಷ್ಟಿಸಿ ನೋಡಿದರು. ಅವಳು ಕುಷ್ಠರೋಗದಿಂದ ಬಳಲುತ್ತಿದ್ದಳು. ತುಂಬಾ ವೇದನೆ ಅವಳ ಮುಖದಲ್ಲಿ ಎದ್ದು ಕಾಣುತ್ತಿತ್ತು. ಅವಳ ಕೈಗಳಲ್ಲಿ ಬೆರಳುಗಳು ಇರಲಿಲ್ಲ. ಅದನ್ನು ನೋಡಿದ ತೆರೇಸಾ ಅವರ ಮನಸ್ಸು ಕರಗಿತು. ಆ ಮುದುಕಿಯ ಹತ್ತಿರ ಹೋಗಿ, 'ರಸ್ತೆಯ ಬದಿಯಲ್ಲಿ ಏಕೆ ಮಲಗಿದ್ದೀರಿ?' ಎಂದು ಕೇಳುತ್ತಾ ಆ ವೃದ್ಧೆಯ ಕೈಹಿಡಿದು ಕೂರಿಸಲು ಪ್ರಯತ್ನ ಪಟ್ಟರು. 'ನನ್ನನ್ನು ಮುಟ್ಟಬೇಡಿ. ನನ್ನ ರೋಗ ನಿಮಗೂ ಹರಡುತ್ತದೆ. ನನ್ನ ಬಂಧುಗಳೇ ನನ್ನನ್ನು ತಳ್ಳಿ ಹಾಕಿದ್ದಾರೆ. ನನ್ನೊಡನೆ ಮಾತನಾಡುವುದಿಲ್ಲ. ನನ್ನನ್ನು ನೋಡಿದರೂ ನೋಡದ ಹಾಗೆ ದೂರ ಸರಿಯುತ್ತಾರೆ. ಆದರೆ ಈ ಬೆಕ್ಕು ಮಾತ್ರ ನನ್ನೊಡನೆಯೇ ಇದೆ' ಎಂದು ಅತ್ತಳು ಆ ಮುದುಕಿ.

ಇದನ್ನು ಕೇಳಿದ ಮದರ್ ತೆರೇಸಾ ಅವರು ಕಣ್ಣೀರಿಟ್ಟರು. ಇವರಂತೆಯೇ ಸಾವಿರಾರು ರೋಗಿಗಳಿದ್ದಾರೆ. ಅವರಿಗೆ ಸಹಾಯ ಮಾಡಲು ಯಾರೂ ಮುಂದೆ ಬರುವುದಿಲ್ಲ ಎಂದು ನೊಂದುಕೊಂಡಿದ್ದರು. ಆ ಕಾಲದಲ್ಲಿ ಕುಷ್ಠರೋಗ ಒಂದು ಮಹಾರೋಗ ಎಂದು ತಿಳಿದಿದ್ದರು. ಇಂತಹ ರೋಗಿಗಳ ಮೇಲೆ ಕರುಣೆಗೊಂಡ ಮದರ್ ತೆರೇಸಾ ಅವರು ಅವರ ಸೇವೆ ಮಾಡಲು ನಿರ್ಧರಿಸಿದರು. ಬೇರೆಯವರಿಗಾಗಿಯೇ ತಮ್ಮ ಜೀವನದ ಕೊನೆಯವರೆಗೂ ದುಡಿದು ತ್ಯಾಗ ಮಾಡಿದರು. 'ಜನಸೇವೆಯೇ ಜನಾರ್ಧನ ಸೇವೆ' ಎಂದು ಬಾಳಿದರು. ಆದುದರಿಂದಲೇ ಶಾಂತಿಗಾಗಿ ನೋಬೆಲ್ ಪ್ರಶಸ್ತಿ ಅವರನ್ನು ಹುಡುಕಿಕೊಂಡು ಬಂದಿತು.

ತಿಳಿದುಕೊಳ್ಳೋಣ

'ಜೀವನವೆಂಬುದು ಸಾಯುವವರೆಗಲ್ಲ
ಬೇರೆಯವರ ಮನಸ್ಸಿನಲ್ಲಿ ನೀ ಜೀವಿಸುವವರೆಗೆ'

– ಮದರ್ ತೆರೇಸಾ



ಕೈಲಾಸ್ ಸತ್ಯಾರ್ಥಿ

ಮದರ್ ತೆರೇಸಾರ ನಂತರ ನೋಬೆಲ್ ಬಹುಮಾನ ಪಡೆದ ಭಾರತೀಯ ಕೈಲಾಸ್ ಸತ್ಯಾರ್ಥಿಯವರು. ಇವರು ಚಿಕ್ಕ ವಯಸ್ಸಿನಲ್ಲಿ ಶಾಲೆಗೆ ಹೋಗುವಾಗ ಒಂದು ದಿನ ರಸ್ತೆ ಬದಿಯಲ್ಲಿರುವ ಒಬ್ಬ ಹುಡುಗನನ್ನು ನೋಡಿದರು. ಅವನು ತನ್ನ ತಂದೆಯ ಜೊತೆ ಕುಳಿತುಕೊಂಡು ಅವನ ತಂದೆ ಮಾಡುವ ಕೆಲಸದಲ್ಲಿ ಸಹಾಯ ಮಾಡುತ್ತಿದ್ದನು. 'ಆ ಹುಡುಗ ನನ್ನ ರೀತಿ ಶಾಲೆಗೆ ಹೋಗದೆ ಏಕೆ ಇಲ್ಲಿದ್ದಾನೆ?' ಎನ್ನುವ ಪ್ರಶ್ನೆ ಆ ಬಾಲಕನ ಮನದಲ್ಲಿ ಮೂಡಿತು. ತನ್ನ ಶಿಕ್ಷಕರ ಬಳಿಯೂ, ತಂದೆಯ ಬಳಿಯೂ ಇದನ್ನು ಕುರಿತು ಪ್ರಶ್ನಿಸಿದನು. 'ಹಣವಿಲ್ಲದಿರುವುದರಿಂದ ಆ ಹುಡುಗನನ್ನು ಅವನ ತಂದೆ ಶಾಲೆಗೆ ಸೇರಿಸಿಲ್ಲ' ಎಂದು ತಿಳಿಯಿತು. 'ಮನೆಯಲ್ಲಿನ ಬಡತನ ನೀಗಿಸಲು ಹಣ ಬೇಕು. ಆದ್ದರಿಂದ ಹಣ ಸಂಪಾದನೆಗಾಗಿ ಅವನು ತಂದೆಯೊಡನೆ ಸೇರಿಕೊಂಡು ಕೆಲಸ ಮಾಡುತ್ತಾನೆ' ಎಂದು ತಂದೆ ಉತ್ತರ ಹೇಳಿದರು. ಈ ಉತ್ತರದಿಂದ ಬಾಲಕ ಸತ್ಯಾರ್ಥಿಗೆ ಬಹಳ ನೋವಾಯಿತು.

ಇದನ್ನು ಕುರಿತು ತೀವ್ರವಾಗಿ ಯೋಚಿಸಿದ್ದರ ಪರಿಣಾಮವಾಗಿ, ಶಾಲೆಗೆ ಹೋಗದಿರುವ ಮಕ್ಕಳ ಮೇಲೆ ಅವರಲ್ಲಿ ಅಪಾರ ಮರುಕ ಹುಟ್ಟಿತು. ಅದಕ್ಕಾಗಿ ಅವರು ಮುಂದೆ, 'ಮಕ್ಕಳನ್ನು ರಕ್ಷಿಸೋಣ' ಎಂಬ ಸಂಘವನ್ನು ಸ್ಥಾಪಿಸಿದರು. ಆ ಸಂಘದ ಮೂಲಕ 'ಬಾಲ ಕಾರ್ಮಿಕ ಪದ್ಧತಿ'ಯನ್ನು ನಿರ್ಮೂಲ ಮಾಡಲು ಶ್ರಮಿಸಿದರು. ಸುಮಾರು ಮುವ್ವತ್ತು ವರ್ಷಗಳಲ್ಲಿ ಇವರು 86 ಸಾವಿರ ಬಾಲಕಾರ್ಮಿಕರನ್ನು ರಕ್ಷಿಸಿದ್ದಾರೆ. ವಿಶ್ವ ಮಕ್ಕಳ ಶಿಕ್ಷಣ ಹಕ್ಕಿಗಾಗಿ 103 ದೇಶಗಳಲ್ಲಿ 80,000 ಕಿ.ಮೀ.ದೂರ ನಡೆದು ಪ್ರಯಾಣ ಮಾಡಿದ್ದಾರೆ. ಮಕ್ಕಳ ಶಿಕ್ಷಣ ಮತ್ತು ಹಕ್ಕಿಗಾಗಿ ದೇಶ–ವಿದೇಶಗಳಲ್ಲಿ ಪ್ರಚಾರ ಮಾಡಿದ್ದಾರೆ.

ಇವರಂತೆಯೇ ಮಾನವೀಯತೆ ಬೆಳೆಸಿಕೊಂಡ ಅನೇಕ ವ್ಯಕ್ತಿಗಳಿದ್ದಾರೆ. ಇವರಂತೆಯೇ

ತಿಳಿದುಕೊಳ್ಳೋಣ

'ಮಕ್ಕಳನ್ನು ಬಾಲಕಾರ್ಮಿಕರನ್ನಾಗಿ ಮಾಡುವುದು ಮಾನವೀಯತೆಗೆ ವಿರೋಧವಾದ ತಪ್ಪು. ವಿಶ್ವವನ್ನು ಮಕ್ಕಳ ದೃಷ್ಟಿಯಲ್ಲಿ ನೋಡಿರಿ. ವಿಶ್ವ ಸುಂದರವಾಗಿ ಕಾಣುತ್ತದೆ.'

– ಕೈಲಾಸ್ ಸತ್ಯಾರ್ಥಿ.

ನಾವೂ ಸಹ ಸಂಘ ಸಂಸ್ಥೆಗಳ ಮೂಲಕ ಸಹಾಯ ಮಾಡುವುದು ಹಾಗೂ ಸಮಯಕ್ಕೆ ಸರಿಯಾದ ರೀತಿ ಮಾನವೀಯತೆಯಿಂದ ನಡೆದುಕೊಳ್ಳುವ ಗುಣಗಳನ್ನು ಬೆಳೆಸಿಕೊಳ್ಳಬೇಕು.

'ಎಲ್ಲಿ ಪ್ರೀತಿ ಇರುತ್ತದೆಯೋ ಅಲ್ಲಿ ಮಾನವೀಯತೆ ಇರುತ್ತದೆ'

ಪದಗಳ ಅರ್ಥ

ಮಾನವೀಯತೆ–ಮನುಷ್ಯ ಧರ್ಮ; ಛತ್ರ–ಧರ್ಮಶಾಲೆ, ಊಟ ವಸತಿ ದೊರಕುವ ಸ್ಥಳ, ತಂಗುವ ಸ್ಥಳ; ಮರುಗು–ಕನಿಕರ; ಕುಷ್ಠರೋಗ–ಒಂದು ಬಗೆಯ ಚರ್ಮರೋಗ; ನೀಗಿಸು–ತೀರಿಸು; ಬಾಲಕಾರ್ಮಿಕ–ಚಿಕ್ಕ ಮಕ್ಕಳನ್ನು ಕೆಲಸಕ್ಕೆ ಸೇರಿಸುವುದು; ಕುಂಡಲ–ಗಂಡಸರು ಧರಿಸುವ ಕಿವಿಯ ಓಲೆ.

ಪ್ರಶ್ನೋತ್ತರಗಳು

I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.

1. ಮಾನವೀಯತೆ ಎಂದರೇನು ?
2. ವಳ್ಳಲಾರರು ಹಸಿವನ್ನು ನೀಗಿಸಲು ಏನು ಮಾಡಿದರು ?
3. ವಳ್ಳಲಾರರು ಕಳ್ಳನಿಗೆ ಏನೆಂದು ಹೇಳಿದರು ?
4. ಮದರ್ ತೆರೇಸಾ ಅವರು ಕಣ್ಣೀರಿಡಲು ಕಾರಣವೇನು ?
5. ಮದರ್ ತೆರೇಸಾ ಅವರು ರಸ್ತೆಯಲ್ಲಿ ಯಾರನ್ನು ನೋಡಿದರು ?
6. ಕೈಲಾಸ್ ಸತ್ಯಾರ್ಥಿ ಅವರು ಯಾವುದನ್ನು ನಿರ್ಮೂಲ ಮಾಡಬೇಕೆಂದು ಶ್ರಮಿಸಿದರು ?

7. ಕೈಲಾಸ್ ಸತ್ಯಾರ್ಥಿಯವರ ಪ್ರಶ್ನೆಗೆ ತಂದೆ ಹೇಳಿದ ಉತ್ತರವೇನು ?

II. ಕೆಳಗಿನ ಪ್ರಶ್ನೆಗಳಿಗೆ ಮೂರ್ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.

1. ವಳ್ಳಲಾರರು ಮಾಡಿದ ಸೇವೆಗಳನ್ನು ತಿಳಿಸಿ ?
2. ಮದರ್ ತೆರೇಸಾ ಅವರು ತಮ್ಮ ಜೀವನವನ್ನು ಯಾರಿಗಾಗಿ ಮುಡಿಪಾಗಿಟ್ಟರು? ಏಕೆ ?
3. ಕೈಲಾಸ ಸತ್ಯಾರ್ಥಿಯವರ ಬಾಲ್ಯದಲ್ಲಿ ನಡೆದ ಘಟನೆಯನ್ನು ವಿವರಿಸಿ ?

III. ಕೆಳಗಿನ ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ.

1. ಮದರ್ ತೆರೇಸಾ ಅವರ ಮಾನವೀಯತೆಯ ಬಗ್ಗೆ ಬೇರೆ ಘಟನೆಗಳನ್ನು ಸಂಗ್ರಹಿಸಿ.

ಭಾಷಾಭ್ಯಾಸ

I. ಅ. ಸರಿಯಾದ ಉತ್ತರಗಳನ್ನು ಆರಿಸಿ ಬರೆಯಿರಿ.

1. ಎಲ್ಲಾ ಜೀವಿಗಳೊಡನೆಯೂ ಪ್ರೀತಿಯಿಂದಿರುವುದು _____

(ಅ) ಮಾನವ ಜೀವನ (ಆ) ಮಾನವ ಹಕ್ಕು
(ಇ) ಮಾನವೀಯತೆ (ಈ) ಮಾನವ ಕರ್ತವ್ಯ

2. ತಮ್ಮ ವಸ್ತುವನ್ನು ಕದ್ದವರೊಡನೆಯೂ _____ ತೋರಿದವರು ವಳ್ಳಲಾರರು.

(ಅ) ಕೋಪ (ಆ) ದ್ವೇಷ
(ಇ) ಯೋಚನೆ (ಈ) ಪ್ರೀತಿ

3. ಮದರ್ ತೆರೇಸಾರವರಿಗೆ _____ಗಾಗಿ ನೋಬೆಲ್ ಪ್ರಶಸ್ತಿ ದೊರಕಿತು.

(ಅ) ಅರ್ಥಶಾಸ್ತ್ರ (ಆ) ಭೌತಶಾಸ್ತ್ರ
(ಇ) ವೈದ್ಯಕೀಯ (ಈ) ಶಾಂತಿ

4. ಕೈಲಾಸ್ ಸತ್ಯಾರ್ಥಿ ಪ್ರಾರಂಭಿಸಿದ ಸಂಘ _____

(ಅ) ಮಕ್ಕಳನ್ನು ರಕ್ಷಿಸೋಣ
(ಆ) ಮಕ್ಕಳನ್ನು ಪ್ರೀತಿಸೋಣ
(ಇ) ಮಕ್ಕಳನ್ನು ಬೆಳೆಸೋಣ
(ಈ) ಮಕ್ಕಳ ಸಹಾಯ ಸಂಸ್ಥೆ

II. ಅ. ಹೊಂದಿಸಿ ಬರೆಯಿರಿ

ಅ		ಆ
1. ವಳ್ಳಲಾರರು	–	ರೋಗಿಗಳಿಗೆ ಪ್ರೀತಿ ತೋರಿಸಿದವರು
2. ಕೈಲಾಸ್ ಸತ್ಯಾರ್ಥಿ	–	ಹಸಿವನ್ನು ನೀಗಿಸಿದವರು
3. ಮದರ್ ತೆರೇಸಾ	–	ಮಕ್ಕಳ ಹಕ್ಕಿಗಾಗಿ ದುಡಿದವರು

ಆ. ಕೆಳಗಿನ ಪದಗಳನ್ನು ಉಪಯೋಗಿಸಿ ಸ್ವಂತ ವಾಕ್ಯಗಳನ್ನು ರಚಿಸಿ.

ಮಾನವೀಯತೆ, ಕರ್ತವ್ಯ, ಶಾಂತಿ, ಕೃತಜ್ಞತೆ, ಸಹನೆ.

ಇ ಕೆಳಗಿನ ಪದಗಳ ಸಮಾನಾರ್ಥಕ ಪದಗಳನ್ನು ಬರೆಯಿರಿ.

ಛತ್ರ, ಮರುಗು, ಕುಂಡಲ, ಕುಷ್ಠರೋಗ.

ಈ. ಕೆಳಗಿನ ಪದಗಳನ್ನು ಬಿಡಿಸಿ ಬರೆದು ಸಂಧಿಯನ್ನು ಹೆಸರಿಸಿ.

ಆಯಾಸವಾಯಿತು, ಬೆರಳುಗಳಿರಲಿಲ್ಲ, ಬೇರೊಂದನ್ನು, ನನ್ನೊಡನೆ, ಹಸಿವಿನಿಂದಿರುವವರು.

ಚಟುವಟಿಕೆ

1. ಪತ್ರಿಕೆಗಳಲ್ಲಿ 'ಮಾನವೀಯತೆ' ಬಗ್ಗೆ ಬರುವ ವಿಷಯಗಳನ್ನು ಸಂಗ್ರಹಿಸಿ.
2. ನೀವು ಯಾರಿಗಾದರೂ ಸಹಾಯ ಮಾಡಿದ್ದರೆ, ನಿಮ್ಮ ಅನುಭವವನ್ನು ಕುರಿತು ಬರೆಯಿರಿ.
3. 'ಒಗ್ಗಟ್ಟಾಗಿ ಬಾಳುವ ಗುಣವೇ ವಿಶೇಷವಾದುದು' ಎಂಬುದರ ಬಗ್ಗೆ ನಿಮ್ಮ ಸ್ನೇಹಿತರ ಜೊತೆ ಚರ್ಚಿಸಿ.

ಉಪಪಠ್ಯ

ಫಟಕ ಒಂಬತ್ತು

ಅಂಗದಾನದ ಮಹತ್ವ



ಹಣ, ಆಸ್ತಿಯನ್ನು ಕೊಡುವುದು ಮಾತ್ರ ದಾನವಲ್ಲ. ನಮ್ಮ ಸಾವಿನ ನಂತರ ಮಣ್ಣಿಗೆ ಹೋಗುವ ದೇಹದ ಭಾಗಗಳನ್ನೂ ನೀಡಿ ಬೇರೆಯವರು ಬಾಳಲು ನೆರವಾಗುವುದೂ ಕೂಡ ಮಹತ್ವವಾದ ದಾನವೇ ಆಗಿದೆ. ದೇಹದ ಅಂಗಗಳನ್ನು ದಾನ ಮಾಡೋಣ. ಭೂಮಿಯಲ್ಲಿ ಒಬ್ಬರನ್ನಾದರೂ ಬಾಳಲು ಸಹಾಯ ಮಾಡೋಣ. ಇಂದೇ ಈ ಪ್ರತಿಜ್ಞೆ ಮಾಡೋಣ. ದೇಹದ ಅಂಗದಾನದ ಮಹತ್ವವನ್ನು ತಿಳಿಸುವ ಜಾಗೃತಿ ಮೂಡಿಸಲು ಕೆಲವು ವಿಷಯಗಳನ್ನು ತಿಳಿಯೋಣ ಬನ್ನಿ.

ಬೆಂಗಳೂರು

(ಸಂಜೆಯ ಸಮಯ)

'ಅಮ್ಮಾ, ನನ್ನ ಸ್ನೇಹಿತೆಯರು ಬಂದಿದ್ದಾರೆ. "ನಮ್ಮೊಡನೆ ಆಟವಾಡಲು ಬರುವುದಿಲ್ಲವೇ" ಎಂದು ಕೇಳುತ್ತಿದ್ದಾರೆ. ಅವರೊಂದಿಗೆ ನಾನು ಹೋಗಬಹುದೇ?' ಎಂದು ಕೇಳಿದಳು ಆ ಬಾಲಕಿ.

ಅಮ್ಮ, ಅಪ್ಪ ಇಬ್ಬರೂ :

'ನಿನ್ನ ಆರೋಗ್ಯ ಸರಿಯಾಗಲಮ್ಮ. ಆಗ ನೀನು ಅವರೊಡನೆ ಆಟವಾಡಲು ಹೋಗಬಹುದು. ಸರೀನಾ?'

'ಸರಿ ಅಮ್ಮಾ! ನನಗೂ ಅವರೊಡನೆ ಸೇರಿ ಆಟವಾಡಲು ಆಸೆಯಾಗಿದೆ. ಆದರೆ ಮೊದಲಿನಂತೆ ನನ್ನಿಂದ ಓಡಿ ಆಟವಾಡಲು ಸಾಧ್ಯವಿಲ್ಲ. ಉಸಿರಾಡಲು ಕಷ್ಟವಾಗಿದೆ' ಎಂದು ಹೇಳಿ ತನ್ನ ಸ್ನೇಹಿತೆಯರನ್ನು ಕಳುಹಿಸಿ ಅವಳು ಒಳಗೆ ಬಂದಳು.

ತಿರುಕ್ಕಳುಕುನ್ರಂ

(ಸಂಜೆಯ ಸಮಯ)

'ಅಮ್ಮಾ! ನನ್ನ ಗೆಳೆಯರು ಆಟವಾಡಲು ಕರೆಯುತ್ತಿದ್ದಾರೆ. ನಾನು ಆಟವಾಡಲು ಹೋಗಬಹುದೇ?' ಎಂದನು ಆ ಬಾಲಕ. 'ಆಟವಾಡಿಕೊಂಡು ಬೇಗನೇ ಬಂದು ಬಿಡು' ಎಂದು ಹೇಳಿದ ತಾಯಿಗೆ, 'ಸರಿ ಅಮ್ಮಾ!' ಎಂದು ಹೇಳಿ ಗೆಳೆಯರೊಡನೆ ಆಟವಾಡಲು ತನ್ನ ಸೈಕಲನ್ನು ತೆಗೆದುಕೊಂಡು ಹೊರಗೆ ಹೋದ.

ಗೆಳೆಯರೊಡನೆ ಸೇರಿ ಸಂತೋಷದಿಂದ ಅವನು ಆಟವಾಡಿದ. ಹೊತ್ತು ಕಳೆದುದೇ ತಿಳಿಯಲಿಲ್ಲ. ಕೆಲ ಹೊತ್ತಿನ ನಂತರ ಸಂತೋಷದಿಂದ ಮನೆಯ ಕಡೆಗೆ ಹಿಂದಿರುಗಿ ಹೊರಟ. 'ಬಹಳ ಹೊತ್ತಾಗಿರಬೇಕು? ತಡವಾಯಿತೇನೋ?' ಎಂದು ಚಿಂತಿಸುತ್ತಾ, ತುಂಬಾ ತಡವಾದರೆ ಪೋಷಕರು ಚಿಂತಿಸುತ್ತಾರೆ ಎಂಬ ಯೋಚನೆಯಲ್ಲೇ ಸೈಕಲನ್ನು ತುಳಿಯುತ್ತಾ ಸಾಗಿದ.

ಬೆಂಗಳೂರು

'ನಿಮ್ಮ ಮಗಳ ಹೃದಯ ದಿನದಿಂದ ದಿನಕ್ಕೆ ಬಲಹೀನವಾಗುತ್ತಾ ಬರುತ್ತಿದೆ. ಮರುಹೃದಯ ಜೋಡಣೆಯ ಶಸ್ತ್ರ ಚಿಕಿತ್ಸೆ ಮಾಡುವುದು ಒಂದೇ ಕೊನೆಯ ನಂಬಿಕೆ. ಅದಕ್ಕೆ ಪ್ರಯತ್ನ ಮಾಡಿ' ಎಂದು ವೈದ್ಯರು ಹೇಳಿದ ಮಾತು ನೆನಪಿಗೆ ಬಂತು. 'ಹೇಗಾದರೂ ಮಾಡಿ ತಮ್ಮ ಮಗಳ ಹೃದಯ ಸರಿಯಾಗುವುದಿಲ್ಲವೇ?' ಎಂಬ ಚಿಂತೆಯಲ್ಲಿ ಹಾಸಿಗೆ ಹಿಡಿದಿದ್ದ ತಮ್ಮ ನೆಚ್ಚಿನ ಮಗಳ ಸ್ಥಿತಿಯನ್ನು ನೋಡಿ ಹೆತ್ತವರ ಹೃದಯ ತುಡಿಯುತ್ತಿತ್ತು. ಚಿಂತೆಯಿಂದ ಮಗಳ ಹಾಸಿಗೆ ಬಳಿ ಕುಳಿತುಕೊಂಡಿದ್ದರು.

ಚಿಂತೆಯಿಂದ ಮಗಳ ಹಾಸಿಗೆಯ ಬಳಿ ಕುಳಿತಿದ್ದ ಪೋಷಕರು ತಮಗೇ ತಿಳಿಯದಂತೆ ಕೆಲ ಹೊತ್ತಿನಲ್ಲಿ ನಿದ್ರೆಗೆ ಜಾರಿದರು. ನಂತರ ಸ್ವಲ್ಪ ಹೊತ್ತಾದ ಮೇಲೆ ಕಣ್ಣು ಬಿಟ್ಟು ನೋಡಿದರು. ತಮ್ಮ ಮಗಳು ಅಲುಗಾಡದೆ ಮಲಗಿರುವುದನ್ನು ನೋಡಿ ಭಯಪಟ್ಟರು. ಅವಳ ಹೃದಯ ಬಡಿತ ಕಡಿಮೆಗೊಳ್ಳುತ್ತಾ ಬರುತ್ತಿತ್ತು.

ತಿರುಕ್ಕಳುಕುನ್ರಂ

ಮುಂದೆ ಒಂದು ಸರಕಿನ ವಾಹನ ಹೋಗುತ್ತಿತ್ತು. ಆ ವಾಹನದಲ್ಲಿದ್ದ ಕಬ್ಬಿಣದ ಸರಳುಗಳು ಹೊರಗೆ ಚಾಚಿಕೊಂಡಿದ್ದವು. ಆ ಸರಳುಗಳು ತಾಗಿ ಸೈಕಲ್ಲಿನಲ್ಲಿ ಹೋಗುತ್ತಿದ್ದ ಆ ಹುಡುಗ ಕೆಳಗೆ ಬಿದ್ದು ತಲೆಗೆ ಬಲವಾದ ಗಾಯವಾಯಿತು. ಏನು ನಡೆಯಿತು ಎಂದು ತಿಳಿಯುವುದರ ಒಳಗೆ ಆತ ಮೂರ್ಛೆ ಹೋದ. ಅವನ ಹೃದಯ ಮಾತ್ರ ಮಿಡಿಯುತ್ತಲಿತ್ತು. ಬೇರೆ ಯಾವ ಅಂಗಾಂಗಗಳಲ್ಲೂ ಚಲನೆಯಿರಲಿಲ್ಲ. ಹೆತ್ತು ಹೊತ್ತು ಸಾಕಿದ ಪ್ರೀತಿಯ ಮಗನನ್ನು ಈ ಸ್ಥಿತಿಯಲ್ಲಿ ನೋಡಿದ ಪೋಷಕರು ಅತ್ತು ರೋದಿಸುತ್ತಿದ್ದರು. ಏನು ಮಾಡಬೇಕೆಂಬುದೇ ಅವರಿಗೆ ತಿಳಿಯಲಿಲ್ಲ.

ವೈದ್ಯರು : 'ಏನು ಮಾಡಬೇಕೆಂದು ತಿಳಿಯದಾಗಿದೆ. ನೀವಿಬ್ಬರೂ ಕೂಡ ವೈದ್ಯರೇ ಆಗಿರುವುದರಿಂದ ಈ ಸ್ಥಿತಿಯನ್ನು ನೀವು ಚೆನ್ನಾಗಿ ಅರ್ಥ ಮಾಡಿಕೊಂಡಿದ್ದೀರೆಂದು ಭಾವಿಸುತ್ತೇನೆ. ತಲೆಯಲ್ಲಿ ಬಲವಾದ ಗಾಯವಾಗಿದೆ. ಮೆದುಳು ಯಾವುದೇ ಕ್ರಿಯೆಯನ್ನೂ ಮಾಡುತ್ತಿಲ್ಲ. ಸಂಪೂರ್ಣ ನಿಷ್ಕ್ರಿಯವಾಗಿದೆ. ಎಷ್ಟೇ ಚಿಕಿತ್ಸೆ ನೀಡಿದರೂ, ಯಾವುದೇ ಚಿಕಿತ್ಸೆ ನೀಡಿದರೂ ಮೆದುಳು ಸರಿಯಾಗುತ್ತದೆ ಎಂದು ಹೇಳಲಾಗದು. ಆದರೆ ಹೃದಯ ಮಾತ್ರ ಚೆನ್ನಾಗಿದೆ!'

ಬೆಂಗಳೂರು

ಪೋಷಕರು : 'ಏನೋ ಹೇಳಲು ಸಂಕೋಚ ಪಡುತ್ತಿರುವಿರಿ! ಏನು ಹೇಳಿ ಡಾಕ್ಟರ್. ನಾವೇನು ಮಾಡಬೇಕು?'

ವೈದ್ಯರು : 'ನಮ್ಮ ಪರಿಸ್ಥಿತಿಯನ್ನು ತಿಳಿದುಕೊಳ್ಳದೇ ಮಾತನಾಡುತ್ತಿದ್ದೀರಿ. ನಿಮ್ಮ ಮಗಳಿಗೆ ತಕ್ಷಣವೇ ಮರು ಹೃದಯ ಜೋಡಣೆಯ ಶಸ್ತ್ರ ಚಿಕಿತ್ಸೆ ಮಾಡಬೇಕು. ಇಲ್ಲದಿದ್ದರೆ ನಿಮ್ಮ ಮಗಳನ್ನು ಕಾಪಾಡಲು ಸಾಧ್ಯವಿಲ್ಲ'.

ತಿರುಕ್ಕಳುಕುನ್ರಂ

'ಡಾಕ್ಟರ್ ನಮ್ಮ ಮಗನ ಈಗಿನ ಪರಿಸ್ಥಿತಿ ನಮಗೆ ಚೆನ್ನಾಗಿ ಗೊತ್ತು. ಅವನನ್ನು ಸಾಯಲು ನಾವು ಬಿಡುವುದಿಲ್ಲ. ನಮ್ಮ ಹೃದಯದಂತಿರುವ ಅವನನ್ನು ನಾವು ಕಳೆದುಕೊಳ್ಳುವುದಿಲ್ಲ. ಆದುದರಿಂದ ನಾವು ಒಂದು ತೀರ್ಮಾನಕ್ಕೆ ಬಂದಿದ್ದೇವೆ'.

ಬೆಂಗಳೂರು

'ಡಾಕ್ಟರ್, ನಮ್ಮ ಮಗಳ ಪರಿಸ್ಥಿತಿ ನಮಗೆ ಗೊತ್ತು. ಅವಳನ್ನು ಸಾಯಲು ಬಿಡುವುದಿಲ್ಲ. ನಮ್ಮ ಹೃದಯದಂತಿರುವ ಅವಳನ್ನು ನಾವು ಕಳೆದುಕೊಳ್ಳುವುದಿಲ್ಲ. ನಾವು ಒಂದು ತೀರ್ಮಾನಕ್ಕೆ ಬಂದಿದ್ದೇವೆ. ನಮ್ಮ ಹೃದಯವನ್ನು ತೆಗೆದುಕೊಂಡು ನಮ್ಮ ಮಗಳನ್ನು ಕಾಪಾಡಿ! ನೀವಿನ್ನು ಸಮಯವನ್ನು ವ್ಯರ್ಥ ಮಾಡಬೇಡಿ. ನಮ್ಮ ಮಗಳಿಗೆ ಜೀವ ನೀಡಿ'

ತಿರುಕ್ಕಳುಕುನ್ರಂ

'ನಮ್ಮ ಮಗನ ಹೃದಯವನ್ನು ತೆಗೆದುಕೊಳ್ಳಿ. ಯಾರಿಗೆ ಹೃದಯದ ಅಗತ್ಯವಿದೆಯೇ ಅವರಿಗೆ ನಮ್ಮ ಮಗನ ಹೃದಯ ಕೊಡಲು ನಾವು ಸಮ್ಮತಿಸುತ್ತೇವೆ. ದಯ ಮಾಡಿ ಬೇಗನೆ ಈ ಕಾರ್ಯ ಮಾಡಿ ನಮ್ಮ ಮಗನಿಗೆ ಜೀವ ಕೊಡಿ. ಅವನನ್ನು ನಾವು ಸಾಯಲು ಬಿಡುವುದಿಲ್ಲ. ಇವನ ಜೀವನ ಸಾರ್ಥಕವಾಗಲಿ' ಎಂದು ಹೇಳುತ್ತಾ ಅಳುತ್ತಾ, ಪ್ರಜ್ಞೆ ತಪ್ಪಿ ಪೋಷಕರು ಕೆಳಗೆ ಬಿದ್ದು ಹೋದರು.

ವೈದ್ಯರ ತಂಡ ತ್ವರಿತವಾಗಿ ಕೆಲಸ ಮಾಡಿತು. ಆ ಬಾಲಕನ ಹೃದಯವನ್ನು ಬೆಂಗಳೂರಿಗೆ ತಂದು ಈ ಹುಡುಗಿಗೆ ಜೋಡಿಸಿದರು. ಹೃದಯ ಬದಲಾವಣೆಯಾಯಿತು, ಮಿಡಿಯಿತು. ಬಾಲಕಿಯ ಪ್ರಾಣ ಉಳಿಯಿತು!

ಅಂಗದಾನದ ಮಹತ್ವವನ್ನು ಅಂದು ವಿಶ್ವವೇ ತಿಳಿಯಿತು. ಆಶ್ಚರ್ಯಪಟ್ಟಿತು! ಮಾನವೀಯತೆಯ ಮಹತ್ವದ ಸಾಧನೆಯಾಗಿ ತಮ್ಮ ಮಗನ ಮಿಡಿಯುವ ಹೃದಯವನ್ನು ದಾನವಾಗಿ ನೀಡಿದ ಈ ಕಾಲದ ಮಹಾದಾನಿಗಳೇ



ಅಶೋಕನ್–ಪುಷ್ಪಾಂಜಲಿ ಎಂಬ ವೈದ್ಯ ದಂಪತಿಗಳು.

ಆ ಮಗಳಿಗೆ ತನ್ನ ಹೃದಯವನ್ನು ಜೋಡಿಸಿದ ಆ ಹೃದಯವಂತ ಬಾಲಕನೇ ಹಿತೇಂದ್ರನ್. ಹುಟ್ಟಿದಾಗ ಪೋಷಕರ ಹೃದಯವನ್ನು ಗೆದ್ದುದರಿಂದ ಅವನಿಗೆ ಹಿತೇಂದ್ರನ್ ಎಂದು ಹೆಸರಿಟ್ಟಿದ್ದರು. ಅವನು ಸಾಯುವಾಗ ವಿಶ್ವದಲ್ಲಿರುವ ಎಲ್ಲರ ಹೃದಯವನ್ನು ಗೆದ್ದನು. ಹೃದಯ ಕೊಟ್ಟು, ಹೃದಯಗಳನ್ನು ಗೆದ್ದ ಹಿತೇಂದ್ರನನ್ನು ಈ ವಿಶ್ವ ಯಾವಾಗಲೂ ಸ್ಮರಿಸುತ್ತದೆ.

ಪ್ರಶ್ನೋತ್ತರಗಳು

I. ಕೆಳಗಿನ ಪ್ರಶ್ನೆಗಳಿಗೆ ಮೂರ್ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.

1. ಮಗಳ ತಂದೆ ತಾಯಿಗಳು ಏಕೆ ಚಿಂತಿಸುತ್ತಿದ್ದರು ?
2. ಹುಡುಗನು ಹೇಗೆ ಅಪಘಾತಕ್ಕೆ ಒಳಗಾದನು ?
3. ವೈದ್ಯ ದಂಪತಿಗಳು ಯಾವ ತೀರ್ಮಾನಕ್ಕೆ ಬಂದರು ?
4. ಹೃದಯ ದಾನ ಮಾಡಿದ ದಂಪತಿಗಳ ಹೆಸರೇನು ?
5. ಹೃದಯ ದಾನ ಮಾಡಿದ ಹೃದಯವಂತ ಯಾರು ?
6. ಮಗಳ ಪ್ರಾಣ ಹೇಗೆ ಉಳಿಯಿತು ?

II. ಕೆಳಗಿನ ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ.

1. ಹಿತೇಂದ್ರನ ನೈಜ ಕಥೆಯನ್ನು ಓದಿದ ನೀವು ಯಾವ ಪ್ರತಿಜ್ಞೆಯನ್ನು ಕೈಗೊಳ್ಳುವಿರಿ ?

ಚಟುವಟಿಕೆ

1. 'ಅಂಗದಾನದ ಮಹತ್ವ' ಪಾಠವು ನಿಮ್ಮ ಹೃದಯದಲ್ಲಿ ಉಂಟು ಮಾಡಿದ ಭಾವವನ್ನು ಕುರಿತು ಬರೆಯಿರಿ.
2. ಪ್ರಥಮ ಚಿಕಿತ್ಸೆಯ ಬಗ್ಗೆ ನಿಮಗೆ ತಿಳಿದಿದೆಯೇ ? ಅವುಗಳಲ್ಲಿ ಕೆಲವನ್ನು ಪಟ್ಟಿ ಮಾಡಿ.

ಕಲಿತದ್ದು – ಕಲಿಕೆಯ ಫಲ

1. ಅಂಗದಾನದ ಮಹತ್ವ'ವನ್ನು ತಿಳಿದುಕೊಳ್ಳುವುದು

ಘಟಕ ಒಂಬತ್ತು

ಕಾಲಗಳು, ಕಾಲ ಸೂಚಕ ಪ್ರತ್ಯಯಗಳು

ಧಾತುವಿಗೆ ಮೊದಲು ಸೇರುವ ಪದ, ಕ್ರಿಯೆಯ ಕಾಲ ಯಾವುದು ಎಂದು ಸೂಚಿಸುತ್ತದೆ. ಆದ್ದರಿಂದ ಇದನ್ನು ಕಾಲ ಸೂಚಕ ಪ್ರತ್ಯಯ ಎನ್ನುವರು. ದ, ಉತ್ತ, ಉವ (ವ) – ಇವು ಕಾಲಸೂಚಕ ಪ್ರತ್ಯಯಗಳಾಗಿವೆ. ಕಾಲ ಸೂಚಕ ಪ್ರತ್ಯಯಗಳಲ್ಲಿ ಮೂರು ಬಗೆಗಳಿವೆ :

1. ಭೂತ ಕಾಲ : 'ದ' ಪ್ರತ್ಯಯ.
2. ವರ್ತಮಾನ ಕಾಲ : 'ತ್ತ' ಪ್ರತ್ಯಯ
3. ಭವಿಷ್ಯತ್ ಕಾಲ : 'ವ' ಪ್ರತ್ಯಯ

1. ಭೂತ ಕಾಲ

ನಡೆದು ಹೋದ ಕ್ರಿಯೆಯ ರೂಪವನ್ನು ತಿಳಿಸುವ ಪ್ರತ್ಯಯಕ್ಕೆ ಭೂತಕಾಲ ಸೂಚಕ ಪ್ರತ್ಯಯ ಎಂದು ಹೆಸರು.

ಉದಾಹರಣೆ :

ಕ್ರಿಯಾ ಪ್ರಕೃತಿ		ಕಾಲಸೂಚಕ ಪ್ರತ್ಯಯ		ಏಕವಚನ	ಬಹುವಚನ
ತಿನ್ನು	+	ದ + ಅನು	=	ತಿಂದನು	ತಿಂದರು
ತಿನ್ನು	+	ದ + ಅಳು	=	ತಿಂದಳು	ತಿಂದರು
ತಿನ್ನು	+	ದ + ಎ	=	ತಿಂದೆ	ತಿನ್ನಿರಿ
ತಿನ್ನು	+	ದ + ಎನು	=	ತಿಂದೆನು	ತಿಂದೆವು

ಪ್ರತ್ಯಯಗಳು ಧಾತುವಿಗೆ ಸೇರುವಾಗ ವ್ಯತ್ಯಾಸಗಳು ಉಂಟಾಗುತ್ತವೆ. ಕೆಲವು ಕಡೆ, 'ದ' ಪ್ರತ್ಯಯವಿಲ್ಲದೆ ಭೂತಕಾಲವಾಗುವುದೂ ಸಾಧ್ಯ.

ಉದಾಹರಣೆ : ತಿಳಿಯಿತು, ಮಾಡಿತು, ನಕ್ಕನು, ಬಿಟ್ಟನು, ಗೆದ್ದನು, ಸೋತನು, ಇತ್ತು, ಬಂದಿತು– ಬಂತು, ಬಿದ್ದಿತು–ಬಿತ್ತು ಇತ್ಯಾದಿ. ಈ ರೂಪಗಳನ್ನು ಅಭ್ಯಾಸದಿಂದ ತಿಳಿಯಬೇಕು.

2. ವರ್ತಮಾನ ಕಾಲ

ಕ್ರಿಯೆಯು ಈಗ ನಡೆಯುತ್ತಿದೆ ಎಂದು ತಿಳಿಸುವ ಪ್ರತ್ಯಯಕ್ಕೆ ವರ್ತಮಾನ ಕಾಲ ಸೂಚಕ ಪ್ರತ್ಯಯ ಎಂದು ಹೆಸರು.

ಉದಾಹರಣೆ :

ಕ್ರಿಯಾ ಪ್ರಕೃತಿ		ಕಾಲಸೂಚಕ ಪ್ರತ್ಯಯ		ಏಕವಚನ	ಬಹುವಚನ
ತಿನ್ನು	+	ಉತ್ತ + ಆನೆ	=	ತಿನ್ನುತ್ತಾನೆ	ತಿನ್ನುತ್ತಾರೆ
ತಿನ್ನು	+	ಉತ್ತ + ಆಳೆ	=	ತಿನ್ನುತ್ತಾಳೆ	ತಿನ್ನುತ್ತಾರೆ
ತಿನ್ನು	+	ಉತ್ತ + ಅದೆ	=	ತಿನ್ನುತ್ತದೆ	ತಿನ್ನುತ್ತವೆ
ತಿನ್ನು	+	ಉತ್ತ + ಈಯೆ	=	ತಿನ್ನುತ್ತೀಯೆ	ತಿನ್ನುತ್ತೀರಿ
ತಿನ್ನು	+	ಉತ್ತ + ಏನೆ	=	ತಿನ್ನುತ್ತೇನೆ	ತಿನ್ನುತ್ತೇವೆ

3. ಭವಿಷ್ಯತ್ ಕಾಲ

ಮುಂದೆ ನಡೆಯುವ ಕ್ರಿಯೆಯ ರೂಪವನ್ನು ತಿಳಿಸುವ ಪ್ರತ್ಯಯಕ್ಕೆ ಭವಿಷ್ಯತ್ ಕಾಲ ಸೂಚಕ ಪ್ರತ್ಯಯ ಎಂದು ಹೆಸರು.

ಉದಾಹರಣೆ :

ಅವನು ತಿನ್ನುವನು	ಅವರು ತಿನ್ನುವರು
ಅವಳು ತಿನ್ನುವಳು	ಅವರು ತಿನ್ನುವರು
ಅದು ತಿನ್ನುವುದು	ಅವು ತಿನ್ನುವುವು
ನೀನು ತಿನ್ನುವೆ	ನೀವು ತಿನ್ನುವಿರಿ.

ಭವಿಷ್ಯತ್ ಕಾಲದಲ್ಲಿ ಎಲ್ಲಾ ಧಾತುಗಳಿಗೂ, ಏಕವಚನದಲ್ಲಿ ಅನು, ಅಳು, ಅದು, ಉದು, ಉ, ಎನು ಎಂಬ ಆಖ್ಯಾತ ಪ್ರತ್ಯಯಗಳು ಸೇರುತ್ತವೆ. ಬಹುವಚನದಲ್ಲಿ ಅವು, ಉವು, ಇರಿ, ವಿವು ಎಂಬ ಆಖ್ಯಾತ ಪ್ರತ್ಯಯಗಳು ಸೇರುತ್ತವೆ.

STANDARD SIX - Kannada Reader
Text Book Development Team

Academic Advisor
Dr. P. KUMAR
Joint Director (Syllabus)
State Council of Educational Research and Training
Chennai – 600 006.

Reviewer
Dr. TAMIL SELVI
Professor and Head
Department of Kannada
University of Madras,
Chennai – 600 005.

Co-ordinator
K. CHANDRASEKAR
DIET - Chennai

Authors
Mr. K. KUMAR ACHAR
P.G.Asst. in Kannada
Karnataka Sangha Hr. Sec. School
T.Nagar, Chennai -600 017.

Mr. C.SADASHIVA MURTHY
P.G.Asst. in Kannada
Govt. Hr. Sec. School
Talawadi, Erode Dt. 638461.

Mr. N.BASAVARAJU
B.T.Asst. in Kannada
Govt. Hr. Sec. School
Talawadi, Erode Dt. 638461

Mr. JOHNSON SUKUMAR
B.T.Asst. in Kannada
Govt. Hr. Sec. School
Panaka Halli
Talawadi, Erode Dt. 638461

Mr. T. R. KANNAN
B.T.Asst. in Kannada
Govt. Hr. Sec. School
Madhagondapalli, Krishnagiri Dt. 635 114

Mr. K.ANTHONI MUTHU
B.T.Asst. in Kannada
Govt. Hr. Sec. School
Talawadi, Erode Dt. 638461

Mrs. S.SARALA
B.T.Asst. in Kannada
Govt. High School
GummalaPuram
Krishnagiri Dt. 635118.

Art and Design Team

Illustration
K. Dhanas Deepak Rajan
K. Nalan Nancy Rajan

Layout
A. Adison Raj
Petchimuthu
Pakkirisamy

Wrapper Design
Kathir Arumugam

QC
Manohar Radhakrishnan

Co-ordination
Ramesh Munisamy

This book has been printed on 80 G.S.M. Elegant Maplitho paper.

Printed by offset at:

Notes